ಗುರುವಾರ, ನವೆಂಬರ್ 13, 2025 | ₹ 7.00
prajavani.net | prajavani | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕೋಟಿ ಸಂಭ್ರಮ...

ಇತ್ತೀಚೆಗೆ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡದ ಆಟಗಾರ್ತಿ ಶಫಾಲಿ ವರ್ಮಾ ಅವರಿಗೆ ಹರಿಯಾಣ ಸರ್ಕಾರದಿಂದ ಬುಧವಾರ ₹1.5 ಕೋಟಿ ಚೆಕ್ ನೀಡಿ ಗೌರವಿಸಲಾಯಿತು.



ನೃತ್ಯ ವೈಭವ...

ಬಿಲ್ಲೀ ಜೀನ್ ಕಿಂಗ್ ಕಪ್ ಅಂತರರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಆಟಗಾರರ ಸ್ವಾಗತ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ನೀಡಿದ ಕಲಾವಿದೆ



ಪಿಎಫ್: ಜಿಬಿಎಗೆ ₹180 ಕೋಟಿ ನಷ್ಟ

6,000 ಪೌರಕಾರ್ಮಿಕರಿಗೆ ಪಿಎಫ್ ಕಂತು ಪಾವತಿಸದ ಘನ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು

• ಆರ್. ಮಂಜುನಾಥ್

ಬೆಂಗಳೂರು: ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಆರು ಸಾವಿರ ಪೌರಕಾರ್ಮಿಕರಿಗೆ ಐದುವರೆ ವರ್ಷ ಭವಿಷ್ಯ ನಿಧಿ (ಪಿಎಫ್) ಕಂತು ಪಾವತಿಸದೆ ಇದ್ದುದರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ₹180 ಕೋಟಿಯಷ್ಟು ಹೆಚ್ಚು ನಷ್ಟವಾಗಿದೆ. ಅದರೂ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಿಲ್ಲ.

2011ರ ಜನವರಿಯಿಂದ 2017ರ ಜುಲೈವರೆಗೆ ನಗರದಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ, ನಿರ್ವಹಣೆಯ ಗುತ್ತಿಗೆ ಪಡೆದುಕೊಂಡಿದ್ದ ಗುತ್ತಿಗೆದಾರರು, ಬಿಬಿಎಂಪಿಯಿಂದ ಸಂಪೂರ್ಣ ಹಣ ಪಡೆದುಕೊಂಡಿದ್ದಾರೆ. ಹಾಗಿದ್ದರೂ ಗುತ್ತಿಗೆ ಆಧಾರದಲ್ಲಿದ್ದ ಪೌರಕಾರ್ಮಿಕರ ಪಿಎಫ್ ಕಂತನ್ನು ಪಾವತಿಸಿಲ್ಲ. ಈ ಬಗ್ಗೆ ಕ್ರಮ ಕೈಗೊಂಡಿರುವ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಮೂಲ ಉದ್ಯೋಗದಾತನಾಗಿರುವ ಬಿಬಿಎಂಪಿಯಿಂದಲೇ ಕಂತಿನ ಪೂರ್ಣ ಮೊತ್ತವನ್ನು ವಸೂಲಿ ಮಾಡಿದೆ.

'ತೆರಿಗೆ ಕಟ್ಟದಿದ್ದರೆ ಆಸ್ತಿಯನ್ನು ಜಪ್ತಿ ಮಾಡಿಕೊಳ್ಳುತ್ತೇವೆ' ಎಂದು ಜಿಬಿಎ (ಹಿಂದಿನ ಬಿಬಿಎಂಪಿ) ಅಧಿಕಾರಿಗಳು ಹೇಳುತ್ತಿದ್ದರು. ಅದೇ ಪ್ರಕ್ರಿಯೆಯನ್ನು ಇಪಿಎಫ್ ನಡೆಸಿದ್ದು, ಬಿಬಿಎಂಪಿಯ ಖಾತೆಯಲ್ಲಿ ₹90 ಕೋಟಿಯಷ್ಟು ಹೆಚ್ಚು ಮೊತ್ತ ಜಪ್ತಿ ಮಾಡಿಕೊಂಡಿದೆ. ಇದನ್ನು ಪ್ರಶ್ನಿಸಿ ಬಿಬಿಎಂಪಿ ಎರಡು ಬಾರಿ ಹೈಕೋರ್ಟ್ ಮೆಟ್ಟಿಲೇರಿದ್ದರೂ, ಅರ್ಜಿ ವಜಾಗೊಂಡಿದೆ. ಹೀಗಾಗಿ, ಈ ಹಣವನ್ನು ವಾಪಸ್ ನೀಡುವುದು ಸಾಧ್ಯವಿಲ್ಲ ಎಂದು ಇಪಿಎಫ್ ಸ್ಪಷ್ಟಪಡಿಸಿದೆ.

- ಬಿಬಿಎಂಪಿ ಜವಾಬ್ದಾರಿಯನ್ನು ಗುತ್ತಿಗೆದಾರರ ಮೇಲೆ ವರ್ಗಾಯಿಸಲು ಸಾಧ್ಯವಿಲ್ಲ
- ಹಲವು ಅವಕಾಶಗಳನ್ನು ನೀಡಿದ್ದರೂ ಸಂಪೂರ್ಣ ಮಾಹಿತಿ ಒದಗಿಸದ ಬಿಬಿಎಂಪಿ
- ನೇರ ಅಥವಾ ಗುತ್ತಿಗೆಯಲ್ಲಿರುವ ಪೌರಕಾರ್ಮಿಕರ ಹಣ ಭವಿಷ್ಯ ನಿಧಿ ಸೇರುವಂತೆ ಮಾಡುವುದು ಬಿಬಿಎಂಪಿಯ ಕರ್ತವ್ಯ
- ಘನತ್ಯಾಜ್ಯ ನಿರ್ವಹಣೆಯಲ್ಲಿ 7,400 ಉದ್ಯೋಗಿಗಳಿದ್ದಾರೆ ಎಂದಿದ್ದರೂ, ಕೆಲಸಕ್ಕೆ ಸೇರಿಕೊಂಡ ದಿನ, ಇಪಿಎಫ್ ಖಾತೆ ಸಂಖ್ಯೆ ನೀಡಿಲ್ಲ



ಮುಖ್ಯಾಂಶಗಳು

- ಆದೇಶದ ಪ್ರತಿ ಜಿಬಿಎ ಮುಖ್ಯ ಆಯುಕ್ತರಿಗೆ ರವಾನೆ
- ಜಪ್ತಿ ಮಾಡಿಕೊಂಡ ₹90 ಕೋಟಿ ಮರಳಿಸಲು ಇಪಿಎಫ್ ಇಲಾಖೆ ನಕಾರ



ಪಿಎಫ್ ಕಂತು ಪಾವತಿಯಾಗದ ಬಗ್ಗೆ 'ಬಿಬಿಎಂಪಿ ಗುತ್ತಿಗೆ ಪೌರಕಾರ್ಮಿಕರ ಸಂಘ' 2014ರಲ್ಲಿ ದೂರು ನೀಡಿತ್ತು. 2017ರಲ್ಲಿ ಮತ್ತೆ ಈ ಬಗ್ಗೆ ದೂರು ದಾಖಲಾಯಿತು. ಅಂದಿನಿಂದ ವಿಚಾರಣೆ ನಡೆಸಿದ ಇಪಿಎಫ್, ಗುತ್ತಿಗೆದಾರರಿಗಿಂತ ಮೂಲ ಉದ್ಯೋಗದಾತರಾಗಿರುವ ಬಿಬಿಎಂಪಿಯೇ ಇದನ್ನು ಸರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿ ಸಾಕಷ್ಟು ಸಮಯ ನೀಡಿತ್ತು. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ, ಕೆನರಾ ಬ್ಯಾಂಕ್‌ನ ಬಿಬಿಎಂಪಿ ಕೇಂದ್ರ ಕಚೇರಿಯ ಶಾಖೆಯಲ್ಲಿರುವ ಬಿಬಿಎಂಪಿ ಖಾತೆಯಿಂದ ₹90 ಕೋಟಿಯನ್ನು 2018ರ ಜನವರಿ 23ರಂದು ಇಪಿಎಫ್ 'ಜಪ್ತಿ' ಮಾಡಿ, ಹಣ ಪಾವತಿಸುವಂತೆ ಬ್ಯಾಂಕ್‌ಗೆ ಸೂಚಿಸಿತು. ಇದನ್ನು ಪ್ರಶ್ನಿಸಿ ಬಿಬಿಎಂಪಿ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರೂ ಅದು ವಜಾಗೊಂಡಿತು. 2024ರಲ್ಲಿ ಹೈಕೋರ್ಟ್‌ಗೆ ಬಿಬಿಎಂಪಿ ಮತ್ತೆ ಅರ್ಜಿ ಸಲ್ಲಿಸಿತು.

ಪಿಎಫ್ ಪ್ರಾದೇಶಿಕ ಆಯುಕ್ತರಲ್ಲಿ ಮೇಲ್ಮನವಿ ಸಲ್ಲಿಸಿ, ಅವರಿಗೆ ಎಲ್ಲ ರೀತಿಯ ದಾಖಲೆಗಳನ್ನು ಒದಗಿಸಿ, ಮನವರಿಕೆ ಮಾಡಿಕೊಟ್ಟು, ಹಣದ ಬಗ್ಗೆ ಅವರಿಂದಲೇ ಆದೇಶ ಪಡೆದುಕೊಳ್ಳುವಂತೆ ಹೈಕೋರ್ಟ್ ಆದೇಶಿಸಿತು. ಈ ಬಗ್ಗೆ, ಮರು ವಿಚಾರಣೆ ನಡೆಸಿದ ಪಿಎಫ್ ಪ್ರಾದೇಶಿಕ ಆಯುಕ್ತ-1 ಮಿಹಿರ್ ಕುಮಾರ್, ಸೆ.15ರಂದು ಆದೇಶಿಸಿದ್ದಾರೆ.

'ಬಿಬಿಎಂಪಿ ಖಾತೆಯಿಂದ ಪಡೆದಿರುವ ಹಣವನ್ನು ವಾಪಸ್ ನೀಡಲು ಆಗುವುದಿಲ್ಲ. ಅದಕ್ಕೆ ಸೂಕ್ತ ವಿವರಣೆ, ದಾಖಲೆಗಳನ್ನು ಒದಗಿಸಿಲ್ಲ' ಎಂದು ತಿಳಿಸಿದ್ದಾರೆ. ಅಲ್ಲದೆ, 'ಪಿಎಫ್ ಕಂತು ಪಾವತಿಸದ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಂಡು, ಕಾನೂನಾತ್ಮಕವಾಗಿ ಎಲ್ಲ ರೀತಿಯ ಬಾಕಿಯನ್ನು ಅವರಿಂದಲೇ ವಸೂಲಿ ಮಾಡಬೇಕು. ಈ ಗುತ್ತಿಗೆದಾರ-ರಿಗೆ ಯಾವುದೇ ರೀತಿಯ ಗುತ್ತಿಗೆಯನ್ನೂ ನೀಡಬಾರದು. ಭವಿಷ್ಯ ನಿಧಿ ಖಾತೆಗೆ ಹಣ ಸಂದಾಯವಾಗಿರುವ ಬಗ್ಗೆ ಪ್ರತಿ ತಿಂಗಳ ಇಸಿಆರ್ ಅನ್ನು 60 ದಿನದೊಳಗೆ ಸಲ್ಲಿಸಬೇಕು' ಎಂದು ಆದೇಶಿಸಿದ್ದಾರೆ.

ಪಿಎಫ್ ಕಂತು ಪಾವತಿಸದ ಗುತ್ತಿಗೆದಾರರು

ಎ.ಕೆ. ಎಂಟರ್‌ಪ್ರೈಸಸ್, ಅಸೋಸಿಯೇಟೆಡ್ ಹ್ಯೂಮನ್ ರಿಸೋರ್ಸ್, ಬಿ.ಆರ್. ಶಂಕರ ರೆಡ್ಡಿ, ಸಿ.ಟಿ. ಜಗನ್ನಾಥ ಎಂಟರ್‌ಪ್ರೈಸಸ್, ಡಿ. ಗಣೇಶ್ ಶಂಕರ್, ದ್ರವ್ಯ ಎಂಟರ್‌ಪ್ರೈಸಸ್, ಹರ್ಷಿತಾ ಎಂಟರ್‌ಪ್ರೈಸಸ್, ಕೆ. ಪ್ರಭಾಕರ್, ಲವಕುಶ ಟ್ರಾನ್ಸ್‌ಪೋರ್ಟ್, ಎನ್‌ಕೆಎಸ್ ಎಂಟರ್‌ಪ್ರೈಸಸ್, ನಾಗೇಶ್ ರಾಜಣ್ಣ, ನಿತ್ಯಾ ಎಂಟರ್‌ಪ್ರೈಸಸ್, ಆರ್. ಶಂಕರ ರೆಡ್ಡಿ, ರಾಮಯ್ಯ ಅಜಯ್ ಎಂಟರ್‌ಪ್ರೈಸಸ್, ರಾಮಯ್ಯ ರೆಡ್ಡಿ ಶಂಕರ್ ರೆಡ್ಡಿ, ಶಿಶಿರ್ ಅಸೋಸಿಯೇಟ್ಸ್, ಶ್ರೀ ಅನ್ನಪೂರ್ಣೇಶ್ವರಿ ಅಸೋಸಿಯೇಟ್ಸ್, ಎಸ್‌ಎಲ್‌ಎನ್ ಕ್ಲೀನಿಂಗ್ ಆ್ಯಂಡ್ ಸರ್ವೀಸಸ್, ಎಸ್‌ಎಲ್‌ವಿ ಎಂಟರ್‌ಪ್ರೈಸಸ್, ಶ್ರೀ ಲಕ್ಷ್ಮಿ ಎಂಟರ್‌ಪ್ರೈಸಸ್, ಶ್ರೀನಿವಾಸ ಎಂಟರ್‌ಪ್ರೈಸಸ್, ಉಮಾ ಮಹೇಶ್ವರ್‌ರಾವ್, ಟಿಪಿಎಸ್ ಇನ್‌ಫ್ರಾಸ್ಟ್ರಕ್ಚರ್ ಲಿ., ಅಶೋಕ ಬಯೊ ಗ್ರೀಟ್ ಪ್ರೈ. ಲಿ., ಎಂಎಸ್‌ಜಿಪಿ ಇನ್‌ಫ್ರಾ ಟೆಕ್ ಪ್ರೈ.ಲಿ.

ಕಾರ್ಮಿಕರೇ ಇಲ್ಲದೆ ಕಸ ವಿಲೇವಾರಿ!

'2017ರ ಜನವರಿಯಿಂದ ಡಿಸೆಂಬರ್‌ವರೆಗೆ ಪೂರ್ವ, ದಕ್ಷಿಣ, ಯಲಹಂಕ ಮತ್ತು ದಾಸರಹಳ್ಳಿ ವಲಯದಲ್ಲಿ ತ್ಯಾಜ್ಯ ವಿಲೇವಾರಿ, ಸಂಗ್ರಹಕ್ಕೆ ಪೌರಕಾರ್ಮಿಕರೇ ಇರಲಿಲ್ಲ ಎಂದು ಬಿಬಿಎಂಪಿ ಹೇಳಿದೆ. ಇದು ಅಸಾಧ್ಯವಾದದು' ಎಂದು ಪಿಎಫ್‌ನ ಜಾರಿ ಅಧಿಕಾರಿಗಳು ಹೇಳಿದ್ದಾರೆ.

ಅಷ್ಟೇ ಅಲ್ಲ, 'ಯಲಹಂಕ ಮತ್ತು ದಾಸರಹಳ್ಳಿ ವಲಯದಲ್ಲಿ 2014ರ ಮಾರ್ಚ್‌ನಿಂದ 2017ರ ಮಾರ್ಚ್‌ವರೆಗೆ ಕಸ ಸಂಗ್ರಹ, ವಿಲೇವಾರಿಗೆ ಕಾರ್ಮಿಕರೇ ಇರಲಿಲ್ಲ ಎಂದು ಹೇಳಿರುವುದು ತಪ್ಪು ಮಾಹಿತಿ. ಆರು ಸಾವಿರ ಪೌರ ಕಾರ್ಮಿಕರನ್ನು ಇಪಿಎಫ್ ಮತ್ತು ಎಂಪಿ ಕಾಯ್ದೆಯನುಸಾರ ನೋಂದಣಿ ಮಾಡಿಕೊಂಡಿಲ್ಲ. ಇದು ಅತ್ಯಂತ ಗಂಭೀರವಾದ ಲೋಪ' ಎಂದೂ ಹೇಳಿದ್ದಾರೆ.

33,752	ಪೌರಕಾರ್ಮಿಕರು 2011ರಿಂದ 2017ರ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಬಿಬಿಎಂಪಿ ಹೇಳಿದೆ
27,000	ಪೌರ ಕಾರ್ಮಿಕರ ಪಿಎಫ್ ಕಂತು ಪಾವತಿಯ ಬಗ್ಗೆ ಮಾತ್ರ ಮಾಹಿತಿ ನೀಡಲಾಗಿದೆ
₹90.19 ಕೋಟಿ	ಪೌರಕಾರ್ಮಿಕರಿಗೆ ಗುತ್ತಿಗೆದಾರರು 2011–2017ರ ಅವಧಿಯಲ್ಲಿ ಪಾವತಿಸದ ಪಿಎಫ್ ಕಂತಿನ ಮೊತ್ತ
₹90.19 ಕೋಟಿ	ಬಿಬಿಎಂಪಿ ಪ್ರಧಾನ ಕಚೇರಿಯಲ್ಲಿರುವ ಕೆನರಾ ಬ್ಯಾಂಕ್ ಖಾತೆಯಿಂದ ಇಪಿಎಫ್ ವಶಪಡಿಸಿಕೊಂಡಿರುವ (ಅಟ್ಯಾಚ್) ಹಣ
220	2011–2017ರ ಅವಧಿಯಲ್ಲಿ ಪೌರಕಾರ್ಮಿಕರು, ಚಾಲಕರು, ಮೇಲ್ವಿಚಾರಕರನ್ನು ಒದಗಿಸಿದ್ದ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು
37	ಇಪಿಎಫ್ ಕೋಡ್ ಹೊಂದಿರದ ಗುತ್ತಿಗೆದಾರರು
23	ಎಲೆಕ್ಟ್ರಾನಿಕ್ ಚಲನ್ ಕಮ್ ರಿಟರ್ನ್ (ಇಸಿಆರ್) ಮಾಹಿತಿ ನೀಡದ ಗುತ್ತಿಗೆದಾರರು
21	ಬಿಬಿಎಂಪಿ ಗುತ್ತಿಗೆಯಲ್ಲಿರುವುದಕ್ಕಿಂತ ಕಡಿಮೆ ಸಂಖ್ಯೆಯ ಇಸಿಆರ್ ಮಾಹಿತಿ ನೀಡಿರುವ ಗುತ್ತಿಗೆದಾರರು

ಸುದ್ದಿ 2 ನಿಮಿಷ

'ಭೂ ದರ ನಿಗದಿ: ನ್ಯಾಯಾಂಗ ನಿಂದನೆ ಅರ್ಜಿ'

ದಾಬಸ್ ಪೇಟೆ: 'ಹೈಕೋರ್ಟ್ ತಡೆಯಾಜ್ಞೆ ಇದ್ದರೂ ದರ ನಿಗದಿ ಸಭೆ ನಡೆಸಿದ ಕೆಐಎಡಿಬಿ ಮತ್ತು ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುತ್ತೇವೆ' ಎಂದು ರೈತ ಮುಖಂಡ ಹನುಮಂತಪುರ ವಿಜಯ್ ಕುಮಾರ್ ತಿಳಿಸಿದರು.

'ಹನುಮಂತಪುರ, ಬಿದಲೂರು, ಕೋಡಿಪಾಳ್ಯ ಗ್ರಾಮಗಳಲ್ಲಿನ 387 ಎಕರೆ ಜಮೀನು ಭೂಸ್ವಾಧೀನಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ದಾಬಸ್‌ಪೇಟೆಯಲ್ಲಿ ಮಂಗಳವಾರ ನಡೆದ ಭೂದರ ನಿಗದಿ ಸಭೆಯಲ್ಲಿ 116 ಎಕರೆ ಬಿಟ್ಟು 271 ಎಕರೆ ಜಮೀನಿಗೆ ದರ ನಿಗದಿ ಮಾಡಿದ್ದಾರೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಕೆಐಎಡಿಬಿ ಅಧಿಕಾರಿಗಳು ತರಾತುರಿಯಲ್ಲಿ ದರ ನಿಗದಿ ಮಾಡಿರುವ ಹಿಂದೆ ಪ್ರಭಾವಿ ಸಚಿವರು ಮತ್ತು ಭೂಗಳ್ಳರ ಕೈವಾಡವಿದೆ. ಸಭೆ ನಿಗದಿಯಾಗಿದೆ ಎಂದು ಎರಡು ದಿನಗಳ ಹಿಂದೆ ನೋಟಿಸ್ ನೀಡಿ, ಕೆಐಎಡಿಬಿ ಅಧಿಕಾರಿಗಳು ರಾಜಕಾರಣಿಗಳ ರೀತಿ ಮನೆ ಮನೆಗೆ ಭೇಟಿ ನೀಡಿ ಅವರನ್ನು ಪುಸಲಾಯಿಸಿ ಸಭೆಗೆ ಕರೆದುಕೊಂಡು ಹೋಗಿದ್ದಾರೆ' ಎಂದು ದೂರಿದರು.

ರೈತ ಹೋರಾಟಗಾರರಾದ ಬಿದಲೂರು ಬಿ.ವಿ.ನರಸಿಂಹಯ್ಯ, ಶಿವರುದ್ರಯ್ಯ ಮಾತನಾಡಿ, 'ನಾವು ಯಾವುದೇ ಕಾರಣಕ್ಕೆ ಜಮೀನು ಬಿಡುವುದಿಲ್ಲ. ಕಾನೂನಿನ ಹೋರಾಟ ಮುಂದುವರಿಸುತ್ತೇವೆ' ಎಂದರು.

ಕಾರ್ಮಿಕರ ಭವಿಷ್ಯ ನಿಧಿ ಜಾಗೃತಿ ಕಾರ್ಯಕ್ರಮ



ಬೆಂಗಳೂರು: ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ), ಭವಿಷ್ಯ ನಿಧಿ ಮತ್ತು ಠೇವಣಿ ಆಧಾರಿತ ವಿಮಾ ಯೋಜನೆ ಕುರಿತು ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಆಯೋಜಿಸಿತ್ತು.

ಇಪಿಎಫ್‌ಒ ಕೋರಮಂಗಲ ಪ್ರಾದೇಶಿಕ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಮಿಕರ ಪ್ರತಿನಿಧಿಗಳು, ಸಾರ್ವಜನಿಕರು ಭಾಗಿಯಾಗಿದ್ದರು. ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನಾ'ದ ಭಾಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಯೋಜನೆಯ ಅಡಿಯಲ್ಲಿ, ಭವಿಷ್ಯ ನಿಧಿಗೆ ಕಾರ್ಮಿಕರನ್ನು ನೋಂದಣಿ ಮಾಡಿಸಲಾಯಿತು. ಭವಿಷ್ಯ ನಿಧಿಯ ಉಪಯೋಗ, ಇಪಿಎಫ್‌ಒ ಸದಸ್ಯತ್ವ ಪಡೆಯುವುದರಿಂದ ಒದಗುವ ಸವಲತ್ತು ಮತ್ತು ಪ್ರಯೋಜನಗಳ ಕುರಿತಾಗಿ ಕಾರ್ಮಿಕರಲ್ಲಿ ಅರಿವು ಮೂಡಿಸಲಾಯಿತು.

ಪೌತಿ ಖಾತೆ ಮಾಡಿಕೊಡಲು ಲಂಚ

ಇಬ್ಬರಿಗೂ ₹2 ಲಕ್ಷ ಮುಂಗಡ ಕೊಟ್ಟಿದ್ದ ದೂರುದಾರರು, ಬುಧವಾರ ಕಚೇರಿಯಲ್ಲಿ ₹2 ಲಕ್ಷ ಲಂಚ ಕೊಡುವಾಗ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿದರು

ಮೂರು ಸಿಬ್ಬಂದಿ 'ಲೋಕಾ' ಬಲೆಗೆ

ಕನಕಪುರ: ಪಿತ್ರಾರ್ಜಿತ ಆಸ್ತಿ ಪೌತಿ ಖಾತೆ ಮಾಡಿಕೊಡಲು ಲಂಚ ಪಡೆಯುತ್ತಿದ್ದ ಮೂವರು ಕಂದಾಯ ಅಧಿಕಾರಿಗಳನ್ನು ಲೋಕಾಯುಕ್ತ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಕಂದಾಯ ನಿರೀಕ್ಷಕ ತಂಗರಾಜು, ಗ್ರಾಮ ಲೆಕ್ಕಾಧಿಕಾರಿ ಚಂದ್ರೇಗೌಡ, ಕಂಪ್ಯೂಟರ್ ಆಪರೇಟರ್ ಉಮೇಶ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಪಿರ್ತಾರ್ಜಿತ ಆಸ್ತಿ ಪೌತಿ ಖಾತೆ ಮಾಡಲು ಅರಳಿಗುಡ್ಡೆ ತಾಂಡಾದ ಬಲರಾಮ ನಾಯ್ಕ್ 2022ರಲ್ಲಿ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಅಧಿಕಾರಿಗಳು ಪೌತಿ ಖಾತೆ ಮಾಡಿಕೊಡದೆ ತಡೆ ಮಾಡಿದ್ದಾರೆ. ಖಾತೆ ಬದಲಾವಣೆಗಾಗಿ ಮೂರು ವರ್ಷ ಕಚೇರಿಗೆ ಅಲೆದಾಡಿ ಸುಮ್ಮನಾಗಿದ್ದರು. ತಂಗರಾಜು ಹಾಗೂ ಚಂದ್ರೇಗೌಡ ಅವರನ್ನು ಸಂಪರ್ಕಿಸಿದಾಗ ಖಾತೆ ಮಾಡಿ ಕೊಡಲು ₹5.50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು.

ಜಿಲ್ಲಾ ಲೋಕಾಯುಕ್ತ ಎಸ್.ಪಿ ಸ್ನೇಹಾ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಶಿವಪ್ರಕಾಶ್ ನೇತೃತ್ವದಲ್ಲಿ ಅಧಿಕಾರಿಗಳಾದ ವಿಜಯ್‌ಕುಮಾರ್, ಸಂದೀಪ್‌ಕುಮಾರ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ.

ಕಟ್ಟಡಗಳ ಸೆಟ್‌ಬ್ಯಾಕ್‌ನಲ್ಲಿ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 1,500 ಚದರಡಿ ವಿಸ್ತೀರ್ಣದ ನಿವೇಶನಗಳಲ್ಲಿನ ಕಟ್ಟಡಗಳ ಸೆಟ್‌ಬ್ಯಾಕ್‌ನಲ್ಲಿ ಭಾರಿ ಕಡಿತ ಮಾಡಿ ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

ನಿವೇಶನದ ಉದ್ದ-ಅಗಲಕ್ಕೆ ಅನುಗುಣವಾಗಿ ಸೆಟ್‌ಬ್ಯಾಕ್ ನಿರ್ಧರಿಸುವುದನ್ನು ಕೈಬಿಟ್ಟು, ಒಟ್ಟಾರೆ ಚದರ ಮೀಟರ್‌ಗೆ ಅನುಗುಣವಾಗಿ ಸೆಟ್‌ಬ್ಯಾಕ್ ಅನ್ನು ನಿಗದಿಪಡಿಸಲಾಗಿದೆ. ಇದರಂತೆ, 60 ಚದರ ಮೀಟರ್‌ವರೆಗಿನ (600 ಚದರಡಿ) ನಿವೇಶನದ ಕಟ್ಟಡ ಹಿಂಭಾಗ ಸೆಟ್‌ಬ್ಯಾಕ್ ಬಿಡುವಂತಿಲ್ಲ. ಮುಂಭಾಗದಲ್ಲಿ 0.75 ಮೀ (ಎರಡೂವರೆ ಅಡಿ), ಎಡ ಅಥವಾ ಬಲ ಭಾಗದಲ್ಲಿ 0.6 ಮೀ (ಎರಡು ಅಡಿ) ಜಾಗ ಬಿಡಬೇಕೆಂದು ನಿಗದಿಯಾಗಿದೆ.

1,500 ಚದರಡಿ ನಿವೇಶನದ ವರೆಗಿನ ಕಟ್ಟಡಗಳಿಗೆ ಹೊಸ ಸೆಟ್‌ಬ್ಯಾಕ್‌ನಲ್ಲಿ ಕಡಿಮೆ ಜಾಗವನ್ನು ನಿಗದಿಪಡಿಸಲಾಗಿದೆ. ಈ ಸೆಟ್‌ಬ್ಯಾಕ್ ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳಿಗೂ ಅನ್ವಯಿಸುತ್ತದೆ. ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು 30 ದಿನದ ಅವಕಾಶ ನೀಡಲಾಗಿದೆ.

ಯಾವ ನಿವೇಶನಕ್ಕೆ ಎಷ್ಟು ಸೆಟ್‌ಬ್ಯಾಕ್?

ನಿವೇಶನದ ವಿಸ್ತೀರ್ಣ	ಸೆಟ್‌ಬ್ಯಾಕ್			
	ಮುಂದೆ	ಹಿಂದೆ	ಎಡ	ಬಲ
60 ಚದರ ಮೀಟರ್‌ವರೆಗೆ	0.75 ಮೀ	0	0.6 ಮೀ ಯಾವುದಾದರೂ ಒಂದು ಬದಿ	
60 ಚದರ ಮೀಟರ್‌ನಿಂದ 150 ಚದರ ಮೀಟರ್‌ವರೆಗೆ	0.90 ಮೀ	0.70 ಮೀ	0.7 ಮೀ ಯಾವುದಾದರೂ ಒಂದು ಬದಿ	
150 ಚದರ ಮೀಟರ್‌ನಿಂದ 4,000 ಚದರ ಮೀಟರ್	ನಿವೇಶನ ಉದ್ದದ 12%	ನಿವೇಶನ ಉದ್ದದ 8%	ನಿವೇಶನ ಉದ್ದದ 8%	ನಿವೇಶನ ಉದ್ದದ 8%

ರ್‍ಯಾಂಪ್‌ಗೆ ವಿನಾಯಿತಿ

ಸೆಟ್‌ಬ್ಯಾಕ್ ಹೊರತುಪಡಿಸಿ ರ್‍ಯಾಂಪ್ ನಿರ್ಮಾಣ ಮಾಡಬೇಕಾದ ನಿಯಮವನ್ನು ಕರಡು ಅಧಿಸೂಚನೆಯಲ್ಲಿ ಕೈಬಿಟ್ಟಿದ್ದು, ಸೆಟ್‌ಬ್ಯಾಕ್ ಪ್ರದೇಶದಲ್ಲೇ ವಾಹನಗಳ ರ್‍ಯಾಂಪ್ ನಿರ್ಮಾಣ ಮಾಡಬಹುದು. ಆ ಜಾಗದಿಂದ ಕಾರುಗಳನ್ನು ಕೆಳ ಅಥವಾ ಮೇಲಿನ ಅಂತಸ್ತುಗಳಿಗೆ ಲಿಫ್ಟ್ ಮಾಡುವ ಅವಕಾಶವನ್ನೂ ನೀಡಲಾಗಿದೆ.



ಪ್ರಸ್ತುತ ನಿಯಮಗಳ ಪ್ರಕಾರ, 20 x 30 ಅಡಿ ನಿವೇಶನಗಳಲ್ಲಿ ಕಟ್ಟಡದ ಸುತ್ತಲೂ ಒಂದು ಮೀಟರ್ (3 ಅಡಿ 4 ಇಂಚು) ಜಾಗ ಬಿಡಬೇಕು. 30 x 40 ಅಡಿ ನಿವೇಶನಗಳಲ್ಲಿ ಸುತ್ತಲೂ 1.50 ಮೀಟರ್ (5 ಅಡಿ) ಸೆಟ್‌ಬ್ಯಾಕ್ ಇದೆ.

ಕರಡು ಅಧಿಸೂಚನೆಯಲ್ಲಿ ನಿಗದಿಯಾಗಿರುವ ಸೆಟ್‌ಬ್ಯಾಕ್‌ನಂತೆಯೇ ಸ್ಟಿಲ್ಟ್ ಸೇರಿದಂತೆ ನಾಲ್ಕು ಅಂತಸ್ತು ಕಟ್ಟಡಗಳನ್ನು 12 ಮೀಟರ್ ಎತ್ತರ ಮೀರದಂತೆ ನಿರ್ಮಿಸಬಹುದಾಗಿದೆ.

'ಚಿಕ್ಕ ನಿವೇಶನಗಳಲ್ಲಿ ಸೆಟ್‌ಬ್ಯಾಕ್ ಉಲ್ಲಂಘನೆಯಾಗುತ್ತಲೇ ಇದೆ. ಬಹುತೇಕ ಬಡವರ್ಗದ ಜನರೇ ಇಂತಹ ನಿವೇಶನಗಳಲ್ಲಿ ಮನೆ ನಿರ್ಮಿಸಿರುತ್ತಾರೆ. ಉಲ್ಲಂಘನೆಗೆ ಕ್ರಮ ಕೈಗೊಳ್ಳಲು ನೋಟಿಸ್ ನೀಡಿದಾಗ ಹಲವು ರೀತಿಯ ಮನವಿ ಮಾಡುತ್ತಾರೆ, ಒತ್ತಡವೂ ಬರುತ್ತದೆ. ನಗರದಲ್ಲಿ ಈಗಾಗಲೇ ನಿರ್ಮಾಣ-ವಾಗಿರುವ ಸಾವಿರಾರು ಮನೆಗಳ ಸುತ್ತ ಸೆಟ್‌ಬ್ಯಾಕ್ ಇಲ್ಲ. ಹೀಗಾಗಿ, ಚಿಕ್ಕ ನಿವೇಶನಗಳಲ್ಲಿನ ವಸತಿ ಕಟ್ಟಡಗಳಿಗೆ ವಿನಾಯಿತಿ ನೀಡಲಾಗಿದೆ' ಎಂದು ಜಿಬಿಎ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಹೂಡಿಕೆ: ಅಮೆರಿಕ ಕಂಪನಿಗಳ ಆಸಕ್ತಿ'



ಬೆಂಗಳೂರು: 'ಅಮೆರಿಕದ ಉತಾ ಪ್ರಾಂತ್ಯದ ವೈಮಾಂತರಿಕ್ಷ ಕ್ಷೇತ್ರದ ಉದ್ಯಮಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿಸಿವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಉತಾ ಪ್ರಾಂತ್ಯದ ಸೆನೆಟ್ ಅಧ್ಯಕ್ಷ ಜಬೇಜ್ ಸ್ಟುವರ್ಟ್ ಆ್ಯಡಮ್ಸ್ ಮತ್ತು ಉತಾದ ವಿಶ್ವ ವಾಣಿಜ್ಯ ಕೇಂದ್ರದ ಮುಖ್ಯಸ್ಥ ಜೊನಾಥನ್ ಫ್ರೀಡ್ಮನ್ ಅವರ ಜತೆ ಬುಧವಾರ ಸಭೆ ನಡೆಸಿದ ಬಳಿಕ ಎಂ.ಬಿ.ಪಾಟೀಲರು ತಮ್ಮ ಪ್ರಕಟಣೆಯಲ್ಲಿ ಈ ಮಾಹಿತಿ ನೀಡಿದ್ದಾರೆ.

'ತಯಾರಿಕಾ, ಜೀವವಿಜ್ಞಾನ, ರೋಗನಿಧಾನ, ಶಿಕ್ಷಣ ಮತ್ತು ವಿದ್ಯುತ್ ಚಾಲಿತ ಸಾರ್ವಜನಿಕ ಸಾರಿಗೆ ಹಾಗೂ ವಾಹನ ಕ್ಷೇತ್ರದ ಕಂಪನಿಗಳು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿವೆ ಎಂದು ಉತಾದ ಸೆನೆಟ್ ಅಧ್ಯಕ್ಷ ತಿಳಿಸಿದ್ದಾರೆ. ರಾಜ್ಯದಲ್ಲಿ ಹೂಡಿಕೆಗೆ ಇರುವ ಅವಕಾಶ ಮತ್ತು ದೊರೆಯಲಿರುವ ಸವಲತ್ತುಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಉತಾ ವಿಶ್ವವಿದ್ಯಾಲಯ ಸೇರಿ ಅಲ್ಲಿನ ಹಲವು ಶೈಕ್ಷಣಿಕ ಸಂಸ್ಥೆಗಳು ರಾಜ್ಯದ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕೋರ್ಸ್‌ಗಳನ್ನು ಆರಂಭಿಸುವ ಮತ್ತು ಕ್ಯಾಂಪಸ್ ಆರಂಭಿಸುವ ಬಗ್ಗೆ ಆಸಕ್ತಿ ತೋರಿವೆ' ಎಂದು ಅವರು ಹೇಳಿದ್ದಾರೆ.

ಸೋಮಶೆಟ್ಟಿಗೆ ಅನುಭವಮಂಟಪ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ಡಾ.ಚನ್ನಬಸವ ಪಟ್ಟದ್ದೇವರು ಅನುಭವಮಂಟಪ ಪ್ರಶಸ್ತಿಗೆ ಬೀದರ್‌ನ ಚಿತ್ರಕಲಾವಿದ ಸಿ.ಬಿ.ಸೋಮಶೆಟ್ಟಿ ಆಯ್ಕೆಯಾಗಿದ್ದಾರೆ ಎಂದು ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಬುಧವಾರ ಘೋಷಿಸಿದ್ದಾರೆ.

ಬಸವಕಲ್ಯಾಣದಲ್ಲಿ ನ.29, 30ರಂದು ನಡೆಯುವ 46ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ–2025ರಲ್ಲಿ ಅನುಭವ ಮಂಟಪದಿಂದ ನೀಡುವ ವಿವಿಧ ಪ್ರಶಸ್ತಿಗಳಿಗೆ ಆಯ್ಕೆಯಾಗಿರುವವರ ಪಟ್ಟಿ ಬಿಡುಗಡೆ ಮಾಡಲಾಗಿದೆ.

ಬಸವಭಾಸ್ಕರ್ ರಾಷ್ಟ್ರೀಯ ಪ್ರಶಸ್ತಿಗೆ ಶಿರೂರಿನ ನಾಟಕಕಾರ ಬಸವರಾಜ ಬೇಂಗೇರಿ, ಅನುಭವಮಂಟಪ ರಾಷ್ಟ್ರೀಯ ಪ್ರಶಸ್ತಿಗೆ ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದ ಅಧ್ಯಕ್ಷೆ ಎಸ್. ಜಿ.ಸುಶೀಲಮ್ಮ ಆಯ್ಕೆಯಾಗಿದ್ದಾರೆ. ಈ ಮೂರೂ ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿವೆ.



ಸೋಮಶೆಟ್ಟಿ



ಸುಶೀಲಮ್ಮ



ರಮೇಶ ಮೋರ್ಗೆ

ಡಾ.ಎಂ.ಎಂ. ಕಲಬುರಗಿ ಸಾಹಿತ್ಯ ಸಂಶೋಧನಾ ರಾಷ್ಟ್ರೀಯ ಪ್ರಶಸ್ತಿಗೆ ಹೊಸಪೇಟೆಯ ಚಿಂತಕ ಕೆ.ರವೀಂದ್ರನಾಥ ಆಯ್ಕೆಯಾ-ಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ಹಾಗೂ ಫಲಕ ಹೊಂದಿದೆ.

ಶರಣ ವೈದ್ಯ ಸಂಗಣ್ಣ ಪ್ರಶಸ್ತಿಗೆ ಮಹಾರಾಷ್ಟ್ರದ ದೇಗಲೂರಿನ ಪ್ರಸಿದ್ಧ ವೈದ್ಯ ಮಲ್ಲಿಕಾರ್ಜುನ ರಗಟೆ, ಶರಣ ಒಕ್ಕಲಿಗ ಮುದ್ದಣ್ಣ ಪ್ರಶಸ್ತಿ (2024)ಗೆ ಖಾನಾಪೂರದ ಸಾವಯವ ಕೃಷಿಕ ರಮೇಶ ಮೋರ್ಗೆ, ಶರಣ ಒಕ್ಕಲಿಗ ಮುದ್ದಣ್ಣ ಪ್ರಶಸ್ತಿ (2025)ಯನ್ನು ಹುಡಗಿಯ ಸಾವಯವ ಕೃಷಿಕ ಸೋಮಶಂಕರ ಅವರಿಗೆ ನೀಡಲಾಗುತ್ತಿದೆ. ಈ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿವೆ.

'ರಾಜ್ಯದಲ್ಲಿ ಹೂಡಿಕೆಗೆ ಸಿಂಗಪುರ ಉತ್ಸುಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ವ್ಯಾಪಾರ ವಹಿವಾಟು ನಡೆಸಲು ಸಿಂಗಪುರ ಹೆಚ್ಚು ಉತ್ಸುಕವಾಗಿದೆ. ಆ ದೇಶದ ಜತೆ ತಂತ್ರಜ್ಞಾನ ಹಂಚಿಕೊಳ್ಳುವ ಮತ್ತು ಕೈಗಾರಿಕಾ ಪಾರ್ಕ್ ಸ್ಥಾಪಿಸುವ ಕುರಿತು ಸಿಂಗಪುರದ ವಿದೇಶಾಂಗ ಸಚಿವರ ಜತೆ ಚರ್ಚೆ ನಡೆಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಿಂಗಪುರ ವಿದೇಶಾಂಗ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವೆ ಗಾನ್ ಶಿಯೋ ಹುಯಂಗ್ ಅವರ ನೇತೃತ್ವದ ನಿಯೋಗದ ಜತೆ ಬುಧವಾರ ಚರ್ಚೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಸಿಂಗಪುರದ ಕಾನ್ಸುಲೇಟ್ ಕಚೇರಿ ಬೆಂಗಳೂರಿನಲ್ಲಿ ಗುರುವಾರ ಕಾರ್ಯಾರಂಭ ಮಾಡಲಿದೆ. ಅವರು ಒಪ್ಪಿದರೆ ಒಂದು ಬಹುಮಹಡಿ ಕಟ್ಟಡ ನಿರ್ಮಿಸಿ ಅವರ ಎಲ್ಲಾ ಕಚೇರಿಗಳು ಒಂದೇ ಕಡೆ ಇರುವಂತೆ ಮಾಡಲು ಪ್ರಸ್ತಾವ ನೀಡಿದ್ದೇನೆ. ಈ ವಿಚಾರವನ್ನು ಇತರ ದೇಶದವರ ಜತೆಗೂ ಮಾತನಾಡಿದ್ದೇನೆ. ಭದ್ರತಾ ಉದ್ದೇಶದಿಂದ ಕೆಲವರು ಒಪ್ಪಿರಲಿಲ್ಲ' ಎಂದು ತಿಳಿಸಿದರು.

ಹಲವು ದೇಶಗಳ ಜನ ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದು, ಹೀಗಾಗಿ ಸಿಂಗಪುರ ಇಲ್ಲಿ ಬಂಡವಾಳ ಹೂಡಿಕೆಗೆ ಮುಂದಾಗಿದೆ ಎಂದರು.



ಸಿಂಗಪುರ ವಿದೇಶಾಂಗ ಸಚಿವೆ ಗಾನ್ ಶಿಯೋ ಹುಯಂಗ್ ಅವರನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗೌರವಿಸಿದರು

'2026ರಲ್ಲಿ ಸಿಂಗಪುರಕ್ಕೆ'

'ಭಾರತದಲ್ಲಿ ಅತ್ಯಧಿಕ ವಿದೇಶಿ ನೇರ ಹೂಡಿಕೆ ಮಾಡುತ್ತಿರುವ ಸಿಂಗಪುರ ಜತೆ ಕೈಗಾರಿಕಾ ಮತ್ತು ವಾಣಿಜ್ಯ ಸಹಭಾಗಿತ್ವ ಬೆಳೆಸಿಕೊಳ್ಳಲು ರಾಜ್ಯದ ಪಾಲಿಗೆ ಒಳ್ಳೆಯ ಅವಕಾಶ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ 2026ರಲ್ಲಿ ಸಿಂಗಪುರಕ್ಕೆ ಭೇಟಿ ನೀಡಲಾಗುವುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಗಾನ್ ಶಿಯೋ ಹುಯಂಗ್ ಜತೆ ಮಾತುಕತೆ ಬಳಿಕ ತಿಳಿಸಿದರು.

ಸಿಂಗಪುರ ಭೇಟಿಗೂ ಮುನ್ನ ದ್ವಿಪಕ್ಷೀಯ ಕೈಗಾರಿಕಾ ಬಾಂಧವ್ಯ ವರ್ಧನೆ ಕುರಿತು ಅಧಿಕಾರಿಗಳ ಮಟ್ಟದಲ್ಲಿ ವಿಚಾರ ವಿನಿಮಯ ನಡೆಸಲಾಗುವುದು. ಮಾಹಿತಿ ತಂತ್ರಜ್ಞಾನ, ಸೆಮಿಕಂಡಕ್ಟರ್, ಫಿನ್-ಟೆಕ್, ಚಿಪ್ ವಿನ್ಯಾಸ, ಔಷಧ ತಯಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಹೂಡಿಕೆಗೆ ಅತ್ಯುತ್ತಮ ಅವಕಾಶಗಳಿವೆ ಎಂದರು.

'ಲೋಕಾ' ಆದೇಶ: ₹10 ಕೋಟಿ ಮೌಲ್ಯದ ರಸ್ತೆ ಜಮೀನು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯ ಉತ್ತರಹಳ್ಳಿ ಉಪ ವಿಭಾಗದ ಅರೇಹಳ್ಳಿ ಗ್ರಾಮದಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಶೆಡ್ ಅನ್ನು ಲೋಕಾಯುಕ್ತದ ನಿರ್ದೇಶನದಂತೆ ಆಯುಕ್ತ ಕೆ.ಎನ್. ರಮೇಶ್ ನೇತೃತ್ವದಲ್ಲಿ ಬುಧವಾರ ತೆರವುಗೊಳಿಸಲಾಗಿದೆ. ₹10 ಕೋಟಿ ಮೌಲ್ಯದ 6 ಸಾವಿರ ಚದರ ಅಡಿ ಜಾಗವನ್ನು ನಗರ ಪಾಲಿಕೆ ಸುಪರ್ದಿಗೆ ಪಡೆಯಲಾಗಿದೆ.

ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯ ಸರ್ವೆ ಸಂಖ್ಯೆ 2 , 6/2 ಹಾಗೂ 4ರಲ್ಲಿ 2 ಮತ್ತು 3ನೇ ಮುಖ್ಯರಸ್ತೆ ಒತ್ತುವರಿ ಮಾಡಿ ಶೆಡ್ ನಿರ್ಮಿಸಿದ್ದ ಬಗ್ಗೆ ಸಾರ್ವಜನಿಕರು ಲೋಕಾಯುಕ್ತರಿಗೆ ದೂರು ನೀಡಿದ್ದರು ಎಂದು ಆಯುಕ್ತರು ತಿಳಿಸಿದ್ದಾರೆ.

ರಸ್ತೆ ಒತ್ತುವರಿದಾರರ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾ-ಗುವುದು ಎಂದು ಮಾಹಿತಿ ನೀಡಿದ್ದಾರೆ. ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್ ಇದ್ದರು.

ಒಆರ್‌ಸಿಸಿಎ ಕಂಪನಿಗಳಿಗೆ ಮನವಿ: ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ಬಳಕೆಗಾಗಿ ಹೊರ ವರ್ತುಲ ರಸ್ತೆ ಕಂಪನಿಗಳ ಸಂಘಟನೆ (ಒಆರ್‌ಆರ್‌ಸಿಎ) ನಗರ ಪಾಲಿಕೆ ಜೊತೆಗೆ ಕೈಜೋಡಿಸಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆಯ ಅಭಿವೃದ್ಧಿಯ ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಕೋರಿದರು.

ಇಬ್ಲೂರ್ ಜಂಕ್ಷನ್‌ನಿಂದ ಕೆ.ಆರ್. ಪುರದವರಗಿನ ಹೊರವರ್ತುಲ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿ ಸಿಎಸ್‌ಆರ್ ಸಹಭಾಗಿತ್ವದ ಬಗ್ಗೆ ಚರ್ಚಿಸಲಾಯಿತು. ವಾಕಲೂರು ಸಂಸ್ಥೆಯ ಅರುಣ್ ಪೈ, ಇಂಡಿಯಾ ರೈಸಿಂಗ್‌ನ ಅನಿರುದ್ಧ ಅಭ್ಯಂಕರ್, ಇಂಟೆಲ್ ಕಂಪನಿಯ ಸ್ಯಾಮ್ಯುಯಲ್ ಹಾಗೂ ಕೆಪಿಎಂಜಿ ಕಂಪನಿಯ ವಿಜಯ್ ಪಾಲ್ಗೊಂಡಿದ್ದರು.

'ಪಾರ್ಕಿಂಗ್ ಸ್ಥಳ ಗುರುತಿಸಿ'

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ, ಆದಾಯ ಬರುವಂತೆ ಮಾಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ವರ್ಚುವಲ್ ಮೂಲಕ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಎಲ್‌ಇಡಿ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಪ್ರಮುಖ ರಸ್ತೆ, ವಾರ್ಡ್ ರಸ್ತೆಗಳಲ್ಲಿ ಬಾಕಿಯಿರುವ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು. ಜಲಮಂಡಳಿ ಕಾಮಗಾರಿ ಪೂರ್ಣಗೊಳಿಸಿರುವ ಕಡೆ ರಸ್ತೆ ಕತ್ತರಿಸಿದ ಭಾಗವನ್ನು ದುರಸ್ತಿಪಡಿಸಬೇಕು ಎಂದು ಹೇಳಿದರು.

ಹುಬ್ಬಳ್ಳಿಯ ಕೇಶ್ವಾಪುರ ಮುಕ್ತಿಧಾಮ • ಅಂತ್ಯಕ್ರಿಯೆಗೆ ಶೇಂಗಾ ಸಿಪ್ಪೆ ಬಳಕೆ

ಪರಿಸರ ಸ್ನೇಹಿ 'ಶವ ಸಂಸ್ಕಾರ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಕೇಶ್ವಾಪುರದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ಕಾರ್ಯಕ್ಕೆ ಶೇಂಗಾ ಸಿಪ್ಪೆಗಳನ್ನು ಬಳಸಲಾಗುತ್ತಿದೆ. ಈ ಪ್ರಕ್ರಿಯೆಯಿಂದ ಅಂತ್ಯಕ್ರಿಯೆ ತ್ವರಿತವಾಗಿ ನಡೆಯಲಿದ್ದು, ಹೊಗೆ ಪ್ರಮಾಣವೂ ಕಡಿಮೆ. ಮಾರ್ಚ್‌ನಿಂದ ಈ ಕ್ರಮ ಜಾರಿಗೆಬಂದಿದ್ದು, ಇದುವರೆಗೂ 60 ಟನ್ ಶೇಂಗಾ ಸಿಪ್ಪೆ ಬಳಕೆಯಾಗಿದೆ.

ನಿತ್ಯ ಸರಾಸರಿ ಐದು ಅಂತ್ಯಕ್ರಿಯೆ-ಗಳು ನಡೆಯುತ್ತವೆ. ಸಾಮಾನ್ಯವಾಗಿ ಪ್ರತಿ ಅಂತ್ಯಕ್ರಿಯೆಗೆ ಸರಾಸರಿ 250 ಕೆ.ಜಿಯಿಂದ 350 ಕೆ.ಜಿವರೆಗೆ ಸಿಪ್ಪೆ ಬಳಕೆ ಆಗುತ್ತದೆ.

'ಸ್ನೇಹಿತ ಸುಧಾಕರ ಅವರು ಚಿತ್ರ-ದುರ್ಗದಲ್ಲಿ ಶೇಂಗಾಎಣ್ಣೆ ತಯಾರಿಸುವ ಕಾರ್ಖಾನೆ ತೆರೆದಿದ್ದು, ಸಂಸ್ಕರಣೆ ಬಳಿಕ ವಾರ್ಷಿಕ ನೂರಾರು ಟನ್ ಸಿಪ್ಪೆ ಹಾಳಾಗುತಿತ್ತು. ಅದನ್ನು ಶವಗಳ ಅಂತ್ಯಕ್ರಿಯೆಗೆ ಬಳಸಿದರೆ ಹೇಗೆ ಎಂಬ ಚಿಂತನೆ ಮೂಡಿ, ಕಾರ್ಯರೂಪಕ್ಕೆ ತರಲಾಯಿತು. ಅಲ್ಲಿಂದ ಇಲ್ಲಿಗೆ ತರುವವರೆಗೆ ಸಾರಿಗೆ ವೆಚ್ಚ ಸೇರಿ ಕೆ.ಜಿ ಶೇಂಗಾ ಸಿಪ್ಪೆಗೆ ₹11 ವೆಚ್ಚವಾಗುತ್ತದೆ. ಈವರೆಗೆ 4 ಬಾರಿ ತಲಾ 16 ಟನ್‌ನಂತೆ ಶೇಂಗಾ ಸಿಪ್ಪೆ ಖರೀದಿಸಲಾಗಿದೆ' ಎಂದು ಮುಕ್ತಿಧಾಮ ಚಾರಿಟಬಲ್‌ನ ಸದಸ್ಯ ಭವರಲಾಲ್ ಜೈನ್ ತಿಳಿಸಿದರು.

> **ಕಟ್ಟಿಗೆ ಬಳಸಿದರೆ ಅಂತ್ಯಕ್ರಿಯೆಗೆ 6 ತಾಸು ಬೇಕು. ಶೇಂಗಾ ಸಿಪ್ಪೆ ಬಳಕೆಯಿಂದ 3 ಗಂಟೆಯಲ್ಲಿ ಮುಗಿಯುತ್ತದೆ. 20 ಟನ್‌ಗೂ ಹೆಚ್ಚು ಸಿಪ್ಪೆ ಸಂಗ್ರಹದ ಗೋದಾಮು ಇಲ್ಲಿದೆ**
> **ಭವರಲಾಲ್ ಜೈನ್**
> ಸದಸ್ಯ ಮುಕ್ತಿಧಾಮ ಚಾರಿಟಬಲ್

'ಹಿಂದೆ ಅಂತ್ಯಕ್ರಿಯೆಗೆ ಕಟ್ಟಿಗೆ ಬಳಕೆ ಆಗುತಿತ್ತು. ತೇವಾಂಶದ ಕಾರಣ ಮಳೆಗಾಲದಲ್ಲಿ ದಹನ ಕಾರ್ಯ ವಿಳಂಬ ಆಗುತ್ತಿತ್ತು. ಜೊತೆಗೆ, ಹೊಗೆಯು ಹೆಚ್ಚಾಗುತಿತ್ತು. ಜನವಸತಿ ನಡುವೆಯೇ ಮುಕ್ತಿಧಾಮ ಇದ್ದು, ಅಸುಪಾಸಿನ ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಿದ್ದರು. ಜೊತೆಗೆ, ಬೇರೆ ಸಮಸ್ಯೆಗಳಿದ್ದವು. ಶೇಂಗಾ ಸಿಪ್ಪೆಗಳ ಬಳಕೆಯಿಂದ ವಾತಾವರಣ ಸೇರುವ ಹೊಗೆ ಪ್ರಮಾಣವು ತಗ್ಗಿದೆ' ಎಂದು ಹೇಳಿದರು.

ಮಾದರಿ ಮುಕ್ತಿಧಾಮ: 'ಒಂದು ಎಕರೆ ಪ್ರದೇಶದಲ್ಲಿ ಮುಕ್ತಿಧಾಮ ಇದೆ. ಮಕ್ಕಳು ಒಳಗೊಂಡು ಎಲ್ಲರೂ ಇಲ್ಲಿ ನಿರ್ಭೀತಿಯಿಂದ ಓಡಾಡುತ್ತಾರೆ. ಮರ–ಗಿಡಗಳ ನೆರಳಿದೆ. 200 ಮಂದಿ ಕೂರಬಹುದಾದ ವಿಶಾಲ ಪ್ರಾಂಗಣ, ಮೂಲಸೌಲಭ್ಯಗಳನ್ನು ಹೊಂದಿದೆ' ಎಂದು ಮುಕ್ತಿಧಾಮದ ನಿರ್ವಾಹಕ ಸಿಬ್ಬಂದಿ ಗಣೇಶ ಹೇಳಿದರು.



ಮುಕ್ತಿಧಾಮದ ಗೋದಾಮಿನಲ್ಲಿ ಸಂಗ್ರಹಿಸಿರುವ ಶೇಂಗಾಸಿಪ್ಪೆ
ಚಿತ್ರ: ಗೋವಿಂದರಾಜ ಜವಳಿ

ರಸ್ತೆ ಬದಿ ಕಸ: ದೂರು

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ರಾತ್ರಿ ಸಮಯದಲ್ಲಿ ವಾಹನಗಳಲ್ಲಿ ಬಂದು ರಸ್ತೆ ಬದಿ ಕಸ ಸುರಿಯುವವರ ವಿರುದ್ಧ, ಸಿಸಿಟಿವಿ ಕ್ಯಾಮೆರಾ ವಿಡಿಯೊ ಸಮೇತ ಪುರಸಭೆಯ ಮುಖ್ಯಾಧಿಕಾರಿ ಆನೇಕಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕಸ ಸುರಿಯುತ್ತಿರುವವರ ವಾಹನ ವಶಪಡಿಸಿಕೊಳ್ಳುವಂತೆ ಎಂದು ಪತ್ರ ಬರೆದಿದ್ದಾರೆ.

ಕರ್ನಾಟಕ ಪೌರಾಡಳಿತ ಕಾಯ್ದೆ ಸೆಕ್ಷನ್ 224, 263, 276ರಡಿಯಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದು ಅಪರಾಧವಾಗಿರುವ ಕಾರಣದಿಂದ ದೂರು ನೀಡಲಾಗಿದೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

SINCE 1894 L.G. ಸಂಯೋಜಿತ ಇಂಗು

ಸೆನ್ಸೆಕ್ಸ್ 84,466 | ನಿಫ್ಟಿ 25,875 | $/₹ 88.62 | ಚಿನ್ನ (Std. 10g) ₹1,28,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,63,700 (ಬೆಂಗಳೂರು)



ಜನವರಿಯಲ್ಲೇ ಸಂಚು ಶುರು

ಕೆಂಪುಕೋಟೆ ಬಳಿ ಹಲವು ಬಾರಿ ಸಂಚಾರ ಮೊಬೈಲ್ ಲೊಕೇಷನ್‌ನಿಂದ ಪತ್ತೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೆಹಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಪ್ರಬಲ ಸ್ಫೋಟಕ್ಕೆ ಈ ವರ್ಷದ ಜನವರಿಯಿಂದಲೇ ಸಂಚು ಆರಂಭವಾಗಿದೆ. ಈಗ ಬಂಧಿಸಲಾಗಿರುವ ಆರೋಪಿಗಳ ಪೈಕಿ ಡಾ. ಮುಜಮ್ಮಿಲ್ ಗನಿ ಈ ವರ್ಷದ ಜನವರಿ ಮೊದಲ ವಾರದಲ್ಲಿ ಹಲವು ಬಾರಿ ಕೆಂಪುಕೋಟೆ ಬಳಿ ಸುತ್ತಾಡಿದ್ದ ಎಂಬುದು ಮೊಬೈಲ್ ಗೋಪುರದ ಲೊಕೇಷನ್ ದತ್ತಾಂಶ ವಿಶ್ಲೇಷಣೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟಗೊಂಡ ಕಾರನ್ನು ಓಡಿಸುತ್ತಿದ್ದ ಎನ್ನಲಾಗಿರುವ ಅಲ್‌–ಫಲಾಹ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಉಮರ್ ನಬಿ ಜತೆಗೆ ಕೆಂಪುಕೋಟೆ ಪ್ರದೇಶದ ಸುತ್ತಮುತ್ತ ಈತ ಓಡಾಡಿದ್ದಾನೆ. ಈ ಭಾಗದಲ್ಲಿನ ಭದ್ರತಾ ವ್ಯವಸ್ಥೆ ಮತ್ತು ಜನದಟ್ಟಣೆ ತಿಳಿದುಕೊಳ್ಳಲು ಹಲವು ಬಾರಿ ಭೇಟಿ ನೀಡಿರಬಹುದು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಜಮ್ಮಿಲ್ ಚಲನವಲನಗಳನ್ನು ಟವರ್ ಲೊಕೇಷನ್ ದತ್ತಾಂಶ ಮತ್ತು ಹತ್ತಿರದ ಪ್ರದೇಶಗಳ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳು ದೃಢೀಕರಿಸಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

▶9

ಭಯೋತ್ಪಾದಕ ಕೃತ್ಯ: ಸರ್ಕಾರ

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ಸೋಮವಾರ ನಡೆದ ಕಾರು ಸ್ಫೋಟವನ್ನು ‘ಭಯೋತ್ಪಾದಕ ಕೃತ್ಯ’ ಎಂದು ಕರೆದಿರುವ ಕೇಂದ್ರ ಸರ್ಕಾರ, ಈ ಪ್ರಕರಣವನ್ನು ತನಿಖಾ ಸಂಸ್ಥೆಗಳು ಅತ್ಯಂತ ತ್ವರಿತ ಮತ್ತು ವೃತ್ತಿಪರತೆಯಿಂದ ನಿಭಾಯಿಸಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ವಿಳಂಬವಿಲ್ಲದೆ ಕ್ರಮ ತೆಗೆದುಕೊಳ್ಳಬೇಕು ಎಂದು ನಿರ್ದೇಶಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣು ನೀತಿಗೆ ಭಾರತ ಬದ್ಧವಾಗಿದೆ ಎಂದು ಪುನರುಚ್ಚರಿಸಲಾಯಿತು. ಈ ಘಟನೆಯಲ್ಲಿ ಮೃತಪಟ್ಟವರ ಗೌರವಾರ್ಥ ಎರಡು ನಿಮಿಷ ಮೌನ ಆಚರಿಸಲಾಯಿತು. ಅಲ್ಲದೆ ಜೀವಹಾನಿ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.



ಹರಿಯಾಣದ ಗುರುಗ್ರಾಮ ರೈಲು ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಪ್ರಯಾಣಿಕರ ವಸ್ತುಗಳು ಮತ್ತು ಚೀಲಗಳನ್ನು ಬುಧವಾರ ತಪಾಸಣೆ ನಡೆಸಿದರು —ಪಿಟಿಐ ಚಿತ್ರ

ಡಿ. 6ರಂದು ಪ್ರಬಲ ಸ್ಫೋಟದ ಪಿತೂರಿ

ಬಾಬರಿ ಮಸೀದಿ ಧ್ವಂಸದ ವಾರ್ಷಿಕ ದಿನವಾದ ಡಿಸೆಂಬರ್ 6ರಂದು ಪ್ರಬಲ ಸ್ಫೋಟ ನಡೆಸಲು ಡಾ. ಉಮರ್ ನಬಿ ಯೋಜಿಸಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಬಂಧಿಸಲಾಗಿರುವ ಎಂಟು ಜನರ ತೀವ್ರ ವಿಚಾರಣೆ ಹಾಗೂ ಅವರ ಕುಟುಂಬದವರು, ಸ್ನೇಹಿತರು ಮತ್ತು ನೆರೆಯವರ ವಿಚಾರಣೆಯಿಂದ ಈ ಮಾಹಿತಿ ದೊರೆತಿದೆ ಎಂದು ಅವರು ವಿವರಿಸಿದ್ದಾರೆ.

ಡಾ. ಮುಜಮ್ಮಿಲ್ ಗನಿ ಬಂಧನ ಮತ್ತು ಅಪಾರ ಪ್ರಮಾಣದ ಅಮೋನಿಯಂ ನೈಟ್ರೇಟ್ ಸ್ಫೋಟಕ ಪತ್ತೆಯಾಗಿದ್ದರಿಂದ ಉಮರ್ ಭೀತಿಗೆ ಒಳಗಾಗಿದ್ದ ಎಂದು ಹೇಳಿದ್ದಾರೆ.

ಒಂಟಿಯಾಗಿದ್ದ ಉಮರ್ ಉತ್ತಮ ಶೈಕ್ಷಣಿಕ ದಾಖಲೆ ಹೊಂದಿದ್ದ. ಆತನು ಗನಿ ಜತೆಗೂಡಿ 2021ರಲ್ಲಿ ಟರ್ಕಿ ಪ್ರವಾಸ ಕೈಗೊಂಡಿದ್ದ. ಅದು ಆತನ ಜೀವನದಲ್ಲಿ ಆಮೂಲಾಗ್ರ ಬದಲಾವಣೆಗೆ ಕಾರಣವಾಯಿತು ಎಂದು ಅವರು ಮಾಹಿತಿ ನೀಡಿದ್ದಾರೆ. ಈ ಪ್ರವಾಸದ ವೇಳೆ ಇಬ್ಬರೂ, ನಿಷೇಧಿತ ಜೆಇಎಂನ ಭೂಗತ ಕಾರ್ಯಕರ್ತರನ್ನು ಭೇಟಿಯಾಗಿದ್ದರು ಎಂಬುದು ಗೊತ್ತಾಗಿದೆ.

▶9

‘ಇನ್ಫೊಸಿಸ್ ಪ್ರಶಸ್ತಿ’ ಪ್ರಕಟ

ಭಾರತ ಮೂಲದ ಐವರು, ಅಮೆರಿಕದ ಒಬ್ಬರಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನವು 2025ನೇ ಸಾಲಿನ ಇನ್ಫೊಸಿಸ್ ಪ್ರಶಸ್ತಿಗಳನ್ನು ಪ್ರಕಟಿಸಿದೆ. ವಿಜ್ಞಾನ ವಿಷಯಗಳ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಅಮೆರಿಕದ ವಿವಿಧ ಶೈಕ್ಷಣಿಕ ಸಂಸ್ಥೆಗಳ ನಾಲ್ವರು ಹಾಗೂ ಭಾರತದ ಶೈಕ್ಷಣಿಕ ಸಂಸ್ಥೆಗಳ ಇಬ್ಬರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಫಲಕ, ಚಿನ್ನದ ಪದಕ ಮತ್ತು 1 ಲಕ್ಷ ಅಮೆರಿಕನ್ ಡಾಲರ್ (ಸುಮಾರು ₹88 ಲಕ್ಷ) ಒಳಗೊಂಡಿದೆ. ಇನ್ಫೊಸಿಸ್ ವಿಜ್ಞಾನ ಪ್ರತಿಷ್ಠಾನದ ಟ್ರಸ್ಟಿಗಳಾದ ನಾರಾಯಣಮೂರ್ತಿ, ಕ್ರಿಸ್ ಗೋಪಾಲಕೃಷ್ಣನ್, ಶ್ರೀನಾಥ್ ಬಾಟ್ನಿ, ಪ್ರತಿಮಾ ಮೂರ್ತಿ, ನಂದನ್ ನಿಲೇಕಣಿ ಭಾಗಿಯಾಗಿದ್ದ ಸುದ್ದಿಗೋಷ್ಠಿಯಲ್ಲಿ, ಪ್ರತಿಷ್ಠಾನದ ಅಧ್ಯಕ್ಷ ಕೆ.ದಿನೇಶ್ ಪ್ರಶಸ್ತಿಗಳನ್ನು ಬುಧವಾರ ಪ್ರಕಟಿಸಿದರು.



ನಿಖಿಲ್ ಅಗರ್‌ವಾಲ್, ಪ್ರಾಧ್ಯಾಪಕ, ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಕೂಲ್ ಆಫ್ ಎಕನಾಮಿಕ್ಸ್

- ಬೇಡಿಕೆ ಮತ್ತು ಪೂರೈಕೆ ಆಧಾರದಲ್ಲಿ ಪರಿಣಾಮಕಾರಿ ಮಾರುಕಟ್ಟೆ ತಂತ್ರ ರೂಪಿಸಿದ ಕಾರಣಕ್ಕೆ ಅರ್ಥಶಾಸ್ತ್ರ ವಿಭಾಗದಲ್ಲಿ ಪ್ರಶಸ್ತಿ



ಅಂಜನಾ ಬದರಿನಾರಾಯಣನ್, ಸಹಾಯಕ ಪ್ರಾಧ್ಯಾಪಕಿ, ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರ, ಬೆಂಗಳೂರು

- ಡಿಎನ್‌ಎ, ಜಿನೋಮ್‌ಗಳ ನಿರ್ವಹಣೆ ಮತ್ತು ದುರಸ್ತಿ ಕುರಿತಾದ ಅಧ್ಯಯನ ಮಾದರಿ ರೂಪಿಸಿದ ಕಾರಣಕ್ಕೆ ಜೀವವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆ



ಸುಶಾಂತ್ ಸಹದೇವ, ಸಹಾಯಕ ಪ್ರಾಧ್ಯಾಪಕ, ಟೊರಾಂಟೊ ವಿಶ್ವವಿದ್ಯಾಲಯ

- ಸಾಮಾಜಿಕ ಜೀವನದ ಮೇಲೆ ಇಂಟರ್‌ನೆಟ್, ನೆಟ್‌ವರ್ಕಿಂಗ್‌ಗಳ ಪರಿಣಾಮ ಕುರಿತ ಅಧ್ಯಯನಕ್ಕೆ ಅಲ್ಗಾರಿದಮ್ಸ್ ರಚಿಸಿದ ಕಾರಣಕ್ಕೆ ಗಣಿತೀಯ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿ



ಸವ್ಯಸಾಚಿ ಮುಖರ್ಜಿ, ಸಹಾಯಕ ಪ್ರಾಧ್ಯಾಪಕ, ಗಣಿತ ವಿಭಾಗ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಮುಂಬೈ

- ದ್ರವ ಎಂಜಿನಿಯರಿಂಗ್, ಡೇಟಾ ವಿಜ್ಞಾನ ಅಧ್ಯಯನಕ್ಕೆ ಗಣಿತೀಯ ಮಾದರಿ ರೂಪಿಸಿದ ಕಾರಣಕ್ಕೆ ಗಣಿತೀಯ ವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆ



ಆ್ಯಂಡ್ರಿವ್ ಒಲೆಟ್, ಸಹಾಯಕ ಪ್ರಾಧ್ಯಾಪಕ, ಷಿಕಾಗೊ ವಿಶ್ವವಿದ್ಯಾಲಯ

- ದಕ್ಷಿಣ ಏಷ್ಯಾದ ಭಾಷೆಗಳ ಅಧ್ಯಯನದಲ್ಲಿ ನಡೆಸಿದ ಸಂಶೋಧನೆಗಾಗಿ ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆ



ಕಾರ್ತಿಶ್ ಮಂಥಿರಾಮ್ , ಪ್ರಾಧ್ಯಾಪಕ, ಕೆಮಿಕಲ್ ಎಂಜಿನಿಯರಿಂಗ್ ವಿಭಾಗ, ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

- ನವೀಕರಿಸಬಹುದಾದ ಮೂಲಗಳ ಶಕ್ತಿಗಳ ಕಾರ್ಯಕ್ಷಮತೆ ಹೆಚ್ಚಿಸುವ ಹಲವು ಮಾದರಿಗಳನ್ನು ರೂಪಿಸಿದ ಕಾರಣಕ್ಕೆ ಭೌತವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿ



ಯುವತಿಯರಿಗೆ ಟಿ–20 ಕಿರೀಟ

ಕೋಲ್ಕತ್ತದ ಸಾಲ್ಟ್‌ಲೇಕ್‌ನಲ್ಲಿ ನಡೆದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ)19 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ಕರ್ನಾಟಕ ತಂಡವು ಟ್ರೋಫಿಯೊಂದಿಗೆ ಸಂಭ್ರಮಿಸಿತು. ಬುಧವಾರ ನಡೆದ ಫೈನಲ್‌ನಲ್ಲಿ ಆಂಧ್ರಪ್ರದೇಶ ಎದುರು 7 ವಿಕೆಟ್‌ಗಳಿಂದ ಜಯಿಸಿತು

ವರ್ಷಕ್ಕೆ 12 ಮುಟ್ಟಿನ ರಜೆ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಸ್ಥ ಮಹಿಳೆಯರಿಗೆ ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಮುಟ್ಟಿನ ರಜೆಯನ್ನು (ವೇತನ ಸಹಿತ) ನೀಡುವ ಕುರಿತು ಕಾರ್ಮಿಕ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ತೋಟ ಕಾರ್ಮಿಕರ ಕಾಯ್ದೆ, ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ, ಮೋಟಾರು ಸಾರಿಗೆ ಕಾಯ್ದೆ ಅಡಿಯಲ್ಲಿ ನೋಂದಣಿ ಆಗಿರುವ ಕೈಗಾರಿಕೆಗಳು ಮತ್ತು ಸಂಸ್ಥೆಗಳೂ ಸೇರಿದಂತೆ ಎಲ್ಲ ವಲಯಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಅನ್ವಯವಾಗಲಿದೆ.

▶11

‘ಅಂಕ ಇಳಿಕೆ ಬದಲಾವಣೆ ಇಲ್ಲ’

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆ ತೇರ್ಗಡೆಗೆ ನಿಗದಿ ಮಾಡಿರುವ ಶೇ 33 ಅಂಕ ಈ ಶೈಕ್ಷಣಿಕ ಸಾಲಿನಿಂದಲೇ ಅನ್ವಯವಾಗಲಿದೆ. ಈ ನಿರ್ಧಾರ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಕರಣೆ ಅಲ್ಲ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಉತ್ತೀರ್ಣತೆಯ ಕನಿಷ್ಠ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಿ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ ನಂತರವೂ ಕೆಲವರು ವಿರೋಧಿಸುತ್ತಿದ್ದಾರೆ. ಲಕ್ಷಾಂತರ ಮಕ್ಕಳಿಗೆ ಕೆಲವೊಮ್ಮೆ ಎರಡು ಅಂಕಗಳೇ ನಿರ್ಣಾಯಕವಾಗಿರುತ್ತವೆ. ಒಬ್ಬ ವ್ಯಕ್ತಿ ಇಂದು ಚಾಲನಾ ಪರವಾನಗಿ ಪಡೆಯಲು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ನೀಡಬೇಕಾಗುತ್ತದೆ’ ಎಂದರು.

▶11

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಮಕ್ಕಳ ದಿನಾಚರಣೆ: ಟೈಟಾನ್ ಐ ಪ್ಲಸ್‌ನಿಂದ 'ಏಕ್ ತಾರಾ ಟೆಸ್ಟ್'

ಬೆಂಗಳೂರು: ಮಕ್ಕಳ ದಿನಾಚರಣೆ ಪ್ರಯುಕ್ತ ಕಣ್ಣಿನ ದೃಷ್ಟಿ ಪರೀಕ್ಷಿಸಲು ಟೈಟಾನ್ ಐ+ ಸಂಸ್ಥೆಯು 'ಏಕ್ ತಾರಾ ಟೆಸ್ಟ್' ಶೀರ್ಷಿಕೆಯಡಿ ಪ್ರಾಥಮಿಕ ಪರೀಕ್ಷೆ ಹಮ್ಮಿಕೊಂಡಿದೆ.

ಇದು ಪ್ರಾಚೀನ ಕಣ್ಣಿನ ಪರೀಕ್ಷೆಯಿಂದ ಪ್ರೇರಿತವಾದ, ಕಣ್ಣಿನ ದೃಷ್ಟಿಯನ್ನು ಪರೀಕ್ಷಿಸುವ ಒಂದು ಪ್ರಾಥಮಿಕ ವಿಧಾನವಾಗಿದೆ. ಶತಮಾನಗಳ ಹಿಂದೆ ಸಪ್ತಋಷಿ ನಕ್ಷತ್ರ ಪುಂಜದಲ್ಲಿ ಎರಡು ವಿಭಿನ್ನ ನಕ್ಷತ್ರಗಳಾದ 'ಅಲ್ಕೋರ್' ಮತ್ತು 'ಮಿಜಾರ್' ಅನ್ನು ಗುರುತಿಸುವ ಸಾಮರ್ಥ್ಯದಿಂದ ಬೇಟೆಗಾರರ ದೃಷ್ಟಿಯನ್ನು ಪರೀಕ್ಷಿಸಲಾಯಿತು. ಎರಡನ್ನೂ ನೋಡಬಲ್ಲವರನ್ನು ತೀಕ್ಷ್ಣ ದೃಷ್ಟಿ ಹೊಂದಿರುವವರು ಎಂದು ಪರಿಗಣಿಸಲಾಗಿತ್ತು. ಇದರಿಂದ ಪ್ರೇರಿತವಾದ 'ಏಕ್ ತಾರಾ ಪರೀಕ್ಷೆ'ಯು ಕತ್ತಲೆಯಲ್ಲಿ ಹೊಳೆಯುವ ನಕ್ಷತ್ರವನ್ನು ಗುರುತಿಸುವುದಾಗಿದೆ ಎಂದು ಸಂಸ್ಥೆ ತಿಳಿಸಿದೆ.

'ಪ್ರತಿ ಐದು ಮಕ್ಕಳಲ್ಲಿ ಒಬ್ಬರು ದೃಷ್ಟಿ ಸಮಸ್ಯೆ ಎದುರಿಸುತ್ತಿದ್ದಾರೆ. ದೇಶದಲ್ಲಿ ಮೂರು ಕೋಟಿಗೂ ಅಧಿಕ ಮಕ್ಕಳು ದೃಷ್ಟಿ ದೋಷದಿಂದ ಬಳಲುತ್ತಿದ್ದಾರೆ. ಆದ್ದರಿಂದ ಈ ಪರೀಕ್ಷಾ ಅಭಿಯಾನ ಕೈಗೊಳ್ಳಲಾಗಿದೆ. ಪಾರದರ್ಶಕ ಕಾರ್ಡ್ ಮೂಲಕ ಈ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆ ಕಾರ್ಡ್‌ಗಳು www.titaneyeplus.comನಲ್ಲಿ ಲಭ್ಯ' ಎಂದು ಟೈಟಾನ್ ಕಂಪನಿಯ ಕಣ್ಣಿನ ಆರೈಕೆಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಮನೀಶ್ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಹೋಟೆಲ್ ಕಾರ್ಮಿಕರಿಗೆ ಕನ್ನಡ ಕಲಿಸಿ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ನಗರ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳು ಮತ್ತು ಉಪಾಹಾರ ಗೃಹಗಳಲ್ಲಿ ಅನ್ಯಭಾಷಿಕ ಕಾರ್ಮಿಕರ ಸಂಖ್ಯೆ ವಿಪರೀತವಾಗಿ ಹೆಚ್ಚುತ್ತಿದೆ. ಸ್ಥಳೀಯರೊಂದಿಗೆ ಉತ್ತಮ ಬಾಂಧವ್ಯ ಹೊಂದಲು ಅವರಿಗೆ ಕನ್ನಡ ಭಾಷೆ ಕಲಿಸುವ ಅಭಿಯಾನವನ್ನು ಸರ್ಕಾರ ಕೈಗೊಳ್ಳಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಅವರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದಾರೆ. 'ಅನ್ಯಭಾಷಿಕ ಕಾರ್ಮಿಕರನ್ನು ಕೆಲಸದಿಂದ ತೆಗೆದು, ಕನ್ನಡಿಗರನ್ನು ನೇಮಿಸಿ ಎನ್ನುವ ಆಗ್ರಹಗಳಿದ್ದರೂ ಅದು ಪ್ರಾಯೋಗಿಕವಾಗಿ ಕಾರ್ಯಸಾಧುವಲ್ಲ' ಎಂದಿದ್ದಾರೆ.



ಬಿಳಿಮಲೆ

'ಹಿಂದಿ ಬಾರದ ಗ್ರಾಹಕರು ಅಸಹಾಯಕರಾಗಿ ಅನ್ಯಭಾಷಿಕ ಕಾರ್ಮಿಕರೊಂದಿಗೆ ಮಾತನಾಡಲು ಪ್ರಯತ್ನಿಸುವ ಘಟನೆಗಳು ಹೆಚ್ಚುತ್ತಿವೆ. ಮುಂದಿನ ದಿನಗಳಲ್ಲಿ ಇದರಿಂದ ಉಂಟಾಗಬಹುದಾದ ಸಂಘರ್ಷಗಳನ್ನು ಹತ್ತಿಕ್ಕುವ ಉದ್ದೇಶದಿಂದ ಸರ್ಕಾರವು ಈ ಕ್ರಮಕ್ಕೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ, ಕನ್ನಡ ಕಲಿಸುವ ಪ್ರಯತ್ನಕ್ಕೆ ಮುಂದಾಗಬೇಕು' ಎಂದು ಆಗ್ರಹಿಸಿದ್ದಾರೆ.

'ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಕಲಿಕೆ ಬಗ್ಗೆ ವಿಶೇಷ ಪಠ್ಯವನ್ನು ಸಿದ್ಧಪಡಿಸಿದೆ. ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಕ್ರಮಕ್ಕೆ ಪ್ರಾಧಿಕಾರ ಸಹಕಾರ ಇರುತ್ತದೆ' ಎಂದಿದ್ದಾರೆ.



ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ ಮಳವಳ್ಳಿ ಅವರು ನಗರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ಮ್ಯಾನೇಜ್‌ಮೆಂಟ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಹಾಗೂ ವಾಕ್–ಶ್ರವಣ ದೋಷ ವಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು

ಜಲಮಂಡಳಿ ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿಯು ವಿವಿಧ ಉಪ ವಿಭಾಗಗಳಲ್ಲಿ ನ.13ರ ಗುರುವಾರ ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಂಡಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು–ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದು. ವಾಟ್ಸ್ ಆ್ಯಪ್ ಸಂಖ್ಯೆ 8762228888ಗೆ ದೂರನ್ನು ದಾಖಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಯಲಹಂಕ ನ್ಯೂಟೌನ್‌ನ ಪಿನಾಕಿನಿ ಭವನ, ಜೆ.ಪಿ. ನಗರ 8ನೇ ಘಟ್ಟದ ಜಂಬೂಸವಾರಿ ದಿಣ್ಣೆ ಮುಖ್ಯರಸ್ತೆ, ಜಯನಗರ 4ನೇ ಟಿ ಬ್ಲಾಕ್ ಕಪಿಲ ಭವನ, ಚಿಕ್ಕಲಾಲ್‌ಬಾಗ್ ಪಾರ್ಕ್ ರಸ್ತೆ ತುಳಸಿ ತೋಟ, ಬನಗಿರಿನಗರದ 3ನೇ ಹಂತದ 1ನೇ ಮುಖ್ಯರಸ್ತೆ ನೆಲಮಹಡಿಯಲ್ಲಿ ಅದಾಲತ್ ಆಯೋಜಿಸಲಾಗಿದೆ.

ಎ.ನಾರಾಯಣಪುರ ಮುಖ್ಯರಸ್ತೆ, ಕೆ.ಆರ್. ಪುರ ರೈಲ್ವೆ ನಿಲ್ದಾಣ ಎದುರು, ಕಸ್ತೂರಿನಗರ 1ನೇ ಮುಖ್ಯರಸ್ತೆ, ಹಲಸೂರಿನ ಲಿಡೋ ಮಾಲ್ ಎದುರು, ಕೋರಮಂಗಲ 3ನೇ ಬ್ಲಾಕ್‌ನ 2ನೇ ಅಡ್ಡರಸ್ತೆ, ಎಂ.ಸಿ. ಲೇಔಟ್ ವಿಜಯನಗರ ವಾಟರ್ ಟ್ಯಾಂಕ್ ಎದುರು, ನಾಗರಬಾವಿ ಹೊರ ವರ್ತುಲ ರಸ್ತೆ 5ನೇ ಬ್ಲಾಕ್‌ನಲ್ಲಿ ಅದಾಲತ್ ನಡೆಸಲಾಗುತ್ತಿದೆ ಎಂದು ತಿಳಿಸಲಾಗಿದೆ.

ದತ್ತಿ ಬಹುಮಾನಕ್ಕೆ ಪುಸ್ತಕ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ.ಪ್ರತಿಷ್ಠಾನವು 2024ನೇ ಸಾಲಿನ ಸಾರಂಗಿ ವೆಂಕಟರಾಮಯ್ಯ–ಪುಟ್ಟಚ್ಚಮ್ಮ ಸ್ಮಾರಕ ದತ್ತಿ ಪುಸ್ತಕ ಬಹುಮಾನಕ್ಕೆ ಕಾದಂಬರಿಗಳನ್ನು ಆಹ್ವಾನಿಸಿದೆ.

2024ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಕಾದಂಬರಿಗಳ ಮೂರು ಪ್ರತಿಗಳನ್ನು ಡಿ.10ರ ಸಂಜೆ 5 ಗಂಟೆಯೊಳಗೆ ತಲುಪಿಸಬೇಕು. ಬಹುಮಾನವು ₹3 ಸಾವಿರ ನಗದು ಒಳಗೊಂಡಿದೆ. ಉದಯೋನ್ಮುಖ ಹಾಗೂ ಗರಿಷ್ಠ ಮೂರು ಕೃತಿಗಳನ್ನು ಪ್ರಕಟಿಸಿದವರಿಗೆ ಆದ್ಯತೆ ನೀಡಲಾಗುತ್ತದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್ ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಡಿವಿಜನ್ (ಎಲ್‌ಸಿಎಂಡಿ)
[ದೂರವಾಣಿ: (080)–22685088, 5047, 5094, 5086, 5087, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು: ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ & ಆರ್ಯಭಟ ಕ್ಯಾಂಪಸ್‌ಗಳು, ಎಲ್‌ಇಒಎಸ್, ಪೀಣ್ಯ, ಬೆಂಗಳೂರು–58 ಇಲ್ಲಿ ಡಿಆರ್‌ಯುಪಿಎಸ್ ಕಟ್ಟಡಕ್ಕಾಗಿ ಭೂತಾಂತ್ರಿಕ ತನಿಖೆ ನಡೆಸುವುದು. ಎನ್‌ಐಇಟಿ: CMG/LEOS/2025-26/LMN-02; ದಿನಾಂಕ: 29.10.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ.8.28 ಲಕ್ಷ; ಇಎಂಡಿ ರೂ.16,560/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 02 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 31.10.2025; **ಮುಕ್ತಾಯವಾಗುವ ದಿನಾಂಕ** : 18.11.2025.

ಕೆಲಸದ ಹೆಸರು: ಎನ್‌ಐಟಿ ನಂ. & ದಿನಾಂಕ: ಬೆಂಗಳೂರಿನ ಪೀಣ್ಯದಲ್ಲಿರುವ ಹಳೆಯ ಐಎಸ್‌ಆರ್‌ಎಡಿ ಕ್ಯಾಂಪಸ್‌ನಲ್ಲಿ ಅಸ್ತಿತ್ವದಲ್ಲಿರುವ ಕಟ್ಟಡದ ತಾಂತ್ರಿಕ ಮೌಲ್ಯಮಾಪನ / ಆರೋಗ್ಯ ಮೌಲ್ಯಮಾಪನಕ್ಕಾಗಿ ವಿನಾಶಕಾರಿಯಲ್ಲದ ಪರೀಕ್ಷೆಗಳನ್ನು ನಡೆಸುವುದು. ಕ್ಯಾಂಪಸ್‌ನಲ್ಲಿ ಪ್ರಸ್ತಾವಿತ ಅಡೋರ್ (ADORE) ಕಟ್ಟಡದ ನಿರ್ಮಾಣಕ್ಕಾಗಿ. ಎನ್‌ಐಇಟಿ: CMG/LEOS/2025-26/LMN-08; ದಿನಾಂಕ: 29.10.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ.4.53 ಲಕ್ಷ; ಇಎಂಡಿ ರೂ.9,060/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 01 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 31.10.2025; **ಮುಕ್ತಾಯವಾಗುವ ದಿನಾಂಕ:** 18.11.2025.

ಕೆಲಸದ ಹೆಸರು: ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್, ಪೀಣ್ಯ, ಬೆಂಗಳೂರು–58 ಆರ್ಯಭಟ ಕ್ಯಾಂಪಸ್‌ನಲ್ಲಿರುವ ಮೆಕ್ಯಾನಿಕಲ್ ವರ್ಕ್‌ಶಾಪ್ ಹತ್ತಿರ ಆರ್‌ಸಿಸಿ ರಸ್ತೆ ನಿರ್ಮಾಣ. ಎನ್‌ಐಇಟಿ: CMG/LEOS/2025-26/LMN-09; ದಿನಾಂಕ: 30.10.2025; **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ.11.91 ಲಕ್ಷ; ಇಎಂಡಿ ರೂ.23,820/–; ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 06 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 03.11.2025; **ಮುಕ್ತಾಯವಾಗುವ ದಿನಾಂಕ:** 19.11.2025.

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

DOCUMENT LOST

This is inform the general public that I, **PUSHPAVATHI B.** W/o H P Amarnath lost original documents of my site sale deed No. **YAN 1-15508-2005-06, C D No. YAND174 on 04-02-2025** at Sanjayanagar for this my husband H.P. AMARNATH is already given complaint in e-lost web of Bangalore city police, last Report No. 1462342/2025

- Deponent

32ನೇ ವರ್ಷದ ಸವಿನೆನಪು



ಬಿ.ಎನ್. ವೆಂಕಟರಮಣಗೌಡ

ನನ್ನ ಏಳಿಗೆಗೆ ನಾನೇ ಶಿಲ್ಪಿ ಎಂಬ ತನ್ನತನವನ್ನು ಜೀವನದಲ್ಲಿ ರೂಢಿಸಿಕೊಂಡು, ಪರೋಪಕಾರಿಯಾಗಿ ಜನಮನ್ನಣೆಯನ್ನು ಪಡೆದು ನಮ್ಮ ಜೀವನದ ದಾರಿದೀಪವಾಗಿದ್ದ ನೀವು ನಮ್ಮನ್ನಗಲಿ 13–11–2025 ಇವತ್ತಿಗೆ 32 ವಸಂತ ಉರುಳಿದರೂ ತಮ್ಮ ಆದರ್ಶಗಳು ನಮಗಿಂದೂ ಮಾರ್ಗದರ್ಶಕವಾಗಿದೆ.

ಸದಾ ನಿಮ್ಮ ನೆನಪಿನಲ್ಲಿ

ಬಿ.ಎನ್. ಬಚ್ಚೇಗೌಡರು, ಮಾಜಿ ಸಂಸದರು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ
ಶರತ್ ಬಚ್ಚೇಗೌಡರು, ಶಾಸಕರು, ಹೊಸಕೋಟೆ ವಿಧಾನಸಭಾ ಕ್ಷೇತ್ರ
ದಿ|| ವೆಂಕಟರಮಣಗೌಡರ ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಬೆಂಡಿಗಾನಹಳ್ಳಿ ಕುಟುಂಬ ವರ್ಗ

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ–561203

ಸ್ವಚ್ಛ ಭಾರತ
ಸ್ವಚ್ಛ ದೊಡ್ಡಬಳ್ಳಾಪುರ

CITY MUNICIPAL COUNCIL, DODDABALLAPUR-561203
E-mail:itstaff_ulb_doddaballapur@yahoo.com
Website:www.doddaballapurcity.gov.in

ನಸದೊ/ತಾ.ಶಾ/ಸಾ.ಪ್ರ.ಸಂ.16/2025–26 ದಿನಾಂಕ: 11–11–2025

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಎನ್.ಜಿ.ಟಿ ಪರಿಸರ ಪರಿಹಾರ ನಿಧಿಯಡಿ ಭಜನೆಹಟ್ಟಿರಂಗಪ್ಪ (ರಂಗಪ್ಪ ಸರ್ಕಲ್) ವೃತ್ತದಿಂದ ಡಿ–ಕ್ರಾಸ್ ರಸ್ತೆಯ ಅಯ್ಯಪ್ಪಸ್ವಾಮಿ ದೇವಸ್ಥಾನದವರೆಗೂ ಒಳಚರಂಡಿ ಪೈಪ್‌ಲೈನ್ ಕಾಮಗಾರಿಯನ್ನು ನಗರಸಭೆಯಿಂದ ಪ್ರಾರಂಭಿಸುತ್ತಿದ್ದು, ಸದರಿ ಕಾಮಗಾರಿ ಅನುಷ್ಠಾನದ ವೇಳೆ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುವುದರಿಂದ, ಸಾರ್ವಜನಿಕರು ಹಾಗೂ ವಾಹನ ಸವಾರರು ನಗರಸಭೆ ಹಾಗೂ ಪೋಲೀಸ್ ಇಲಾಖೆ ಗುರುತಿಸಿರುವ ಬದಲಿ ರಸ್ತೆಯನ್ನು ಉಪಯೋಗಿಸಲು ಹಾಗೂ ನಗರಸಭೆ ಮತ್ತು ಪೋಲೀಸ್ ಇಲಾಖೆಯೊಂದಿಗೆ ಸಹಕರಿಸಲು ಈ ಮೂಲಕ ಕೋರಿದೆ.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.	ಉಪಾಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ.	ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ದೊಡ್ಡಬಳ್ಳಾಪುರ.	ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.

ಡಿಐಪಿಆರ್/ದೊಡ್ಡಬಳ್ಳಾಪುರ/3721/ಮಣಿಪಾಲ್–2025–26

ಸಾರ್ವಜನಿಕ ನೋಟೀಸು – ಇ–ಹರಾಜು
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ
ಇ–ಹರಾಜಿನ ದಿನಗಳು: 04.12.2025 ಮತ್ತು 05.12.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು 'ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ' ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	'ಎ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 04.12.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**10.61 ಕೋಟಿ**	**1.061 ಕೋಟಿ**
	'ಬಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 04.12.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: I. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಡಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**5.44 ಕೋಟಿ**	**0.544 ಕೋಟಿ**
	'ಸಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ ಮತ್ತು ಬಿ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 04.12.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 3	ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಮತ್ತು ತಮಿಳುನಾಡಿನಲ್ಲಿ ಗುತ್ತಿಗೆಗೆ ತೆಗೆದುಕೊಂಡಿರುವ ಸ್ಥಳಗಳಲ್ಲಿರುವ ಯಂತ್ರೋಪಕರಗಳನ್ನು ಹೊರತುಪಡಿಸಿ ದಿವಾಳಿ ಪ್ರಕ್ರಿಯೆ ನಿಯಮಗಳ (ನಿಯಮ 32ಎ ಜೊತೆಗೆ ನಿಯಮ 32(ಇ) ಅನ್ನು ಓದಿಕೊಂಡಂತೆ) ಅಡಿಯಲ್ಲಿ ಕಾರ್ಪೊರೇಟ್ ಸಾಲಗಾರ ಕಂಪನಿಯನ್ನು ಅದು ಕಾರ್ಯನಿರ್ವಹಿಸುತ್ತಿರುವಂತೆಯೇ ಮಾರಾಟಮಾಡುವುದು. ಇದಕ್ಕೆ ಕೆಲವು ನಿರ್ದಿಷ್ಟ ವಿನಾಯತಿಗಳಿವೆ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಡಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**4.84 ಕೋಟಿ**	**0.484 ಕೋಟಿ**
	'ಡಿ' ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಮಾರಾಟ (ಒಂದೊಮ್ಮೆ ವರ್ಗ ಎ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 04.12.2025ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ		
ಆಸ್ತಿ ಪಟ್ಟಿ 4	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೊರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೆ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	**87.00 ಲಕ್ಷ**	**8.70 ಲಕ್ಷ**
ಆಸ್ತಿ ಪಟ್ಟಿ 5	ಮಂಗಳೂರಿನ ಬಾಂಗ್ರಾ ಕುಲೂರಿನ ನಂ. 15,16,17,24,25 ಮತ್ತು 26 –1ರಲ್ಲಿರುವ 14,081.65 ಚದರ ಅಡಿ ವಿಸ್ತೀರ್ಣದ, ಆರು ವಾಣಿಜ್ಯ ನಿವೇಶನಗಳು – ಇದರ ಸಂಪೂರ್ಣ ಸ್ವತ್ತು	**2.03 ಕೋಟಿ**	**0.203 ಕೋಟಿ**
ಆಸ್ತಿ ಪಟ್ಟಿ 6	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	**2.50 ಕೋಟಿ**	**0.250 ಕೋಟಿ**
	'ಇ' ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 05.12.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 7	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	**49.00 ಲಕ್ಷ**	**4.90 ಲಕ್ಷ**
ಆಸ್ತಿ ಪಟ್ಟಿ 8	ಸರ್ವೇ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	**56.00 ಲಕ್ಷ**	**5.60 ಲಕ್ಷ**
ಆಸ್ತಿ ಪಟ್ಟಿ 9	ಸರ್ವೇ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	**27.00 ಲಕ್ಷ**	**2.70 ಲಕ್ಷ**
	'ಎಫ್' ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 05.12.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 10	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	**1.95 ಕೋಟಿ**	**0.195 ಕೋಟಿ**
	'ಜಿ' ವರ್ಗ: ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 10 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 05.12.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 11	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	**32.00 ಲಕ್ಷ**	**3.20 ಲಕ್ಷ**
	'ಹೆಚ್' ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 11 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ–ಹರಾಜು ಮೂಲಕ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ 05.12.2025 ರಂದು ಸಂಜೆ 05.00 ರಿಂದ 06.00 ರವರೆಗೆ		
ಆಸ್ತಿ ಪಟ್ಟಿ 12	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	**1.64 ಕೋಟಿ**	**0.164 ಕೋಟಿ**

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ 'ಇ–ಹರಾಜು ಪ್ರಕ್ರಿಯೆಯ ಮಾಹಿತಿ' (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **'ಎ' ಅಥವಾ 'ಬಿ' ಅಥವಾ 'ಸಿ' ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ. ಈ ವರ್ಗದ ಅಡಿಯಲ್ಲಿನ ಆಸ್ತಿಗಳ ಮಾರಾಟ, ಅಂದರೆ ಸರ್ಕೀಯ ಸಂಸ್ಥೆಯಂತೆ ಪರಿಗಣಿಸಿದ ಮಾರಾಟವು ನ್ಯಾಯನಿರ್ಣಯ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳು ಮತ್ತು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **01.12.2025**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ದಿನಾಂಕ: 12.11.2025
ಸ್ಥಳ: ಚಂಡೀಗಢ

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ,
ಕಛೇರಿ ದೂರವಾಣಿ ಸಂಖ್ಯೆ: 08151–299920,
Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2025–26/1165 ದಿನಾಂಕ: 04.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1	M\s AHR PROPERTIES PRIVATE LIMITED	ಮಾಲೂರು	ಕಸಬಾ	ತಂಬಿಹಳ್ಳಿ	78/5	0–34½ ಗು	ಕೃಷಿ	ವಸತಿ	–

ಷರಾ: ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ. ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:351/ಕೆಎಸ್‌ಎಂಸಿಎ/2025–26

ಮಾನ್ಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮಂಡ್ಯ

ಪಿ ಅಂಡ್ ಎಸ್.ಸಿ. 22/2025

ಅರ್ಜಿದಾರರು : 1. ಶ್ರೀ ಶ್ರೀಧರ್ ಎಸ್ ಬಿನ್ ಲೇಟ್ ಶಿವಲಿಂಗೇಗೌಡ, ವಯಸ್ಸು ಸುಮಾರು 22 ವರ್ಷಗಳು, **2. ಶ್ರೀ ವಿಜಯ್ ಎಸ್.** ಬಿನ್ ಲೇಟ್ ಶಿವಲಿಂಗೇಗೌಡ, ವಯಸ್ಸು ಸುಮಾರು 20 ವರ್ಷಗಳು, ಇಬ್ಬರ ವಾಸ ನಂ. 23, ಗಾಡಿ ಮುದ್ದಣ್ಣ ರಸ್ತೆ, ಶ್ರೀರಾಮನಗರ, ಕಾಮಾಕ್ಷಿ ಪಾಳ್ಯ, ಬೆಂಗಳೂರು-560079.

- ವಿರುದ್ಧ - ಎದುರುದಾರರು : ಯಾರೂ ಇಲ್ಲ

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅರ್ಜಿದಾರರುಗಳು ಷೆಡ್ಯೂಲ್ ಸ್ವತ್ತುಗಳ ಸಂಬಂಧವಾಗಿ ದಿನಾಂಕ : 08.02.2024 ರ ವಿಲ್-ಯಾ-ಮರಣಶಾಸನಪತ್ರದ ಪ್ರಕಾರ ದಿವಂಗತ ಕುಳ್ಳೇಗೌಡ ಬಿನ್ ಲೇಟ್ ತಿಮ್ಮೇಗೌಡ ಶಾಗ್ಯಸರಗೂರು ಗ್ರಾಮ, ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಇವರು ದಿನಾಂಕ : 27.07.2024 ರಂದು ಮೃತರಾಗಿರುವುದರಿಂದ ಅವರ ವಾರಸುದಾರರಾಗಿ ಅರ್ಜಿದಾರರು ಪ್ರೊಬೇಟ್ ಸರ್ಟಿಫಿಕೇಟ್ ಪಡೆದುಕೊಳ್ಳವ ಸಲುವಾಗಿ ಅರ್ಜಿ ಸಲ್ಲಿಸಿರುತ್ತಾರೆ. ಯಾರಾದರೂ ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಆಸಕ್ತಿ ಹೊಂದಿದ್ದಲ್ಲಿ ಮೇಲ್ಕಂಡ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ಅವರ ವಕೀಲರ ಮೂಲಕವಾಗಲೀ ಏನಾದರೂ ತಕರಾರುಗಳು ಇದ್ದಲ್ಲಿ **ದಿನಾಂಕ : 02.01.2026 ರಂದು ಬೆಳಿಗ್ಗೆ 11.00 ಗಂಟೆಗೆ** ಹಾಜರಾಗಿ ಸಲ್ಲಿಸುವುದು ಇಲ್ಲದಿದ್ದಲ್ಲಿ ಅರ್ಜಿಯನ್ನು ಘನ ನ್ಯಾಯಾಲಯವು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ತಿಳಿಯುವುದು.

ಷೆಡ್ಯೂಲ್

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಶಾಗ್ಯಸರಗೂರು ಗ್ರಾಮದ ಸರ್ವೆ ನಂ. 104/1, ವಿಸ್ತೀರ್ಣ 01.02.00.00 ಎಕರೆಗಳು ರೂ. 1.36 ಪೈಸೆಗಳು ಈ ಕೆಳಕಂಡ ಚೆಕ್ಕುಬಂದಿಯನ್ನು ಹೊಂದಿದೆ:- **ಪೂರ್ವಕ್ಕೆ :** ಹಲಗೂರು ಸಾಹುಕಾರರ ಜಮೀನು, **ಪಶ್ಚಿಮಕ್ಕೆ :** ತಿಮ್ಮರಾಜ ಮರಿಗೌಡನ ಜಮೀನು, **ಉತ್ತರಕ್ಕೆ :** ಎನ್. ಹಲಸಹಳ್ಳಿ ಹೋಟೆಲ್ ಮರಿಗೌಡ ಜಮೀನು, **ದಕ್ಷಿಣಕ್ಕೆ :** ಹಲಸಹಳ್ಳಿ ಕೊಂಗನ ಗೂಳಯ್ಯನ ಜಮೀನು.

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಶಾಗ್ಯಸರಗೂರು ಗ್ರಾಮದ ಸರ್ವೆ ನಂ. 70/3, ವಿಸ್ತೀರ್ಣ 00.26.00.00 ಎಕರೆಗಳು ರೂ. 0.86 ಪೈಸೆಗಳು ಈ ಕೆಳಕಂಡ ಚೆಕ್ಕುಬಂದಿಯನ್ನು ಹೊಂದಿದೆ:- **ಪೂರ್ವಕ್ಕೆ :** ಮಾದೇಗೌಡ ಬಿನ್ ಮರಿಗೌಡ ಜಮೀನು **ಪಶ್ಚಿಮಕ್ಕೆ :** ದೊಳ್ಳೇಗೌಡ, ಚಿಕ್ಕಣ್ಣೇಗೌಡರ ಜಮೀನು, **ಉತ್ತರಕ್ಕೆ :** ಶಿವಣ್ಣನ ಜಮೀನು, **ದಕ್ಷಿಣಕ್ಕೆ :** ದೊಳ್ಳೇಗೌಡ, ಚಿಕ್ಕಣ್ಣೇಗೌಡ, ಚಿಕ್ಕಣ್ಣೇಗೌಡರ ಜಮೀನು.

ನ್ಯಾಯಾಲಯದ ಆದೇಶದ ಮೇರೆಗೆ ಈ ಆದೇಶವನ್ನು ನನ್ನ ಹಸ್ತಾಕ್ಷರದೊಡನೆ ನ್ಯಾಯಾಲಯದ ಮುದ್ರೆಯೊಡನೆ ಈ ದಿನ ಅಂದರೆ ದಿನಾಂಕ : 11.11.2025 ರಂದು ಕೊಡಲಾಗಿದೆ.

By Order of the Court, Cheif Administrative Officer, District & Sessions Court, Mandya.

ಅರ್ಜಿದಾರರ ಪರ ವಕೀಲರು :
ಶ್ರೀ ಪ್ರಸನ್ನ ಕುಮಾರ್, ವಕೀಲರು

GOKALDAS EXPORTS LIMITED

Corporate Identification Number (CIN): L18101KA2004PLC033475
Regd. Office : No. 25, 2nd Cross, 3rd Main, Industrial Suburb, Yeshwanthpur, Bangalore-560022.
Tel: +91 80 68951000 Fax: +91 80 68951001 E-mail: info@gokaldasexports.com Website: www.gokaldasexports.com

Statement of consolidated and standalone unaudited financial results for the quarter and half year ended September 30, 2025

(Regulation 47(1) (b) of the SEBI (LODR) Regualtions, 2015)

(in Rs. lakh, except earnings per share)

Sl. No.	Particulars	Consolidated						Standalone					
		Quarter Ended			Half year ended		Year Ended	Quarter Ended			Half year ended		Year Ended
		Sep 30, 2025	June 30, 2025	Sep 30, 2024	Sep 30, 2025	Sep 30, 2024	Mar 31, 2025	Sep 30, 2025	June 30, 2025	Sep 30, 2024	Sep 30, 2025	Sep 30, 2024	Mar 31, 2025
		Unaudited	Unaudited	Unaudited	Unaudited	Unaudited	Audited	Unaudited	Unaudited	Unaudited	Unaudited	Unaudited	Audited
1	Total Income	1,00,331.60	97,716.52	94,181.63	1,98,048.12	1,88,154.83	3,91,718.39	71,764.44	66,993.55	65,689.87	1,38,757.99	1,23,780.77	2,57,628.70
2	Net profit/(Loss) before tax and exceptional items	1,872.31	5,680.65	3,559.87	7,552.96	7,170.18	21,807.47	6,164.59	6,092.57	6,040.43	12,257.16	10,517.84	24,586.89
3	Net profit/(Loss) before tax and after exceptional items	1,872.31	5,680.65	3,559.87	7,552.96	7,170.18	21,807.47	6,164.59	6,092.57	6,040.43	12,257.16	10,517.84	24,586.89
4	Net Profit/(Loss) after tax and exceptional items	808.36	4,147.34	2,816.11	4,955.70	5,534.07	15,854.09	5,306.91	4,797.18	5,263.06	10,104.09	8,911.04	19,132.41
5	Total Comprehensive Income for the period / year	(3,833.14)	5,192.84	1,985.39	1,359.70	4,944.88	16,733.62	2,151.93	5,797.29	4,585.44	7,949.22	8,455.54	18,134.89
6	Paid-up equity share capital (face value Rs 5 each, fully paid up)	3,661.43	3,654.89	3,570.42	3,661.43	3,570.42	3,573.33	3,661.43	3,654.89	3,570.42	3,661.43	3,570.42	3,573.33
7	Other equity as shown in the Audited Balance Sheet of the previous year	-	-	-	-	-	2,04,494.58	-	-	-	-	-	2,10,919.21
8	Earnings per equity share (EPS) Basic Diluted	 1.10 1.06	 5.73 5.56	 3.94 3.78	 6.81 6.59	 7.87 7.54	 22.36 21.45	 7.25 6.99	 6.63 6.44	 7.37 7.06	 13.88 13.43	 12.67 12.13	 26.98 25.88

Notes:
The above is an extract of the detailed format of Quarterly / Half yearly / Annual Financial Results filed with the Stock Exchanges under Regulation 33 of the SEBI (Listing obligations and Disclosure Requirements) Regulations, 2015. The full format of the financial results are available on the stock exchange websites (www.bseindia.com and www.nseindia.com) and on the company's website (www.gokaldasexports.com).

Scan the code to view full results

For Gokaldas Exports Ltd.
Sd/-
Sivaramakrishnan Ganapathi
Vice Chairman and Managing Director
DIN: 07954560

Place: Bangalore
Date: November 11, 2025

ಕೃಷಿ ಮೇಳಕ್ಕೆ ಇಂದು ಚಾಲನೆ

ಬೆಂಗಳೂರು: ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 13ರಿಂದ 16ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಕೃಷಿ ಮೇಳ ನಡೆಯಲಿದೆ.

ನ.13ರಂದು ಬೆಳಿಗ್ಗೆ 11ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಉದ್ಘಾಟನೆ ಮಾಡಲಿದ್ದು, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ಶಾಸಕ ಶರತ್ ಬಚ್ಚೇಗೌಡ ಪಾಲ್ಗೊಳ್ಳಲಿದ್ದಾರೆ.

ಮೇಳದಲ್ಲಿ 700ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಕೃಷಿಕರ ಅನುಕೂಲಕ್ಕಾಗಿ ಜಿಕೆವಿಕೆ ಮುಖ್ಯ ದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ, ಪ್ರತ್ಯೇಕ ವಾಹನ ನಿಲುಗಡೆ ಮತ್ತು ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ವಿಶ್ವವಿದ್ಯಾಲಯದ ಪ್ರಕಟಣೆಯು ತಿಳಿಸಿದೆ.

ವೈದ್ಯಕೀಯ ಸಂಸ್ಥೆಗಳಿಗೆ ದಂಡ

ಎರಡು ಆಸ್ಪತ್ರೆಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜಿಲ್ಲಾಧಿಕಾರಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯ (ಕೆಪಿಎಂಇ) ನಿಯಮಗಳ ಉಲ್ಲಂಘನೆ ಕಾರಣ ಆಸ್ಪತ್ರೆಗಳು ಸೇರಿ 18 ವೈದ್ಯಕೀಯ ಸಂಸ್ಥೆಗಳಿಗೆ ಒಟ್ಟು ₹4 ಲಕ್ಷ ದಂಡ ವಿಧಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಆದೇಶಿಸಿದ್ದಾರೆ.

ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯನ್ನು ಅವರು ನಗರದಲ್ಲಿ ಬುಧವಾರ ನಡೆಸಿದರು. ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು 57 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು. ಇವುಗಳಲ್ಲಿ ಮಾದನಾಯಕನಹಳ್ಳಿಯಲ್ಲಿರುವ ಪಬ್ಲಿಕ್ಸ್ ಹೆಲ್ತ್ ಕೇರ್ ಹಾಗೂ ಯಲಹಂಕದಲ್ಲಿರುವ ಎನ್‌ಡಿಆರ್ ಆಸ್ಪತ್ರೆ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚಿಸಿದ್ದಾರೆ.

ಒಂದು ಪ್ರಕರಣವನ್ನು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ವರ್ಗಾಯಿಸಲಾಗಿದೆ. ಒಂಬತ್ತು ಪ್ರಕರಣಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಆದೇಶಿಸಿದ್ದಾರೆ.

ದಂಡ ವಿಧಿಸಲ್ಪಟ್ಟ ಸಂಸ್ಥೆಗಳು: ಕೆಂಗೇರಿ ಉಪನಗರದಲ್ಲಿರುವ ಶ್ರೀ ಫೌಂಡೇಷನ್, ಕಗ್ಗಲೀಪುರದಲ್ಲಿರುವ ಸಾಯಿ ಕ್ಲಿನಿಕ್ ಹಾಗೂ ತಾವರೆಕೆರೆ ಹೋಬಳಿಯಲ್ಲಿರುವ ವಿನಾಯಕ್ ಕ್ಲಿನಿಕ್‌ಗೆ ತಲಾ ₹ 50 ಸಾವಿರ ದಂಡ ವಿಧಿಸಲಾಗಿದೆ. ಕಗ್ಗಲೀಪುರದಲ್ಲಿರುವ ಸಪ್ತಗಿರಿ ಕ್ಲಿನಿಕ್, ತಾವರೆಕೆರೆಯಲ್ಲಿರುವ ಸಾಯಿ ಕ್ಲಿನಿಕ್, ಇಂದಿರಾನಗರದಲ್ಲಿರುವ ದಿ ವೈಟ್ ಎಲಿಫೆಂಟ್ ಆಲ್ಟರ್ನೇಟ್ ಥೆರಪಿ ಕ್ಲಿನಿಕ್, ಬಸವೇಶ್ವರ ಬಡಾವಣೆಯಲ್ಲಿರುವ ಅಂಜನಾದ್ರಿ ಮೆಡಿಕಲ್ ಸರ್ವೀಸ್ ಸ್ಟೋರ್ಸ್, ಮಾದನಾಯಕನಹಳ್ಳಿಯಲ್ಲಿರುವ ನಾರಾಯಣ ದಂತ ಚಿಕಿತ್ಸಾ ಕೇಂದ್ರ ಹಾಗೂ ಪಬ್ಲಿಕ್ಸ್ ಹೆಲ್ತ್ ಕೇರ್‌ಗೆ ತಲಾ ₹ 25 ಸಾವಿರ ದಂಡ ವಿಧಿಸಲಾಗಿದೆ.

ತಾವರೆಕೆರೆಯ ಮಾತೃಶ್ರೀ ಕ್ಲಿನಿಕ್‌ಗೆ ₹ 20 ಸಾವಿರ ದಂಡ ಹಾಕಲಾಗಿದೆ. ಸುಶ್ರುತ ಕ್ಲಿನಿಕ್, ಕೆಂಗೇರಿ ಉಪನಗರದಲ್ಲಿರುವ ವರ್ಷ ಫೌಂಡೇಷನ್, ಮಂಜುನಾಥ ನಗರದಲ್ಲಿರುವ ತಿರುಮಲ ಕ್ಲಿನಿಕ್, ಶಾಮಣ್ಣ ಗಾರ್ಡನ್‌ನಲ್ಲಿರುವ ಇಸ್ರಾರ್ ಕ್ಲಿನಿಕ್, ನಿಸರ್ಗ ಲೇಔಟ್‌ನಲ್ಲಿರುವ ಆದ್ಯ ಕ್ಲಿನಿಕ್ ಹಾಗೂ ಬೇಗೂರಿನಲ್ಲಿರುವ ಹೋಪ್ ಫೌಂಡೇಷನ್‌ಗೆ ತಲಾ ₹ 10 ಸಾವಿರ ದಂಡ ವಿಧಿಸಲಾಗಿದೆ.

ಮೈಲಸಂದ್ರ ಕೆರೆಯ ಹತ್ತಿರ ಇರುವ ರಮೇಶ್ ರೆಡ್ಡಿ ಲೇಔಟ್‌ನಲ್ಲಿ ಸುಮಾ ಎಂಬುವವರು ಅನಧಿಕೃತವಾಗಿ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ವಿಚಾರಣೆ ವೇಳೆ ದೃಢಪಟ್ಟಿದ್ದು, ಅವರಿಗೆ ₹ 10 ಸಾವಿರ ದಂಡ ಹಾಕಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಕೆಪಿಎಂಇ ನಿಯಮಗಳ ಉಲ್ಲಂಘನೆ
- 18 ವೈದ್ಯಕೀಯ ಸಂಸ್ಥೆಗಳಿಗೆ ಒಟ್ಟು ₹ 4 ಲಕ್ಷ ದಂಡ



ಸಾಂಸ್ಕೃತಿಕ ಮುನ್ನೋಟ

15ಕ್ಕೆ ತಾಳಮದ್ದಳೆ

ಬೆಂಗಳೂರು: ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ 15ರಂದು ಮಧ್ಯಾಹ್ನ 2 ಗಂಟೆಗೆ 'ಗಾಂಧಾರಿ ಶಾಪ' ಮತ್ತು 'ವಾಲಿ ವಧೆ' ತಾಳಮದ್ದಳೆ ಹಮ್ಮಿಕೊಳ್ಳಲಾಗಿದೆ.

ಹಿಮ್ಮೇಳದಲ್ಲಿ ಸುರೇಶ ಶೆಟ್ಟಿ ಶಂಕರನಾರಾಯಣ, ಸುಬ್ರಾಯ ಹೆಬ್ಬಾರ್, ಶ್ರೀನಿವಾಸ ಪ್ರಭು, ಅಕ್ಷಯ್ ಆಚಾರ್ಯ, ಅಜಿತ್ ಆಚಾರ್ಯ ಹಾಗೂ ನಾಗರಾಜ ಯಡಮೊಗೆ ಪಾಲ್ಗೊಳ್ಳುತ್ತಾರೆ. ಮುಮ್ಮೇಳದಲ್ಲಿ ವಾಸುದೇವ ರಂಗಾಭಟ್, ಗಣಪತಿ ಭಟ್ ಸಂಕದಗುಂಡಿ, ಜಬ್ಬಾರ್ ಸಮೊ, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಸುನಿಲ್ ಕುಮಾರ್ ಹೊಲಾಡು ಅವರು ಭಾಗವಹಿಸುತ್ತಾರೆ.

ವಿವರಕ್ಕೆ: 9741474255 ಅಥವಾ 7022420400


ಜಬ್ಬಾರ್ ಸಮೊ

ಸಂಗೀತೋತ್ಸವ

ಬೆಂಗಳೂರು: ಬೆಂಗಳೂರು ಗಾಯನ ಸಮಾಜವು ಇದೇ 16ರಿಂದ 23ರವರೆಗೆ ಕೆ.ಆರ್. ರಸ್ತೆಯಲ್ಲಿರುವ ತನ್ನ ಕೇಂದ್ರದಲ್ಲಿ 55ನೇ ವಾರ್ಷಿಕ ಸಂಗೀತೋತ್ಸವ ಹಮ್ಮಿಕೊಂಡಿದೆ.

16ರಂದು ಬೆಳಿಗ್ಗೆ 9.30ಕ್ಕೆ ಉದ್ಘಾಟನೆಯಾಗಲಿದ್ದು, ಸಂಜೆ 6 ಗಂಟೆಗೆ ಸಂಗೀತ ಕಛೇರಿ ನಡೆಯಲಿದೆ. ಅಮೃತ ಮುರಳಿ, ಎಚ್.ಎಂ. ಸ್ಮಿತಾ, ಬಿ.ಎಸ್. ಪ್ರಶಾಂತ್ ಮತ್ತು ಬಿ. ರಾಜಶೇಖರ್ ಭಾಗವಹಿಸುತ್ತಾರೆ. 17ರಂದು ಸಂಜೆ 6 ಗಂಟೆಗೆ ನಡೆಯುವ ಸಂಗೀತ ಕಛೇರಿಯಲ್ಲಿ ಪದ್ಮಾ ಗುರುದತ್ತ, ನಳಿನಾ ಮೋಹನ್, ಎಚ್.ಎಸ್. ಸುಧೀಂದ್ರ, ಎಸ್.ಎನ್. ನಾರಾಯಣಮೂರ್ತಿ ಪಾಲ್ಗೊಳ್ಳುತ್ತಾರೆ.

ಸಂಗೀತ ಮೇಳ

ಬೆಂಗಳೂರು: ವಿ.ಟಿ.ಎಂಟರ್‌ಟೈನರ್ಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇದೇ 15ರಂದು ಸಂಜೆ 6 ಗಂಟೆಗೆ ಚೌಡಯ್ಯ ಸ್ಮಾರಕ ಭವನದಲ್ಲಿ 'ಆಫ್ ಬೀಟ್' ಸಂಗೀತ ಮೇಳ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಿಂದ ಬರುವ ಹಣವನ್ನು ಅಂಗವಿಕಲರ ಕಲ್ಯಾಣಕ್ಕೆ ಬಳಸಲಾಗುತ್ತದೆ. ಅಂಗವಿಕಲರ ವಸತಿ ಗೃಹವಾದ ವಿಶ್ವಶಾಂತಿನಿಕೇತನ, ರೋಟರಿ ಕಬ್ಬನ್ ಪಾರ್ಕ್ ಟ್ರಸ್ಟ್‌ನ ಆನಂದಮಯ ಹೋಮ್ ಫಾರ್ ಸೀನಿಯರ್ ಸಿಟಿಜನ್ಸ್ ಯೋಜನೆಗೆ ಬಳಸಲಾಗುತ್ತದೆ.

ಕಲಾವಿದರಾದ ಶೃತಿ ಭಿಡೆ, ಅಭಿಷೇಕ್ ರಾವ್, ಸಮನ್ವಿತಾ ಶರ್ಮಾ, ಗೋವಿಂದ ಕುರನೂಲ್, ಮಾಳವಿಕಾ ನಿರಂಜನ್, ನರಸಿಂಹನ್ ಕಣ್ಣನ್, ದಿವ್ಯಾ ರಾಘವನ್, ಸೌಮ್ಯಾ, ಸುಬ್ರತ್ ಸಾಹೂ, ಜ್ಯೋತಿ ಕಂಜೂರು ಭಾಗವಹಿಸುತ್ತಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವಿವೆ. ದಾನಿಗಳ ಪಾಸ್‌ಗೆ ಮೊ.ಸಂಖ್ಯೆ 9886019151 ಅಥವಾ 9845049796


ಸಮನ್ವಿತಾ ಶರ್ಮಾ

ವ್ಯಂಗ್ಯಚಿತ್ರ ಪ್ರದರ್ಶನ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಎಂ.ಜಿ ರಸ್ತೆಯ ಮಿಡ್ ಫೋರ್ಡ್ ಹೌಸ್‌ನ ತನ್ನ ಗ್ಯಾಲರಿಯಲ್ಲಿ ಇದೇ 15ರಿಂದ 30ರವರೆಗೆ ವ್ಯಂಗ್ಯಚಿತ್ರಕಾರ ರವಿಕಾಂತ ನಂದುಲಾ ಅವರ ಆಯ್ದ ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ರವಿಕಾಂತ ನಂದುಲಾ ಅವರು ಹೆಚ್ಚಾಗಿ ತಂತ್ರಜ್ಞಾನ, ಪರಿಸರ, ವ್ಯಾಪಾರ, ವ್ಯವಹಾರ, ಜೀವವೈವಿಧ್ಯ ವಿಷಯಗಳ ಕುರಿತು ವ್ಯಂಗ್ಯಚಿತ್ರ ಬರೆದಿದ್ದಾರೆ.

ಈ ವ್ಯಂಗ್ಯಚಿತ್ರ ಪ್ರದರ್ಶನವು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ. ಎಲ್ಲರಿಗೂ ಮುಕ್ತ ಪ್ರವೇಶ ಇರಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ವಸಾಹತುಶಾಹಿ ಭಾರತದ ಇತಿಹಾಸ ಸಾರುವ ಚಿತ್ರಕಲೆ, ದಾಖಲೆ, ಪತ್ರಗಳು

'ಹಿಂದೂಸ್ತಾನ್ ಫೈಲ್ಸ್' ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಾಹತುಶಾಹಿ ಭಾರತದ ಇತಿಹಾಸವನ್ನು ಸಾರುವ ಕಲೆಗಳ ಪ್ರದರ್ಶನ 'ಹಿಂದೂಸ್ತಾನ್ ಫೈಲ್ಸ್–1757–1950' ಅನ್ನು ಪಶ್ಚಿಮ ಬಂಗಾಳದ ವಿರಾಸತ್ ಆರ್ಟ್ ಪಬ್ಲಿಕೇಶನ್ ನ.14ರಿಂದ 23ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿದೆ.

ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಹಿಂದೂಸ್ತಾನ್ ಫೈಲ್ಸ್' ಸಂಯೋಜಕ ಬಸು ಆಚಾರ್ಯ ಸುದ್ದಿಗೋಷ್ಠಿಯಲ್ಲಿ ಬುಧವಾರ ಈ ಬಗ್ಗೆ ಮಾಹಿತಿ ನೀಡಿದರು.

1757 ಭಾರತದಲ್ಲಿ ಬ್ರಿಟಿಷರ ಆಡಳಿತ ಆರಂಭವಾದ ವರ್ಷ. ಅಲ್ಲಿಂದ 1950ರವರೆಗಿನ ಚಿತ್ರಣವನ್ನು ಕಟ್ಟಿಕೊಡುವ ಅಪರೂಪದ ಚಿತ್ರ, ಛಾಯಾಚಿತ್ರ, ಪತ್ರ, ಆಡಳಿತದ ದಾಖಲೆಗಳು, ಐತಿಹಾಸಿಕ ವಸ್ತುಗಳ ಸಂಗ್ರಹವನ್ನು ಇಲ್ಲಿ ಪ್ರದರ್ಶಿಸಲಾಗುತ್ತಿದೆ. 250ಕ್ಕೂ ಅಧಿಕ ಕಲಾಕೃತಿಗಳು ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಪ್ರದರ್ಶನಗೊಳ್ಳಲಿವೆ ಎಂದು ವಿವರಿಸಿದರು.

ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಈ ಕಲಾಕೃತಿಗಳು ಮಾರಾಟಕ್ಕೆ ಇರುವುದಿಲ್ಲ. ಪ್ರದರ್ಶನವಷ್ಟೇ ಇದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಭಾರತದ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಯ ಹೆಜ್ಜೆ ಗುರುತುಗಳನ್ನು ಪ್ರತಿಬಿಂಬಿಸುವ ಈ ಪ್ರದರ್ಶನವನ್ನು ಇತಿಹಾಸಕಾರರು, ವಿದ್ಯಾರ್ಥಿಗಳು, ಸಂಶೋಧಕರು ವೀಕ್ಷಿಸಬೇಕು ಎಂದು ಮನವಿ ಮಾಡಿದರು.

ವಿಲಿಯಂ ಬೈಲ್, ಚಾರ್ಲ್ಸ್ ಡಿ. ಒಯ್ಲಿ, ವಿಲಿಯಂ ಡ್ಯಾನಿಯಲ್, ಹೆನ್ರಿ ಸಾಲ್ಟ್, ಎಫ್.ಬಿ. ಸೋಲ್ವಿನ್ಸ್ ಮುಂತಾದ ಕಲಾವಿದ ಕಲಾಕೃತಿಗಳು, ರಾಜಾರಾಂ ಮೋಹನ್‌ರಾಯ್, ರವೀಂದ್ರನಾಥ ಟಾಗೋರ್, ವಾರನ್ ಹೇಸ್ಟಿಂಗ್ಸ್, ಟಿಪ್ಪು ಸುಲ್ತಾನ್, ಲಾರ್ಡ್ ಕಾರ್ನ್‌ವಾಲೀಸ್, ಜಮಿನಿ ರಾಯ್ ಮೊದಲಾದವರ ಅಂಚೆ ಪತ್ರ ವ್ಯವಹಾರಗಳ ಪತ್ರಗಳು, ಕೊಹಿನೂರು ವಜ್ರದ ವರ್ಗಾವಣೆಗೆ ಸಂಬಂಧಿಸಿದ ಅಧಿಕೃತ ದಾಖಲೆಗಳು, ಸಂವಿಧಾನದ ಮೊದಲ ಪ್ರತಿಗಳು ಪ್ರದರ್ಶನದಲ್ಲಿವೆ ಎಂದರು.

ನ.7ರಂದು ಬೆಳಿಗ್ಗೆ 9.30ಕ್ಕೆ ವಿಚಾರ ಸಂಕಿರಣ ನಡೆಯಲಿದೆ. ಕಲಾವಿದರಾದ ಮೀರಾ ಚಕ್ರವರ್ತಿ, ಮನೋಹರ್ ಯಡವಟ್ಟಿ, ನಾನಕ್ ಗಂಗೋಪಾಧ್ಯಾಯ್ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವಿರಾಸತ್ ಆರ್ಟ್ ಪಬ್ಲಿಕೇಶನ್ ಮಾಲೀಕ ಗಣೇಶ್ ಪ್ರತಾಪ್ ಸಿಂಗ್, ಪರಿಷತ್ತಿನ ಉಪಾಧ್ಯಕ್ಷ ಅಪ್ಪಾಜಯ್ಯ ಕೆ.ಎಸ್., ವಿರಾಸತ್ ಆರ್ಟ್ಸ್ ಮುಖ್ಯ ಸಂಯೋಜಕ ಪ್ರಥಾ ಪ್ರತೀಕ್ ರಾಯ್ ಭಾಗವಹಿಸಿದ್ದರು.


ಹಿಂದೂಸ್ತಾನ್ ಫೈಲ್ಸ್‌ನಲ್ಲಿ ಪ್ರದರ್ಶನಗೊಳ್ಳಲಿರುವ ಚಿತ್ರಕಲೆ

ಆನೇಕಲ್ ಕೆಪಿಎಸ್ ತಂಡ ರನ್ನರ್‌ಅಪ್

ಆನೇಕಲ್: ಪಟ್ಟಣದ ಕೆಪಿಎಸ್ ಶಾಲೆಯ ವಿದ್ಯಾರ್ಥಿಗಳು ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಎರಡನೇ ಸ್ಥಾನ ಗಳಿಸಿದ್ದು, ತಂಡದಲ್ಲಿದ್ದ ಐವರು ಮಹಾರಾಷ್ಟ್ರದಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಶಾಲೆಯ ಪ್ರೀತಿ, ಹಂಸವೇಣಿ, ನಿಜ್ವಾನ, ಕೀರ್ತನಾ, ಮೀನಾಕ್ಷಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ನಗರದಲ್ಲಿ ಇಂದು

'ಸಂತವಾಣಿ'– ಚಲನಚಿತ್ರ, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ಸಂತ ಶಿಶುನಾಳ ಶರೀಫ' ಚಲನಚಿತ್ರ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4

ಆರ್. ಸುನಂದಮ್ಮ ಅವರ 'ಎದೆಯ ಪದ' ಪುಸ್ತಕ ಬಿಡುಗಡೆ: ಹೇಮಲತಾ ಮಹಿಷಿ, ಪುಸ್ತಕದ ಕುರಿತು: ಎನ್. ಗಾಯತ್ರಿ, ಅಧ್ಯಕ್ಷತೆ: ಆರ್. ಪೂರ್ಣಿಮಾ, ಆಯೋಜನೆ: ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ, ಮಹಿಳಾ ದೌರ್ಜನ್ಯ ವಿರೋಧ ಒಕ್ಕೂಟ, ಸಮತಾ ಅಧ್ಯಯನ ಕೇಂದ್ರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ಪೌರಾಣಿಕ ನಾಟಕೋತ್ಸವ: 'ಬುನಾದಿ' ಮತ್ತು 'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶನ, ಆಯೋಜನೆ: ಕಲಾಸಾಗರ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5

ದಾಸವಾಣಿ: ಪ್ರಾಣೇಶ್ ಪಿ. ಭಾರದ್ವಾಜ್, ರಾಜೇಂದ್ರ ಬೆಂಡೆ, ಶ್ರೀನಿವಾಸ ಕಾಖಂಡಕಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5.15

37 ದಿನಗಳ ಸಾಹಿತ್ಯ–ಸಂಸ್ಕೃತಿ ಉತ್ಸವ: ನೃತ್ಯವೈಭವ: ಭರತಾಂಜಲಿ ನಾಟ್ಯ ಶಾಲೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವ ಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ ಆವರಣ, ಕೆಂಪೇಗೌಡನಗರ, ಸಂಜೆ 6

ದಾಸ ವೈಭವ: ಸಂಗೀತಾ ಬಾಲು, ಶ್ರೀಹರಿ, ಬಾಲಸುಬ್ರಹ್ಮಣ್ಯಂ, ಅಭಿಜಿತ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ ಬನಶಂಕರಿ 6ನೇ ಹಂತ, ಸಂಜೆ 7


ಗೋವೆನಹಳ್ಳಿಯ ನಾಗರತ್ನ ಮತ್ತು ಬಿ.ಎಚ್.ಪುಟ್ಟರಾಜು ಕುಟುಂಬದವರು ₹20 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ನೆಲಮಂಗಲ ತಾಲ್ಲೂಕಿನ ಮಹಿಮಾ ರಂಗನಾಥ ಸ್ವಾಮಿ ಮಹಾದ್ವಾರವನ್ನು ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಮಲಯ ಶಾಂತಮುನಿ ಶಿವಾಚಾರ್ಯ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು

ಸಿ.ಎಸ್ ಪ್ರತಿವಾದಿ 'ಲೋಕಾ' ಆದೇಶ

ಬೆಂಗಳೂರು: ಯಾದಗಿರಿ ಜಿಲ್ಲಾ ವ್ಯಾಪ್ತಿಯಲ್ಲಿ ಕೆಟ್ಟಿರುವ 247 ಆರ್‌ಒ ನೀರು ಶುದ್ಧೀಕರಣ ಘಟಕ ದುರಸ್ತಿ ಮಾಡದಿರುವ ಪ್ರಕರಣದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಪ್ರತಿವಾದಿಯನ್ನಾಗಿಸಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಆದೇಶಿಸಿದ್ದಾರೆ.

ಜಿಲ್ಲೆಯಲ್ಲಿ ಸುಮಾರು 250 ಆರ್‌ಒ ನೀರು ಶುದ್ಧೀಕರಣ ಘಟಕ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಅಶೋಕ್ ಅವರು 2022ರಲ್ಲಿ ಸಲ್ಲಿಸಿದ್ದ ದೂರಿನ ಅನ್ವಯ ಲೋಕಾಯುಕ್ತರು ಪ್ರಕರಣ ದಾಖಲಿಸಿಕೊಂಡಿದ್ದರು. ಆರ್‌ಒ ಘಟಕಗಳ ಸ್ಥಿತಿ ಬಗ್ಗೆ ವರದಿ ನೀಡಲು ಜಿ.ಪಂ. ಸಿಇಒಗೆ ಸೂಚಿಸಿದ್ದರು.

ಸಿಇಒ ವರದಿ ಸಲ್ಲಿಸದ ಕಾರಣ, ಮಂಗಳವಾರ ನಡೆದ ವಿಚಾರಣೆಗೆ ಹಾಜರಾಗುವಂತೆ ಸೆ.10ರಂದು ಸೂಚಿಸಿದ್ದರು. ಆದರೆ, ಸಿಇಒ ಹಾಜರಾಗಿರಲಿಲ್ಲ. ತಮ್ಮ ಬದಲಿಗೆ ಕಾರ್ಯನಿರ್ವಾಹಕ ಎಂಜಿನಿಯರ್ ಒಬ್ಬರನ್ನು ಕಳುಹಿಸಿದ್ದರು. ಈ ಘಟಕಗಳ ದುರಸ್ತಿಗೆ ಅನುದಾನ ಲಭ್ಯವಿರುವುದಿಲ್ಲ ಎಂದು ಅವರು ಮಾಹಿತಿ ನೀಡಿದ್ದರು.


ಕಾಡುಗೋಡಿಯ ಸತ್ಯ ಸಾಯಿ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್ ನ ಬೃಂದಾವನ ಕ್ಯಾಂಪಸ್‌ನಿಂದ ಸೈಕ್ಲಿಂಗ್ ಯಾತ್ರೆ ಆರಂಭಗೊಂಡಿತು

ಸಾಯಿಬಾಬಾ ಜನ್ಮದಿನ: ಸೈಕ್ಲಿಂಗ್ ಯಾತ್ರೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಶ್ರೀಸತ್ಯ ಸಾಯಿ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಲರ್ನಿಂಗ್, ಸುಸ್ಥಿರತೆ, ಜಾಗೃತಿ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಜತೆಗೆ ಸಂಸ್ಥಾಪಕ ಕುಲಪತಿ ಸತ್ಯಸಾಯಿ ಬಾಬಾ ಅವರ 100ನೇ ಜನ್ಮದಿನದ ಸ್ಮರಣಾರ್ಥ ಸೈಕ್ಲಿಂಗ್ ಯಾತ್ರೆ ಪ್ರಾರಂಭಿಸಿದೆ.

ಕಾಡುಗೋಡಿಯ ಬೃಂದಾವನ ಕ್ಯಾಂಪಸ್‌ನಿಂದ ಬುಧವಾರ ವಿದ್ಯಾರ್ಥಿಗಳು, ಸಿಬ್ಬಂದಿ ಒಳಗೊಂಡ 150 ಸೈಕ್ಲಿಸ್ಟ್‌ಗಳು ನಂದಿಗಿರಿ ಕ್ಯಾಂಪಸ್ ಮೂಲಕ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ ಪ್ರಶಾಂತಿ ನಿಲಯಕ್ಕೆ 161 ಕಿ.ಮೀ ಪ್ರಯಾಣವನ್ನು ಪ್ರಾರಂಭಿಸಿದರು.

ಗುರುವಾರ ಸಂಜೆ ಪ್ರಶಾಂತಿ ನಿಲಯಂನ ಶ್ರೀ ಸತ್ಯಸಾಯಿ ಹಿಲ್ ವ್ಯೂ ಕ್ರೀಡಾಂಗಣವನ್ನು ತಲುಪಲಿದೆ. ಕಾರ್ಯಕ್ರಮಕ್ಕೆ ಬಿ.ರಾಘವೇಂದ್ರ ಪ್ರಸಾದ್ ಚಾಲನೆ ನೀಡಿದರು. ರಿಜಿಸ್ಟ್ರಾರ್ ಶ್ರೀಕಾಂತ್ ಖನ್ನಾ, ವಿನಯ್ ಕುಮಾರ್, ಡಿ.ಸಿ. ಸುಂದರೇಶ್ ಉಪಸ್ಥಿತರಿದ್ದರು.

ಕೆಪಿಎಸ್ ಶಾಲೆಗಳ ಪ್ರಾರಂಭಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಆರು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಪ್ರಾರಂಭಿಸುವ ಸರ್ಕಾರದ ನಡೆ ಖಂಡನೀಯ' ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ತಿಳಿಸಿದೆ.

'ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಅಥವಾ ವಿಲೀನಗೊಳಿಸುವ ಉದ್ದೇಶದಿಂದ ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಸರ್ಕಾರ ಈ ಹಿಂದೆ ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ ಅಥವಾ ವಿಲೀನಗೊಳಿಸುವುದಿಲ್ಲ ಎಂಬ ಭರವಸೆ ನೀಡಿತ್ತು. ಈಗ ಗ್ರಾಮ ಪಂಚಾಯಿತಿಗೆ ಒಂದು ಕೆಪಿಎಸ್ ಶಾಲೆಯನ್ನು ಪ್ರಾರಂಭಿಸುತ್ತಿರುವುದಕ್ಕೆ ನಮ್ಮ ವಿರೋಧವಿದೆ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

'ಸುಧಾರಣೆಯ ಹೆಸರಿನಲ್ಲಿ ಶಿಕ್ಷಣದ ಮತ್ತಷ್ಟು ವ್ಯಾಪಾರೀಕರಣ ಮತ್ತು ಖಾಸಗೀಕರಣ ಆಗಲಿದೆ. ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಮೂಲಸೌಕರ್ಯ, ಕಲಿಕಾ ಸಾಮಗ್ರಿಗಳು ಪೂರೈಸುವ ಮೂಲಕ ಬಲಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಕಟೀಲು ಮೇಳಕ್ಕೆ ₹ 1ಕೋಟಿ ಮೊತ್ತದ ಆಭರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವು ಅರಂಭಿಸಿರುವ ಏಳನೇ ಯಕ್ಷಗಾನ ಮೇಳಕ್ಕೆ ಭಕ್ತರು ₹ 1 ಕೋಟಿ ಮೊತ್ತದ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಒದಗಿಸಿದ್ದಾರೆ ಎಂದು ದೇವಸ್ಥಾನದ ಆನುವಂಶಿಕ ಅರ್ಚಕ ಹರಿನಾರಾಯಣ ಆಸ್ರಣ್ಣ ತಿಳಿಸಿದರು.


ಆಸ್ರಣ್ಣ

ಎರಡು ಪೂಜಾ ಕಿರೀಟಗಳು, ತಲಾ ಒಂದೊಂದು ದೇವಿ ಕಿರೀಟ ಮತ್ತು ರಾಜಕಿರೀಟ, ಒಂದು ತೊಟ್ಟಿಲು, ತುರಾಯಿ, ಚಕ್ರಗಳು, ಪೆಟ್ಟಿಗೆ ಇತ್ಯಾದಿಗಳು ಆಭರಣಗಳಲ್ಲಿ ಸೇರಿವೆ ಎಂದು ಅವರು ಬುಧವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಹೊಸ ಮೇಳದ ಬಸ್, ಟ್ರಕ್ ಸೇರಿದಂತೆ ಎಲ್ಲ ವ್ಯವಸ್ಥೆ ಭಕ್ತರಿಂದಲೇ ಆಗಿದೆ. ವರ್ಷದ ತಿರುಗಾಟದಲ್ಲಿ ಒಂದು ಮೇಳ ಸರಾಸರಿ 180 ಆಟಗಳನ್ನು ಪ್ರದರ್ಶಿಸುತ್ತದೆ. ಆದರೂ 15 ವರ್ಷಕ್ಕೆ ಆಡಿಸುವಷ್ಟು ಹರಕೆಯ ಆಟಗಳು ಉಳಿದಿವೆ. ಹೊಸ ಮೇಳದ ಸೇರ್ಪಡೆಯೊಂದಿಗೆ ಈ ವರ್ಷ ಸುಮಾರು 180 ಆಟಗಳು ಹೆಚ್ಚುವರಿಯಾಗಿ ಪ್ರದರ್ಶನಗೊಳ್ಳಲಿವೆ. ಕಟೀಲು ದೇವಸ್ಥಾನದ ಮೊದಲ ಮೇಳ ಆರಂಭವಾದದ್ದು ಯಾವಾಗ ಎಂಬುದಕ್ಕೆ ದಾಖಲೆಗಳು ಲಭ್ಯವಿಲ್ಲ. ಎರಡನೇಯ ಮೇಳವು 1975ರಲ್ಲಿ, ಮೂರನೇಯ ಮೇಳವು 1982ರಲ್ಲಿ, 1993ರಲ್ಲಿ ನಾಲ್ಕನೇಯ ಮೇಳ, 2010ರಲ್ಲಿ ಐದನೇಯ ಮೇಳ ಮತ್ತು 2013ರಲ್ಲಿ ಆರನೇಯ ಮೇಳವು ಆರಂಭವಾಗಿತ್ತು' ಎಂದು ತಿಳಿಸಿದರು.

ಕಾಲಮಿತಿ ಯಕ್ಷಗಾನದಿಂದ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗಿರಬಹುದು. ಆದರೆ, ಬಹುತೇಕರು ರಾತ್ರಿ ಪೂರ್ತಿ ಯಕ್ಷಗಾನ ನೋಡಲು ಇಷ್ಟಪಡುವವರೇ. ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ತಲೆಬಾಗಿ ಯಕ್ಷಗಾನವನ್ನು ಕಾಲಮಿತಿಗೆ ಒಳಪಡಿಸಲಾಗಿದೆ. ಇಲ್ಲದೇ ಇದ್ದರೆ ಈಗಲೂ ರಾತ್ರಿ ಪೂರ್ತಿ ಹರಕೆಯ ಆಟಗಳು ನಡೆಯುತ್ತಿದ್ದವು. ಕಟೀಲು ಮೇಳದ ಆಟಗಳೆಲ್ಲವೂ ಹರಕೆಗೆ ಸಂಬಂಧಿಸಿದ್ದಾಗಿರುವುದರಿಂದ ಮಧ್ಯದಲ್ಲಿ ಯಾವ ಅಡ್ಡಿಯೂ ಆಗಬಾರದು. ಹಾಗೆ ಆದರೆ ಭಕ್ತರು ಘಾಸಿಗೊಳ್ಳುತ್ತಾರೆ. ಆದ್ದರಿಂದ ನ್ಯಾಯಾಲಯದ ಆದೇಶವನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿದೆ ಎಂದು ಹರಿನಾರಾಯಣ ಆಸ್ರಣ್ಣ ಅವರು ಹೇಳಿದರು.

ಚಿಟಿಕೆ ಸುದ್ದಿ

ನಾಡಬಾಂಬ್ ಸ್ಫೋಟ ಮಹಿಳೆಗೆ ಗಾಯ

ಸಾಸಲು(ದೊಡ್ಡಬಳ್ಳಾಪುರ): ತಾಲ್ಲೂಕಿನ ಗುಮ್ಮನಹಳ್ಳಿ ಹೊರವಲಯದ ಅರಣ್ಯ ಪ್ರದೇಶದಲ್ಲಿ ಬುಧವಾರ ಕಾಡು ಹಂದಿ ಬೇಟೆಗೆ ಇಟ್ಟಿದ್ದ ನಾಡಬಾಂಬ್ ಸ್ಫೋಟಗೊಂಡು ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೇಕೆ ಮೇಯಿಸಲು ಗ್ರಾಮದ ಹೊರವಲಯದ ಅರಣ್ಯ ಪ್ರದೇಶಕ್ಕೆ ಹೋಗಿದ್ದ ಗುಮ್ಮನಹಳ್ಳಿಯ ರಂಗಮ್ಮ(45) ಎಂಬುವರ ಕೈಗೆ ಗಂಭೀರ ಗಾಯವಾಗಿದೆ.

ನಾಡಬಾಂಬ್ ಕಟ್ಟಿದ್ದ ದಾರಕ್ಕೆ ಮೇಕೆಯೊಂದು ಸಿಲುಕಿತ್ತು. ಮೇಕೆ ಬಿಡಿಸಲು ಮಹಿಳೆ ಹೋದಾಗ ಬಾಂಬ್ ಸ್ಫೋಟಿಸಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ರಂಗಮ್ಮ ಅವರನ್ನು ಆಂಬುಲೆನ್ಸ್‌ನಲ್ಲಿ ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯಲಾಗಿದೆ.

ಘಟನಾ ಸ್ಥಳಕ್ಕೆ ದೊಡ್ಡಬೆಳವಂಗಲ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕಲ್ಲಪ್ಪ ಕರಾತ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ, ದೂರು ದಾಖಲಿಸಿಕೊಂಡಿದ್ದಾರೆ.

ಇಮ್ಮಡಿ ಸ್ವಾಮೀಜಿಗೆ ಒಂದು ವರ್ಷ ಜಾಮೀನು

ಬೆಂಗಳೂರು: ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದ ಕಿಚ್ಚಗುತ್ತಿ ಮಾರಮ್ಮ ದೇಗುಲ ಕಟ್ಟಡದ ಶಂಕುಸ್ಥಾಪನೆ ವೇಳೆ ವಿನಿಯೋಗಿಸಿದ್ದ ಪ್ರಸಾದ ಸೇವಿಸಿ 17 ಭಕ್ತರು ಮೃತಪಟ್ಟು 119 ಜನ ಅಸ್ವಸ್ಥಗೊಂಡ ಪ್ರಕರಣದಲ್ಲಿ ಸಾಲೂರು ಮಠದ ಅಂದಿನ ಪೀಠಾಧ್ಯಕ್ಷ ಇಮ್ಮಡಿ ಮಹಾದೇವ ಸ್ವಾಮಿ ಅವರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಇಮ್ಮಡಿ ಮಹದೇವ ಸ್ವಾಮಿ ಅಲಿಯಾಸ್ ದೇವಣ್ಣ ಬುದ್ಧಿ ಅಲಿಯಾಸ್ ದೇವಣ್ಣ ಸ್ವಾಮೀಜಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸ್ವಾಮೀಜಿ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಹಾಗೂ ಬಿ. ಸಿದ್ದೇಶ್ವರ ಅವರು ಮಂಡಿಸಿದ ವಾದ ಮನ್ನಿಸಿದ ನ್ಯಾಯಪೀಠ, 'ಅರ್ಜಿದಾರರಿಗೆ ತಕ್ಷಣದ ವೈದ್ಯಕೀಯ ಚಿಕಿತ್ಸೆ ಅಗತ್ಯವಿದೆ' ಎಂಬ ಕಾರಣದಿಂದ ಒಂದು ವರ್ಷದ ಅವಧಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು.

ಪ್ರಕರಣವೇನು?: 2018ರ ಸಂಜೆ ಡಿಸೆಂಬರ್ 14ರಂದು ರಾಜಮ್ಮ ಎಂಬುವರ ದೂರನ್ನು ಆಧರಿಸಿ ಚಾಮರಾಜನಗರ ಜಿಲ್ಲೆಯ ರಾಂಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ತನಿಖೆ ನಡೆಸಿದ್ದ ಪೊಲೀಸರು ಪ್ರಕರಣದಲ್ಲಿ ನಾಲ್ವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 118, 120 ಬಿ, 326, 307, 302 ಮತ್ತು 34 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯ್ದೆಯ ಕಲಂ 3 (1)(2) (ವಿ) (ವಿಎ) ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.


ಇಮ್ಮಡಿ ಮಹಾದೇವ ಸ್ವಾಮೀಜಿ ಅವರನ್ನು 2018ರ ಡಿಸೆಂಬರ್ 19ರಂದು ಬಂಧಿಸಲಾಗಿತ್ತು.

ಜೈಲಿನಲ್ಲಿ ಪಾರ್ಟಿ: ತನಿಖೆ ಚುರುಕು

ಅಮಾನತು ಸಿಬ್ಬಂದಿ, ಮದ್ಯ ಕುಡಿದು ನೃತ್ಯ ಮಾಡಿದ್ದ ಕೈದಿಗಳ ವಿಚಾರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಮದ್ಯದ ಪಾರ್ಟಿ ನಡೆಸಿಕೊಂಡು ನೃತ್ಯ ಮಾಡಿದ್ದ ಪ್ರಕರಣದ ತನಿಖೆಯನ್ನು ಕಾನೂನು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಅವರ ನೇತೃತ್ವದ ಉನ್ನತಮಟ್ಟದ ಸಮಿತಿ ಆರಂಭಿಸಿದ್ದು, ಪ್ರಾಥಮಿಕ ಮಾಹಿತಿ ಕಲೆಹಾಕಿದೆ.



ಈ ಸಮಿತಿಯಲ್ಲಿ ಐಜಿಪಿ ಸಂದೀಪ್ ಪಾಟೀಲ, ಎಸ್‌ಪಿಗಳಾದ ಅಮರನಾಥ್ ರೆಡ್ಡಿ, ರಿಷ್ಯಂತ್ ಅವರೂ ಸದಸ್ಯರಾಗಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಜೈಲರ್ ಡಿ.ಗೋಪಿನಾಥ್ ಅವರು ನೀಡಿದ ದೂರಿನ ಮೇರೆಗೆ ಕೈದಿಗಳಾದ ಕಾರ್ತಿಕ್ ಅಲಿಯಾಸ್ ಚಿಟ್ಟೆ, ಧನಂಜಯ್ ಅಲಿಯಾಸ್ ರೇಣುಕಾಪ್ರಸಾದ್, ಮಂಜುನಾಥ್ ಅಲಿಯಾಸ್ ಕೋಳಿ ಮಂಜ ಹಾಗೂ ಬಿ.ಚರಣ್‌ರಾವ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಾಲ್ವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಅಲ್ಲದೇ ಅಮಾನತುಗೊಂಡಿರುವ ಅಧಿಕಾರಿಗಳಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲು ಸಿದ್ಧತೆ ನಡೆದಿದೆ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ದೃಶ್ಯಾವಳಿ ಪರಿಶೀಲನೆ: 'ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಜೈಲಿನ 8ನೇ ಬ್ಯಾರಕ್‌ನ ಏಳನೇ ಕೊಠಡಿಯಲ್ಲಿ ಚಿತ್ರೀಕರಣಗೊಂಡಿರುವುದು ಎಂಬುದು ಗೊತ್ತಾಗಿದೆ. ನಿಷೇಧಿತ ವಸ್ತುಗಳನ್ನು ಜೈಲಿನ ಒಳಗೆ ತಂದಿರುವುದು ಪತ್ತೆಯಾಗಿದೆ. ನಿಷೇಧಿತ ವಸ್ತುಗಳನ್ನು ಯಾರು ಪೂರೈಸಿದ್ದರು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಜೈಲಿನ ಪ್ರವೇಶ ದ್ವಾರ ಹಾಗೂ ಬ್ಯಾರಕ್ ಎದುರು ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಆ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿತ್ತು. ಉಮೇಶ್ ರೆಡ್ಡಿ, ಶಾಹೀದ್ ಹಾಗೂ ತರುಣ್‌ನನ್ನು ಕಾರಾಗೃಹದ ಅಧಿಕಾರಿಗಳು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ವಿಡಿಯೊ ಆಧರಿಸಿ ಕೃತ್ಯ ನಡೆದ ಸ್ಥಳವನ್ನೂ ಪರಿಶೀಲನೆ ನಡೆಸಿದ್ದಾರೆ. ಈ ವರದಿಯನ್ನು ಕಾರಾಗೃಹ ಹಾಗೂ ಸುಧಾರಣಾ ಇಲಾಖೆಯ ಅಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದಾರೆ.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳನ್ನು ಸಂಕಷ್ಟಕ್ಕೆ ಸಿಲುಕಿಸುವ ಉದ್ದೇಶದಿಂದಲೇ ಕೆಲವರು ಸಂಚು ರೂಪಿಸಿದ್ದರು ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಸೇಡು ತೀರಿಸಿಕೊಳ್ಳಲು ಸಂಚು?

'ಜೈಲಿನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ನಡುವೆ ಪ್ರತ್ಯೇಕ ಗುಂಪುಗಳಿವೆ. ಒಂದು ಗುಂಪಿನ ಅಧಿಕಾರಿಗಳಿಗೆ ಕೆಟ್ಟ ಹೆಸರು ತರಬೇಕೆಂದು, ಇನ್ನೊಂದು ಗುಂಪು ಕೈದಿಗಳಿಗೆ ಮೊಬೈಲ್ ನೀಡಿ ಆ ದೃಶ್ಯವನ್ನು ಚಿತ್ರೀಕರಿಸಿಕೊಂಡಿದೆ. ಸೌಲಭ್ಯ ನೀಡಿದ ಜೈಲು ಅಧಿಕಾರಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಕೆಲವು ಕೈದಿಗಳು ವಿಡಿಯೊ ಚಿತ್ರೀಕರಿಸಿಕೊಂಡು ಹೊರಗಿರುವ ಆಪ್ತರಿಗೆ ನೀಡಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿಸಿದ್ದರು ಎಂಬುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ. 'ಉಮೇಶ್ ರೆಡ್ಡಿ ಮೊಬೈಲ್‌ನಲ್ಲಿ ಮಾತನಾಡಿರುವ ದೃಶ್ಯವು 2023ರಲ್ಲಿ ಚಿತ್ರೀಕರಣಗೊಂಡಿರುವುದು. ಬೆಳಗಾವಿ ಕೇಂದ್ರ ಕಾರಾಗೃಹದಿಂದ ಉಮೇಶ್ ರೆಡ್ಡಿಯನ್ನು ಪರಪ್ಪನ ಅಗ್ರಹಾರಕ್ಕೆ ಕರೆತಂದು ಜೈಲಿನ ಆಸ್ಪತ್ರೆ ವಿಭಾಗದಲ್ಲಿ ಇರಿಸಲಾಗಿತ್ತು. ಅದೇ ವಿಭಾಗದಲ್ಲಿ ರೌಡಿ ಶೀಟರ್ ವಡ್ಡ ನಾಗನಿದ್ದ. ಆತನೇ ಉಮೇಶ್ ರೆಡ್ಡಿಗೆ ಮೊಬೈಲ್ ನೀಡಿ ಮಾತನಾಡುವಂತೆ ಹೇಳಿ ದೃಶ್ಯವನ್ನು ಚಿತ್ರೀಕರಿಸಿಕೊಂಡಿದ್ದ. ಈ ವಿಚಾರವನ್ನು ಉಮೇಶ್ ರೆಡ್ಡಿ ಕಾರಾಗೃಹದ ಅಧಿಕಾರಿಗಳಿಗೆ ತಿಳಿಸಿದ್ದಾನೆ' ಎಂದು ಗೊತ್ತಾಗಿದೆ.

ನ್ಯಾಯಾಲಯದ ಅನುಮತಿ


ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವ ಕೈದಿಗಳ ವಿಚಾರಣೆಗೆ ನ್ಯಾಯಾಲಯ ಅನುಮತಿ ನೀಡಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಉಗ್ರರ ಸೃಷ್ಟಿಸುವ ಸಾಫ್ಟ್‌ವೇರ್ ಯಾವುದು : ಸಿ.ಟಿ.ರವಿ

ಬೆಂಗಳೂರು: 'ದೆಹಲಿ ಸ್ಫೋಟದ ರೂವಾರಿಗಳು ಅನಕ್ಷರಸ್ಥರಲ್ಲ, ಅವರಲ್ಲಿ ಬಹುತೇಕರು ವೈದ್ಯರು. ಹಲವು ಭಯೋತ್ಪಾದನಾ ಪ್ರಕರಣಗಳಲ್ಲಿ ಎಂಜಿನಿಯರ್‌ಗಳು, ಶ್ರೀಮಂತ ಕುಟುಂಬಗಳ ಹಿನ್ನೆಲೆ ಇರುವವರೂ ಇದ್ದಾರೆ. ಭಯೋತ್ಪಾದಕರನ್ನು ತಯಾರಿಸುವ ಸಾಫ್ಟ್‌ವೇರ್ ಯಾವುದು' ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಮಾಯಕರನ್ನು ಕೊಲ್ಲುವುದನ್ನು ಇಸ್ಲಾಂ ಒಪ್ಪುವುದಿಲ್ಲ. ಹೀಗೆ ಕೊಲ್ಲುವವರು ನಿಜವಾದ ಮುಸಲ್ಮಾನರಲ್ಲ ಎಂದು ಒಬ್ಬರು ಮೌಲ್ವಿ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆ ನಿಜ ಆಗಿದ್ದರೆ ಭಯೋತ್ಪಾದನೆ ಏಕೆ ನಡೆಯುತ್ತಿತ್ತು? ಆದರೆ ಇವರೆಲ್ಲರೂ ಭಯೋತ್ಪಾದನೆ ಮಾಡುತ್ತಿರುವುದೇ ಇಸ್ಲಾಂ ವಿಸ್ತರಣೆಗಾಗಿ' ಎಂದರು.



'ಭಾರತದಲ್ಲಿ ಇರುವಷ್ಟು ಧಾರ್ಮಿಕ ಸ್ವಾತಂತ್ರ್ಯ ಬೇರೆ ಯಾವುದೇ ದೇಶದಲ್ಲೂ ಇಲ್ಲ. ಇಲ್ಲಿ ಗಣೇಶನ ಮೆರವಣಿಗೆಯನ್ನು ಆತಂಕದಲ್ಲಿ ನಡೆಸಬೇಕಾಗುತ್ತದೆ. ಆದರೆ, ಈದ್ ಮಿಲಾದ್ ಯಾವತ್ತೂ ಆತಂಕದಲ್ಲಿ ನಡೆದಿಲ್ಲ. ಆದರೂ ಬಾಂಬ್ ಇಡಬೇಕೆಂದು ಅವರಿಗೆ ಹೇಗೆ ಅನಿಸುತ್ತದೆ' ಎಂದು ಕೇಳಿದರು.

ನಕಲಿ ದಾಖಲೆ: ಸತ್ವ ಗ್ರೂಪ್‌ನ ಪಾಲುದಾರ ಬಂಧನ

ಬೆಂಗಳೂರು: ಬಂಡಾಪುರದ ಗ್ರಾಮದಲ್ಲಿ 10 ಎಕರೆ ಜಮೀನು ಕಬಳಿಕೆಗೆ ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪದಡಿ ಸತ್ವ ಗ್ರೂಪ್‌ನ ಪಾಲುದಾರ ಅಶ್ವಿನ್ ಸಂಚೆಟಿ ಅವರನ್ನು ಆವಲಹಳ್ಳಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಉಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೂಲ ಮಾಲೀಕರಾದ ರಾಧಾ ಅವರ ಬಳಿ ಜಿಪಿಎ ಪಡೆದಿರುವ ವೆಂಕಟಪ್ಪ ಅವರು ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಆ ದೂರು ಆಧರಿಸಿ ಆರೋಪಿಗಳಾದ ಅಶ್ವಿನ್ ಸಂಚೆಟಿ, ಬಸವೇಶ್ವರ ನಗರದ ನಿವಾಸಿ ರಾಧಾ, ಲೋಕ ಸುಂದರ್, ಧ್ರುವ ಕುಮಾರ್, ಮೀನಾಕ್ಷಿ, ಲಾವಣ್ಯ, ಡಾಲರ್ಸ್ ಕಾಲೊನಿಯ ನಿವಾಸಿ ರಾಧಾ, ವೆಂಟಕರಾಮ ನಾಯ್ಡು ಕೋಲ, ಶಿವಶ್ರೀ ಮೀಡಿಯಾ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶಿವರುದ್ರಪ್ಪ, ನಿರ್ದೇಶಕ ಶ್ರೀನಿವಾಸ್ ಆರ್. ಅಲಕಟ್ಟಿ, ಲಿಂಗರಾಜ್, ಮಧುಸೂದನ್ ಮತ್ತು ಮುನೇಂದ್ರ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

10 ಎಕರೆ ಜಮೀನನ್ನು ಕಬಳಿಸಲು ನಕಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ವೆಂಕಟಪ್ಪ ಎಂಬುವವರು ಅ.22ರಂದು ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವಿಮಾನ ನಿಲ್ದಾಣದಲ್ಲಿ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ದೆಹಲಿಯ ಕೆಂಪು ಕೋಟೆ ಬಳಿ ಸ್ಫೋಟದ ಬಳಿಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ನಲ್ಲಿ ಭಾರಿ ಕಟ್ಟೆಚ್ಚರ ವಹಿಸಲಾಗಿದೆ.

ವಿಮಾನ ನಿಲ್ದಾಣದ ಭದ್ರತಾ ಹೊಣೆ ಹೊತ್ತಿರುವ ಕೇಂದ್ರ ಕೈಗಾರಿಕ ಭದ್ರತಾ ಪಡೆಯ(ಸಿಐಎಸ್‌ಎಫ್) ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ರಾಜ್ಯ ಪೊಲೀಸರು ವಿಮಾನ ನಿಲ್ದಾಣದ ಸುತ್ತಮುತ್ತ ಅಹಿತಕರ ಘಟನೆ ನಡೆಯದಂತೆ ಕಣ್ಣಿಟ್ಟಿದ್ದಾರೆ. ಪ್ರತಿ ಅರ್ಧ ತಾಸಿಗೊಮ್ಮೆ ಶ್ವಾನದಳದಿಂದ ಯಾವ ಮೂಲೆ ಬಿಡದಂತೆ ತಪಾಸಣೆ ಮಾಡಲಾಗುತ್ತಿದೆ.

ಟರ್ಮಿನಲ್‌ಗಳಲ್ಲಿ ಅನಾಮಧೇಯ ವಸ್ತುಗಳು ಕಂಡು ಬಂದರೆ ಕೂಡಲೇ ಬಾಂಬ್ ನಿಷ್ಕ್ರೀಯ ದಳದಿಂದ ತಪಾಸಣೆ ಮಾಡಲಾಗುತ್ತಿದೆ. ಚೆಕ್ ಪೋಸ್ಟ್‌ಗಳ ಸಂಖ್ಯೆ ಹೆಚ್ಚಿಸಲಾಗಿದೆ.

ಮುಖ್ಯಾಂಶಗಳು

- ಭದ್ರತೆಗೆ ಸಿಐಎಸ್‌ಎಫ್ ಹೆಚ್ಚುವರಿ ಸಿಬ್ಬಂದಿ ನಿಯೋಜನೆ
- ಬಾಂಬ್ ನಿಷ್ಕ್ರೀಯ ದಳದಿಂದ ತಪಾಸಣೆ
- ಚೆಕ್ ಪೋಸ್ಟ್‌ಗಳ ಸಂಖ್ಯೆ ಹೆಚ್ಚಳ

ಸಿಸಿಟಿವಿ ಕ್ಯಾಮೆರಾ ಮೂಲಕ ನಿರಂತರ ನಿಗಾ ವಹಿಸಲು ಕಂಟ್ರೋಲ್ ರೂಂ ಸಿಬ್ಬಂದಿಯನ್ನು ಹೆಚ್ಚಿಸಲಾಗಿದೆ. ಪ್ರಯಾಣಿಕರನ್ನು ಬೀಳ್ಕೊಡಲು ಬರುವ, ಇಲ್ಲವೇ ಸ್ವಾಗತಿಸಲು ಬರುವವರನ್ನು ಹೆಚ್ಚು ಹೊತ್ತು ಟರ್ಮಿನಲ್‌ಗಳಲ್ಲಿ ನಿಲ್ಲದಂತೆ ಭದ್ರತಾ ಸಿಬ್ಬಂದಿ ಎಚ್ಚರಿಕೆ ನೀಡುತ್ತಿದ್ದಾರೆ.

ಪ್ರಯಾಣಿಕರನ್ನು ಬಿಡಲು ಇಲ್ಲವೇ ಕರೆದೊಯ್ಯಲು ಬರುವ ಟ್ಯಾಕ್ಸಿ ಹಾಗೂ ಖಾಸಗಿ ವಾಹನಗಳನ್ನು ನಿಲುಗಡೆ ಸ್ಥಳದಲ್ಲಿ ಐದು ನಿಮಿಷಕ್ಕೂ ಹೆಚ್ಚು ನಿಲ್ಲಲು ಅವಕಾಶ ನೀಡುತ್ತಿಲ್ಲ.

ಬಸ್ ನಿಲ್ದಾಣ, ವಾಹನ ನಿಲ್ದಾಣಗಳಲ್ಲಿ ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ 24 ಗಂಟೆಯೂ ಗಸ್ತು ತಿರುಗುತ್ತಿದ್ದಾರೆ. ಅನುಮಾನಾಸ್ಪದ ವ್ಯಕ್ತಿಗಳ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲಾಗಿದೆ.



ದೇವನಹಳ್ಳಿ ತಾಲೂಕಿನ ಕೆಂಪೇಗೌಡ ಅಂತತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಗಮನ ದ್ವಾರದ ಸಮೀಪ ಭದ್ರತೆಗೆ ನಿಯೋಜನೆಯಾಗಿರುವ ಸಿಬ್ಬಂದಿ

ಮಹಿಳೆಗೆ ಕಿರುಕುಳ ಮೂವರ ಬಂಧನ

ಪಣಜಿ (ಪಿಟಿಐ): ಇಲ್ಲಿನ ಸಮುದ್ರ ತೀರದಲ್ಲಿ ವಿಹರಿಸುತ್ತಿದ್ದ ವಿದೇಶದ ಮಹಿಳಾ ಪ್ರವಾಸಿಗರಿಬ್ಬರಿಗೆ ಕಿರುಕುಳ ನೀಡುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಬೆನ್ನಿಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಮೂವರನ್ನು ಗೋವಾ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ.

ರಾವಂದೂರು ಹೋಬಳಿಯ ಬೋಗನಹಳ್ಳಿಯ ಕಾರ್ತಿಕ್ ಬಿ.ಆರ್. (28), ಬಿ.ಎನ್. ಸಂತೋಷ್ (33), ರವಿ ಬಿ.ಎನ್. ಬಂಧಿತರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉತ್ತರ ಗೋವಾದ ಅರಂಬೋಲ್ ಬೀಚ್‌ನಲ್ಲಿ ವಿಹರಿಸುತ್ತಿದ್ದ ವಿದೇಶದ ಮಹಿಳಾ ಪ್ರವಾಸಿಗರೊಟ್ಟಿಗೆ ಫೋಟೊಗಳನ್ನು ತೆಗೆದುಕೊಳ್ಳಲು ಈ ಮೂವರು ಯತ್ನಿಸಿದ್ದು, ತಮ್ಮ ಭುಜಗಳ ಮೇಲೆ ಕೈಇಟ್ಟು ಪೋಸ್ ಕೊಡುವಂತೆ ಒತ್ತಾಯಿದ್ದಾರೆ. ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದೆ.

ಠಾಣೆ ಎದುರಿನ ಮಳಿಗೆಗಳಲ್ಲಿ ಕಳ್ಳತನ

ನಂದಗುಡಿ: ಮೆಡಿಕಲ್, ಕಿರಾಣಿ ಅಂಗಡಿಯಿಂದ ನಗದು ಕಳವು

ಪ್ರಜಾವಾಣಿ ವಾರ್ತೆ

ನಂದಗುಡಿ (ಹೊಸಕೋಟೆ): ಚಿಂತಾಮಣಿ ಮತ್ತು ಹೊಸಕೋಟೆ ಮುಖ್ಯರಸ್ತೆಯಲ್ಲಿರುವ ಪೊಲೀಸ್ ಠಾಣೆ ಎದುರಿನಲ್ಲಿರುವ ಮೂರು ಅಂಗಡಿಗಳಲ್ಲಿ ಮಂಗಳವಾರ ರಾತ್ರಿ ಕಳ್ಳತನ ನಡೆದಿದೆ.

ಅಂಗಡಿಯಲ್ಲಿದ್ದ ಸಣ್ಣ ಮೊತ್ತದ ಹಣ ಹಾಗೂ ವಸ್ತುಗಳನ್ನು ಕಳ್ಳರು ದೋಚಿ ಪರಾರಿಯಾಗಿದ್ದಾರೆ.

ಮಧ್ಯರಾತ್ರಿ ಗಾಂಧಿ ವೃತ್ತದಲ್ಲಿರುವ ಮಧು ಮೆಡಿಕಲ್ ಮತ್ತು ಜನರಲ್ ಸ್ಟೋರ್ ಬೀಗ ಮುರಿದ ಕಳ್ಳರು ₹80 ಸಾವಿರ ಮೌಲ್ಯದ ಸಿಗರೇಟ್ ಬಂಡಲ್, ₹70 ಸಾವಿರ ನಗದು ಕಳವು ಮಾಡಿದ್ದಾರೆ.

ಬಳಿಕ ಹೊಸಕೋಟೆ-ಚಿಂತಾಮಣಿ ರಾಜ್ಯ ಹೆದ್ದಾರಿಯ ರಸ್ತೆ ಬದಿಯಲ್ಲಿರುವ ಪೊಲೀಸ್ ಠಾಣೆ ಎದುರಿನಲ್ಲಿರುವ ಮಾರುತಿ ಮೆಡಿಕಲ್‌ನಲ್ಲಿ ₹1ಸಾವಿರ ನಗದು ಹಾಗೂ ಸಾವಿರಾರು ರೂಪಾಯಿ ಬೆಲೆ ಬಾಳುವ ಹಾರ್ಲಿಕ್ಸ್, ಬೂಸ್ಟ್ ಬಾಟಲ್‌ಗಳನ್ನು ಕಳ್ಳತನ ಮಾಡಿದ್ದಾರೆ. ಪಕ್ಕದಲ್ಲಿರುವ ಮಂಜುನಾಥ ಪ್ರಾವಿಜನ್ ಸ್ಟೋರ್ ಬೀಗ ಮುರಿದಿದ್ದಾರೆ. ಆದರೆ, ಬಾಗಿಲು ತೆಗೆಯಲು ಸಾಧ್ಯವಾಗದೆ ವಾಪಸ್ ತೆರಳಿದ್ದಾರೆ.

ಎಂದಿನಂತೆ ಮರುದಿನ ಬೆಳಗ್ಗೆ ಅಂಗಡಿ ಮಾಲೀಕರು ಬಾಗಿಲು ತೆರೆಯಲು ಹೋದಾಗ ವಿಷಯ ಬೆಳಕಿಗ ಬಂದಿದೆ. ಮಾಲೀಕರು ನಂದಗುಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದರೆ, ಪೊಲೀಸರು ದೂರು ದಾಖಲಿಸಿಕೊಂಡಿಲ್ಲ ಎಂದು ಅಂಗಡಿ ಮಾಲೀಕರು ಆರೋಪಿಸಿದ್ದಾರೆ.

'ಕಳ್ಳತನವಾದ ಅಂಗಡಿ ಮುಂಗಟ್ಟುಗಳ ಸ್ಥಳ ಮಹಜರು ನಡೆಸಿದ ಬಳಿಕ ದೂರು ನೀಡುವಂತೆ ಅಂಗಡಿ ಮಾಲೀಕರಿಗೆ ಸೂಚಿಸಲಾಗಿತ್ತು. ಇನ್ನೂ ದೂರು ಸಲ್ಲಿಸಿಲ್ಲ. ₹20 ರಿಂದ ₹25 ಸಾವಿರ ನಗದು ಕಳ್ಳತನವಾಗಿದೆ. ಹಾಗಾಗಿ ದೂರು ನೀಡಲು ಮುಂದೆ ಬಂದಿಲ್ಲ. ಈ ಪ್ರಕರಣ ಇತರ ಪ್ರಕರಣಗಳೊಂದಿಗೆ ಏನಾದರೂ ಸಂಬಂಧ ಹೊಂದಿದೆಯೇ ಎಂದು ಎಲ್ಲಾ ಆಯಾಮದಿಂದ ತನಿಖೆ ನಡೆಸಿ, ಕಳ್ಳರನ್ನು ಶೀಘ್ರ ಬಂಧಿಸಲಾಗುವುದು' ಎಂದು ನಂದಗುಡಿ ಇನ್‌ಸ್ಪೆಕ್ಟರ್ ಶಾಂತರಾಮ್ ತಿಳಿಸಿದ್ದಾರೆ.

'ಹಣ ಪಡೆದು ಸಿಸಿಟಿವಿ ಅಳವಡಿಸಿಲ್ಲ'

ಮೂರ್ನಾಲ್ಕು ವರ್ಷಗಳ ಹಿಂದೆಯೇ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗಾಗಿ ಸ್ಥಳೀಯ ಅಂಗಡಿ ಮಾಲೀಕರಿಂದ ಪೊಲೀಸರು ಹಣ ಸಹ ಸಂಗ್ರಹ ಮಾಡಿಕೊಂಡಿದ್ದು, ಇಲ್ಲಿವರೆಗೂ ಸಿಸಿಟಿವಿ ಕ್ಯಾಮೆರಾ ಅಳವಡಿಸಿಲ್ಲ ಎಂದು ದೂರುದಾರರು ಆರೋಪಿಸಿದ್ದಾರೆ.

ಅಂಗವಿಕಲ ಯುವತಿ ಮೇಲೆ ಅತ್ಯಾಚಾರಕ್ಕೆ ಯತ್ನ:ಬಂಧನ

ಬೆಂಗಳೂರು: ಅಂಗವಿಕಲ ಯುವತಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ ಆರೋಪಿಯನ್ನು ಆಡುಗೋಡಿಯ ಎಂ.ಆರ್. ನಗರದ ನಿವಾಸಿಗಳು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಸ್ಥಳಕ್ಕೆ ಬಂದ ಪೊಲೀಸರು ಕೋರಮಂಗಲದ ಎಲ್.ಆರ್. ನಗರದ ನಿವಾಸಿ ವಿಕ್ರಂ ಎಂಬಾತನನ್ನು ಬಂಧಿಸಿದ್ದಾರೆ.

21 ವರ್ಷದ ಅಂಗವಿಕಲ ಯುವತಿಯನ್ನು ಮನೆಯಲ್ಲಿ ಬಿಟ್ಟು ಪೋಷಕರು ಮದುವೆ ಸಮಾರಂಭಕ್ಕೆ ತೆರಳಿದ್ದರು. ಗಾಂಜಾ ನಶೆಯಲ್ಲಿ ಆರೋಪಿ ಮನೆಯ ಒಳಗೆ ನುಗ್ಗಿದ್ದ. ಮದುವೆ ಸಮಾರಂಭ ಮುಗಿಸಿಕೊಂಡು ಯುವತಿಯ ತಾಯಿ ಮನೆಗೆ ಬಂದಾಗ ಒಳಗಿನಿಂದ ಬಾಗಿಲ ಚಿಲಕ ಹಾಕಲಾಗಿತ್ತು. ಆರೋಪಿ ಒಳಗಿದ್ದ. ಯುವತಿಯ ತಾಯಿಯನ್ನು ಕಂಡು ಆರೋಪಿ ಪರಾರಿಯಾಗಲು ಯತ್ನಿಸಿದ. ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದರು. 'ಆರೋಪಿ ಎಲ್ಲಿಯೂ ಕೆಲಸಕ್ಕೆ ತೆರಳುತ್ತಿರಲಿಲ್ಲ. ಗಾಂಜಾ ನಶೆಯಲ್ಲಿ ಮನೆಯ ಒಳಗೆ ಹೋಗಿದ್ದ. ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

₹1.94 ಕೋಟಿ ವಂಚನೆ: ಆರೋಪಿ ಸೆರೆ

ವಿದ್ಯಾರ್ಥಿಗಳ ವಿದೇಶ ಪ್ರಯಾಣದ ಹಣ ದುರುಪಯೋಗ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿ.ವಿ.ರಾಮನ್ ರಸ್ತೆಯಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿದ್ಯಾರ್ಥಿಗಳಿಗೆ ಮಂಜೂರಾದ ಹಣವನ್ನು ತಮ್ಮ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದು, ಬಂಧಿತರ ಸಂಖ್ಯೆ ಮೂರಕ್ಕೇರಿದೆ.

ಬನ್ನೇರುಘಟ್ಟ ರಸ್ತೆಯ ಅರಕೆರೆಯ ನಿವಾಸಿ ಸಚಿನ್ ರಾವ್ ಬಂಧಿತ.

ಇದೇ ಪ್ರಕರಣದಲ್ಲಿ ಯಶವಂತಪುರದ ಎಲ್‌ಎನ್ ಕಾಲೊನಿಯ ನಿವಾಸಿ ವಿ.ಸೌಂದರ್ಯ ಹಾಗೂ ಹೆಸರುಘಟ್ಟದ ಆರ್.ದೀಪಿಕಾ ಎಂಬುವವರನ್ನು ನ.7ರಂದು ಬಂಧಿಸಲಾಗಿತ್ತು.

ವಿ.ಸೌಂದರ್ಯ ಕಾರ್ಯದರ್ಶಿಯಾಗಿ, ದೀಪಿಕಾ ಸಹಾಯಕಿಯಾಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಹೊರಗುತ್ತಿಗೆ ಸಂಸ್ಥೆ ವೆಂಕಟೇಶ್ವರ ಎಂಟರ್‌ಪ್ರೈಸಸ್ ಮೂಲಕ ನೇಮಕಗೊಂಡಿದ್ದರು.

ಸಂಸ್ಥೆಯ ರಿಜಿಸ್ಟ್ರಾರ್ ಶ್ರೀಧರ್ ವಾರಿಯರ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಸೌಂದರ್ಯ ಹಾಗೂ ದೀಪಿಕಾ ಅವರಿಗೆ ವಂಚನೆ ಕೃತ್ಯಕ್ಕೆ ಸಚಿನ್ ರಾವ್ ನೆರವು ನೀಡಿದ್ದ ಎಂಬುದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.



ಸಚಿನ್



ದೀಪಿಕಾ



ಸೌಂದರ್ಯ

'ವಿದ್ಯಾರ್ಥಿಗಳ ವಿದೇಶ ಪ್ರಯಾಣಕ್ಕಾಗಿ ಪಾವತಿಸಬೇಕಾದ ಮುಂಗಡ ಹಣವನ್ನು ಮೂವರು ಆರೋಪಿಗಳು ದುರ್ಬಳಕೆ ಮಾಡಿಕೊಂಡಿದ್ದರು. ಹಣ ಮಂಜೂರಾತಿ ಆದೇಶಗಳನ್ನು ತಿರುಚಿ, ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ವಿವರಗಳನ್ನು ಕಾನೂನುಬಾಹಿರವಾಗಿ ಬದಲಾಯಿಸಿಕೊಂಡು ವಂಚಿಸಿದ್ದರು. ಹಣವನ್ನು ತಮ್ಮ ಕುಟುಂಬದ ಸದಸ್ಯರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು. ಇದುವರೆಗೂ ನಡೆದಿರುವ ತನಿಖೆಯಿಂದ ₹1.94 ಕೋಟಿ ವಂಚನೆ ಎಸಗಿರುವುದು ಪತ್ತೆ ಆಗಿದೆ' ಎಂದು ಪೊಲೀಸರು ಹೇಳಿದರು.

'ಸಂಸ್ಥೆಯ ಆಂತರಿಕ ತನಿಖೆಯಲ್ಲಿ ಮೂವರೂ ಹಣ ದುರ್ಬಳಕೆ ಮಾಡಿಕೊಂಡಿರುವುದು ಪತ್ತೆ ಆಗಿತ್ತು. ಸಂಸ್ಥೆಯ ಅಧಿಕಾರಿಗಳ ಮುಂದೆಯೂ ಆರೋಪಿಗಳು ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ನಿವೇಶನ ಖರೀದಿ

ವಂಚಿಸಿದ ಹಣದಿಂದ ಮೂವರು ಆರೋಪಿಗಳೂ ನಿವೇಶನ ಖರೀದಿಸಿದ್ದರು. ₹80 ಲಕ್ಷ ಮೌಲ್ಯದ ಎರಡು ನಿವೇಶನ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಆರೋಪಿಗಳಿಂದ ₹15 ಲಕ್ಷ ಮೌಲ್ಯದ 121 ಗ್ರಾಂ ಚಿನ್ನಾಭರಣ, ₹11 ಲಕ್ಷ ನಗದು, ₹10 ಲಕ್ಷ ಮೌಲ್ಯದ ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೆಹಲಿಯಲ್ಲಿ ಆರೋಪಿ ಬಂಧನ, ಸದಾಶಿವನಗರ ಠಾಣೆ ಪೊಲೀಸರ ಕಾರ್ಯಾಚರಣೆ

ನಟಿ ಪ್ರಿಯಾಂಕಾಗೆ ವಂಚನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ, ನಿರ್ದೇಶಕ ಉಪೇಂದ್ರ ಹಾಗೂ ಅವರ ಪತ್ನಿ ಪ್ರಿಯಾಂಕಾ ಅವರ ಮೊಬೈಲ್ ಹ್ಯಾಕ್ ಮಾಡಿ ವಂಚಿಸಿದ್ದ ಆರೋಪಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಆರೋಪಿ ವಿಕಾಸ್ ಕುಮಾರ್

ಬಿಹಾರದ ವಿಕಾಸ್ ಕುಮಾರ್ ಬಂಧಿತ. ಆರೋಪಿ ದೆಹಲಿಯಲ್ಲಿರುವ ಸುಳಿವು ಲಭಿಸಿದ್ದರಿಂದ ವಿಶೇಷ ತಂಡವನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಅಲ್ಲಿನ ಸೋನಿಯಾ ನಗರದಲ್ಲಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ವಶಕ್ಕೆ ಪಡೆದುಕೊಂಡು ನಗರಕ್ಕೆ ಕರೆತರಲಾಗಿದೆ. ಆರೋಪಿಯ ಮೊಬೈಲ್ ವಶಕ್ಕೆ ಪಡೆದುಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಶಂಕೆಯಿದ್ದು, ತನಿಖೆ ಚುರುಕುಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಈ ಪ್ರಕರಣದಲ್ಲಿ ಸೈಬರ್ ವಂಚಕರು ₹1.65 ಲಕ್ಷ ವರ್ಗಾವಣೆ ಮಾಡಿಕೊಂಡಿದ್ದರು ಎಂಬುದು ಗೊತ್ತಾಗಿದೆ.

'ಸೆ.15ರ ಬೆಳಿಗ್ಗೆ 8ರ ಸುಮಾರಿಗೆ ನಟಿ ಪ್ರಿಯಾಂಕಾ ಅವರಿಗೆ ಕರೆ ಮಾಡಿದ್ದ ಸೈಬರ್ ವಂಚಕ, 'ನಿಮ್ಮ ಆರ್ಡರ್ ಡೆಲಿವರಿ ಮಾಡಲು ವಿಳಾಸ ಸಿಗುತ್ತಿಲ್ಲ. ಈ ಮೊಬೈಲ್ ಸಂಖ್ಯೆಗೆ ಡಯಲ್ ಮಾಡಿ ಖಚಿತಪಡಿಸಿದರೆ ಡೆಲಿವರಿ ಮಾಡುತ್ತೇವೆ' ಎಂದು ಒಂದು ಮೊಬೈಲ್ ಸಂಖ್ಯೆ ನೀಡಿದ್ದ. ಆ ಸಂಖ್ಯೆಗೆ ಪ್ರಿಯಾಂಕಾ ಅವರು ಕರೆ ಮಾಡುತ್ತಿದ್ದಂತೆಯೇ ಪ್ರಿಯಾಂಕಾ ಅವರ ಫೋನ್ ಹ್ಯಾಕ್ ಆಗಿತ್ತು. ಫೋನ್‌ನಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿರಬಹುದು ಎಂದು ಭಾವಿಸಿದ್ದ ಪ್ರಿಯಾಂಕಾ ಅವರು ಉಪೇಂದ್ರ ಹಾಗೂ ಕುಟುಂಬಕ್ಕೆ ಪರಿಚಿತರಾದ ಮಹಾದೇವ್ ಅವರ ಫೋನ್‌ಗಳಿಂದ ಅದೇ ಸಂಖ್ಯೆಗೆ ಡಯಲ್ ಮಾಡಿದ್ದರು. ಆ ಫೋನ್‌ಗಳೂ ಸಹ ಹ್ಯಾಕ್ ಆಗಿದ್ದವು' ಎಂದು ಪೊಲೀಸರು ಹೇಳಿದರು.

ಸಂದೇಶ ಕಳುಹಿಸಿದ್ದ ಆರೋಪಿ: 'ವಾಟ್ಸ್‌ಆ್ಯಪ್ ಖಾತೆಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದ ಆರೋಪಿ, 'ತುರ್ತಾಗಿ ಹಣದ ಅಗತ್ಯ ಇದೆ' ಎಂದು ಹಲವರಿಗೆ ಸಂದೇಶ ಕಳುಹಿಸಿದ್ದ. ಪ್ರಿಯಾಂಕಾ ಅವರೇ ಸಂದೇಶ ಕಳುಹಿಸಿರಬಹುದು ಎಂದು ಭಾವಿಸಿದ್ದ ಆಪ್ತರು ಹಣ ವರ್ಗಾವಣೆ ಮಾಡಿದ್ದರು. ಉಪೇಂದ್ರ ಅವರ ಪುತ್ರ ಸಹ ₹50 ಸಾವಿರ ವರ್ಗಾವಣೆ ಮಾಡಿದ್ದರು. ಬಳಿಕ ಅನುಮಾನ ಬಂದು ಉಪೇಂದ್ರ ದಂಪತಿ ಖುದ್ದು ಸದಾಶಿವನಗರ ಠಾಣೆ ಹಾಗೂ ಕೇಂದ್ರ ವಿಭಾಗದ ಸೈಬರ್ ಕ್ರೈಮ್ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದರು' ಎಂದು ಪೊಲೀಸರು ಹೇಳಿದರು.

'ನಾಲ್ಕು ವಿವಿಧ ಖಾತೆಗಳಿಗೆ ಸುಮಾರು ₹ 1.65 ಲಕ್ಷ ರೂಪಾಯಿ ವರ್ಗಾವಣೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ. 20ರಿಂದ 25 ವಯಸ್ಸಿನ ಯುವಕರು ಸೇರಿಕೊಂಡು ಮೊಬೈಲ್ ಹ್ಯಾಕ್ ಮಾಡಿ ವಂಚನೆ ಎಸಗುತ್ತಿರುವ ಮಾಹಿತಿಯಿದೆ. ವಿಕಾಸ್ ಕುಮಾರ್‌ನನ್ನು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಎಲ್ಲರನ್ನೂ ಎಚ್ಚರಿಸಿದ್ದೆವು'

ಬುದ್ಧಿವಂತರೇ ಕೆಲವೊಮ್ಮೆ ದಡ್ಡರಾಗುತ್ತೇವೆ. ಆರ್ಡರ್ ಡೆಲಿವರಿ ಮಾಡುವವರ ಸೋಗಿನಲ್ಲಿ ಕರೆ ಮಾಡಿ ವಂಚಿಸಿದ್ದರು. ವಂಚನೆ ಆಗಿರುವುದು ನಮಗೆ ತಿಳಿಯುವಷ್ಟರಲ್ಲೇ ನನ್ನ ಮಗ, ಪ್ರಿಯಾಂಕಾ ಅವರ ಸ್ನೇಹಿತರು ಹಣ ವರ್ಗಾಯಿಸಿದ್ದರು. ತಕ್ಷಣವೇ ವಿಡಿಯೊ ಮೂಲಕ ಎಲ್ಲರನ್ನೂ ಎಚ್ಚರಿಸಿದ್ದೆವು. ಪೊಲೀಸರಿಗೆ ದೂರು ಕೊಟ್ಟ ಬಳಿಕ ಯಾರೂ ಹಣ ವರ್ಗಾಯಿಸಿರಲಿಲ್ಲ

ಉಪೇಂದ್ರ, ನಟ

'ಗೋಲ್ಡನ್ ಅವರ್'ನಲ್ಲಿ ದೂರು'

ಈ ಪ್ರಕರಣದಲ್ಲಿ ವಿಭಿನ್ನ ಮಾದರಿಯಲ್ಲಿ ವಂಚನೆ ಮಾಡಲಾಗಿತ್ತು. 'ಗೋಲ್ಡನ್ ಅವರ್'ನಲ್ಲಿ ದೂರು ನೀಡಿದ್ದರಿಂದ ಆರೋಪಿಯನ್ನು ಬೇಗನೆ ಪತ್ತೆಹಚ್ಚಲು ಸಹಕಾರಿ ಆಯಿತು. ಈ ಪ್ರಕರಣದ ಮೂಲಕ ಆರೋಪಿಯು ಭಾಗಿಯಾಗಿರುವ ಇತರೆ ಕೆಲವು ಪ್ರಕರಣಗಳ ಮಾಹಿತಿಯೂ ಗೊತ್ತಾಗಿದ್ದು, ತನಿಖೆ ಮುಂದುವರಿಸಲಾಗಿದೆ

ಸೀಮಾಂತ್‌ಕುಮಾರ್ ಸಿಂಗ್, ಪೊಲೀಸ್ ಕಮಿಷನರ್, ಬೆಂಗಳೂರು

‘ಸುರಂಗ ರಸ್ತೆ ಯೋಜನೆ ಮೆಚ್ಚಿದ ಮೋದಿ’

ಯೋಜನೆಗೆ ಸಲಹೆ ನೀಡಿದ ಕೇಂದ್ರ ಭೂಸಾರಿಗೆ ಸಚಿವ ಗಡ್ಕರಿ: ಡಿ.ಕೆ.ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರೇ ಮೆಚ್ಚಿ, ಸಲಹೆ ನೀಡಿದ್ದಾರೆ. ಆದರೆ, ಕರ್ನಾಟಕದ ಬಿಜೆಪಿ ನಾಯಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಡಬಲ್ ಡೆಕ್ಕರ್’ ರಸ್ತೆ ಯೋಜನೆಯ ನೀಲನಕ್ಷೆಯನ್ನೂ ನರೇಂದ್ರ ಮೋದಿ ಅವರಿಗೆ ತೋರಿಸಿದೆ. ರಸ್ತೆಯ ಸ್ವರೂಪ, ಗಾತ್ರದ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೂ ಸಂತೋಷ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ



ನರೇಂದ್ರ ಮೋದಿ

ಶೇ 50ರಷ್ಟು ಭಾಗ ಕಲ್ಲಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಯೋಜನೆ ಮಾಡಿದ್ದೇವೆ. ಮೆಟ್ರೊ ರೈಲು ಶೇ 50ರಷ್ಟು ಸುರಂಗ ಮಾರ್ಗದಲ್ಲೇ ಚಲಿಸುತ್ತದೆ. ಆಗ ಯಾರೂ ಮಾತನಾಡಲಿಲ್ಲ. ಮುಂದಿನ ಪೀಳಿಗೆಯ ಭವಿಷ್ಯಕ್ಕೆ, ಬೆಂಗಳೂರಿಗಾಗಿ ಕೆಲಸ ಮಾಡುತ್ತಿದ್ದೇವೆ. ಪುಣೆ, ಮುಂಬೈ, ದೆಹಲಿಯಲ್ಲೂ ಸುರಂಗ ರಸ್ತೆ ಮಾಡಿದ್ದಾರೆ. ಅಲ್ಲಿ ಇಲ್ಲದ ವಿರೋಧ ಕರ್ನಾಟಕದಲ್ಲಿ ಏಕೆ? ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರುವ ಕಾರಣಕ್ಕೆ ವಿರೋಧ ಮಾಡುತ್ತಿದ್ದಾರೆ. ಬಿಜೆಪಿ ಯಾವಾಗಲೂ ಕರ್ನಾಟಕದ ಅಭಿವೃದ್ಧಿ ವಿರೋಧಿ’ ಎಂದು ದೂರಿದರು.



ಸುರಂಗ ರಸ್ತೆಯ ಪ್ರತಿ 500 ಮೀಟರ್ ಅಂತರದಲ್ಲಿ ನಿರ್ಮಾಣವಾಗಲಿರುವ ‘ಟನಲ್ ಕ್ರಾಸ್ ಪ್ಯಾಸೇಜ್’

‘ವಿರೋಧ ಇದ್ದಷ್ಟು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಮ್ಮ ಅಧಿಕಾರಿಗಳು ಜಾಗೃತರಾಗಿ ಕಾರ್ಯ-ನಿರ್ವಹಿಸುತ್ತಿದ್ದಾರೆ. ಮಾಧ್ಯಮಗಳು ಅಧ್ಯಯನ ಮಾಡಿ ವರದಿ ಬರೆದಿದ್ದಾರೆ. ಅವರ ವರದಿಯಲ್ಲಿನ ಒಳ್ಳೆಯ ಅಂಶಗಳನ್ನು ಸ್ವೀಕರಿಸುತ್ತೇವೆ. ತಪ್ಪಾಗಿದ್ದರೆ ತಿದ್ದಿಕೊಳ್ಳಲು ಸಿದ್ಧರಿದ್ದೇವೆ’ ಎಂದು ಹೇಳಿದರು.

‘ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ಸತಾಯಿಸುತ್ತಿದೆ. ರಾಜ್ಯವನ್ನು ಪ್ರತಿನಿಧಿಸುವ ಸಂಸದರು ಅನ್ಯಾಯದ ವಿರುದ್ಧ ಹೋರಾಟ ಮಾಡಬೇಕು. ಮಹದಾಯಿ, ಮೇಕೆದಾಟು, ಎತ್ತಿನಹೊಳೆ ಸೇರಿದಂತೆ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ನೀರಾವರಿ ಯೋಜನೆಗಳಿಗೆ ತ್ವರಿತವಾಗಿ ಅನುಮತಿ ನೀಡುವಂತೆ ಕೇಂದ್ರದ ಮೇಲೆ ಒತ್ತಡ ಹಾಕಲು ನಿಯೋಗ ತೆಗೆದುಕೊಂಡು ಹೋಗಲಾಗುವುದು. ಎಲ್ಲ ಪಕ್ಷಗಳ ಸಂಸದರನ್ನೂ ಆಹ್ವಾನಿಸಲಾಗುವುದು’ ಎಂದರು.

‘ಬೆಂಗಳೂರಿನಲ್ಲಿ ಮಾತನಾಡಿದರೆ ಆಗುವುದಿಲ್ಲ, ದೆಹಲಿಗೆ ಬನ್ನಿ’ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ‘ಅವರ ಮನೆಗೆ ಉಪಾಹಾರಕ್ಕೆ ಹೋಗುತ್ತಿದ್ದೇನೆ. ಸಂಸತ್ ಅಧಿವೇಶನದ ವೇಳೆ ಸಂಸದರನ್ನು ಕರೆದುಕೊಂಡು ಹೋಗಿ ಚರ್ಚೆ ಮಾಡಬೇಕು. ಅವರು ಕೇಂದ್ರ ಜಲಶಕ್ತಿ ಸಚಿವರು. ಅವರನ್ನು ಬಿಟ್ಟು ಏನು ಮಾಡಲೂ ಆಗುವುದಿಲ್ಲ’ ಎಂದರು. ‘ಎತ್ತಿನಹೊಳೆ ಯೋಜನೆಗೆ ತಕರಾರು ಹೆಚ್ಚಾಗಿದೆ. ಒಂದು ಭಾಗದಿಂದ ಮತ್ತೊಂದು ಖಾಲಿ ಜಾಗಕ್ಕೆ ಮಣ್ಣು ಎತ್ತಿ ಹಾಕಿದರೂ ತಕರಾರು ತೆಗೆಯುತ್ತಾರೆ. ಹಾಗಾಗಿ, ಕೇಂದ್ರದ ಮೇಲೆ ಒತ್ತಡ ಹಾಕುತ್ತೇವೆ. ‘ನೀರಿನ ಹೆಜ್ಜೆ’ ಎಂಬ ಪುಸ್ತಕವನ್ನು ನ.14ರಂದು ಬಿಡುಗಡೆ ಮಾಡಲಿದ್ದೇವೆ. ಅಂದು ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡುತ್ತೇನೆ’ ಎಂದು ಹೇಳಿದರು.

ರಾಷ್ಟ್ರಮಟ್ಟದ ಕರಾಟೆ ಟೂರ್ನಿ 30ರಂದು

ಬಳ್ಳಾರಿ: ಕರ್ನಾಟಕ ಟ್ರೆಡಿಷನಲ್ ಶೊಟೊಕಾನ್ ಕರಾಟೆ ಅಕಾಡೆಮಿ ಮತ್ತು ವರ್ಲ್ಡ್ ಟ್ರೆಡಿಷನಲ್ ಶೊಟೊಕಾನ್ ಕರಾಟೆ ಫೆಡರೇಷನ್ ಆಶ್ರಯದಲ್ಲಿ ನ.30ರಂದು ಬಳ್ಳಾರಿ ನಗರದ ಕಿಂಗ್ಸ್ ಪ್ಯಾಲೇಸ್‌ನಲ್ಲಿ ರಾಷ್ಟ್ರಮಟ್ಟದ 3ನೇ ಕರಾಟೆ ಟೂರ್ನಿ ನಡೆಯಲಿದೆ. ‘ಟೂರ್ನಿಗೆ ದೇಶದ ವಿವಿಧ ರಾಜ್ಯಗಳಿಂದ 600ಕ್ಕೂ ಹೆಚ್ಚು ಕರಾಟೆ ಪಟುಗಳು ಬರುವರು. ಅವರಿಗೆ ಊಟ, ವಸತಿ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದು ಅಕಾಡೆಮಿಯ ಸಂಸ್ಥಾಪಕ ಕಟ್ಟೇಸ್ವಾಮಿ ಬುಧವಾರ ತಿಳಿಸಿದರು.

ಜಿಗಣಿಯಲ್ಲಿ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಆನೇಕಲ್: ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲ್ಲೂಕಿನ ಜಿಗಣಿಯಲ್ಲಿ ಕೆಟಿಟಿಎಂ ಸಂಸ್ಥೆಯ ಮತ್ತು ಎನೆಬಲರ್ಸ್ ಯುನೈಟೆಡ್ ಸಂಸ್ಥೆ, ಜಿಗಣಿ ಪುರಸಭೆ ಸಹಯೋಗದಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ಮತ್ತು ಔಷಧಿ ವಿತರಣೆ ಬುಧವಾರ ನಡೆಯಿತು.

ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೂಳೆ, ಹೃದಯ, ರಕ್ತದೊತ್ತಡ, ಮಧುಮೇಹ, ಸ್ತ್ರೀರೋಗ, ಚರ್ಮ ಸೇರಿದಂತೆ ವಿವಿಧ ವಿಭಾಗಗಳ ವೈದ್ಯರು ಪಾಲ್ಗೊಂಡಿದ್ದರು.

ಪುರಸಭೆ ಅಧ್ಯಕ್ಷೆ ಅರುಣ ಕುಮಾರಿ ಪ್ರಹ್ಲಾದ್ ರೆಡ್ಡಿ ಮಾತನಾಡಿ, ‘ಜಿಗಣಿ ಕೈಗಾರಿಕಾ ಪ್ರದೇಶವಾಗಿರುವುದರಿಂದ ಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಪ್ರತಿಯೊಬ್ಬರಿಗೂ ಆರೋಗ್ಯ ಸೇವೆ ದೊರಕಿಸುವ ನಿಟ್ಟನಲ್ಲಿ ಜಿಗಣಿ ಮತ್ತು ಬೊಮ್ಮಸಂದ್ರ ಕೈಗಾರಿಕ ಪ್ರದೇಶದಲ್ಲಿ ಇಎಸ್‌ಐ ಆಸ್ಪತ್ರೆಯನ್ನು ಸ್ಥಾಪಿಸಬೇಕು. ಜಿಗಣಿ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು’ ಎಂದು ಒತ್ತಾಯಿಸಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಕಂಡ **‘ಷೆಡ್ಯೂಲ್’** ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **“ಷೆಡ್ಯೂಲ್ ಸ್ವತ್ತುಗಳು”** ಎಂದು ಕರೆಯಲ್ಪಡುವ, ಸದರಿ ಸ್ವತ್ತುಗಳ ಪ್ರಸ್ತುತ ಮಾಲೀಕರಾದ **ಅಂದರೆ ವ್ಯವಸ್ಥಾಪಕ ಪಾಲುದಾರ ಟಿ. ವೇಣುಗೋಪಾಲ್ ಪ್ರತಿನಿಧಿಸುವ ಪಾಲುದಾರಿಕೆ ಸಂಸ್ಥೆಯಾದ ಮೆಸರ್ಸ್ ಎಸ್‌ಬಿಆರ್ ವೆಂಚರ್ಸ್, (”ಮಾಲೀಕರು”) ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು**, ತಾವುಗಳೇ ಷೆಡ್ಯೂಲ್ ಸ್ವತ್ತಿಗೆ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತುಗಳ ಮಾರಾಟ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತಾರೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ಈ ಮೇಲೆ ತಿಳಿಸಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕೆಂದು ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು. ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಬೆಳತ್ತೂರು ಗ್ರಾಮದಲ್ಲಿ ನೆಲೆಗೊಂಡಿರುವ ಮತ್ತು ಈ ಕೆಳಗಿನಂತೆ ಸುತ್ತುವರಿದಿರುವ ಎಲ್ಲಾ ಸ್ಥಿರಾಸ್ತಿಗಳು:

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಣೆ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೆಳತ್ತೂರು ಗ್ರಾಮದಲ್ಲಿರುವ ಈ ಸ್ಥಿರಾಸ್ತಿ ಸ್ವತ್ತುಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ವಿವರವಾಗಿ ವಿವರಿಸಲಾಗಿದೆ.

ಕ್ರಮ ಸಂಖ್ಯೆ	ಸರ್ವೆ ನಂ.	ಒಟ್ಟಾರೆ ವಿಸ್ತೀರ್ಣ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
		ಎಕರೆ	ಗುಂಟೆಗಳು				
1.	6/4	0	4.08	ಸರ್ವೆ ನಂ. 6/7	ಸರ್ವೆ ನಂ. 6/1	ಸರ್ವೆ ನಂ. 6/3 ಮತ್ತು 6/5	ಸರ್ವೆ ನಂ. 7/2
2.	7/2	0	18	ಸರ್ವೆ ನಂ. 7/3	ಸರ್ವೆ ನಂ. 7/1	ಸರ್ವೆ ನಂ. 6/4	ರಸ್ತೆ
3.	7/3	0	12	ಸರ್ವೆ ನಂ. 7/4	ಸರ್ವೆ ನಂ. 7/2	ಸರ್ವೆ ನಂ. 6/7	ರಸ್ತೆ
4.	7/4	0	34	ಸರ್ವೆ ನಂ. 7/5	ಸರ್ವೆ ನಂ. 7/3	ಸರ್ವೆ ನಂ. 6/11	ರಸ್ತೆ
5.	7/6	0	10	ಸರ್ವೆ ನಂ. 7/2	ರಸ್ತೆ	ಸರ್ವೆ ನಂ. 7/1	ರಸ್ತೆ
6.	7/8	0	5	ಸರ್ವೆ ನಂ. 7/9	ಖಾಸಗಿ ಸ್ವತ್ತು	ಸರ್ವೆ ನಂ. 7/4	ಸರ್ವೆ ನಂ. 7/12
7.	7/9	0	5	ಸರ್ವೆ ನಂ. 7/10	ಸರ್ವೆ ನಂ. 7/8	ಸರ್ವೆ ನಂ. 7/4	ಸರ್ವೆ ನಂ. 7/12
8.	7/10	0	5	ಸರ್ವೆ ನಂ. 7/11	ಸರ್ವೆ ನಂ. 7/9	ಸರ್ವೆ ನಂ. 7/4	ಸರ್ವೆ ನಂ. 7/12
9.	7/11	0	5	ಖಾಸಗಿ ಸ್ವತ್ತು	ಸರ್ವೆ ನಂ. 7/10	ಸರ್ವೆ ನಂ. 7/4	ಸರ್ವೆ ನಂ. 7/12

ಸಹಿ/–
ಶ್ರೀನಿವಾಸ್ ಬಿ.ಆರ್. ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರೈಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770

ದಿನಾಂಕ : 13.11.2025
ಸ್ಥಳ : ಬೆಂಗಳೂರು

ಸಂಚಾರ...

ಪ್ರಜಾವಾಣಿ ಚಿತ್ರ
ಪ್ರಶಾಂತ್ ಎಚ್.ಜಿ.



ಹೊರವರ್ತುಲ- ಡಾ. ಪುನೀತ್ ರಾಜ್‌ಕುಮಾರ್ ರಸ್ತೆಯಲ್ಲಿ ಪಿಇಎಸ್ ಕಾಲೇಜು ಬಳಿಯ ಹೊಸಕೆರೆಹಳ್ಳಿ ಮೇಲ್ಸೇತುವೆಯು ಪ್ರಾಯೋಗಿಕ ವಾಹನ ಸಂಚಾರಕ್ಕೆ ಬುಧವಾರ ಮುಕ್ತವಾಯಿತು

‘ಮುಂದಿನ ಚುನಾವಣೆ ವೇಳೆಗೆ ಮಹಿಳಾ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಹಾಗೂ ರಾಜ್ಯದಲ್ಲಿ ಶೇಕಡ 33ರಷ್ಟು ಮಹಿಳಾ ಮೀಸಲಾತಿಗೆ ಎರಡು ಮೂರು ಪಕ್ಷಗಳು ಅಂಕಿತ ಹಾಕಿವೆ. ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಶೇ 50ರಷ್ಟು ಮೀಸಲಾತಿಯಿದೆ. ಮುಂದಿನ ಚುನಾವಣೆ ಹೊತ್ತಿಗೆ ವಿಧಾನಸಭಾ ಚುನಾವಣೆಯಲ್ಲೂ ಮಹಿಳಾ ಮೀಸಲಾತಿ ಬರಬಹುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಅಂತರರಾಷ್ಟ್ರೀಯ ಮಹಿಳಾ ಉದ್ಯಮಶೀಲತಾ ದಿನದ ಅಂಗವಾಗಿ ಉಬುಂಟು ಒಕ್ಕೂಟ ಬುಧವಾರ ಆಯೋಜಿಸಿದ್ದ ಟುಗೇದರ್ ವೀ ಗ್ರೋ ನಾಲ್ಕನೇ ಆವೃತ್ತಿಯ ಸಮಾರೋಪ ಸಮಾರಂಭದಲ್ಲಿ ಸಾಧಕಿಯರಿಗೆ ಉಬುಂಟು ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಭವಿಷ್ಯದಲ್ಲಿ ಮಹಿಳಾ ಮೀಸಲಾತಿಯನ್ನು ಯಾರೂ ಸಹ ತಪ್ಪಿಸಲು ಆಗುವುದಿಲ್ಲ. ಮಹಿಳೆಯರು ರಾಜಕೀಯ ನಾಯಕತ್ವದ ಜೊತೆಯಲ್ಲಿ ಉದ್ದಿಮೆ ಹಾಗೂ ಇತರ ಕ್ಷೇತ್ರಗಳಲ್ಲೂ ನಾಯಕತ್ವ ಬೆಳೆಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ರಾತ್ರಿ ಹೊತ್ತು ಹೋಟೆಲ್ ಸೇರಿದಂತೆ ಇತರ ಉದ್ದಿಮೆಗಳನ್ನು ನಡೆಸಲು ಪರವಾನಗಿ ನೀಡಬೇಕು ಎನ್ನುವ ಬೇಡಿಕೆಯಿದೆ. ಆಗ ಮಹಿಳಾ ಸುರಕ್ಷತೆಯೂ ಮುಖ್ಯವಾಗುತ್ತದೆ. ಈಗ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಜೊತೆಗೆ ಇತರ ತಂತ್ರಜ್ಞಾನವನ್ನು ಬಳಸಿಕೊಂಡು ಮಹಿಳೆಯರ ರಕ್ಷಣೆಗೆ ಆದ್ಯತೆ ನೀಡಲಾಗುವುದು’ ಎಂದರು.

‘ಬೆಂಗಳೂರಿನಲ್ಲಿ ಇರುವ 25 ಲಕ್ಷ ಎಂಜಿನಿಯರ್‌ಗಳಲ್ಲಿ ಶೇ 50ರಷ್ಟು ಮಹಿಳೆಯರೇ ಇದ್ದಾರೆ. ವೈದ್ಯರಲ್ಲಿ ಶೇ 38ರಷ್ಟು, ಪ್ಯಾರಾ ಮೆಡಿಕಲ್ ಹಾಗೂ ನರ್ಸಿಂಗ್ ಕ್ಷೇತ್ರದಲ್ಲಿ ಶೇ 80ರಷ್ಟು, ಹೋಟೆಲ್ ಉದ್ದಿಮೆಯಲ್ಲಿ ಶೇ 60ರಷ್ಟು ಮಹಿಳೆಯರು ಇದ್ದಾರೆ’ ಎಂದು ಮಾಹಿತಿ ನೀಡಿದರು.



ಅನಂತಕುಮಾರ್ ಸ್ಮೃತಿ ದಿನದ ಅಂಗವಾಗಿ ಅನಂತಕುಮಾರ್ ಪ್ರತಿಷ್ಠಾನ ಆಯೋಜಿಸಿದ್ದ ಪಂಜಿನ ಮೆರವಣಿಗೆಯಲ್ಲಿ ಪ್ರತಿಷ್ಠಾನದ ಕಾರ್ಯದರ್ಶಿ ತೇಜಸ್ವಿನಿ ಅನಂತಕುಮಾರ್, ಶಾಸಕ ಉದಯ್ ಬಿ. ಗರುಡಾಚಾರ್ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು
– ಪ್ರಜಾವಾಣಿ ಚಿತ್ರ

ಬೆಂಗಳೂರು ಯುನೈಟೆಡ್‌ಗೆ ಜಯ



ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಸೈಖೊಮ್ ಬೋರಿಶ್ ಸಿಂಗ್ (ಎಡ) ಹಾಗೂ ರೂಟ್ಸ್ ಎಫ್‌ಸಿ ತಂಡದ ಬಿ.ಪಿ.ಅನಿಕೇತ್ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು —ಚಿತ್ರ: ಬಿ.ಕೆ.ಜನಾರ್ದನ

ಬೆಂಗಳೂರು: ಸಂಘಟಿತ ಆಟ ಆಡಿದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬುಧವಾರ 3-0ಯಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಧ್ರುವ್ ಶರ್ಮಾ ಅವರು 28ನೇ ನಿಮಿಷದಲ್ಲಿ ಗೋಲು ಗಳಿಸಿ ಯುನೈಟೆಡ್ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಬಳಿಕ, ರಿಭವ್ ಎಸ್. (66ನೇ ನಿ.) ಹಾಗೂ ಜುನೈನ್ ಕೆ. (82ನೇ ನಿ.) ಅವರು ಗೋಲಿನ ಅಂತರವನ್ನು ಹಿಗ್ಗಿಸಿದರು. ರಿಯಲ್ ಬೆಂಗಳೂರು ತಂಡದ ಆಟಗಾರರು ಎದುರಾಳಿ ತಂಡದ ರಕ್ಷಣಾ ಕೋಟೆ ಭೇದಿಸುವಲ್ಲಿ ವಿಫಲರಾದರು. ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಸಿಟಿ ಫುಟ್‌ಬಾಲ್ ಕ್ಲಬ್ ತಂಡವು 2–1ರಿಂದ ರೆಬೆಲ್ಸ್ ಫುಟ್‌ಬಾಲ್ ಕ್ಲಬ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಬೆಂಗಳೂರು ಸಿಟಿ ತಂಡದ ಪ್ರಸನ್ನ ಸ್ವಾಮಿನಾಥನ್ (42ನೇ ನಿ.) ಹಾಗೂ ಆರ್.ಎಸ್.ಜಲ್ಸಿಸ್ (76ನೇ ನಿ.) ತಲಾ ಒಂದು ಗೋಲು ಹೊಡೆದರೆ, ರೆಬೆಲ್ಸ್ ತಂಡದ ಪರ ಮಾಹಿನ್ ರಿಝಾ (87ನೇ ನಿ.) ಏಕೈಕ ಗೋಲು ಹೊಡೆದರು.

ಕಿಕ್‌ಸ್ಟಾರ್ಟ್ ಎಫ್‌ಸಿ ಹಾಗೂ ರೂಟ್ಸ್ ಎಫ್‌ಸಿ ನಡುವಣ ಪಂದ್ಯ 1–1 ಡ್ರಾ ಆಯಿತು.

ಎಸ್‌ಡಿಎ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಯಾದಗಿರಿ: ಸಮಾಜ ಕಲ್ಯಾಣ ಇಲಾಖೆಯ ದ್ವಿತೀಯ ದರ್ಜೆ ಸಹಾಯಕಿ (ಎಸ್‌ಡಿಎ) ಮೇಲೆ ಬುಧವಾರ ನಾಲ್ವರು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದಾರೆ.



ಅಂಜಲಿ

ಎಸ್‌ಡಿಎ ಅಂಜಲಿ ಗಿರೀಶ ಕಂಬಾನೂರ ಹಲ್ಲೆಗೀಡಾದವರು. ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ನಡೆದಿದೆ. ಹಳೆಯ ವೈಷಮ್ಯ ಕೃತ್ಯಕ್ಕೆ ಕಾರಣ ಇರಬಹುದು ಎಂದು ಶಂಕಿಸಲಾಗಿದೆ.

ಅಂಜಲಿ ಶಹಾಬಾದ್ ನಗರಸಭೆ ಮಾಜಿ ಅಧ್ಯಕ್ಷೆ-ಯಾಗಿದ್ದರು. ಎಸ್‌ಸಿ, ಎಸ್‌ಟಿ ದೌರ್ಜನ್ಯ ಕಾಯ್ದೆಯಡಿ ಅನುಕಂಪದ ಆಧಾರದಲ್ಲಿ ಅವರು ಅವರು 2 ವರ್ಷದ ಹಿಂದೆ ಎಸ್‌ಡಿಎ ಹುದ್ದೆಗೆ ನೇಮಕ ಗೊಂಡಿದ್ದರು. ಅಂಜಲಿ ಬೆಳಿಗ್ಗೆ ಕಾರಿನಲ್ಲಿ ಕಚೇರಿಗೆ ತೆರಳುತ್ತಿದ್ದಾಗ, ನಾಲ್ವರು ದುಷ್ಕರ್ಮಿಗಳು ಕಾರಿನಲ್ಲಿ ಬಂದು ಗ್ರೀನ್ ಸಿಟಿ ಸಮೀಪ ಅಡ್ಡಗಟ್ಟಿ, ಹಲ್ಲೆ ನಡೆಸಿ ಪರಾರಿಯಾದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869
ನೋಂದಾಯಿತ ಕಚೇರಿ: ನಂ.44, ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು 560 106. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

30ನೇ ಸೆಪ್ಟೆಂಬರ್ 2025ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2025 (ಅಪರಿಶೋಧಿತ)	ಅರ್ಧವರ್ಷಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2025 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2025 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	3,013.24	5,776.63	2,613.02	11,641.25
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	88.45	172.96	28.97	284.35
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	88.45	190.61	28.97	136.03
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	42.31	87.07	(3.12)	(19.27)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	39.09	68.74	(18.90)	(10.10)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	147.07	147.07	128.97	147.07
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				3,905.16
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ)				
	ಎ) ಮೂಲಭೂತ:	2.96	6.91	(0.26)	1.89
	ಬಿ) ಡೈಲ್ಯೂಟೆಡ್:	2.95	6.88	(0.26)	1.88

ಸೂಚನೆ :

1. 30ನೇ ಸೆಪ್ಟೆಂಬರ್ 2025ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2025 (ಅಪರಿಶೋಧಿತ)	ಅರ್ಧವರ್ಷಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2025 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಸೆಪ್ಟೆಂಬರ್ 2024 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2025 (ಪರಿಶೋಧಿತ)
ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,081.44	3,961.68	1,745.55	7,826.62
ಲಾಭ ತೆರಿಗೆಯ ಮುಂಚೆ	176.62	388.18	98.53	617.04
ಲಾಭ ತೆರಿಗೆಯ ನಂತರ	130.48	284.64	66.43	456.31
ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	129.50	284.41	67.13	458.14

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 10ನೇ ನವೆಂಬರ್, 2025 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 11ನೇ ನವೆಂಬರ್, 2025 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಮೇಲಿರುವ 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಅಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದೆ. 30ನೇ ಸೆಪ್ಟೆಂಬರ್ 2025 ರ ಎರಡನೆಯ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಕೊನೆಗೊಂಡ ಹಣಕಾಸಿನ ಫಲಿತಾಂಶಗಳ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/-
ನಿಖಿಲ್ ಮಲ್ಲವರಪು
ಜಂಟಿ ವ್ಯವಸ್ಥಾಪಕ ನಿರ್ದೇಶಕರು
DIN : 00288551

ಸ್ಥಳ : ಬೆಂಗಳೂರು
ದಿನಾಂಕ : ನವೆಂಬರ್ 11, 2025



ಬುದ್ಧಿವಂತಿಕೆಯಿಂದ ಖರ್ಚು ಮಾಡುವುದು ಬುದ್ಧಿವಂತಿಕೆಯಿಂದ ಹೂಡಿಕೆ ಮಾಡುವುದರ ಒಂದು ಭಾಗ. ಈ ಕೆಲಸ ಮಾಡುವುದಕ್ಕೆ ಅವಕಾಶ ಯಾವತ್ತಿಗೂ ತೆರೆದಿರುತ್ತದೆ
ರೊಂಡಾ ಕಾಟ್ಸ್, ಆರ್ಥಿಕ ತಜ್ಞೆ

ದುಡ್ಡಿನಂಥಾ ಮಾತು

ಮುಂದಿನ ದಿನಗಳಲ್ಲಿ ಎಲ್ಲಿವೆ ಅವಕಾಶಗಳು?



• ವಿನೋದ್‌ನಾಯರ್

ದೇಶದ ಷೇರುಪೇಟೆಗಳಲ್ಲಿ ಹೊಸ ಬಲವೊಂದು ಕಾಣಿಸುತ್ತಿದೆ. ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) 'ನಿಫ್ಟಿ-50' ಸೂಚ್ಯಂಕವು 25 ಸಾವಿರ ಅಂಶಗಳ ಗಡಿಯನ್ನು ದಾಟಿದೆ. ಸೂಚ್ಯಂಕವು ಈ ಮಟ್ಟಕ್ಕಿಂತ ಕೆಳಕ್ಕೆ ಬರಲಿಕ್ಕಿಲ್ಲ ಎಂಬ ನಿರೀಕ್ಷೆ ಇದೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸುವ ಘೋಷಣೆ ಮಾಡಿದ ನಂತರ ಸೂಚ್ಯಂಕವು 24,400ಕ್ಕೆ ಬಂದಿತ್ತು. ಆದರೆ, ಕೇಂದ್ರ ಸರ್ಕಾರ ಇರಿಸಿದ ರಾಜತಾಂತ್ರಿಕ ಸಮತೋಲನದ ನಡೆ ಹಾಗೂ ಜಿಎಸ್‌ಟಿ ಸುಧಾರಣೆಗಳು ಹೂಡಿಕೆದಾರರ ವಿಶ್ವಾಸವನ್ನು ಮರುಸ್ಥಾಪಿಸುವಲ್ಲಿ ನೆರವಾದವು.

ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಾರುಕಟ್ಟೆಗಳಲ್ಲಿ ಎಫ್‌ಎಂಸಿಜಿ ವಲಯದ ಉತ್ಪನ್ನಗಳ ಮಾರಾಟವು ಮತ್ತೆ ಚೇತರಿಕೆ ಕಾಣುವ ನಿರೀಕ್ಷೆ ಇದೆ. ಮುಂಗಾರು ಚೆನ್ನಾಗಿ ಆಗಿರುವುದು, ಬಿತ್ತನೆ ಉತ್ತಮವಾಗಿರುವುದು, ಹಣದುಬ್ಬರ ಪ್ರಮಾಣ ಕಡಿಮೆ ಆಗಿರುವುದು ಗ್ರಾಮೀಣ ಪ್ರದೇಶಗಳ ಜನರ ಖರೀದಿ ಶಕ್ತಿಯನ್ನು ಹೆಚ್ಚು ಮಾಡುತ್ತಿವೆ.

ನೇರ ಹಾಗೂ ಪರೋಕ್ಷ ತೆರಿಗೆಗಳಲ್ಲಿ ಒಂದಿಷ್ಟು ವಿನಾಯಿತಿಗಳು ದೊರೆತಿರುವ ಕಾರಣದಿಂದಾಗಿ ಹಾಗೂ ಸರ್ಕಾರದ ನೆರವಿನ ಪರಿಣಾಮವಾಗಿ ನಗರ ಪ್ರದೇಶಗಳಲ್ಲಿಯೂ ಬೇಡಿಕೆಯು ಕ್ರಮೇಣ ಹೆಚ್ಚಾಗುವ ಸಾಧ್ಯತೆ ಇದೆ.

ಐ.ಟಿ. ವಲಯ

ಐ.ಟಿ. ವಲಯವು ಅಲ್ಪಾವಧಿಯಲ್ಲಿ ಕೆಲವು ಸವಾಲುಗಳನ್ನು ಎದುರಿಸುತ್ತಿದೆ. ಎಚ್‌-1ಬಿ ವೀಸಾ ಶುಲ್ಕವನ್ನು ತೀವ್ರವಾಗಿ ಹೆಚ್ಚಿಸಿರುವ ಕಾರಣದಿಂದಾಗಿ ಭಾರತದ ಐ.ಟಿ. ಕಂಪನಿಗಳು ಸ್ಥಳೀಯವಾಗಿ ನೇಮಕ ಮಾಡಿಕೊಳ್ಳುವುದಕ್ಕೆ, ಉಪ ಗುತ್ತಿಗೆ ನೀಡುವುದಕ್ಕೆ ಆದ್ಯತೆ ನೀಡುತ್ತಿವೆ. ಹೀಗಾಗಿ ಕಂಪನಿಗಳ ಲಾಭದ ಪ್ರಮಾಣವು ಅಲ್ಪಾವಧಿಯಲ್ಲಿ, ಮಧ್ಯಮಾವಧಿಯಲ್ಲಿ ಕಡಿಮೆ ಆಗಬಹುದು. ದೊಡ್ಡ ಕಂಪನಿಗಳು ವೆಚ್ಚ ಹೆಚ್ಚಳವನ್ನು ನಿಭಾಯಿಸಬಲ್ಲವಾದರೂ ವೀಸಾ ಮೇಲೆ ಅವಲಂಬಿತವಾಗಿರುವ ಮಧ್ಯಮ ಗಾತ್ರದ ಕಂಪನಿಗಳಿಗೆ ಕೆಲವು ಸಮಸ್ಯೆಗಳು ಎದುರಾಗಬಹುದು. ಆದರೆ ಅಮೆರಿಕದ ಫೆಡರಲ್ ರಿಸರ್ವ್ ಈ ವರ್ಷದಲ್ಲಿ ಎರಡು ಬಾರಿ ಬಡ್ಡಿ ದರ ಇಳಿಸಲಿದೆ ಎಂಬ ನಿರೀಕ್ಷೆಯು ಒಂದಿಷ್ಟು ಸಮಾಧಾನ ನೀಡುವಂತಿದೆ.

ಐ.ಟಿ. ವಲಯದಲ್ಲಿ ಇನ್ಫೊಸಿಸ್ ಲಿಮಿಟೆಡ್ ಕಂಪನಿಯು ಬಹಳ ಆಕರ್ಷಕವಾದ ದೀರ್ಘಾವಧಿ ಅವಕಾಶವನ್ನು ಹೂಡಿಕೆದಾರರಿಗೆ ನೀಡುತ್ತಿದೆ. ಕಂಪನಿಯ ಬಳಿಯಿರುವ ಕಾರ್ಯಾದೇಶಗಳು ದೊಡ್ಡದಿವೆ. 2025-26ನೇ ಹಣಕಾಸು ವರ್ಷಕ್ಕೆ ಕಂಪನಿಯ ಮುನ್ನೋಟವು ಸ್ಥಿರವಾಗಿದೆ. ಕಂಪನಿಯ ಷೇರು ಮೌಲ್ಯವು ಹೊಸ ಹೂಡಿಕೆಗೆ ಅನುಕೂಲಕರವಾಗಿದೆ.

ಆಟೊಮೊಬೈಲ್ ವಲಯದ ಮುನ್ನೋಟ ಕೂಡ ಚೆನ್ನಾಗಿದೆ. ಜಿಎಸ್‌ಟಿ ದರ ಇಳಿಕೆಯು ವಾಹನಗಳ ಬೆಲೆಯನ್ನು ತಗ್ಗಿಸಿದೆ. ಬಡ್ಡಿ ದರ ಕಡಿಮೆ ಇರುವುದು, ತೆರಿಗೆ ವಿನಾಯಿತಿಗಳು, ಮುಂದೆ 8ನೇ ವೇತನ ಆಯೋಗದ ಶಿಫಾರಸುಗಳು ಜಾರಿಗೆ ಬರಲಿರುವುದು ಜನವರ್ಗದ ಕೈಯಲ್ಲಿ ಖರ್ಚಿಗೆ ಹೆಚ್ಚು ಹಣವನ್ನು ಉಳಿಸಲಿದೆ. ಹಲವು ಅಂಶಗಳ ನೆರವಿನಿಂದ ಆಟೊಮೊಬೈಲ್ ವಲಯವು ಒಳ್ಳೆಯ ಬೆಳವಣಿಗೆ ಕಾಣಲು ಸಜ್ಜಾಗಿದೆ.

ಸರ್ಕಾರವು ಬಂಡವಾಳ ವೆಚ್ಚ ಹಾಗೂ ಆಧುನೀಕರಣಕ್ಕೆ ಆದ್ಯತೆ ನೀಡಿರುವುದರಿಂದಾಗಿ ದೇಶದ ಮೂಲಸೌಕರ್ಯ ವಲಯವು ಬೆಳವಣಿಗೆಗೆ ಸಜ್ಜಾಗಿದೆ. ಸಾರಿಗೆ ಕಾರಿಡಾರ್‌ಗಳು, ಸರಕು ಸಾಗಣೆ ವಲಯ, ಹೈಸ್ಪೀಡ್ ರೈಲು, ನವೀಕರಿಸಬಹುದಾದ ಇಂಧನ, ಕೈಗಾರಿಕಾ ಪಾರ್ಕ್‌ಗಳು ಹೂಡಿಕೆಯ ಪ್ರಮುಖವಾದ ಕ್ಷೇತ್ರಗಳು. ಖಾಸಗಿ ಮತ್ತು ಸರ್ಕಾರಿ ಪಾಲುದಾರಿಕೆ, ಆಸ್ತಿ ನಗದೀಕರಣಕ್ಕೆ ಪೂರಕವಾದ ನೀತಿಗಳು ಹಾಗೂ ಖಾಸಗಿ ಬಂಡವಾಳವನ್ನು ಆಕರ್ಷಿಸುವ ಸುಧಾರಣಾ ಕ್ರಮಗಳು ತಯಾರಿಕಾ ಚಟುವಟಿಕೆಗೆ ಉತ್ತೇಜನ ನೀಡುತ್ತಿವೆ. ಪ್ರಮುಖ ವಲಯಗಳಾದ ಉಕ್ಕು ಮತ್ತು ಸಿಮೆಂಟ್ ಹೆಚ್ಚಿನ ಬೇಡಿಕೆ ಕಾಣುತ್ತಿರುವುದು, ದತ್ತಾಂಶ ಕೇಂದ್ರಗಳು ಹಾಗೂ ಪರಿಸರ ಪೂರಕ ಇಂಧನ ಉತ್ಪಾದನೆಗೆ ಹೆಚ್ಚಿನ ಆಸಕ್ತಿ ಮೂಡುತ್ತಿರುವುದು ಧನಾತ್ಮಕ ಮುನ್ನೋಟವೊಂದನ್ನು ನೀಡುತ್ತಿವೆ.

ಆಕರ್ಷಕವಾಗಿರುವ ಎಫ್‌ಎಂಸಿಜಿ

ಷೇರುಗಳ ಮೌಲ್ಯವು ಈಗ ಐದು ವರ್ಷಗಳ ಸರಾಸರಿಗೆ ಹತ್ತಿರದಲ್ಲಿದೆ. ಈಗ ಈ ವಲಯವು ಹೆಚ್ಚು ಧನಾತ್ಮಕವಾಗಿ ಕಾಣುತ್ತಿದೆ. ಎಫ್‌ಎಂಸಿಜಿ ವಲಯದ ಪ್ರಮುಖ ಕಂಪನಿಗಳ ಪೈಕಿ ಹಿಂದುಸ್ತಾನ್ ಯೂನಿಲಿವರ್ ಕಂಪನಿಯ (ಎಚ್‌ಯುಎಲ್) ಷೇರು ಬಹಳ ಗಮನ ಸೆಳೆಯುವಂತೆ ಕಾಣುತ್ತಿದೆ. ಪ್ರೀಮಿಯಂ ವರ್ಗದ ಉತ್ಪನ್ನಗಳ ಮೇಲೆ ಗಮನ ನೀಡಿರುವುದು, ಹೊಸ ಆವಿಷ್ಕಾರಗಳಿಗೆ ಕಂಪನಿ ಆದ್ಯತೆ ನೀಡಿರುವುದು ಕಂಪನಿಯ ಒಟ್ಟಾರೆ ಸಾಧನೆಯು ಚೆನ್ನಾಗಿ ಆಗುವಂತೆ ಮಾಡುವ ನಿರೀಕ್ಷೆ ಇದೆ.

ತೆರಿಗೆ ಪರಿಷ್ಕರಣೆಯ ಪ್ರಯೋಜನ, ತಗ್ಗಿರುವ ಹಣದುಬ್ಬರ, 8ನೇ ವೇತನ ಆಯೋಗದ ಶಿಫಾರಸುಗಳು ಮುಂದೆ ಜಾರಿಗೆ ಬಂದಾಗ ಆಗುವ ಅನುಕೂಲ... ಇವೆಲ್ಲವುಗಳ ಪ್ರಯೋಜನವನ್ನು ಉತ್ತಮವಾಗಿ ಪಡೆಯುವ ಸ್ಥಿತಿಯಲ್ಲಿ ಎಚ್‌ಯುಎಲ್ ಇದೆ. ದೀರ್ಘಾವಧಿ ಹೂಡಿಕೆದಾರರಿಗೆ ಎಚ್‌ಯುಎಲ್ ಆರೋಗ್ಯಕರ-ವಾದ ಲಾಭ ನೀಡುವ ಸ್ಥಿತಿಯಲ್ಲಿದೆ.

ಅದೇ ರೀತಿ ಟಾಟಾ ಕನ್ಸ್ಯೂಮರ್ ಲಿಮಿಟೆಡ್ ಕೂಡ ತನ್ನ ವೈವಿಧ್ಯಮಯ ಉತ್ಪನ್ನಗಳ ಮೂಲಕ ಬೆಳವಣಿಗೆಯನ್ನು ಕಾಣುತ್ತಿದೆ. ಹೆಚ್ಚಿನ ಲಾಭದ ಪ್ರಮಾಣ ಇರುವ ಆರೋಗ್ಯ-ಕ್ಷೇಮ ವಲಯವನ್ನೂ ಅದು ಪ್ರವೇಶಿಸಿದೆ. ಈ ಕ್ರಮಗಳ ಪರಿಣಾಮವಾಗಿ ಟಾಟಾ ಕನ್ಸ್ಯೂಮರ್ ಕಂಪನಿಯ ವರಮಾನವು 2024-25ರಿಂದ 2026-27ರ ನಡುವೆ ಶೇ 27ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (ಸಿಎಜಿಆರ್) ಕಾಣುವ ಸಾಧ್ಯತೆ ಇದೆ.

ಈಗ ಕಾರ್ಪೊರೇಟ್ ಕಂಪನಿಗಳ ವರಮಾನ ಗಳಿಕೆಯಲ್ಲಿನ ಹೆಚ್ಚಳವು ಶೇಕಡ 10ರಷ್ಟು ಇದೆ. ಇದು ಈಗಿನ ಷೇರು ಮೌಲ್ಯಕ್ಕೆ ಸರಿಹೊಂದಬೇಕು ಎಂದಾದರೆ ಶೇ 15ರ ಮಟ್ಟಕ್ಕೆ ಬರಬೇಕು. ಲಾರ್ಜ್ ಕ್ಯಾಪ್ ವಲಯದ ಕಂಪನಿಗಳು ಈಚಿನ ತ್ರೈಮಾಸಿಕಗಳಲ್ಲಿ ಶೇ 7ರಿಂದ ಶೇ 8ರಷ್ಟು ಬೆಳವಣಿಗೆ ಸಾಧಿಸಿವೆ. ಈ ವರ್ಷದ ಮೂರನೆಯ ತ್ರೈಮಾಸಿಕದಿಂದ ಮುಂದಿನ ಹಂತದ ಬೆಳವಣಿಗೆ ಕಂಡುಬರುವ ನಿರೀಕ್ಷೆ ಇದೆ. ತೆರಿಗೆ ವಿನಾಯಿತಿ, ಜಿಎಸ್‌ಟಿ ಸುಧಾರಣೆ, ಖರ್ಚು ಮಾಡಲು ಕೈಯಲ್ಲಿ ಹೆಚ್ಚು ಹಣ ಉಳಿಯುತ್ತಿರುವುದು, ಹಣದುಬ್ಬರದ ಇಳಿಕೆ... ಇವೆಲ್ಲವೂ ಮುಂದಿನ ಹಂತದ ಬೆಳವಣಿಗೆಗೆ ನೆರವಾಗಿ ಬರಲಿವೆ. ಬೇಡಿಕೆ ಆಧರಿಸಿದ ದಿನಬಳಕೆ ವಸ್ತುಗಳಿಂದ ಆರಂಭಿಸಿ, ವಾಹನ ವಲಯದವರೆಗೆ ಎಲ್ಲವೂ ಹೆಚ್ಚಿನ ಪ್ರಯೋಜನ ಪಡೆಯಲು ಸಜ್ಜಾಗಿವೆ.


ಲೇಖಕ ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ

ನಿವೃತ್ತಿ ನಂತರದ ಬದುಕಿಗೆ ಸಿದ್ಧವೇ?



ನಿವೃತ್ತಿಯ ನಂತರ ಜೀವನವನ್ನು ಕೆಲಸದ ಒತ್ತಡಗಳಿಲ್ಲದೆ ಆರಾಮವಾಗಿ ಕಳೆಯಬೇಕು ಎಂದು ಭಾವಿಸುವವರು ಹಲವರಿದ್ದಾರೆ. ವೃತ್ತಿ ಬದುಕಿನ ಉದ್ದಕ್ಕೂ ಒತ್ತಡಗಳನ್ನು ಎದುರಿಸುತ್ತ ಬಂದವರು, ನಿವೃತ್ತಿಯ ನಂತರ ಒತ್ತಡಗಳು ಇಲ್ಲದ ಬದುಕನ್ನು ಹಂಬಲಿಸುವುದು ಸಹಜ. ಆದರೆ ನಿವೃತ್ತಿಯ ನಂತರದ ಖರ್ಚು-ವೆಚ್ಚಗಳಿಗಾಗಿ ಎಷ್ಟು ಮಂದಿ ಸಿದ್ಧತೆ ನಡೆಸಿದ್ದಾರೆ? ಈ ಕುರಿತು ಸಮೀಕ್ಷೆಯೊಂದು, ಒಂದು ನೋಟ ಹರಿಸಿದೆ...


ದುಡಿಯಲು ಆರಂಭಿಸಿದ ಕೂಡಲೇ ನಿವೃತ್ತಿ ನಂತರದ ಬದುಕಿನ ಕುರಿತೂ ಆಲೋಚಿಸಲು ಶುರುಮಾಡಬೇಕು ಎಂದು ಭಾವಿಸಿದವರು ಎಷ್ಟು?



ನಿವೃತ್ತಿ ನಂತರದ ಬದುಕಿಗಾಗಿ ಹೂಡಿಕೆ ಮಾಡಲು ಹೇಳಿದ್ದು ಯಾರು?


- 49% ಕುಟುಂಬದವರು, ಮಕ್ಕಳು, ಸಂಗಾತಿ
- 43% ಸ್ನೇಹಿತರು, ಸಹೋದ್ಯೋಗಿಗಳು
- 40% ಹಣಕಾಸು ಸಲಹೆಗಾರರು, ಸಿ.ಎ., ಏಜೆಂಟರು

ನಿವೃತ್ತಿ ನಂತರದ ಬದುಕಿಗಾಗಿ ಹೂಡಿಕೆ ಮಾಡಲು ಕಾರಣ ಏನು?



1. ವೈದ್ಯಕೀಯ ಹಾಗೂ ಇತರ ವೆಚ್ಚ ನಿಭಾಯಿಸಲು, ಹಣದುಬ್ಬರ ನಿಭಾಯಿಸಲು
2. ಹಣಕಾಸಿನ ಸ್ವಾತಂತ್ರ್ಯಕ್ಕಾಗಿ, ಸ್ಥಿರ ಆದಾಯಕ್ಕಾಗಿ
3. ಕುಟುಂಬದ ಯೋಗಕ್ಷೇಮ ನೋಡಿಕೊಳ್ಳುವುದಕ್ಕಾಗಿ, ಮಕ್ಕಳು, ಸಂಗಾತಿಯನ್ನು ನೋಡಿಕೊಳ್ಳುವುದಕ್ಕಾಗಿ
4. ನಿವೃತ್ತಿಯ ನಂತರವೂ ತಮ್ಮ ಜೀವನಮಟ್ಟವನ್ನು ಕಾಪಾಡಿಕೊಳ್ಳಲು
5. ಉದ್ದಿಮೆ ಶುರು ಮಾಡಲು, ಇಷ್ಟದ ಕೆಲಸಗಳನ್ನು ಮಾಡಿಕೊಂಡು ಇರಲು

ನಿವೃತ್ತಿಯ ನಂತರವೂ ಇದೇ ಜೀವನಶೈಲಿಯನ್ನು ಉಳಿಸಿಕೊಳ್ಳಲು ಬೇಕಿರುವ ಇಡುಗಂಟಿನ ಬಗ್ಗೆ ಅರಿವಿದೆಯೇ?



70% ನಿವೃತ್ತಿಯ ನಂತರದ ಆರಾಮವಾಗಿ ಜೀವನ ಸಾಗಿಸಲು ₹1 ಕೋಟಿ ಇಡುಗಂಟು ಸಾಕು ಎಂದು ಹೇಳಿದವರ ಪ್ರಮಾಣ

ನಿಮ್ಮ ಇಡುಗಂಟು ನಿವೃತ್ತಿಯ ನಂತರ ಎಷ್ಟು ವರ್ಷಕ್ಕೆ ಸಾಕು?			
37% 10 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಸಾಕು	30% 5ರಿಂದ 10 ವರ್ಷಕ್ಕೆ ಸಾಕು	25% 2ರಿಂದ 5 ವರ್ಷಕ್ಕೆ ಸಾಕು	8% ಗರಿಷ್ಠ 1 ವರ್ಷಕ್ಕೆ ಸಾಕಾಗಬಹುದು

ನಿವೃತ್ತಿಯ ನಂತರದ ಬದುಕಿಗಾಗಿ ಹೂಡಿಕೆ, ಯೋಜನೆ ರೂಪಿಸಲು ಅಡ್ಡಿ ಏನು?	
39%	ನಂಬಿಕಸ್ಥ ಸಲಹೆಗಾರ ಇಲ್ಲ, ಹೇಗೆ ಶುರು ಮಾಡಬೇಕು ಎಂಬುದು ಗೊತ್ತಿಲ್ಲ
36%	ಮಕ್ಕಳು ನಮ್ಮನ್ನು ನೋಡಿಕೊಳ್ಳುತ್ತಾರೆ
35%	ಕುಟುಂಬದ ಆಸ್ತಿಯೇ ಸಾಕಾಗುವಷ್ಟಿದೆ
33%	ನಿವೃತ್ತಿಯ ಬಗ್ಗೆ ಇಷ್ಟು ಬೇಗ ಆಲೋಚಿಸಬೇಕಾಗಿಲ್ಲ
35%	ಹೆಚ್ಚು ಮುಖ್ಯವಾದ ಇತರ ಸಂಗತಿಗಳು ಇವೆ

ಸಮೀಕ್ಷೆಯನ್ನು ಬೆಂಗಳೂರು, ಮೈಸೂರು ಸೇರಿದಂತೆ ದೇಶದ ಒಟ್ಟು 28 ನಗರಗಳಲ್ಲಿ ನಡೆಸಲಾಗಿದೆ. ಒಟ್ಟು 2,242 ಕುಟುಂಬಗಳು ಸಮೀಕ್ಷೆಯಲ್ಲಿ ಭಾಗಿಯಾಗಿವೆ. ವೇತನ ಪಡೆಯುವ ವರ್ಗ ಹಾಗೂ ಸ್ವ ಉದ್ಯೋಗದಲ್ಲಿ ತೊಡಗಿದವರು ಸಮಾನ ಪ್ರಮಾಣದಲ್ಲಿ ಸಮೀಕ್ಷೆಯಲ್ಲಿ ಭಾಗಿಯಾಗಿದ್ದಾರೆ.

ಆಧಾರ: ಎಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್ ಕಂಪನಿ ಸಿದ್ಧಪಡಿಸಿದ 'ಇಂಡಿಯಾ ರಿಟೈರ್‌ಮೆಂಟ್ ಇಂಡೆಕ್ಸ್ ಸ್ಟಡಿ 5.0' ವರದಿ
ಪ್ರ.ವಾ ಗ್ರಾಫಿಕ್/ ಎಐ ಚಿತ್ರ: ಕಣಕಾಲಮಠ

ಬ್ರೋಕರೇಜ್ ಮಾತು

ಟಾಟಾ ಪವರ್

ಟಾಟಾ ಪವರ್ ಕಂಪನಿಯ ಷೇರು ಮೌಲ್ಯವು ₹475ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಜೆಎಂ ಫೈನಾನ್ಶಿಯಲ್ ಹೇಳಿದೆ. ಟಾಟಾ ಪವರ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ₹15,500 ಕೋಟಿ ವರಮಾನ ಗಳಿಸಿದೆ. ಕಂಪನಿಯ ತೆರಿಗೆ ನಂತರದ ಲಾಭವು (ಪಿಎಟಿ) ₹920 ಕೋಟಿ ಆಗಿದೆ.

ಕಂಪನಿಯ ವಹಿವಾಟುಗಳಲ್ಲಿ ಒಂದಾಗಿರುವ, ಮನೆಗಳ ಮೇಲ್ಚಾವಣಿ ಮೇಲಿನ ಸೌರವಿದ್ಯುತ್ ಫಲಕ ಅಳವಡಿಕೆಯು ವೇಗ ಪಡೆದುಕೊಂಡಿರುವುದು ಸೇರಿದಂತೆ ಹಲವು ಯೋಜನೆಗಳು ಈ ಕಂಪನಿಯ ಬಗ್ಗೆ ತಾನು ಧನಾತ್ಮಕ ಅಭಿಪ್ರಾಯವನ್ನು ಮುಂದುವರಿಸಿರುವುದಕ್ಕೆ ಕಾರಣವಾಗಿವೆ ಎಂದು ಜೆಎಂ ಫೈನಾನ್ಶಿಯಲ್ ಹೇಳಿದೆ. 2027-28ನೇ ಹಣಕಾಸು ವರ್ಷದವರೆಗೆ ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಶೇ 8ರಷ್ಟು, ಕಂಪನಿಯ ತೆರಿಗೆ ನಂತರದ ಲಾಭದ ಸಿಎಜಿಆರ್ ಪ್ರಮಾಣವು ಶೇ 12ರಷ್ಟು ಇರುವ ನಿರೀಕ್ಷೆ ಇದೆ ಎಂದು ಜೆಎಂ ಫೈನಾನ್ಶಿಯಲ್ ಹೇಳಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಟಾಟಾ ಪವರ್ ಕಂಪನಿಯ ಷೇರುಮೌಲ್ಯವು ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ₹388.55 ಆಗಿತ್ತು.

ಸಫಾರಿ ಇಂಡಸ್ಟ್ರೀಸ್

ವಿವಿಧ ರೀತಿಯ ಬ್ಯಾಗ್‌ಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ಸಫಾರಿ ಇಂಡಸ್ಟ್ರೀಸ್ (ಇಂಡಿಯಾ) ಕಂಪನಿಯ ಷೇರಿನ ಬೆಲೆ ₹2,700ಕ್ಕೆ ತಲುಪಲಿದೆ ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

2024-25ರ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ಬಾರಿಯ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನದಲ್ಲಿ ಶೇ 16.5ರಷ್ಟು ಹೆಚ್ಚಳವಾಗಿದ್ದರೆ, ಮಾರಾಟದ ಪ್ರಮಾಣವು ಶೇ 16ರಷ್ಟು ಹೆಚ್ಚಳವಾಗಿದೆ. ಸೆಪ್ಟೆಂಬರ್ ತಿಂಗಳ ಹಬ್ಬದ ಋತುವಿನಲ್ಲಿ ಮಾರಾಟ ಹೆಚ್ಚಳವಾಗಿದೆ. ಒಟ್ಟು ಮಾರಾಟದಲ್ಲಿ ಇ-ಕಾಮರ್ಸ್ ಮೂಲಕ ನಡೆದ ಮಾರಾಟದ ಪಾಲು ಅರ್ಧದಷ್ಟಿದೆ.

ರಿಯಾಯಿತಿ ನೀಡುವುದರಲ್ಲಿ ಇಳಿಕೆ, ಕಚ್ಚಾ ವಸ್ತುಗಳ ಬೆಲೆ ಕಡಿಮೆ ಆಗಿರುವುದರಿಂದ ಲಾಭದ ಪ್ರಮಾಣ ಶೇ 47.1ರಷ್ಟಾಗಿದೆ. ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು ಶೇ 13.9ರಷ್ಟಾಗಿದೆ. ಕಂಪನಿಯು ಪ್ರತಿ ತಿಂಗಳು 4ರಿಂದ 5 ಹೊಸ ಮಳಿಗೆಗಳನ್ನು ತೆರೆಯುತ್ತಿದೆ ಎಂದು ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಮೌಲ್ಯ ₹2177.15 ಇತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಇಂಗ್ಲಿಷ್

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

Second Language ENGLISH

The Concert

8. Read the last paragraph, which very effectively but briefly describes the end. Exchange your feedings with your partner.

Ans: The last paragraph evokes in the readers a mixed response. On the one hand it's heartening to know that the wish of the ailing boy is fulfilled. On the other, it's heart breaking to know that the boy died while listening to his favourite Sitar music. However, Smita, her parents, the musicians and all the dear ones of the boy would have moments of satisfaction of fulfilling what can be termed the last desire of the boy.

9. Can you say that the concert was entertaining to Smita? Justify your answer

Ans: Yes, it was more than entertaining for Smita because when she listened to the music, it was as if the gates of enchantment and wonder were opening. She had listened to music in a spellbound state. However, we cannot forget the fact that one part of her kept remembering the wish of her brother and the anxiety of not knowing whether the maestro would agree to come and play for the boy must have been agonising for Smita.

10. Smita was nervous as she stood before the wizard. Which sentence suggests this?

Ans: Smita was nervous as she stood before the wizard. This suggests in the following sentences.

i) her heart beating loudly.
ii) her knees felt weak.
iii) her tongue dry

11. Did Pandit Ravi Shankar and Ustad Allah Rakha perform in the boy's house? Do you think this was an unusual incident? If yes, give reasons.

Ans: Yes, it was certainly an unusual incident. We do not expect such distinguished artistes to give private performances. In fact, getting their dates even for public performances is an uphill task. Moreover, Smita's family is not an influential or wealthy family. Aunt Sushila's apartment was a small one. All these reasons make the incident extraordinary.

Think About The Text

1.Do you like the story? Why?

I like/don't like, because.....(One reason . is given. You may give as many other reasons as you like)

Ans: I like this story because

a) This is a story about music.
b) This is a real story.
c) This story has a good feel.
d) This is a story about a great person.
e) This story emphasizes the humanity and kindness.
f) This story shows compassion.

2. In your opinion, which words in the list below describe Anant's character or state? Write Yes/No in the space given.

[Refer to a dictionary for the words that you are not sure of]

The boy is ....

a. energetic ....
b. robust ....
c. aesthetic ....
d. imaginative ....
e. confident ....

Ans:- a. energetic - No
b. robust - No
c. aesthetic - Yes
d. imaginative- No
e. confident - Yes

3. Look at the following phrases in the lesson. They are description Categorise them in columns 'A' and 'B' appropriately, {spellbound; unfolding the gates of enchantment; plaintive notes; fast twinkling ones first notes; wonder; dream; unfolding ragas}.

A	B
Descriptive of music	Descriptive of Smita's feelings

Ans:

A	B
Descriptive of music	Descrptive of Smita's feelings
first notes	spellbound
unfolding ragas	wonder
plaintive notes	dream
fast twinkling ones	unfolding the gates of enchantment

1. Ustad Sahib and Pandit Ravi Shankar agreed to perform for the boy. What made them agree to do so? What would have you done if you were the musician?

Ans: Ustad Sahib and Pandit Ravi Shankar agreed to perform for the boy. The boy was in the last stage of his life. His last desire was this. And he was not able to come and attend the concert. Because of his pitiable condition, they agreed to do so.

Whoever may be in that situation not only I, everyone should do the same

(Contd.....)

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ | Biology

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MOLECULAR BASIS OF INHERITANCE

11. Write a note on autosomal disorders.

Ans:- (e) Myotonic Dystrophy – It is a rare, slow progressing autosomal dominant disorder which is characterised by the increased muscular irritability and contractility with decreasing relaxation

(.....Contd)

that leads to atrophy of muscles, especially of face and neck, cataracts, hypogonadism, frontal balding and cardiac abnormalities.

(f) Haemophilia – It is a **sex linked recessive** disorder by John Otto (1803). The defect is known as bleeder's disease because the exposed blood of haemophiliac patient fails to coagulate due to deficiency of blood clotting **factor VIII (antihaemophilia globulin,** 80%) or factor **IX (plasma thromboplastin,** 20%).


The two types of haemophilia are haemophilia **A** and haemophilia **B**.

Haemophilia B is also known as **Christmas disease**. The defect has been inherited by many royal families of Europe through queen Victoria. Human females are generally carrier of this disorder and remain normal throughout their life.


If double recessive condition appears in a female, the same dies before birth. Human males suffer from this disorder because of the hemizygous nature of most sex linked traits.

The defective males must be given either blood transfusion or the required clotting factor if they are to lead a normal life. Otherwise even a small cut will cause loss of blood from the whole body so as to kill the individual.

(i) Marriage between a carrier woman (XX^h) and a normal man (XY) will produce normal girl, carrier girl, normal boy and haemophiliac boy in the ratio of 1 : 1 : 1 : 1.




(ii) The marriage between haemophiliac man (X^hY) and normal woman (XX) will produce normal boys and carrier girls.



(iii) A marriage between a haemophiliac man (X^hY) and a carrier woman (XX^h) will produce haemophiliac girl, carrier girl, haemophiliac boy and normal boy in the ratio of 1 : 1 : 1 : 1. But, haemophiliac girl dies in the foetus state.

∴ all the girls will be carrier girls as below –



(g) Red Green Colour Blindness - It is a **recessive** sex linked disorder in which the patient cannot distinguish red-green colours. The defect is not lethal in homozygous state. Therefore, it occurs in women also. Hemizygous condition is enough for the occurrence of defect in males. The famous scientist Dalton suffered from disorder. Because of his association with the genetic defect, red-green colour blindness is also known as **Daltonism.** Colour blindness is, actually, of three types - (i) Protanopia-**red colour blindness,**

(ii) **Tritanopia**- blue colour blindness,

(iii) **Deuternopia-** green colour blindnes

(i) Sex Chromosome Aberrations

(a) Turner's Syndrome (44 + XO)

That is undeveloped breasts, sparse pubic hair, small uterus, absence of menstrual cycle), reduced ovaries, sterility, broad chest with widely spaced nipples, abnormal jaw formation and often subnormal intelligence.

(b) Klinefelter's Syndrome(44 + XXY/XXXY)

The individuals are phenotypically male. The defect appears due to fusion of egg having unreduced sex complement (A + XX) with normal androsperm (A + Y) or sperm with unreduced sex complement (A + XY) and a normal (A + X) or abnormal egg (A + XX). Total number of chromosomes is 47 or 48.

(Contd............)

ಮೀಸಲಾತಿ ಅಧಿಸೂಚನೆ: ನೋಟಿಸ್

ಹೈಕೋರ್ಟ್ ಮೆಟ್ಟಿಲೇರಿದ ರಾಜ್ಯ ಚುನಾವಣಾ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ವರ್ಷ ಜನವರಿಯಲ್ಲಿ ಅವಧಿ ಪೂರ್ಣಗೊಳ್ಳಲಿರುವ 5,950 ಗ್ರಾಮ ಪಂಚಾಯಿತಿಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸಲು ಅನುಕೂಲವಾಗುವಂತೆ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲು ತಕ್ಷಣವೇ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್ ಮೆಟ್ಟಿಲೇರಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, 'ಇದೊಂದು ಗಂಭೀರ ವಿಷಯವಾಗಿದ್ದು, ಸರ್ಕಾರದಿಂದ ಅಗತ್ಯ ಮಾಹಿತಿಗಳನ್ನು ಪಡೆದು ಎರಡು ವಾರಗಳಲ್ಲಿ ನ್ಯಾಯಾಲಯಕ್ಕೆ ತಿಳಿಸಬೇಕು' ಎಂದು ಸರ್ಕಾರಿ ವಕೀಲರಿಗೆ ಸೂಚಿಸಿ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 11ಕ್ಕೆ ಮುಂದೂಡಲಾಗಿದೆ.

ತನಿಖೆಯ ಮಧ್ಯಂತರ ತಡೆ ತೆರವು



ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಪ್ರಕರಣ

ಬೆಂಗಳೂರು: ಧರ್ಮಸ್ಥಳ ಸುತ್ತಮುತ್ತ ನೂರಾರು ಶವಗಳನ್ನು ಸಾಮೂಹಿಕವಾಗಿ ಹೂಳಲಾಗಿದೆ ಎನ್ನಲಾದ ಆರೋಪ ಕುರಿತು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದ ಮುಂದಿನ ಎಲ್ಲ ಪ್ರಕ್ರಿಯೆಗೆ ನೀಡಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ತೆರವುಗೊಳಿಸಿದೆ.

ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣಕ್ಕೆ ಸಂಬಂಧಿಸಿದ ಎಫ್‌ಐಆರ್ (ಎಫ್‌ಐಆರ್ ಸಂಖ್ಯೆ 39/2025), ವಿಚಾರಣೆಗೆ ಹಾಜರಾಗಲು ಪೊಲೀಸರು ನೀಡಿರುವ ನೋಟಿಸ್ ಹಾಗೂ ಬೆಳ್ತಂಗಡಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ರದ್ದು ಕೋರಿ ಗಿರೀಶ್ ಮಟ್ಟಣ್ಣನವರ್ ಸೇರಿದಂತೆ ನಾಲ್ವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಎಫ್‌ಐಆರ್‌ಗೆ ತಡೆ ನೀಡಿ ಅಕ್ಟೋಬರ್ 30ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ತೆರವುಗೊಳಿಸಿತು. ಅರ್ಜಿಯನ್ನು ಮೆರಿಟ್ ಆಧಾರದಲ್ಲಿ ವಿಚಾರಣೆ ನಡೆಸುವುದಾಗಿ ತಿಳಿಸಿ, ವಿಚಾರಣೆಯನ್ನು ನವೆಂಬರ್ 28ಕ್ಕೆ ಮುಂದೂಡಿತು. ರಾಜ್ಯ ಸರ್ಕಾರದ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದರು.

ತಾಲ್ಲೂಕು ಆಸ್ಪತ್ರೆಗಳಲ್ಲಿ ಇಎನ್‌ಟಿ ಶಸ್ತ್ರಚಿಕಿತ್ಸೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಲ್ಲೂಕು ಆಸ್ಪತ್ರೆಗಳಲ್ಲಿ ಕಿವಿ, ಮೂಗು, ಗಂಟಲು (ಇಎನ್‌ಟಿ) ಶಸ್ತ್ರಚಿಕಿತ್ಸಾ ಸೇವೆ ಒದಗಿಸುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ದ್ವಿತೀಯ ಹಂತದ ಸೇವೆಗಳನ್ನು ಬಲಪಡಿಸಲು ತಾಲ್ಲೂಕು ಮಟ್ಟದ ಆರೋಗ್ಯ ಸಂಸ್ಥೆಗಳಲ್ಲಿ ಇಎನ್‌ಟಿ ಸೌಲಭ್ಯ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಧ್ವನಿ ನಿರೋಧಕ ಕೊಠಡಿಗಳಲ್ಲಿ 'ಪ್ಯೂರ್ ಟೋನ್ ಆಡಿಯೊಮೆಟ್ರಿ' ಸೌಲಭ್ಯ ಇರುವುದರಿಂದ, ಆ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದಲ್ಲಿ 'ಆಡಿಯಾಲಜಿಸ್ಟ್' ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ತಿಳಿಸಲಾಗಿದೆ.

ಬೂತ್‌ಲೆಸ್ ಆಡಿಯೋಮೀಟರ್‌ಗಳನ್ನು ನಿರ್ವಹಿಸಲು 'ಆಡಿಯಾಲಜಿಸ್ಟ್'ಗಳು ಅಗತ್ಯವಿಲ್ಲದಿರುವುದರಿಂದ, ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಬೂತ್‌ಲೆಸ್ ಆಡಿಯೋಮೀಟರ್‌ಗಳನ್ನು ಒದಗಿಸಬೇಕು ಎಂದು ಹೇಳಲಾಗಿದೆ.

ಆಂಬುಲೆನ್ಸ್: ತಂತ್ರಾಂಶದ ಮೂಲಕ ನಿಗಾ




ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 1,270 ಆಂಬುಲೆನ್ಸ್‌ಗಳ ಮೇಲೆ ನಿಗಾವಹಿಸಲು ಎನ್‌ಜಿ-ಇಆರ್‌ಎಸ್‌ಎಸ್ 112 ತಂತ್ರಾಂಶ ಅಳವಡಿಸಿಕೊಳ್ಳಲಾಗುತ್ತಿದೆ. ತುರ್ತು ಸಂದರ್ಭದಲ್ಲಿ ಪ್ರಕರಣಗಳ ನಿರ್ವಹಣೆಗೆ ಇದು ಸಹಕಾರಿಯಾಗಲಿದೆ.

ಈ ಸಂಬಂಧ ಆಂಬುಲೆನ್ಸ್‌ಗಳಿಗೆ 'ಮೊಬೈಲ್ ಡೇಟಾ ಟರ್ಮಿನಲ್' ಉಪಕರಣಗಳನ್ನು ಅಳವಡಿಸಬೇಕಿದೆ. ಪ್ರತಿ ಉಪಕರಣಕ್ಕೆ ₹35 ಸಾವಿರದಂತೆ ಒಟ್ಟು ₹4.45 ಕೋಟಿ ಅನುದಾನವನ್ನು ರಾಜ್ಯ ರಸ್ತೆ ಸಾರಿಗೆ ಸುರಕ್ಷತಾ ನಿಧಿಯಿಂದ ಭರಿಸಲು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

'ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಿ'



ಆರ್. ಅಶೋಕ

ಬೆಂಗಳೂರು: ಸೂಕ್ತ ಬೆಂಬಲ ಬೆಲೆ ನೀಡಿ ಮೆಕ್ಕೆ ಜೋಳ ಖರೀದಿಸುವಂತೆ ರೈತರು ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದಾರೆ. ಆದರೆ, ಸಿದ್ದರಾಮಯ್ಯ ನೇತೃತ್ವದ ರೈತ ವಿರೋಧಿ ಸರ್ಕಾರ ಈವರೆಗೆ ಒಂದೇ ಒಂದು ಖರೀದಿ ಕೇಂದ್ರವನ್ನೂ ತೆರೆದಿಲ್ಲ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಕಿಡಿ ಕಾರಿದ್ದಾರೆ.

ಕಾಲಹರಣ ಮಾಡದೇ ಕೂಡಲೇ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು. ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ಎಚ್ಚರಿಕೆ ನೀಡಿದರು.

'ಈರುಳ್ಳಿ ಬೆಳೆಗಾರರು ಬೆಲೆ ಕುಸಿತದಿಂದ ಕಂಗಾಲಾಗಿದ್ದಾರೆ. ಮಾರುಕಟ್ಟೆಯಲ್ಲಿ ಸಿಗುತ್ತಿರುವ ದರ ಕಳೆ ಕೀಳಿಸಿದ ಕೂಲಿಯ ಹಣಕ್ಕಿಂತಲೂ ಕಡಿಮೆ ಇದೆ. ಇಂತಹ ಸ್ಥಿತಿಯಲ್ಲಿ ನೆರವಿಗೆ ಧಾವಿಸಿ ಈರುಳ್ಳಿ ಖರೀದಿಸಲು ಕ್ರಮ ಕೈಗೊಳ್ಳಬೇಕಿದ್ದ ಸರ್ಕಾರ ಮೀನ-ಮೇಷ ಎಣಿಸುತ್ತಿದೆ. ಮಾತು-ಮಾತಿಗೆ ತಮ್ಮದು ರೈತ ಪರ ಸರ್ಕಾರ ಎಂದು ಸಿದ್ದರಾಮಯ್ಯ ಬೆನ್ನು ತಟ್ಟಿಕೊಳ್ಳುತ್ತಾರೆ. ಇದೇನಾ ರೈತರ ಪರವಾದ ಕಾಳಜಿ' ಎಂದು ಪ್ರಶ್ನಿಸಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಐಶ್ವರ್ಯವನ್ನು ಸಂಪಾದಿಸದೆ ಅದನ್ನು ಅನುಭವಿಸಲು ಯಾರಿಗೂ ಹಕ್ಕಿಲ್ಲ.


–ಜಾರ್ಜ್ ಬರ್ನಾಡ್ ಷಾ

ಸಂಪಾದಕೀಯ

ಜೈಲುಗಳ ತೀವ್ರ ಅನಾರೋಗ್ಯ ಬೇರುಮಟ್ಟದ ಚಿಕಿತ್ಸೆ ಅಗತ್ಯ

ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಅಪರಾಧಿಗಳು ಮತ್ತು ಶಂಕಿತ ಭಯೋತ್ಪಾದಕರು ವಿಶೇಷ ಸವಲತ್ತುಗಳನ್ನು ಅನುಭವಿಸುತ್ತಿರುವ ವಿಡಿಯೊಗಳು ಬೆಳಕಿಗೆ ಬಂದಿವೆ. ಇದು ಅನಿರೀಕ್ಷಿತ ಅಥವಾ ಆಕಸ್ಮಿಕ ಘಟನೆಯೇನಲ್ಲ; ಚಿಕಿತ್ಸೆ ದೊರಕದ ಉಳಿದಿರುವ ದೀರ್ಘಕಾಲೀನ ರೋಗದ ಲಕ್ಷಣವಾಗಿದೆ. ದುರ್ಬಲ ಗೋಡೆಗಳು, ರಾಜಿ ಮನೋಭಾವದ ವಾರ್ಡನ್‌ಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದ ಮರೆಯಲ್ಲಿ ಶಿಕ್ಷೆಯ ಭಯವಿಲ್ಲದೆ ನಡೆಯುತ್ತಿರುವ ಚಟುವಟಿಕೆಗಳಿಂದ ರಾಜ್ಯದ ಜೈಲುಗಳು ಗಳಿಸಿರುವ ಕುಖ್ಯಾತಿಗೆ ದಶಕಗಳ ಇತಿಹಾಸವಿದೆ. ಇತ್ತೀಚೆಗೆ ಹೊರಬಿದ್ದಿರುವ ದೃಶ್ಯಗಳು ಆಘಾತ ಉಂಟು ಮಾಡುವಂತಿದ್ದರೂ, ಅನಿರೀಕ್ಷಿತವೇನೂ ಅಲ್ಲ. ಭಯೋತ್ಪಾದಕ ಸಂಘಟನೆಗಳಿಗೆ ಯುವಜನರನ್ನು ಸೇರಿಸುತ್ತಿದ್ದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ, ಐಎಸ್ ಸಂಪರ್ಕ ಹೊಂದಿರುವ ಆರೋಪಿ ಜುಹಾದ್ ಹಮೀದ್ ಶಕೀಲ್ ಮನ್ನಾ ತನ್ನ ಸೆಲ್‌ನಲ್ಲಿ ಸ್ಮಾರ್ಟ್ ಫೋನ್ ಬಳಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಕುಖ್ಯಾತ ರೌಡಿಯೊಬ್ಬ ಕಾರಾಗೃಹದಲ್ಲೇ ಹುಟ್ಟುಹಬ್ಬ ಆಚರಿಸಿದ ಮತ್ತೊಂದು ವಿಡಿಯೊ ಇತ್ತೀಚೆಗಷ್ಟೇ ಸಾರ್ವಜನಿಕಗೊಂಡಿತ್ತು.

ಕಾರಾಗೃಹದಲ್ಲಿನ ಕಾನೂನುಬಾಹಿರ ಚಟುವಟಿಕೆಗಳು ಪ್ರತಿ ಸಲ ಬಯಲಾದಾಗಲೂ, ಎದುರಾಗುವ ಪ್ರತಿಕ್ರಿಯೆ ಒಂದೇ ಬಗೆಯದಾಗಿರುತ್ತದೆ: ಘಟನೆಯ ಬಗ್ಗೆ ಆಕ್ರೋಶ, ಕೆಲವು ಅಧಿಕಾರಿಗಳ ಅಮಾನತು ಹಾಗೂ ಸುಧಾರಣೆಯ ಭರವಸೆ. ಈ ಬಾರಿಯೂ ಸರ್ಕಾರದಿಂದ ಪ್ರತಿಕ್ರಿಯೆ ನಿರೀಕ್ಷಿತವಾದುದೇ ಆಗಿದೆ. ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾಯಿಸಲಾಗಿದ್ದರೆ, ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಲಾಗಿದೆ. ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಇದೇ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ಶು ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ರಾಜ್ಯದ ಎಲ್ಲ ಕಾರಾಗೃಹಗಳ ಬಗ್ಗೆ ಸಮಗ್ರ ವರದಿ ನೀಡುವಂತೆ, ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಆರ್. ಹಿತೇಂದ್ರ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಒಂದು ತಿಂಗಳೊಳಗೆ ವರದಿ ನೀಡುವಂತೆ ಗೃಹ ಸಚಿವ ಜಿ. ಪರಮೇಶ್ವರ ಸೂಚಿಸಿದ್ದಾರೆ. ಎಲ್ಲ ಜೈಲುಗಳಲ್ಲಿನ ಸಿಸಿಟಿವಿ ದೃಶ್ಯಗಳ ಮೇಲ್ವಿಚಾರಣೆಗೆ ಕಮಾಂಡ್ ಸೆಂಟರ್ ಸ್ಥಾಪಿಸುವುದರ ಜೊತೆಗೆ, ಮೊಬೈಲ್ ಜಾಮರ್‌ಗಳು ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಪರಿಶೀಲನೆ ನಡೆಸುವುದಾಗಿ ಸರ್ಕಾರ ಹೇಳಿದೆ; ಹೊಸತಾಗಿ ಸಿಸಿಟಿವಿಗಳ ಅಳವಡಿಕೆಗೆ ₹2 ಕೋಟಿ ಹಾಗೂ ಸಂವಹನ ಗೋಪುರಗಳಿಗಾಗಿ ₹15 ಕೋಟಿ ನೀಡಲು ಅನುಮೋದನೆ ನೀಡಿದೆ. ಹೊಸ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯೂ ಆರಂಭಗೊಳ್ಳುವ ಸಾಧ್ಯತೆಯಿದೆ.



ವರ್ಗಾವಣೆ, ಅಮಾನತು ರೀತಿಯ ಕ್ರಮಗಳಿಂದ ಜೈಲುಗಳ ಸುಧಾರಣೆ ಸಾಧ್ಯವಿಲ್ಲ. ಬೇರುಮಟ್ಟಕ್ಕೆ ಅಂಟಿರುವ ರೋಗವನ್ನು ಗುಣಪಡಿಸಲು ದೊಡ್ಡ ಪ್ರಮಾಣದ ದುರಸ್ತಿ ನಡೆಯಬೇಕಾಗಿದೆ.

ಜೈಲುಗಳ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಸ್ವಾಗತಾರ್ಹ. ಆದರೆ, ಈ ಪ್ರಯತ್ನ ಸಮಸ್ಯೆಯ ಮೇಲ್ಪದರವನ್ನು ಸ್ಪರ್ಶಿಸುವಂತಿದೆಯೇ ಹೊರತು, ಬೇರುಮಟ್ಟದಲ್ಲಿ ನಿರ್ಮೂಲನಗೊಳಿಸುವಷ್ಟು ಪರಿಣಾಮಕಾರಿ ಆಗಿಲ್ಲ. ಸ್ಮಾರ್ಟ್ ಫೋನ್‌ಗಳು ಹಾಗೂ ಸಿಮ್ ಕಾರ್ಡ್‌ಗಳನ್ನು ಕಾರಾಗೃಹದೊಳಗೆ ಸಾಗಿಸಿದ್ದು ಹೇಗೆ? ಜಾಮರ್‌ಗಳ ಕಾರ್ಯನಿರ್ವಹಣೆಯ ನಡುವೆಯೂ ಫೋನ್‌ಗಳ ಬಳಕೆ ಸಾಧ್ಯವಾದುದು ಹಾಗೂ ವಿಡಿಯೊ ಚಿತ್ರೀಕರಣ ನಡೆದುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರವು, ಭ್ರಷ್ಟ ಅಧಿಕಾರಿಗಳು ನೀಡುತ್ತಿರುವ ಕುಮ್ಮಕ್ಕಿಗೆ ಸಂಬಂಧಿಸಿದ್ದಾಗಿದೆ. ಆಳವಾಗಿ ಬೇರುಬಿಟ್ಟಿರುವ ಅವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಎಲ್ಲ ಸರ್ಕಾರಗಳೂ ವಿಫಲವಾಗಿವೆ. ತಲೆದಂಡ ಆಗಬೇಕಿದ್ದವರು ಸುರಕ್ಷಿತವಾಗಿ ಉಳಿದು, ಮಧ್ಯಮ ಹಾಗೂ ಕೆಳಹಂತದ ಅಧಿಕಾರಿಗಳಷ್ಟೇ ಶಿಕ್ಷೆಗೆ ಗುರಿಯಾಗುತ್ತಾರೆ. ಶಂಕಿತ ಭಯೋತ್ಪಾದಕರು ಹಾಗೂ ಗಂಭೀರ ಅಪರಾಧ ಕೃತ್ಯಗಳನ್ನು ಎಸಗಿದವರು, ಬಹು ಸುರಕ್ಷಿತ ಕಾರಾಗೃಹ ಪರಿಸರವನ್ನು ತಮ್ಮ ಖಾಸಗಿ ಪಡಸಾಲೆಗಳನ್ನಾಗಿ ಬದಲಾಯಿಸಿಕೊಳ್ಳಲು ಸಾಧ್ಯವಾಗುತ್ತಿರುವುದು ಕಾನೂನು ಪಾಲನೆಯ ಕೊರತೆಯನ್ನು ಸೂಚಿಸುವುದರ ಬದಲಾಗಿ, ಅಲ್ಲಿ ಕಾನೂನೇ ಇಲ್ಲದಿರುವುದರ ಸಂಕೇತದಂತಿದೆ. ಕಾರಾಗೃಹಗಳ ಸುಧಾರಣೆಯ ಬಗ್ಗೆ ಸರ್ಕಾರ ಗಂಭೀರವಾಗಿದ್ದಲ್ಲಿ, ವರ್ಗಾವಣೆ ಮತ್ತು ಅಮಾನತು ರೀತಿಯ ಕ್ರಮಗಳಾಚೆಗೆ ಕಾರ್ಯಪ್ರವೃತ್ತ ಆಗಬೇಕಿದೆ. ಜೈಲುಗಳನ್ನು ಜೈಲುಗಳನ್ನಾಗಿಯೇ ಉಳಿಸಬೇಕಾದಲ್ಲಿ ಅಲ್ಲಿನ ಆಡಳಿತವನ್ನು ವೃತ್ತಿಪರವನ್ನಾಗಿಸಬೇಕು, ಉತ್ತರದಾಯಿಯನ್ನಾಗಿಸಬೇಕು, ಆ ಮೂಲಕ ವ್ಯವಸ್ಥೆಯಲ್ಲಿನ ಕೊಳಕನ್ನು ತೊಳೆಯಬೇಕಾಗಿದೆ. ಇದನ್ನು ಮಾಡದೆ ಹೋದರೆ, ಮುಂದಿನ ಹಗರಣ ಯಾವಾಗ ಎಂದು ಜನ ನಿರೀಕ್ಷಿಸುವಂತಾಗುತ್ತದೆ.

ಚಾಟಿ

ವಿಭಜನೆ ಮಾತು ಸಲ್ಲ



ಪ್ರತಾಪ್ ಸಿಂಹ ಹೇಳುತ್ತಾರೆ: 'ಪುರುಸೊತ್ತಿಲ್ದೆ ಮಕ್ಕಳನ್ನು ಹುಟ್ಟಿಸುವುದಷ್ಟೇ ಮುಸ್ಲಿಮರ ಕೆಲಸವಾಗಿದೆ'. ವಿಭಜನೆ ಉಂಟುಮಾಡುವ ಇಂಥ ಮಾತುಗಳನ್ನು ಖಂಡಿಸಲೇಬೇಕು. ಸತ್ಯ ಏನೆಂದರೆ, ಪ್ರಪಂಚದಾದ್ಯಂತ ಬಡವರು ಮತ್ತು ಶಿಕ್ಷಣದಿಂದ ವಂಚಿತರಾದವರು ಹೆಚ್ಚು ಮಕ್ಕಳನ್ನು ಹೊಂದುತ್ತಾರೆ.

ಚೇತನ್ 'ಅಹಿಂಸಾ', ನಟ, 'ಎಕ್ಸ್'ನಿಂದ

ಕಿಡಿನುಡಿ



ದೆಹಲಿಯಲ್ಲಿ ಭಯೋತ್ಪಾದನಾ ದಾಳಿಯ ನಡುವೆಯೂ ಪ್ರಧಾನಿ ಮೋದಿ ಭೂತಾನ್‌ಗೆ ದೌಡಾಯಿಸಿದ್ದು ಏಕೆ? ಉತ್ತರ ಬಹಳ ಸರಳ. ಅವರು ತಮ್ಮ ಆತ್ಮೀಯ ಸ್ನೇಹಿತ ಅದಾನಿಗಾಗಿ ಒಪ್ಪಂದವನ್ನು ಮಾಡಿಕೊಳ್ಳುವ ಆದ್ಯ ಕರ್ತವ್ಯವನ್ನು ಪಾಲಿಸಬೇಕಾಗಿತ್ತು.

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 13-11-2000

• **ಕಾಂಗ್ರೆಸ್ ಅಧ್ಯಕ್ಷ ಸ್ಥಾನ: ಮತದಾನ ಶಾಂತಿಯುತ**

ನವದೆಹಲಿ, ನ. 12 (ಪಿಟಿಐ, ಯುಎನ್‌ಐ)– ಲಖನೌದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕ್ಷಿಪ್ರ ಕಾರ್ಯಾಚರಣೆ ಪಡೆ ಮಧ್ಯೆ ನಡೆದ ಘರ್ಷಣೆಯಲ್ಲಿ 10 ಮಂದಿ ಕಾಂಗ್ರೆಸ್ ಕಾರ್ಯಕರ್ತರು ಗಾಯಗೊಂಡ ಘಟನೆ ಹೊರತುಪಡಿಸಿದರೆ, ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಇಂದು ರಾಷ್ಟ್ರಾದ್ಯಂತ ನಡೆದ ಚುನಾವಣೆ ಬಹುತೇಕ ಶಾಂತಿಯುತವಾಗಿತ್ತು.

ಮತದಾನದ ಸಂದರ್ಭದಲ್ಲಿ ಜಿತೇಂದ್ರ ಪ್ರಸಾದರ ಬೆಂಬಲಿಗರೆಂದು ಶಂಕಿಸಲಾದ ಕೆಲವರು ಲಖನೌದ ನೆಹರೂ ಭವನದಲ್ಲಿರುವ ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯ ಕಚೇರಿಯನ್ನು ಅಕ್ರಮವಾಗಿ ಪ್ರವೇಶಿಸಲು ಯತ್ನಿಸಿದಾಗ ಪೊಲೀಸರು ಲಾಠಿ ಪ್ರಹಾರ ಮಾಡಿದರು.

• **ಅಡ್ವಾಣಿ ರಾಜೀನಾಮೆ ಪ್ರಶ್ನೆ: ಸಮಯ ಬಂದಾಗ ಪರಿಶೀಲನೆ**

ನವದೆಹಲಿ, ನ. 12 (ಪಿಟಿಐ)– ಬಾಬರಿ ಮಸೀದಿ ನೆಲಸಮ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಎಲ್.ಕೆ. ಅಡ್ವಾಣಿ ಮತ್ತು ಇತರ ಇಬ್ಬರು ಸಚಿವರ ವಿರುದ್ಧ ಆರೋಪ ಪಟ್ಟಿ ಹೊರಿಸಿದಾಗ ಖಂಡಿತವಾಗಿಯು ಆ ವೇಳೆಯಲ್ಲಿ ಅದನ್ನು ಪರಿಶೀಲಿಸಲಾಗುವುದು ಎಂಬುದಾಗಿ ಬಿಜೆಪಿ ಅಧ್ಯಕ್ಷ ಬಂಗಾರು ಲಕ್ಷ್ಮಣ್ ಇಂದು ಇಲ್ಲಿ ಅಭಿಪ್ರಾಯಪಟ್ಟರು.

75 ವರ್ಷಗಳ ಹಿಂದೆ


ಸೋಮವಾರ, 13-11-1950

• **ನೇಪಾಳದ ಮೇಲೆ ರಾಷ್ಟ್ರೀಯ ಕಾಂಗ್ರೆಸ್ ಸೇನೆಗಳ ಮುತ್ತಿಗೆ**

ಮುಂಬೈ, ನ. 12– ನೇಪಾಳ ಕಾಂಗ್ರೆಸ್ಸಿನ ಸ್ವಯಂಸೇವಕ ಪಡೆಗಳು ಪ್ರಧಾನಿ ರಾಣಾ ಆಡಳಿತವನ್ನು ಕಿತ್ತೊಗೆಯುವ ಸಲುವಾಗಿ ಸುಮಾರು 56 ಸಹಸ್ರ ಚದರ ಮೈಲಿ ವಿಸ್ತೀರ್ಣವುಳ್ಳ ಈ ಹಿಮಾಲಯ ಪರ್ವತದ ತಪ್ಪಲು ರಾಜ್ಯದ ದಕ್ಷಿಣ ಗಡಿಯ ಮೇಲೆ 9 ಕಡೆ ಸೇನಾ ಪಡೆಗಳು ಇಂದು ದಾಳಿ ಕೈಗೊಂಡವು.

ಇತ್ತ ನೇಪಾಳ ಸಿಂಹಾಸನಾಧೀಶ ಮಹಾರಾಜಾಧಿರಾಜ ತ್ರಿಭುವನ ವೀರ ವಿಕ್ರಮ ಷಾ ದೇವ್, ಭಾರತದ ಸೈನ್ಯಕ್ಕೆ ಸೇರಿದ ಡಕೋಟ ವಿಮಾನದಲ್ಲಿ ಭಾರತದ ರಾಜಧಾನಿಗೆ ಬಂದಿಳಿದರು.

ಸುಳ್ಳಿಗೀಗ ಸಂಭ್ರಮದ ಕಾಲ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ತನ್ನ ಪಾಡಿಗೆ ತಾನು ಕಾಳು ಹೆಕ್ಕುತ್ತಿದ್ದ ದಷ್ಟಪುಷ್ಟ ಹುಂಜವನ್ನು ಟೆಕ್ಕಿಯೊಬ್ಬ ಹಿಡಿಯುತ್ತಾನೆ. ಆನೆಗೆ ಅಂಬಾರಿ ಕಟ್ಟಿದ ಹಾಗೆ ಹುಂಜದ ಬೆನ್ನಿಗೆ ತುಸು ದೊಡ್ಡ ಗಾತ್ರದ ಡ್ರೋನನ್ನು ಕಟ್ಟುತ್ತಾನೆ. ಸ್ವಿಚ್ ಒತ್ತಿದ್ದೇ ತಡ, ಡ್ರೋನ್ ಸಮೇತ ಆ ಹುಂಜ ಪುರ್ರೆಂದು ಮೇಲಕ್ಕೇರಿ ದೂರಕ್ಕೆ ಹಾರಿ ಹೋಗುತ್ತದೆ. ಆ ವಿಡಿಯೊ ವೈರಲ್ ಆಗುತ್ತದೆ.

ದೃಶ್ಯ 2: ದೂರ ಗಗನದಲ್ಲಿ ಧೂಮಕೇತುವೊಂದು ತನ್ನ ಪಾಡಿಗೆ ತಾನು ಸಾಗಿ ಹೋಗುತ್ತಿದೆ. ಅದರ ಹೆಸರು '3ಐ ಅಟ್ಲಾಸ್'. ಸದ್ಯಕ್ಕೆ ಅದು ಸೂರ್ಯನ ಹಿಂಭಾಗದಲ್ಲಿ ಸಾಗುತ್ತಿದ್ದು, ಮುಂದಿನ ತಿಂಗಳು ಮತ್ತೆ ಗೋಚರಿಸಲಿದೆ. ಅದು ಧೂಮಕೇತು ಅಲ್ಲವೆಂದೂ ಅನ್ಯಲೋಕದ ಟೆಕ್ಕಿಗಳ ಹಾರುವ ಹಡಗೆಂದೂ ಬಿಂಬಿಸುವ ಸಾವಿರಾರು ವಿಡಿಯೊಗಳು ಹರಿದಾಡುತ್ತಿವೆ. ಈ ಮಹಾನ್ ಯಂತ್ರ ನಮ್ಮತ್ತ ದಾಳಿ ಮಾಡಲೆಂದೇ ಹೊಂಚು ಹಾಕಿದೆಯೆಂದು ವಿಜ್ಞಾನಿಗಳೇ ಎಚ್ಚರಿಕೆ ನೀಡುವ ನಾನಾ ಬಗೆಯ ರೋಚಕ, ಭಯಾನಕ ದೃಶ್ಯಾವಳಿಗಳ ವಿಡಿಯೊ ಹರಿದಾಡುತ್ತದೆ.

ದೃಶ್ಯ 3: ಥಾರ್ ಮರುಭೂಮಿಯಲ್ಲಿ ನದಿಯೊಂದು ನಳನಳಿಸುತ್ತ ಹರಿಯುತ್ತಿದೆ. ಪಂಜಾಬ್, ಹರಿಯಾಣದ ನಗರಗಳಿಂದ ಹೊಮ್ಮುವ ಕೊಳಚೆ ನೀರನ್ನು ಸಂಸ್ಕರಿಸಿ ಹರಿಸಿ, ರಾಜಸ್ತಾನ– ಗುಜರಾತಿನ ಮರಳುಗಾಡಲ್ಲಿ ಹಸಿರು ಉಕ್ಕಿಸುವ ಈ ಸಾಹಸದ ಬಗ್ಗೆ ಜಗತ್ತೇ ನಿಬ್ಬೆರಗಾಗಿದೆ. ಪ್ರಧಾನಿ ಮೋದಿಯವರು ಎಂಜಿನಿಯರ್‌ಗಳ ಜೊತೆ ನದಿಯಂಚಿನಲ್ಲಿ ಕೈಬೀಸುತ್ತ ಸಾಗುತ್ತಿದ್ದಾರೆ.

ದೃಶ್ಯ 4: ಹವಾಮಾನ ವೈಪರೀತ್ಯದ ದುರ್ಭರ ಪರಿಣಾಮಗಳನ್ನು ತಡೆಗಟ್ಟುವ ಬಗ್ಗೆ ಬ್ರೆಜಿಲ್ ದೇಶದ ಅಮೆಝಾನ್ ಅರಣ್ಯದ ಅಂಚಿನಲ್ಲಿರುವ ಬೆಲೆಮ್ ನಗರದಲ್ಲಿ 190 ದೇಶಗಳ ಪ್ರತಿನಿಧಿಗಳ 'ಕಾಪ್30' ಶೃಂಗಸಭೆ ಮೊನ್ನೆ ಸೋಮವಾರ ಆರಂಭವಾಗಿದೆ. ಅಲ್ಲಿಗೆ ಪ್ರತಿನಿಧಿಗಳು ಹೋಗದಂತೆ ತಡೆಗಟ್ಟಲು ಕಳೆದ ಮೂರು ತಿಂಗಳಿಂದ ನಾನಾ ಭಾಷೆಗಳಲ್ಲಿ ಅಸಂಖ್ಯ ನಕಲಿ ವಿಡಿಯೊಗಳು ಹರಿದಾಡುತ್ತಿವೆ. ಬೆಲೆಮ್ ನಗರವೇ ನೆರೆಹಾವಳಿಗೆ ತುತ್ತಾಗಿ ವಸತಿ ಸೌಕರ್ಯಗಳೆಲ್ಲ ಎಕ್ಕುಟ್ಟಿವೆ ಎಂದು ಎಐ ಪ್ರಣೀತ ಸುಳ್ಳು ವಿಡಿಯೊಗಳು ಸೃಷ್ಟಿಯಾಗಿವೆ. 'ತಾಪಮಾನ ಏರಿಕೆಯ ಸಂಕಷ್ಟ ಒಂದು ಕಡೆ, ಅದು ಸುಳ್ಳೆಂದು ಹೇಳುವ ಸುಳ್ಳು ಪ್ರಚಾರದ ಮಹಾಪೂರ ಒಂದು ಕಡೆ: ನಾವು ಎರಡನ್ನೂ ತಡೆಗಟ್ಟಬೇಕಿದೆ' ಎಂದು ಶೃಂಗಸಭೆಯ ಉದ್ಘಾಟನೆಯ ಸಂದರ್ಭದಲ್ಲಿ ಬ್ರೆಜಿಲ್ ಅಧ್ಯಕ್ಷ ಲುಲಾ ಡಿಸಿಲ್ವಾ ಹೇಳಿದ್ದಾರೆ.

ಮಹಾಪೂರದಂತೆ ಎಲ್ಲೆಡೆ ಹಬ್ಬುತ್ತಿರುವ 'ಡೀಪ್ ಫೇಕ್'ಗಳು ಹೊಸ ಹೊಸ ರೂಪದಲ್ಲಿ ಬರುತ್ತಲೇ ಇವೆ. 'ಓಪನ್ ಎಐ' ಮೂಲಕ ಈಚೆಗಷ್ಟೇ 'ಸೋರಾ–2' ಹೆಸರಿನ ಆ್ಯಪ್ ಬಿಡುಗಡೆ ಆಗಿದೆ. ಕಳೆದ ವಾರ ಅದು ಮೊಬೈಲ್‌ನಲ್ಲೂ ಲಭ್ಯವಾಗುವಂತೆ ಮಾಡಲಾಗಿದೆ. ಇದರ ವಿಶೇಷ ಏನೆಂದರೆ, ಯಾರು ಬೇಕಾದರೂ ತಮಗಿಷ್ಟವಾದ ದೃಶ್ಯವನ್ನೊ, ಕತೆಯನ್ನೊ ಮಾತಿನ (ಪ್ರಾಮ್ಟ್) ಮೂಲಕವೇ ವರ್ಣಿಸಿದರೂ ಸಾಕು, ಒಂದು ನಿಮಿಷದ ವಿಡಿಯೊ ಸಿದ್ಧವಾಗುತ್ತದೆ. ಯಾವುದೇ ಖ್ಯಾತ ವ್ಯಕ್ತಿಯನ್ನೊ, ಯುಗಪುರುಷನನ್ನೊ, ದೇವತೆಯನ್ನೊ ಬೇಕೆಂದ ವಸ್ತ್ರದಲ್ಲಿ ಅಥವಾ ವಸ್ತ್ರವಿಲ್ಲದ ಸ್ಥಿತಿಯಲ್ಲಿ ಸಂತೆಯಲ್ಲೂ ಓಡಾಡಿಸಬಹುದು. ಪರಿಚಿತ ಮುಖಚಹರೆ, ಹಾವಭಾವ ಅಷ್ಟೇ ಅಲ್ಲ, ತೀರ ಸಹಜ ಧ್ವನಿಯಲ್ಲೇ ಆ ವ್ಯಕ್ತಿ ಮಾತಾಡುವಂತೆ ಮಾಡಬಹುದು. ಒಣ ಕಡ್ಡಿಯೊಂದು ಪ್ರವಾಹದ ವಿರುದ್ಧ ಸಾಗುವಂತೆ ಮಾಡಿ, ಅದೇ ಅಸಲೀ 'ಸಂಜೀವಿನಿ' ಎಂದು ಹಾಡಿ ಹೊಗಳಿ, ಅದನ್ನೇ ಮಾರಾಟಕ್ಕೆ ಒಡ್ಡುವ ಅಸಲೀ ಬಾಬಾನನ್ನು ಸೃಷ್ಟಿ ಮಾಡಬಹುದು.

ಫೇಕ್ ವಿಡಿಯೊಗಳ ಎಐ ಜಗತ್ತಿನಲ್ಲಿ ಇದೇನೂ ಹೊಸತಲ್ಲ ನಿಜ. ಆದರೆ, ಈ ಅಸ್ತ್ರ ಈಗ ಎಲ್ಲರ ಕೈಗೂ ಸಿಗುವಂತಾಗಿದೆ. ಹದಿಹುಡುಗನೊಬ್ಬ ತನ್ನ ಸಹಪಾಠಿಯನ್ನು ವಿವಸ್ತ್ರಳನ್ನಾಗಿಸಿ ಓಡಾಡಿಸಿ ರೀಲ್ ಬಿಟ್ಟರೆ ಆಕೆಯ ಸ್ಥಿತಿ ಹೇಗಾಗಬೇಡ? ಹಾರುವ ಹುಂಜವನ್ನು ನೋಡಿದ ಹೈದನೊಬ್ಬ ತನ್ನ ಕಲ್ಪನೆಗೆ ರೆಕ್ಕೆಪುಕ್ಕ ಕಟ್ಟಿ ಇನ್ನೇನೇನನ್ನು ಹಾರಿಸುವ ವಿಡಿಯೊ ತಯಾರಿಸುತ್ತಾನೊ? ಕಣ್ಣಿಗೆ ಕಂಡಿದ್ದೇ ಸತ್ಯವೆಂದು ನಂಬುವ ಎಳೆಯರ ಕಣ್ಣಲ್ಲಿ ಈ ಜಗತ್ತು ಹೇಗೆ ಕಾಣುತ್ತದೊ?

> 'ಡೀಪ್ ಫೇಕ್' ಎಂಬ ಅಪ್ಪಟ ಸುಳ್ಳಿನ ವಿಡಿಯೊಗಳನ್ನು ಈಗ ಸಾಮಾನ್ಯ ಜನರೂ ಮೊಬೈಲ್‌ಗಳಲ್ಲೇ ಸೃಷ್ಟಿಸಿ ವೈರಲ್ ಮಾಡಬಹುದು. ಮಂಕುಬೂದಿಯ ಇಂಥ ಮಹಾಮಂತ್ರ ಎಲ್ಲರ ಕೈಗೆ ಬಂದಾಗ ಅದನ್ನು ನಿಯಂತ್ರಿಸಬೇಕಾದವರು ಯಾರು?

ಅಂತರ್ಜಾಲದಲ್ಲಿ ಸಲೀಸಾಗಿ ಸಿಗುವ ಇಂಥ ಫೇಕ್ ಮಾಹಿತಿಗಳನ್ನೇ ಆಧರಿಸಿ ಹಣ ಕಳಕೊಂಡವರು, ಪ್ರಾಣ ಕಳಕೊಂಡವರು, ಜೀವನವನ್ನೇ ನರಕ ಮಾಡಿಕೊಂಡವರ ಸಾಲು ಸಾಲು ಕತೆಗಳಿವೆ. 'ಖ್ಯಾತ' ಜ್ಯೋತಿಷಿಗಳ, ವೈದ್ಯತಜ್ಞರ, ಷೇರು ಮಾರುಕಟ್ಟೆಯ ಪರಿಣತರ ಮಾತಿನ ಮೋಡಿಗೆ ಮರುಳಾಗಿ ಎತ್ತರ ಹೆಚ್ಚಿಸಿಕೊಳ್ಳಲೆಂದು, ಸ್ನಾಯುಬಲ ವೃದ್ಧಿಗೆಂದು ಖ್ಯಾತ 'ವೈದ್ಯರ' ಉಪದೇಶವನ್ನು ನಂಬಿದವರ, ಕಿಡ್ನಿ ಕಳಕೊಂಡವರ, ವೀರ್ಯದಾನಕ್ಕೆ ಹೋಗಿ ಇನ್ನೇನನ್ನೊ ಕಳಕೊಂಡವರ, ಲಸಿಕೆ ಹಾಕಿಸುವುದೇ ಅಪಾಯವೆಂದು ನಂಬಿ ಮಕ್ಕಳ ಜೀವವನ್ನು ಅಪಾಯಕ್ಕೆ ಒಡ್ಡಿದವರ ನೈಜ ಕಥನಗಳಿವೆ.

ಹಿಂದೆಲ್ಲ ಇಂಥ ಫೇಕ್‌ಗಳ ಸೃಷ್ಟಿಗೆ ತಜ್ಞರ ತಂಡವೇ ಬೇಕಾಗಿತ್ತು. ದೊಡ್ಡ ಕಂಪ್ಯೂಟರ್ ವ್ಯವಸ್ಥೆ, ಕ್ಲಿಷ್ಟ ಅಲ್ಗೊರಿದಮ್, ರಹಸ್ಯ ಕಾರ್ಯಾಚರಣೆಗಳ ಅಗತ್ಯವಿತ್ತು. ಎರಡು ವರ್ಷಗಳ ಹಿಂದೆ ಸ್ಲೊವಾಕಿಯಾ ಚುನಾವಣೆ ಸಂದರ್ಭದಲ್ಲಿ ಬಿಡುಗಡೆಯಾದ ಒಂದು ಡೀಪ್ ಫೇಕ್ ಆಡಿಯೊ ಟೇಪ್‌ನ ಪರಿಣಾಮ ಹೇಗಿತ್ತೆಂದರೆ, ಗೆಲ್ಲಲೇಬೇಕಿದ್ದ ಅಲ್ಲಿನ 'ಸ್ಲೊವಾಕಿಯಾ ಪ್ರಗತಿ ಪಕ್ಷ' ಸೋತು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಬೇಕಾಯಿತು. ನೈಜೀರಿಯಾ, ಬ್ರಿಟನ್, ಅಮೆರಿಕ, ಪಾಕಿಸ್ತಾನದ ರಾಜಕೀಯ ರಂಗಗಳಲ್ಲಿ ಇದು ಹಾವಳಿ ಎಬ್ಬಿಸಿದೆ. ನಮ್ಮಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಬಿತ್ತನೆಗೆ ಡೀಪ್ ಫೇಕ್ ಬಳಕೆಯಾಗುತ್ತಿದೆ.


ಸಹಜವಾಗಿಯೇ ಇದಕ್ಕೆ ಪ್ರತಿಬಂಧ ಹಾಕಬೇಕೆಂಬ ಒತ್ತಡ ಹೆಚ್ಚುತ್ತಿದೆ. ಫೇಕ್‌ಗಳನ್ನು ಗುರುತಿಸುವ ತಂತ್ರಗಳು, ತಂತ್ರಾಂಶಗಳು ಚುರುಕಾಗಿವೆ. ಆದರೆ, ತಂತ್ರಕ್ಕೆ ಪ್ರತಿತಂತ್ರವೂ ಅಷ್ಟೇ ಚುರುಕಾಗುತ್ತಿವೆ. ಫೇಕ್ ಎಂದು ಗುರುತಿಸಲು ಸಾಧ್ಯವೇ ಇಲ್ಲದಂಥ ಆ್ಯಪ್‌ಗಳೂ ಬರುತ್ತಿವೆ. ಇನ್ನೊಂದು ಕಡೆ, ಎಐ ನಾಗಾಲೋಟಕ್ಕೆ ಲಗಾಮು ಹಾಕಲು ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿ ಬಂದಿರುವುದರಿಂದ ಅದರೊಂದಿಗೆ ಏಗಲು ಕಲಿಯುತ್ತಲೇ ಕೃತಕ ಬುದ್ಧಿಮತ್ತೆಯನ್ನು ಎಲ್ಲರ ಅನುಕೂಲಕ್ಕಾಗಿ ಬಳಸಿಕೊಳ್ಳಬೇಕೆಂಬ ವಾದಗಳೂ ಇವೆ. ಹೊಸಪೀಳಿಗೆಗೆ ಅದನ್ನು ಪರಿಚಯಿಸದಿದ್ದರೆ 'ಹಿಂದುಳಿದವರ' ಹೊಸ ವರ್ಗವನ್ನು ಸೃಷ್ಟಿಸಿದಂತಾಗುತ್ತದೆ ಎಂತಲೂ ಹೇಳಲಾಗುತ್ತಿದೆ.

ಚಾಟ್ ಜಿಪಿಟಿಯಂಥ ಎಐ ಬಳಕೆಯಲ್ಲಿ ನಮ್ಮ ದೇಶ ಜಗತ್ತಿನ ಎರಡನೇ ಸ್ಥಾನದಲ್ಲಿದ್ದು, ಮುಂದಿನ ವರ್ಷ ದಿಲ್ಲಿಯಲ್ಲೇ ಎಐ ಜಾಗತಿಕ ಶೃಂಗಸಭೆ ನಡೆಯಲಿದೆ. ಅದಕ್ಕೆ ಪೂರ್ವಭಾವಿಯಾಗಿ ಕೇಂದ್ರ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ 'ಎಐ ಉಸ್ತುವಾರಿ ಮಾರ್ಗಸೂಚಿ'ಯನ್ನು ಕಳೆದ ವಾರ ಬಿಡುಗಡೆ ಮಾಡಿದೆ. 'ಕೃತಕ ಬುದ್ಧಿಮತ್ತೆಯ ಅಪಾರ ಸಾಧ್ಯತೆಗಳು ಎಲ್ಲರಿಗೂ ಲಭಿಸುವಂತೆ ಮಾಡುತ್ತ, ಅಂತರರಾಷ್ಟ್ರೀಯ ರಂಗದಲ್ಲಿ ನಾವು ಎಐ ಮುಂಚೂಣಿಯಲ್ಲಿ ನಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುತ್ತಲೇ ಅದರ ದುಷ್ಪರಿಣಾಮಗಳು ವ್ಯಕ್ತಿಗೂ ಸಮಾಜಕ್ಕೂ ತಟ್ಟದಂತೆ ನೋಡಿಕೊಳ್ಳುವ ಗುರಿ ನಮ್ಮದಿರಬೇಕು' ಎಂದು ಈಗಷ್ಟೇ ಬಿಡುಗಡೆ ಮಾಡಿದ ಆಚಾರ ಸಂಹಿತೆಯಲ್ಲಿ ಹೇಳಲಾಗಿದೆ. ಸಿಬಿಎಸ್‌ಸಿ ಪಠ್ಯಗಳಲ್ಲಿ 3ನೇ ತರಗತಿಯಲ್ಲೇ ಎಐ ಪಾಠ ಬರಲಿದೆ.

ಜಗತ್ತಿನ ಬಹುತೇಕ ಯಾವ ಸರ್ಕಾರವೂ ಎಐ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಈಗಂತೂ ಸರ್ಕಾರಗಳ ಮುಷ್ಟಿಗೆ ಸಿಗದಷ್ಟು ಶೀಘ್ರವಾಗಿ ಅದು ಬೆಳೆಯುತ್ತಿದೆ. ಗಡಿ ರಕ್ಷಣೆ, ವಾಣಿಜ್ಯ, ಆರೋಗ್ಯ ಮತ್ತು ಸಾಮಾಜಿಕ ಸುವ್ಯವಸ್ಥೆಗೂ ಧಕ್ಕೆ ತರುವ ಮಟ್ಟಿಗೆ 'ಡೀಪ್ ಫೇಕ್'ಗಳ ಹಾವಳಿ ಹೆಚ್ಚುತ್ತಿದೆ. 'ವಿಶ್ವಾಸಾರ್ಹ' ಎಂಬ ಪದವೇ ಅರ್ಥಶೂನ್ಯ ಎಂಬಂತ ಸ್ಥಿತಿ ಎದುರಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ಸರ್ಕಾರಗಳೇ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿಲ್ಲ. ಈಗೇನು ಮಾಡೋಣ? ಖಾಸಗಿ ಯತ್ನಗಳಿಂದಾಗಿ ಎಐ ಕ್ರಾಂತಿ ಹೊಮ್ಮಿದ ಹಾಗೆ, ಅದನ್ನು ನಿಯಂತ್ರಿಸುವ ಉಪಾಯಗಳೂ ಖಾಸಗಿ ರಂಗದಲ್ಲೇ ಸೃಷ್ಟಿಯಾಗಬಹುದಲ್ಲವೆ? ಅದೃಷ್ಟವಶಾತ್ ಅನೇಕ ದೇಶಗಳಲ್ಲಿ ಮಾಧ್ಯಮ ಸಂಸ್ಥೆಗಳು ಒಂದಾಗುತ್ತಿವೆ. ಬ್ರೆಜಿಲ್ ದೇಶದಲ್ಲಿ 42 ಮಾಧ್ಯಮ ಸಂಸ್ಥೆಗಳು 'ಕಂಪ್ರೋವಾ ಪ್ರಾಜೆಕ್ಟ್' ಹೆಸರಿನಲ್ಲಿ ಒಂದಾಗಿವೆ. ವಾಟ್ಸ್‌ಆ್ಯಪ್ ನೆರವಿನಿಂದ 'ಟಿಪ್‌ಲೈನ್' ವ್ಯವಸ್ಥೆಯನ್ನು ಮಾಡಿಕೊಂಡಿವೆ. ಭಾರತದಲ್ಲೂ 'ಚೆಕ್‌ಪಾಯಿಂಟ್ ಟಿಪ್‌ಲೈನ್' ಹೆಸರಿನಲ್ಲಿ ಮಾಧ್ಯಮ ಸಂಸ್ಥೆಗಳು ಒಂದಾಗಿ ಫೇಕ್ ಸುದ್ದಿಗಳ ಹಾವಳಿಯನ್ನು ತಡೆಗಟ್ಟಲು ಶ್ರಮಿಸುತ್ತಿವೆ. ಜನಸಾಮಾನ್ಯರೇ ಇಂಥ ಫೇಕ್‌ಗಳನ್ನು ಗುರುತಿಸಿ ಮಾಧ್ಯಮ ಸಂಸ್ಥೆಗಳಿಗೆ ರವಾನಿಸುವ ವ್ಯವಸ್ಥೆ ತಕ್ಕಮಟ್ಟಿಗೆ ಕೆಲಸ ಮಾಡುತ್ತಿದೆ.

ಅದೆಲ್ಲ ಸರಿ; ಆದರೆ ಸರ್ಕಾರವೇ ಸುಳ್ಳಿನ ಪ್ರಚಾರದಲ್ಲಿ ಮುಳುಗಿರುವಾಗ ಹೇಗೆ ಏಗುವುದು? ಮರುಭೂಮಿಯಲ್ಲಿ ಶುದ್ಧ ನೀರಿನ ಪ್ರವಾಹವನ್ನೇ ಹರಿಸಿದ ಸಂಗತಿ ಹೇಗೂ ಇರಲಿ, ಬ್ರೆಜಿಲ್ ಶೃಂಗಸಭೆಯನ್ನು ವಿಫಲಗೊಳಿಸಲು ಅಮೆರಿಕವೇ ಡೀಪ್ ಫೇಕ್‌ಗಳ ಪ್ರವಾಹವನ್ನು ಹರಿಬಿಟ್ಟಿದೆ ಎಂಬುದಕ್ಕೆ ಸಾಕ್ಷ್ಯಗಳಿವೆ. 'ಇಡೀ ಹವಾಮಾನ ವೈಪರೀತ್ಯವೇ ಬೊಗಳೆ' ಎಂದು ಸೆಪ್ಟೆಂಬರ್‌ನಲ್ಲಿ ಟ್ರಂಪ್ ಹೇಳಿದ್ದಕ್ಕೆ ದಾಖಲೆಗಳಿವೆ. ಆತ ಅಧಿಕಾರಕ್ಕೆ ಬಂದನಂತರ ಹೊಸ ಹೊಸ ತೈಲ ನಿಕ್ಷೇಪಗಳ ಶೋಧಕ್ಕೆ ಭಾರೀ ಹಣವನ್ನು ಹೂಡಲಾಗುತ್ತಿದೆ. ಬದಲೀ ಶಕ್ತಿಗೆ ಮೀಸಲಾಗಿದ್ದ 13 ಶತಕೋಟಿ ಡಾಲರ್ ನಿಧಿಯನ್ನು ಸ್ಥಗಿತಗೊಳಿಸಲಾಗಿದೆ. ತೈಲ ಧನಿಕರ ಲಾಬಿ ಮತ್ತೆ ಹೆಡೆಯೆತ್ತಿದೆ. ಈಗ ಹರಿಬಿಟ್ಟಿರುವ ಸುಳ್ಳು ಪ್ರಚಾರವನ್ನು ತಡೆಗಟ್ಟಲು ವಿಶ್ವಸಂಸ್ಥೆ ಹರಸಾಹಸ ನಡೆಸಿದೆ. ಅದಕ್ಕೆಂದೇ ಯುನೆಸ್ಕೊ ಪ್ರತ್ಯೇಕ ಸುಳ್ಳುಪತ್ತೆ ವಿಭಾಗವನ್ನು ಸೃಷ್ಟಿ ಮಾಡಿದೆ. 14 ಸಾವಿರ ಫೇಕ್ ವಿಡಿಯೊಗಳನ್ನು ಅದು ಗುರುತಿಸಿದೆ. 'ತಾಪಮಾನ ಏರುತ್ತಿಲ್ಲ ಎಂಬ ಎಲ್ಲ ಸುಳ್ಳು ಪ್ರಚಾರಗಳನ್ನೂ ವಿಫಲಗೊಳಿಸಲು ನಾವೆಲ್ಲ ಕೈಜೋಡಿಸೋಣ' ಎಂದು ಅದು ಜನರಿಗೆ ಕರೆ ನೀಡಿದೆ.

'ಸತ್ಯ ತನ್ನ ಕಾಲಿಗೆ ಚಪ್ಪಲಿ ಹಾಕುವುದರೊಳಗೆ ಸುಳ್ಳು ಅರ್ಧ ಭೂಮಿ ಸುತ್ತಿರುತ್ತದೆ' ಎಂಬ ಹಳೇ ಇಂಗ್ಲಿಷ್ ಗಾದೆಯನ್ನು ಮಾರ್ಕ್ ಟ್ವೇನ್ ಮರುಬಿತ್ತರಣೆ ಮಾಡಿದ್ದ. ಈಗಿನ ಕಾಲದಲ್ಲಂತೂ ಸುಳ್ಳು ಬಾಹ್ಯಾಂತರಿಕ್ಷಕ್ಕೂ ವ್ಯಾಪಿಸತೊಡಗಿದೆ.



ವಾಚಕರ ವಾಣಿ

ಹುದ್ದೆಯೇ ಇಲ್ಲದಿರುವಾಗ 'ಟಿಇಟಿ' ಏಕೆ?

ಪ್ರತಿ ವರ್ಷದಂತೆ ಈ ಬಾರಿಯೂ 1ರಿಂದ 5ನೇ ತರಗತಿಯ ಪ್ರಾಥಮಿಕ ಶಾಲಾ ಶಿಕ್ಷಕರ ಅರ್ಹತಾ ಪರೀಕ್ಷೆಯ ಪೇಪರ್–1ಕ್ಕೆ ಅರ್ಜಿ ಆಹ್ವಾನಿಸಲಾಗಿತ್ತು. 2014ರಲ್ಲಿ ಮೊದಲ ಬಾರಿಗೆ ಟಿಇಟಿ ಪರೀಕ್ಷೆ ನಡೆಯಿತು. ಪ್ರಸ್ತುತ ರಾಜ್ಯದಲ್ಲಿ 1ರಿಂದ 5ನೇ ತರಗತಿಯ ಶಿಕ್ಷಕರ ನೇಮಕಾತಿಗೆ ಹುದ್ದೆಗಳೇ ಖಾಲಿ ಇಲ್ಲ. ಆದರೆ, ಪ್ರತಿ ಬಾರಿಯೂ ಟಿಇಟಿ ಘೋಷಣೆ ಆಗುತ್ತಿದೆ. ಹುದ್ದೆಗಳೇ ಇಲ್ಲದಿರುವಾಗ ಅಭ್ಯರ್ಥಿಗಳು ಈ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಪ್ರಯೋಜನ ಏನು?

ಸುರೇಂದ್ರ ಪೈ, ಭಟ್ಕಳ

ಆದಿವಾಸಿಗಳ ಅಭ್ಯುದಯಕ್ಕೆ ಒತ್ತು ನೀಡಿ

ಆದಿವಾಸಿಗಳ ಬದುಕು ಪ್ರಕೃತಿಯೊಂದಿಗೆ ಬೆಸೆದುಕೊಂಡಿದೆ. ಆದರೆ, ಅವರ ಜೀವನಮಟ್ಟ ಶೋಚನೀಯ ಸ್ಥಿತಿಯಲ್ಲಿದೆ. ಶಿಕ್ಷಣ, ಆರೋಗ್ಯ ಅವರ ಪಾಲಿಗೆ ಮರೀಚಿಕೆಯಾಗಿದೆ. ಆದಿವಾಸಿಗಳ ಅಭ್ಯುದಯಕ್ಕೆ ಸರ್ಕಾರ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ, ಸಮರ್ಪಕವಾಗಿ ಸೌಲಭ್ಯ ತಲುಪುತ್ತಿಲ್ಲ. ಆದಿವಾಸಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದರೂ ಮೀಸಲಾತಿ ಸೌಲಭ್ಯ ದಕ್ಕಿಲ್ಲ. ಹಾಗಾಗಿ, ಒಳಮೀಸಲಾತಿ ಕಲ್ಪಿಸಬೇಕಿದೆ. ಈ ಸಮುದಾಯಕ್ಕೆ ಮೊದಲು ಶಿಕ್ಷಣ ನೀಡುವ ಕೆಲಸವಾಗಬೇಕು. ಮಹಿಳೆಯರಿಗೆ ಸ್ವಾವಲಂಬನೆಯ ತರಬೇತಿ ನೀಡಬೇಕು. ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಯುವಕರ ಜೀವನಮಟ್ಟದ ಸುಧಾರಣೆಗೆ ಸರ್ಕಾರ ಒತ್ತು ನೀಡಬೇಕಿದೆ.

ವಿನಾಯಕ ಡಿ.ಎಲ್., ಚಿತ್ರದುರ್ಗ

> **ರಕ್ತದೋಕುಳಿ**
>
> ದಿಲ್ಲಿಯ ಜನತೆ
> ತತ್ತರಿಸುತ್ತಿದ್ದರು
> ಕೊರೆವ ಚಳಿಗೆ
> ವಿಷ ಗಾಳಿಗೆ:
> ಈಗ ನಿದ್ದೆಯಲ್ಲೂ
> ಬೆಚ್ಚುವಂತಾಗಿದೆ
> ಸ್ಫೋಟದ ಬಲಿಗೆ
> ರಕ್ತದೋಕುಳಿಗೆ!
>
> **ಆರ್. ನಾಗರಾಜ್,** ಗೊರೂರು

ಮನುಷ್ಯಜೀವಿ ತಲೆಕೆಟ್ಟಿರುವ ಭಸ್ಮಾಸುರ

'ಜೀವಜಗತ್ತಿನಲ್ಲಿ ಮನುಷ್ಯನಷ್ಟು ಪೆದ್ದ ಇನ್ನಾರೂ ಇಲ್ಲ'ವೆಂದು ಇತ್ತೀಚೆಗೆ ನಿಧನರಾದ ಪ್ರಾಣಿಶಾಸ್ತ್ರಜ್ಞೆ ಜೇನ್ ಗುಡಾಲ್ ಹೇಳಿದ್ದರು. ಮನುಷ್ಯ ಬುದ್ಧಿವಂತನಾಗಿದ್ದರೆ ಇರುವ ಒಂದೇ ಆವಾಸಯೋಗ್ಯ ತಾಣವನ್ನು ನಾಶಗೊಳಿಸುತ್ತಿರಲಿಲ್ಲ. 'ಘಟ್ಟ ಉಳಿದಲ್ಲಿ ಉಳಿದೇವು!' ಲೇಖನದಲ್ಲಿ (ಲೇ: ಅಖಿಲೇಶ್ ಚಿಪ್ಪಳಿ, ಪ್ರ.ವಾ., ನ. 11) ಪ್ರಸ್ತಾಪಿಸಿರುವ ಅಂಕಿಅಂಶಗಳನ್ನು ಯಾವ ರಾಜಕಾರಣಿಯಾಗಲಿ ಅಥವಾ ಗಣಿಧಣಿಯಾಗಲಿ ತಿರಸ್ಕರಿಸಲು ಸಾಧ್ಯವಿಲ್ಲ. ಕರ್ನಾಟಕದ ಜೀವವೈವಿಧ್ಯಕ್ಕೆ ಕಾರಣವಾಗಿರುವ ಘಟ್ಟವನ್ನು ತುಂಡರಿಸಿ, ಬೆತ್ತಲು ಮಾಡಿದ್ದು ಸಾಲದೆ, ಇನ್ನೊಂದು ದಶಕದಲ್ಲಿ ಮರುಭೂಮಿ ಮಾಡಿಬಿಡುವ ಛಲದಂತೆ ಅಭಿವೃದ್ಧಿ ಯೋಜನೆಗಳು ನಡೆಯುತ್ತಿವೆ. ನಾವು ಕಟ್ಟಿದ ಸೇತುವೆ, ಸುರಂಗ, ಸ್ಥಾವರಗಳು ನಮ್ಮೊಂದಿಗೆ ಮಣ್ಣಲ್ಲಿ ಮಣ್ಣಾಗುವುದಿಲ್ಲ. ಬದಲಿಗೆ, ಉಳಿದ ಜನರ ಜೀವನವನ್ನು ಮತ್ತಷ್ಟು ದುಸ್ತರಗೊಳಿಸುತ್ತವೆ.

ಶಾಂತರಾಜು ಎಸ್., ಬೆಂಗಳೂರು

ರಾಷ್ಟ್ರೀಯ ಭದ್ರತೆಗಾಗಿ ಏಳಿ, ಎಚ್ಚರಗೊಳ್ಳಿ

ದೆಹಲಿಯಲ್ಲಿ ನಡೆದಿರುವ ಕಾರು ಸ್ಫೋಟ ಪ್ರಕರಣವು ರಾಷ್ಟ್ರೀಯ ಭದ್ರತೆಗೆ ಎದುರಾಗಿರುವ ಸವಾಲುಗಳನ್ನು ತೆರೆದಿಟ್ಟಿದೆ. ದೇಶದೊಳಗೆ ಭಯೋತ್ಪಾದಕ ಕೃತ್ಯಗಳಿಗೆ ಕುಮ್ಮಕ್ಕು ನೀಡುವವರ ಮೇಲೂ ಎನ್‌ಐಎ ಹೆಚ್ಚಿನ ನಿಗಾ ವಹಿಸಬೇಕಿದೆ. ಪ್ರಚೋದನಕಾರಿ ಭಾಷಣ ಮಾಡುವವರ ಮೇಲೆ ಹದ್ದಿನ ಕಣ್ಣಿಡಬೇಕಿದೆ.

ಪ್ರಚೋದನೆ ಮಾಡುವ ವ್ಯಕ್ತಿ ಯಾವುದೇ ಧರ್ಮಕ್ಕೆ ಸೇರಿದ್ದರೂ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಿದೆ. ದೇಶದೊಳಗಿರುವ ಶತ್ರುಗಳನ್ನು ಮಟ್ಟ ಹಾಕದಿದ್ದರೆ ಬಾಹ್ಯ ಶತ್ರುಗಳನ್ನು ಹಿಮ್ಮೆಟ್ಟಿಸುವುದು ಕಷ್ಟಕರ. ಹಾಗಾಗಿ, ಸರ್ಕಾರ ಹಾಗೂ ವಿರೋಧ ಪಕ್ಷಗಳು ಪರಸ್ಪರ ಕೆಸರೆರಚಾಟ ಮಾಡುವುದನ್ನು ಬಿಟ್ಟು, ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ಒಗ್ಗಟ್ಟು ಪ್ರದರ್ಶಿಸಬೇಕಿದೆ. ಈ ವಿಷಯದಲ್ಲಿ ಕೇಂದ್ರ ಗೃಹ ಸಚಿವಾಲಯವೂ ಎಚ್ಚೆತ್ತುಕೊಳ್ಳಬೇಕಿದೆ.

ಖಾದರ್ ಬರಗೂರು, ಕೊಪ್ಪಳ

ನಕಲಿ ತುಪ್ಪ: ಆರೋಗ್ಯಕ್ಕೆ ಹಾನಿಯ ಆತಂಕ

ತಿರುಮಲದ ಲಡ್ಡು ಪ್ರಸಾದ ತಯಾರಿಕೆಯಲ್ಲಿ ನಕಲಿ ತುಪ್ಪ ಬಳಸಿರುವುದನ್ನು ಸಿಬಿಐನ ವಿಶೇಷ ತನಿಖಾ ತಂಡ ಪತ್ತೆಹಚ್ಚಿದೆ. ಭಕ್ತರು ಎಷ್ಟೋ ದಿನಗಳಿಂದ ತಾಳ್ಮೆಯಿಂದ ಕಾಯ್ದು ತಿರುಪತಿ ತಿಮ್ಮಪ್ಪನ ದರ್ಶನ ಪಡೆಯುತ್ತಾರೆ. ತುಪ್ಪ ಪೂರೈಕೆದಾರರು ಒಂದು ಹನಿ ಹಾಲು ಬಳಸದೆಯೇ ಸಸ್ಯಜನ್ಯ ಎಣ್ಣೆ ಬಳಸಿ ತುಪ್ಪ ತಯಾರಿಸಿದ್ದಾರೆ. ಅಲ್ಪಪ್ರಮಾಣದ ಶುದ್ಧ ತುಪ್ಪದ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಬೆರೆಸಲಾಗಿದೆ.

ಈಗಾಗಲೇ, ದಿನನಿತ್ಯ ಬಳಸುವ ಆಹಾರ ಪದಾರ್ಥಗಳಲ್ಲಿ ರಾಸಾಯನಿಕಗಳ ಪ್ರಮಾಣ ಹೆಚ್ಚಿದೆ. ನಕಲಿ ತುಪ್ಪದ ಸೇವನೆಯಿಂದ ಹಲವು ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಭಕ್ತರ ನಂಬಿಕೆಗೆ ಗಾಸಿ ಮಾಡಿದ ನಕಲಿ ತುಪ್ಪ ಪೂರೈಕೆದಾರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ.

ಭಾಸ್ಕರ ತಳಕೇರಿ, ಬಾಗಲಕೋಟೆ

ರೈತ ಕುಟುಂಬಗಳ ಬಗ್ಗೆ ತಾತ್ಸಾರ ಬೇಡ

ಕಬ್ಬಿನ ದರ ಹೆಚ್ಚಳಕ್ಕೆ ಆಗ್ರಹಿಸಿ ರೈತರು ಇತ್ತೀಚೆಗೆ ನಡೆಸಿದ ಹೋರಾಟಕ್ಕೆ ಸಮಾಜದ ವಿವಿಧ ವರ್ಗಗಳ ಜನರಿಂದ ಬೆಂಬಲ ದೊರೆಯಿತು. ಆದರೆ, ಹೋರಾಟದ ಸಂದರ್ಭದಲ್ಲಿ ರೈತರ ಮೇಲೆ ಅಭಿಮಾನವು ತೋರುವ ಸಮಾಜಕ್ಕೆ ರೈತನ ವೈಯಕ್ತಿಕ ಜೀವನದ ಬಗೆಗಿನ ತಾತ್ಸಾರ ಭಾವನೆ ಬದಲಾಗಿಲ್ಲ.

ರಾಜ್ಯದಲ್ಲಿ ಬಹಳಷ್ಟು ರೈತರ ಮಕ್ಕಳು ಇಂದಿಗೂ ಕೃಷಿ ನಂಬಿ ಬದುಕು ಕಟ್ಟಿಕೊಂಡಿದ್ದಾರೆ. ಅಂತಹವರಿಗೆ ಉದ್ಯಮಿಗಳು, ಸರ್ಕಾರಿ ನೌಕರರು ತಮ್ಮ ಮನೆತನದ ಹೆಣ್ಣು ಕೊಡಲು ಹಿಂಜರಿಯುತ್ತಾರೆ. ಅನ್ನದಾತರ ದುಡಿಮೆಯ ಬಗ್ಗೆ ಕೀಳರಿಮೆ ತೋರದೆ ಹೃದಯ ವೈಶಾಲ್ಯತೆ ತೋರಬೇಕಿದೆ.

ಮಲ್ಲಿಕಾರ್ಜುನ್ ತೇಲಿ, ಗೋಠೆ

ಚುರುಮುರಿ



ಸೆರೆಮನೆ–ಅರಮನೆ

• ಗುರು ಪಿ.ಎಸ್.

'ಏನ್ರೀ ನೀವು, ಇನ್ನೂ ಮಕ್ಕಳ ಫೀಸ್ ಕಟ್ಟಿಲ್ವಂತೆ, ಶಾಲೆಯವರು ಫೋನ್ ಮಾಡಿದ್ರು. ಈ ತಿಂಗಳು ರೇಷನ್ ಕೂಡ ತಂದಿಲ್ಲ ನೀವು' ಬೆಳ್ ಬೆಳಿಗ್ಗೆಯೇ ಹೆಂಡತಿಯ ಸುಪ್ರಭಾತ ಶುರುವಾಯಿತು.

'ನಿಮ್ಮನ್ನ ಮದುವೆ ಆಗೋಕಿಂತ ಕಳ್ಳನ್ನ ಮದುವೆ ಆಗಿದ್ರೂ ಸುಖವಾಗಿರ್ತಿದ್ದೆ ನಾನು' ವಟಗುಟ್ಟತೊಡಗಿದಳು.

'ಹೌದು, ನಾನೂ ಅದೇ ಯೋಚನೆ ಮಾಡ್ತಿದ್ದೆ'.

'ಅಂದ್ರೆ?'

'ಕಷ್ಟಪಟ್ಟು ದುಡಿಯೋ ಬದಲು ಕಳ್ಳನಾದರೂ ಆಗಬಹುದಿತ್ತು ಅಂತ' ಎಂದೆ ಒಗಟಿನ ರೂಪದಲ್ಲಿ.

'ಜೈಲಿನಲ್ಲಿ ಪೊಲೀಸರಿಂದ ಒದೆ ತಿನ್ನೋಕೆ ಆಸೇನಾ?'

'ಯಾವ ಕಾಲದಲ್ಲಿದ್ದೀಯಮ್ಮ ನೀನು. ಈಗ ಜೈಲುಗಳೆಲ್ಲ ರೆಸಾರ್ಟ್ ರೀತಿ ಆಗಿವೆ ಗೊತ್ತಾ? ಟಿ.ವಿ, ಫ್ರಿಡ್ಜ್, ಸ್ಮಾರ್ಟ್ ಫೋನ್, ಗುಂಡು–ತುಂಡು ಎಲ್ಲ ಸಿಗುತ್ತೆ'.

'ಅದೆಲ್ಲ ವಿಐಪಿಗಳಿಗೆ ಮಾತ್ರ'.

'ವಿಐಪಿಗಳು ಅಂದ್ರೆ, ರಾಜಕಾರಣಿಗಳಾ?'

'ಅಲ್ಲ. ವೆರಿ ಇಂಪಾರ್ಟೆಂಟ್ ಪ್ರಿಸನರ್‌ಗಳಿಗೆ ಅಂತ. ನೀವು ಜೈಲೊಳಗೆ ಪ್ರಭಾವಿಗಳಾಗಿರಬೇಕೆಂದರೆ, ಜೈಲು ಹೊರಗಿನ ಪ್ರಭಾವಿಗಳ ಜೊತೆ ಟಚ್‌ನಲ್ಲಿರಬೇಕು'.

'ಜೈಲೊಳಗೆ ಹೋದ ಮೇಲೆ ಪ್ರಭಾವಿ ಆಗ್ತೀನಿ ಬಿಡು, ಪ್ರಭಾವಿ + ಪ್ರಭಾವಿ = ಪ್ರಭಾವಿ ಪ್ರೊ ಮ್ಯಾಕ್ಸ್. ಅದೂ ಅಲ್ಲದೆ, ಜೈಲಿಗೆ ಹೋಗಿ ಬಂದ ಮೇಲೆ ಎಷ್ಟೋ ಜನರಿಗೆ ಅದೃಷ್ಟ ಖುಲಾಯಿಸಿದೆ. ಎಷ್ಟೋ ರಾಜಕಾರಣಿಗಳು ಎಲೆಕ್ಷನ್ ಗೆದ್ದು ದೊಡ್ ದೊಡ್ಡ ಪೊಸಿಷನ್‌ಗೆ ಏರಿದಾರಲ್ವ?'

'ಒಟ್ಟಿನಲ್ಲಿ, ನೀವೀಗ ಸೆರೆಮನೆ ಸೇರಬೇಕು. ಆದರೆ, ಹೇಗೆ ಅನ್ನೋದೇ ಪ್ರಶ್ನೆ' ಎಂದಳು ಕಿಚಾಯಿಸುತ್ತ.

'ಏನಿಲ್ಲ, ಪಾಸ್‌ವರ್ಡ್ ಸಹಿತ ನನ್ನ ಮೊಬೈಲ್ ಫೋನ್ ನಿನ್ನ ಕೈಗೆ ಕೊಡ್ತೀನಿ. ಆಗ, ಗ್ಯಾರಂಟಿ ನೀನು ನನಗೆ ಹೊಡೆದೇ ಹೊಡಿತೀಯ'.

'ಆಗ ನಾನು ಜೈಲಿಗೆ ಹೋಗಬೇಕಾಗುತ್ತಲ್ಲ'.

'ನೀನೂ ಜೈಲಿಗೆ ಬಂದರೆ ಅದೆಂಥದೇ ಲಕ್ಷುರಿ ಸೆರೆಮನೆಯಾದರೂ ಅದು ನನಗೆ ಬೇಡ. ಮಕ್ಕಳ ಜೊತೆ ನಾನು ಮನೇಲಿ ಇರ್ತೀನಿ, ನೀನು ಜೈಲಲ್ಲಿ ಕೂಲಿ ಮಾಡಿ ಪ್ರತಿ ತಿಂಗಳು ದುಡ್ಡು ಕಳಿಸಿಬಿಡು' ಎಂದೆ ನಗುತ್ತಾ.

ಸೌಟಿನ ಏಟು ಜೋರಾಗೇ ಬಿತ್ತು.

ಸಂಗತ

ನೂರರ ಹೊಸ್ತಿಲಲ್ಲಿ ಮಕ್ಕಳ 'ಕಿಂದರಿಜೋಗಿ'

ಮಕ್ಕಳ ಸಾಹಿತ್ಯದಲ್ಲಿ ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಜೋಗಿ'ಗೆ ಮುಂಚೂಣಿ ಸ್ಥಾನ. ಕಿಂದರಜೋಗಿ ಈಗ ನೂರರ ಹೊಸ್ತಿಲಲ್ಲಿ ನಿಂತಿದ್ದಾನೆ.

• ಬಿ.ಆರ್. ಸತ್ಯನಾರಾಯಣ

ಕನ್ನಡ ಬಲ್ಲ ಮಕ್ಕಳಿಗೆ ಪುಸ್ತಕ ಕೊಡಬೇಕೆಂದರೆ ನನಗೆ ಮೊದಲಿಗೆ ನೆನಪಿಗೆ ಬರುವ ಪುಸ್ತಕ, ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ'. ಕಳೆದೊಂದು ಶತಮಾನದಿಂದ ಕನ್ನಡದ ಮಕ್ಕಳ ಮನಸ್ಸನ್ನು ಸೂರೆಗೊಳ್ಳುತ್ತಿರುವ 'ಬೊಮ್ಮನಹಳ್ಳಿ ಕಿಂದರಿಜೋಗಿ'ಗೆ ಈಗ ನೂರರ ಸಂಭ್ರಮ! ಇದೇ ನವೆಂಬರ್ 19ರಂದು 'ಕಿಂದರಿಜೋಗಿ' ನೂರನೇ ವರ್ಷಕ್ಕೆ ಕಾಲಿಡಲಿದ್ದಾನೆ.

'ಇಲಿಗಳು! ಇಲಿಗಳು! ಇಲಿಗಳ ಹಿಂಡು!/ ಬಳ ಬಳ ಬಂದುವು ಇಲಿಗಳ ದಂಡು!' ಎನ್ನುವ ಸಾಲುಗಳು ಕಿವಿಯ ಮೇಲೆ ಬಿದ್ದರೆ ಸಾಕು, ಸಾಹಿತ್ಯ ಪ್ರೀತಿಯ ಕನ್ನಡಿಗರ ಕಿವಿಗಳು ನಿಮಿರುತ್ತವೆ; ಮೈಮನಸ್ಸುಗಳು ಅರಳುತ್ತವೆ; ಕಿಂದರಿ ಹಿಡಿದ ಜೋಗಿ ಕಣ್ಣಮುಂದೆ ನರ್ತಿಸುತ್ತಾನೆ. ಮಕ್ಕಳ ನಾಲಗೆಯ ಮೇಲೆ ನಲಿಯುತ್ತಲೇ ಇರುವ 'ಕಿಂದರಿಜೋಗಿ'ಗೆ ವಿಸ್ಮಯಕರ ಇತಿಹಾಸವಿದೆ.

ಆಗಿನ್ನೂ ಕುವೆಂಪು ಆಗಿರದ, 'ಕಿಶೋರಚಂದ್ರವಾಣಿ' ಮಾತ್ರವಾಗಿದ್ದ 22 ವರ್ಷದ ಯುವಕವಿ ಪುಟ್ಟಪ್ಪ, ವಿದ್ಯಾರ್ಥಿಯಾಗಿದ್ದಾಗ ಒಮ್ಮೆ ಅನಾರೋಗ್ಯಕ್ಕೆ ತುತ್ತಾಗಿ, ಮೈಸೂರಿನಿಂದ ಊರಿಗೆ ಹೊರಡುತ್ತಾರೆ. ವಾಡಿಕೆಯಂತೆ ಶಿವಮೊಗ್ಗದಲ್ಲಿ ದೇವಂಗಿ ರಾಮಣ್ಣಗೌಡರ ಅಡಿಕೆ ಮಂಡಿಯಲ್ಲಿ ಕೆಲವು ದಿನ ಉಳಿದುಕೊಳ್ಳುತ್ತಾರೆ. ಭೂಪಾಳಂ ಚಂದ್ರಶೇಖರಯ್ಯ ಮೊದಲಾದ ಗೆಳೆಯರ ಸಹವಾಸ ಮತ್ತು ದೇವಂಗಿ ಮಾನಪ್ಪನವರ ಆತಿಥ್ಯದಲ್ಲಿ ಅನಾರೋಗ್ಯದ ಆಯಾಸದಿಂದ ಚೇತರಿಸಿಕೊಳ್ಳುತ್ತಿರುತ್ತಾರೆ. ದೇಹ–ಮನಸ್ಸು ಪ್ರಫುಲ್ಲವಾದಂತೆ ಕವಿಗೆ ಬರೆಯುವ ಉತ್ಸಾಹ ಮೈದೋರುತ್ತದೆ. ಆ ಉತ್ಸಾಹದಲ್ಲಿ, 1926ರ ನ. 19ರಂದು 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಎಂಬ ದೀರ್ಘ ಕವಿತೆಯ (14 ಭಾಗಗಳು; 428 ಸಾಲುಗಳು) ರಚನೆ ಕೇವಲ ನಾಲ್ಕು ಗಂಟೆಯಲ್ಲಿ ಮುಗಿದುಹೋಗುತ್ತದೆ! ರಚನೆಯ ಜೊತೆ ಜೊತೆಗೇ ಪ್ರತಿಯೆತ್ತುವ ಕೆಲಸವನ್ನು ಮಾನಪ್ಪ ಮಾಡುತ್ತಾರೆ. ಅಂದರೆ, ಇಡೀ ರಚನೆ, ಕವಿಯಿಂದ ಮರುಓದಿಗೆ, ತಿದ್ದುಪಡಿಗೆ ಒಳಪಡುವುದೇ ಇಲ್ಲ.

'ಬೊಮ್ಮನಹಳ್ಳಿಯ ಕಿಂದರಿಜೋಗಿ' ನೀಳ್ಗವಿತೆಯ ರಚನೆಯ ಬಗೆಗೆ ಕವಿ, 'ಬೆಳಿಗ್ಗೆ ಸ್ನಾನ, ಕಾಫಿ, ತಿಂಡಿ ಪೂರೈಸಿ ಉಪ್ಪರಿಗೆಗೆ ಹೋಗಿ, ಮೇಜಿನ ಮುಂದಿದ್ದ ಕುರ್ಚಿಯ ಮೇಲೆ ಕುಳಿತು, ಬಿಡಿ ಹಾಳೆಗಳಲ್ಲಿ ಬರೆಯತೊಡಗಿದೆ. ಒಂದೊಂದೇ ಹಾಳೆ ತುಂಬಿದಂತೆಲ್ಲ ಅದನ್ನು ಕೆಳಗೆ ಹಾಕುತ್ತಿದ್ದೆ. ಮಾನಪ್ಪ ಈಗ ನನ್ನ ಬಳಿ ಇರುವ ನೋಟುಬುಕ್ಕಿನ ಹಸ್ತಪ್ರತಿಗೆ ಅದನ್ನು ಕಾಪಿ ಮಾಡುತ್ತಾ ಹೋಗುತ್ತಿದ್ದ. ಮಧ್ಯಾಹ್ನದ ಊಟದ ಹೊತ್ತಿಗೆ ಬರೆಯುವುದೂ ಪೂರೈಸಿತ್ತು! ಅಂದರೆ ಅದರ ರಚನೆಗೆ ಸುಮಾರು ನಾಲ್ಕು–ಐದು ಗಂಟೆ ಹಿಡಿದಿತ್ತು' ಎನ್ನುತ್ತಾರೆ.



'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯ ಕಂಪು, ಕವಿಗೋಷ್ಠಿಗಳ ಮೂಲಕ ಕರ್ನಾಟಕದಾದ್ಯಂತ ಪಸರಿಸಿತು. ಕನ್ನಡ ಮಕ್ಕಳ ನಾಲಿಗೆಯಲ್ಲಿ ನಲಿಯತೊಡಗಿತು. 1928ರಲ್ಲಿ ಮೊದಲ ಬಾರಿಗೆ ಪ್ರಕಟವಾದಾಗ, ಅದನ್ನು ಬ್ರೌನಿಂಗ್ ಕವಿಯ 'ಪೈಡ್ ಪೈಪರ್ ಆಫ್ ಹ್ಯಾಮಲಿನ್' ಕವನದ ಭಾಷಾಂತರವೆಂದು ಕೆಲವರು, ಅನುವಾದವೆಂದು ಕೆಲವರು ವಾದಿಸತೊಡಗಿದರು. ಆದರೆ ಅದು ಅವೆರಡೂ ಆಗಿರಲಿಲ್ಲ!

'ಅದು ಮೊದಲು 'ಕಿರಿಯ ಕಾಣಿಕೆ'ಯಲ್ಲಿ ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದಿಂದ 1928ರಲ್ಲಿ ಪ್ರಕಟವಾದಾಗ, ಅದು 'ಬ್ರೌನಿಂಗ್ ಕವಿಯ ಕವಿತೆಯ ಆಧಾರದ ಮೇಲೆ ರಚಿತವಾದದ್ದು' ಎಂಬ ಉಲ್ಲೇಖವಿದೆ. ಅದು ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಭಾಷಾಂತರವಾಗುವುದಿಲ್ಲ; ಕಡೆಗೆ, ಸಮೀಪದ ಅನುವಾದ ಕೂಡ ಆಗುವುದಿಲ್ಲ. ಅದನ್ನು ಬರೆಯುವಾಗ ಶಿವಮೊಗ್ಗದಲ್ಲಿ ನನ್ನ ಬಳಿ ಬ್ರೌನಿಂಗ್‌ರ ಕೃತಿ ಇರಲಿಲ್ಲ. ಅಷ್ಟೇ ಅಲ್ಲ, ಇಂಗ್ಲಿಷಿನಲ್ಲಿ ಅದನ್ನು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ನಾನು ಐದನೇ ಫಾರಂನಲ್ಲಿ ಓದುತ್ತಿದ್ದಾಗ ಪಠ್ಯಪುಸ್ತಕದಲ್ಲಿ ಓದಿದ್ದೇನೆ ಹೊರತು, ಆಮೇಲೆ ಅದನ್ನು ಓದಿರಲೂ ಇಲ್ಲ. ಆದ್ದರಿಂದ ಅದು ಭಾಷಾಂತರವೂ ಅಲ್ಲ, ಅನುವಾದವೂ ಅಲ್ಲ. ಆ ಕಥೆಯ ನೆನಪಿನ ಆಧಾರದ ಮೇಲೆ ರಚಿತವಾದದ್ದು ಎಂದು ಹೇಳಬಹುದು' ಎಂದಿದ್ದಾರೆ ಕುವೆಂಪು.

ಮುಂದೆ, ಕಿಂದರಜೋಗಿ ಪ್ರತ್ಯೇಕವಾಗಿ ಪ್ರಕಟವಾದಾಗ, ಅದಕ್ಕೆ ಪ್ರಸಿದ್ಧ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್ ಅವರು ರೇಖಾಚಿತ್ರಗಳನ್ನು ಬರೆದಿದ್ದು ಮತ್ತೊಂದು ವಿಶೇಷ!

ಮಕ್ಕಳ ಸಂಗದೊಳೆಚ್ಚರಗೊಳ್ಳಲಿ/ ಆನಂದದ ಆ ದಿವ್ಯ ಶಿಶು;/ ಹಾಡಲಿ ಕುಣಿಯಲಿ; ಹಾರಲಿ, ಏರಲಿ/ ದಿವಿಜತ್ವಕೆ ಈ ಮನುಜಪಶು!' ಎಂಬ ಮುಂಬರಹ 'ಕಿಂದರಿಜೋಗಿ'ಗಿದೆ. ಪ್ರತಿಯೊಬ್ಬರಲ್ಲೂ ಯಾವಾಗಲೂ (ನಿತ್ಯ ಕಿಶೋರತೆ) ಇರುವ 'ಮಗು'ತ್ವ ಮಕ್ಕಳ ಸಂಗದಲ್ಲಿ ಪ್ರಕಟವಾಗುತ್ತದೆ. ಅದು 'ಆನಂದದ ದಿವ್ಯ ಶಿಶು' ಎಂಬುದು ಕವಿಯ ಅಭಿಪ್ರಾಯ.

ಶತಮಾನದ ಹೊಸ್ತಿಲಲ್ಲಿ ನಿಂತಿರುವ 'ಕಿಂದರಿಜೋಗಿ' ಐವತ್ತಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ. ಹಾಡುಗಬ್ಬವಾಗಿ, ರೇಡಿಯೊ ನಾಟಕವಾಗಿ, ರಂಗರೂಪವಾಗಿ, ನಾಟಕವಾಗಿ ಕನ್ನಡಿಗರ ಮನೆ ಮನ ತಲಪಿದೆ; ತಲಪುತ್ತಿದೆ. ಮೂರು ದಶಕಗಳ ಹಿಂದೆಯೇ, ಮೈಸೂರಿನ ರಂಗಾಯಣದ ಆವರಣದಲ್ಲಿ ಕಿಂದರಿಜೋಗಿಯ ಕಲಾಕೃತಿಯೊಂದನ್ನು ರಚಿಸಿ ಪ್ರದರ್ಶನಕ್ಕಿಡಲಾಗಿದ್ದು, ಅದು ಈಗಲೂ ಆಕರ್ಷಣೆಯ ಕೇಂದ್ರವಾಗಿದೆ. ಇಷ್ಟೊಂದು ವ್ಯಾಪಕವಾಗಿ ನಾಡಿನ ಮಕ್ಕಳನ್ನೂ ದೊಡ್ಡವರನ್ನೂ ತಲಪಿದ ಕನ್ನಡ ಶಿಶುಸಾಹಿತ್ಯ ಕೃತಿ ಮತ್ತೊಂದಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಯೋತ್ಪಾದನೆಯ 'ಹೊಸ' ಮುಖ ವೈಟ್ ಕಾಲರ್ ಉಗ್ರರು

ದೆಹಲಿ ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲಿ ಐವರು ವೈದ್ಯರನ್ನು ಬಂಧಿಸಿದ ಬಳಿಕ 'ವೈಟ್ ಕಾಲರ್ ಭಯೋತ್ಪಾದನೆ'ಯ ಚರ್ಚೆ ಆರಂಭವಾಗಿದೆ. ವೃತ್ತಿಪರ ಶಿಕ್ಷಣ ಅಥವಾ ಉನ್ನತ ಶಿಕ್ಷಣ ಪಡೆದಿರುವವರು ಭಯೋತ್ಪಾದನೆಯಲ್ಲಿ ತೊಡಗಿದರೆ ಅದನ್ನು 'ವೈಟ್ ಕಾಲರ್ ಭಯೋತ್ಪಾದನೆ' ಎನ್ನಲಾಗುತ್ತದೆ. ಧಾರ್ಮಿಕ ಮೂಲಭೂತವಾದಿಗಳಿಂದ 'ಬ್ರೈನ್ ವಾಶ್'ಗೆ ಒಳಗಾದ ಬಡವರು, ಅನಕ್ಷರಸ್ಥರು ಉಗ್ರರಾಗಿ ಬದಲಾಗುತ್ತಾರೆ ಎಂಬುದು ಸಾಮಾನ್ಯ ನಂಬಿಕೆ. ಆದರೆ, ಈಗ ಅದು ಬದಲಾಗಿದೆ. ಉನ್ನತ ಶಿಕ್ಷಣ ಪಡೆದು, ಉತ್ತಮ ಉದ್ಯೋಗದಲ್ಲಿ ಇರುವವರು ಕೂಡ ಉಗ್ರರಾಗುತ್ತಿದ್ದಾರೆ



> 'ವೈಟ್ ಕಾಲರ್ ಭಯೋತ್ಪಾದನೆ' ಪರಿಕಲ್ಪನೆಯು 'ವೈಟ್ ಕಾಲರ್ ಅಪರಾಧ' ಎಂಬುದರಿಂದ ಪ್ರೇರಿತವಾದುದು. 1939ರಿಂದಲೇ ಈ ಪದ ಚಾಲ್ತಿಯಲ್ಲಿದೆ. ಅಮೆರಿಕದ ಎಫ್‌ಬಿಐ ಪ್ರಕಾರ, ಉದ್ಯಮಿಗಳು, ಸರ್ಕಾರಿ ಅಧಿಕಾರಿಗಳು ನಡೆಸುವ ವಿವಿಧ ರೀತಿಯ ವಂಚನೆ, ಹಗರಣಗಳನ್ನು 'ವೈಟ್ ಕಾಲರ್ ಅಪರಾಧ' ಎಂದು ಕರೆಯಲಾಗುತ್ತದೆ. ಈ ಅಪರಾಧಗಳು ಹಿಂಸಾ ರೂಪದ್ದಲ್ಲ. ಸಾರ್ವಜನಿಕ ಭ್ರಷ್ಟಾಚಾರ, ಆರೋಗ್ಯ ಕ್ಷೇತ್ರದಲ್ಲಿನ ಹಗರಣ, ಸಾಲ ಅವ್ಯವಹಾರ, ಷೇರು ಹಗರಣ, ಹಣದ ಅಕ್ರಮ ವರ್ಗಾವಣೆ ಮುಂತಾದ ಅಪರಾಧ ಕೃತ್ಯಗಳು 'ವೈಟ್ ಕಾಲರ್' ಅಪರಾಧಗಳ ಪಟ್ಟಿಯಲ್ಲಿವೆ.

ಪ್ರಜಾವಾಣಿ ವಾರ್ತೆ

2008ರ ನವೆಂಬರ್ 26ರಂದು ನಡೆದಿದ್ದ ಮುಂಬೈ ಭಯೋತ್ಪಾದನಾ ದಾಳಿ ಸಂಬಂಧ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ ಏಕೈಕ ಉಗ್ರ ಅಜ್ಮಲ್ ಕಸಬ್. ಪಾಕಿಸ್ತಾನದ ಉಗ್ರ ಸಂಘಟನೆಗಳು ಯುವಕರನ್ನು ಹೇಗೆ 'ಸೆಳೆಯುತ್ತವೆ' ಎನ್ನುವುದು ಕಸಬ್‌ನಿಂದ ಸ್ಪಷ್ಟವಾಗಿತ್ತು. ಹಬ್ಬದ ದಿನ ಅಪ್ಪ ಹೊಸ ಬಟ್ಟೆ ಕೊಡಿಸಲಿಲ್ಲ ಎಂದು ಮುನಿಸಿಕೊಂಡು ಮನೆ ತೊರೆದಿದ್ದ ಅವನು, ಸಣ್ಣಪುಟ್ಟ ಅಪರಾಧ ಕೃತ್ಯಗಳಲ್ಲಿ ತೊಡಗಿ ಹಣ ಸಂಪಾದನೆ ಮಾಡುತ್ತಿದ್ದ. ಅವನನ್ನು ಲಷ್ಕರ್–ಎ–ತಯಬಾ (ಎಲ್‌ಇಟಿ) ಹಣದ ಆಮಿಷ ತೋರಿಸಿ ಸಂಘಟನೆಗೆ ಸೆಳೆದಿತ್ತು. ಅವನಿಗೆ ತರಬೇತಿ ನೀಡಿ ಉಗ್ರನನ್ನಾಗಿ ಮಾಡಿತ್ತು. ₹1.5 ಲಕ್ಷವನ್ನು ಅವನ ಕುಟುಂಬಕ್ಕೆ ಕೊಡುವುದಾಗಿ ಆಸೆ ಹುಟ್ಟಿಸಿ, ಕಸಬ್‌ನನ್ನು ಮುಂಬೈ ಮೇಲೆ ದಾಳಿ ಮಾಡಲು ಮನವೊಲಿಸಲಾಗಿತ್ತು.

ಜಾಗತಿಕ ಮಟ್ಟದಲ್ಲಿಯೂ ಬಹುತೇಕ ಉಗ್ರಸಂಘಟನೆಗಳು ಇದೇ ಮಾದರಿಯಲ್ಲಿ ಸಂಘಟನೆಗೆ ಯುವಕರನ್ನು ನೇಮಕ ಮಾಡಿಕೊಳ್ಳುತ್ತಿದ್ದವು. ಬಡವರು, ದಿಕ್ಕಿಲ್ಲದವರು, ಅನಕ್ಷರಸ್ಥರು, ಶಾಲೆ ತೊರೆದ ಯುವಕರೇ ಉಗ್ರ ಸಂಘಟನೆಗಳ ಗುರಿಯಾಗಿದ್ದರು. ಲೋಕಜ್ಞಾನ ಇಲ್ಲದ ಮಕ್ಕಳನ್ನೂ ಭಯೋತ್ಪಾದನಾ ಸಂಘಟನೆಗಳು ಆರ್ಥಿಕ ನೆರವು ಸೇರಿದಂತೆ ಹಲವು ರೀತಿಯ ಆಮಿಷ, ಒತ್ತಡ, ಬೆದರಿಕೆ ಒಡ್ಡಿ ಸಂಘಟನೆಗಳಿಗೆ ನೇಮಿಸಿಕೊಂಡು, ಅವರಿಂದ ದುಷ್ಕೃತ್ಯಗಳನ್ನು ಮಾಡಿಸುತ್ತವೆ. ಯುನಿಸೆಫ್‌ನ ಒಂದು ವರದಿಯ ಪ್ರಕಾರ, 2005ರಿಂದ 2022ರವರೆಗೆ 1.05 ಲಕ್ಷ ಮಕ್ಕಳು ಉಗ್ರ ಸಂಘಟನೆಗಳಿಗೆ ಸೇರಿದ್ದಾರೆ. ವಾಸ್ತವ ಸಂಖ್ಯೆಯು ಅದಕ್ಕಿಂತಲೂ ಹೆಚ್ಚಿರುವ ಸಾಧ್ಯತೆ ಇದೆ ಎಂದೂ ವರದಿ ಹೇಳಿದೆ. ಇವು ಭಯೋತ್ಪಾದನಾ ಜಾಲ ರೂಪಿಸುವ ಪಾರಂಪರಿಕ ವಿಧಾನಗಳಾಗಿದ್ದವು.

ದೆಹಲಿಯಲ್ಲಿ ಮೂರು ದಿನಗಳ ಹಿಂದೆ ನಡೆದ ಕಾರು ಸ್ಫೋಟ ಘಟನೆಯು ಹೊಸ ರೀತಿಯ ಭಯೋತ್ಪಾದನಾ ಜಾಲ ಸಕ್ರಿಯವಾಗಿರುವುದನ್ನು ಬಹಿರಂಗ ಪಡಿಸಿದೆ. ಭದ್ರತಾ ಪಡೆಗಳು, ತನಿಖಾ ಸಂಸ್ಥೆಗಳು ಇದನ್ನು 'ವೈಟ್ ಕಾಲರ್' ಭಯೋತ್ಪಾದನಾ ಜಾಲ ಎಂದು ವಿಶ್ಲೇಷಿಸುತ್ತಿವೆ. ಉನ್ನತ ವಿದ್ಯಾಭ್ಯಾಸ ಪಡೆದ, ವಿಶ್ವವಿದ್ಯಾಲಯದಲ್ಲಿ ಬೋಧಕರಾಗಿದ್ದ ಮೂವರು ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗಿದೆ. ತನಿಖೆಯ ಭಾಗವಾಗಿ ಅಧಿಕಾರಿಗಳು ಬಂಧಿಸಿರುವವರಲ್ಲಿ ಐವರು ವೈದ್ಯರಿದ್ದಾರೆ. ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾ ಭಯೋತ್ಪಾದನಾ ಕೃತ್ಯದಲ್ಲಿ ಅವರು ತೊಡಗಿದ್ದಾರೆ ಎಂದು ಆರೋಪಿಸಲಾಗಿದೆ.

ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವೈದ್ಯಕೀಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ, ಪುಲ್ವಾಮಾದ ಡಾ.ಉಮರ್ ನಬಿ, ವೈದ್ಯ, ಅದೇ ವಿ.ವಿಯ ಬೋಧಕ ಡಾ.ಮುಜಮ್ಮಿಲ್ ಗನ್ಯೆ, ಅದೇ ಕಾಲೇಜಿನ ಪ್ರಾಧ್ಯಾಪಕಿ, ವೈದ್ಯೆ ಡಾ.ಶಾಹೀನ್ ಸಯೀದ್, ವೈದ್ಯ ಡಾ. ಪರ್ವೇಜ್ ಅನ್ಸಾರಿ, ಅನಂತನಾಗ್‌ನ ಡಾ.ಆದಿಲ್ ಅಹ್ಮದ್ ಅವರು ಭಯೋತ್ಪಾದನೆ ಸಂಘಟನೆಗಳೊಂದಿಗೆ ನಂಟು ಹೊಂದಿದ್ದರು ಎನ್ನಲಾಗಿದೆ. ನಿಷೇಧಿತ ಜೈಷ್–ಎ–ಮೊಹಮ್ಮದ್ (ಜೆಇಎಂ) ಮತ್ತು ಅನ್ಸಾರ್ ಗಜ್ವತ್–ಉಲ್–ಹಿಂದ್ ಉಗ್ರ ಸಂಘಟನೆಗಳೊಂದಿಗೆ ಸೇರಿ ಇವರು ಸಂಚು ರೂಪಿಸಿದ್ದರು ಎನ್ನುವ ಆರೋಪ ಇದೆ.

ಆಧಾರ: ಪಿಟಿಐ, ಅಮೆರಿಕನ್ ಎಂಟರ್‌ಪ್ರೈಸ್ ಇನ್‌ಸ್ಟಿಟ್ಯೂಟ್ ವರದಿ, ವಿಶ್ವಸಂಸ್ಥೆಯ ಮಾದಕದ್ರವ್ಯ ಮತ್ತು ಅಪರಾಧ ವಿಭಾಗ, ದಿ ಗಾರ್ಡಿಯನ್, ಎಫ್‌ಬಿಐ

ವೈದ್ಯರ ನೇಮಕಾತಿ ಏಕೆ?

ಕೆಲವು ವರ್ಷಗಳವರೆಗೂ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಎಂಜಿನಿಯರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಂಡಿರುವ ಬಗ್ಗೆ ವರದಿಯಾಗುತ್ತಿತ್ತು. ಇತ್ತೀಚೆಗೆ ವೈದ್ಯರು ಕೂಡ ಈ ಜಾಲದ ಭಾಗವಾಗಿರುವುದು ಕಂಡುಬರುತ್ತಿದೆ. ಸಂಘಟನೆಗಳು ಎಂಜಿನಿಯರ್‌ಗಳ ಜೊತೆಗೆ ವೈದ್ಯರನ್ನು ನೇಮಕಾತಿ ಮಾಡಲು ಮುಂದಾಗುತ್ತಿವೆ. ವೈದ್ಯರು ಹೆಚ್ಚು ಜ್ಞಾನ, ಕೌಶಲ ಹೊಂದಿರುತ್ತಾರೆ, ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಸಾಮಾಜಿಕವಾಗಿ ಹೆಚ್ಚು ಜನರೊಂದಿಗೆ ತೊಡಗಿಸಿಕೊಂಡಿರುತ್ತಾರೆ. ಸಮಾಜದಲ್ಲಿ ಗೌರವವನ್ನೂ ಹೊಂದಿರುತ್ತಾರೆ. ಅವರು ನಡೆಸುವ ಚಟುವಟಿಕೆಗಳ ಬಗ್ಗೆ ಜನರಿಗೆ ಯಾವುದೇ ಅನುಮಾನ ಬರುವುದಿಲ್ಲ ಎಂಬ ಕಾರಣಕ್ಕೆ ಭಯೋತ್ಪಾದನಾ ಜಾಲಗಳು ವೈದ್ಯರನ್ನು ತಮ್ಮತ್ತ ಸೆಳೆಯಲು ಯತ್ನಿಸುತ್ತಿವೆ ಎಂಬುದು ತಜ್ಞರ ವಾದ.

ಉಗ್ರರಾಗುವುದೇಕೆ?

ಉನ್ನತ ಶಿಕ್ಷಣ ಪಡೆದವರು, ಆರ್ಥಿಕವಾಗಿ ಸದೃಢರಾದವರು ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದರೂ ಭಯೋತ್ಪಾದನಾ ಸಂಘಟನೆಗಳಿಗೆ ಸೇರುವುದಕ್ಕೆ ಹಲವು ಕಾರಣಗಳಿವೆ

- ತಮ್ಮನ್ನು ಶೋಷಿಸಲಾಗುತ್ತಿದೆ, ಸಮಾಜದಲ್ಲಿ ಗೌರವ ಸಿಗುತ್ತಿಲ್ಲ, ಸಮುದಾಯದ ಉಳಿವಿಗೆ ಬೆದರಿಕೆ ಒಡ್ಡಲಾಗುತ್ತಿದೆ ಮುಂತಾದ ಭಾವನಾತ್ಮಕ ಕಾರಣಗಳು
- ಮೂಲಭೂತವಾದದ ಸೆಳೆತ
- ಸಂಘಟನೆ ಆಧಾರಿತವಾಗಿ ಗುರುತಿಸಿಕೊಳ್ಳುವ ಬಯಕೆ
- ಭಯೋತ್ಪಾದನಾ ಜಾಲಗಳೊಂದಿಗೆ ಕುಟುಂಬದ ಸದಸ್ಯರು, ಸ್ನೇಹಿತರು ಹೊಂದಿರುವ ಸಂಪರ್ಕ
- ಸಂಘಟನೆಗಳ ಸಿದ್ಧಾಂತ, ನಿಲುವುಗಳ ಆಕರ್ಷಣೆ
- ಆರ್ಥಿಕ ಸಂಕಷ್ಟ; ಇನ್ನಷ್ಟು ಹಣ ಸಂಪಾದಿಸುವ ಉದ್ದೇಶ
- ಗೌರವ, ಜನಪ್ರಿಯತೆ ಗಳಿಸುವ ಆಸೆ

ಹೊಸ ಪರಿಕಲ್ಪನೆ ಅಲ್ಲ

ವೈಟ್ ಕಾಲರ್ ಭಯೋತ್ಪಾದನೆ ಪರಿಕಲ್ಪನೆ ಹೊಸದೇನಲ್ಲ. ಉನ್ನತ ಶಿಕ್ಷಣ ಪಡೆದವರು, ಆರ್ಥಿಕವಾಗಿ ಸದೃಢ ಕುಟುಂಬಗಳಿಗೆ ಸೇರಿದವರು ಭಯೋತ್ಪಾದನೆ ಚಟುವಟಿಕೆಗಳಲ್ಲಿ ತೊಡಗಿಕೊಂಡ ಉದಾಹರಣೆಗಳು ಸಾಕಷ್ಟಿವೆ.

- ಬಹುತೇಕ ಭಯೋತ್ಪಾದಕ ಸಂಘಟನೆಗಳಲ್ಲಿ ಉನ್ನತ ಸ್ಥಾನಗಳಲ್ಲಿ ಇದ್ದವರು, ಇರುವವರಲ್ಲಿ ಹೆಚ್ಚಿನವರು ಉನ್ನತ ಶಿಕ್ಷಣ ಪಡೆದವರೇ. ಇವರು ಆರ್ಥಿಕವಾಗಿ ಅನುಕೂಲಸ್ಥ ಕುಟುಂಬಗಳಿಗೆ ಸೇರಿದವರು. ಅಧ್ಯಯನಗಳೇ ಇದನ್ನು ಹೇಳಿವೆ
- ಶ್ರೀಲಂಕಾದಲ್ಲಿ ಸಕ್ರಿಯವಾಗಿದ್ದ ಎಲ್‌ಟಿಟಿಇ ಬಂಡುಕೋರ ಸಂಘಟನೆಯು ವಿಶ್ವವಿದ್ಯಾಲಯ ವಿದ್ಯಾರ್ಥಿಗಳನ್ನು, ಸಂಶೋಧಕರನ್ನು ನೇಮಕಾತಿ ಮಾಡಿಕೊಳ್ಳುತ್ತಿತ್ತು. ಆ ಸಂಘಟನೆಯ ಅಂತರರಾಷ್ಟ್ರೀಯ ಜಾಲದಲ್ಲಿ ಉನ್ನತ ಹುದ್ದೆಗಳಲ್ಲಿ ಉನ್ನತ ಶಿಕ್ಷಣ ಪಡೆದವರೇ ಇದ್ದರು
- ಖಾಲಿಸ್ತಾನಕ್ಕಾಗಿ ಹೋರಾಟ ನಡೆಸುತ್ತಿರುವ ಸಿಖ್ ಪ್ರತ್ಯೇಕತಾವಾದಿಗಳಲ್ಲಿ ಬಹುತೇಕರು ಉನ್ನತ ಶಿಕ್ಷಣ ಪಡೆದವರು ಮತ್ತು ವಿದೇಶದಲ್ಲಿ ದೊಡ್ಡ ಹುದ್ದೆಗಳಲ್ಲಿ ಇರುವವರು
- ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಘಟನೆಯು ಹಿಂದಿನಿಂದಲೂ ಪದವೀಧರರು ಹಾಗೂ ವೃತ್ತಿಪರ ಶಿಕ್ಷಣ ಪಡೆದವರನ್ನು ನೇಮಕ ಮಾಡಿಕೊಳ್ಳುತ್ತಾ ಬಂದಿದೆ. ಈ ಬಗ್ಗೆ ವಿಶ್ವಸಂಸ್ಥೆಯೇ ಅಧ್ಯಯನ ನಡೆಸಿದೆ
- 2011ರ ಸೆಪ್ಟೆಂಬರ್ 9ರಂದು ಅಮೆರಿಕದ ವಿಶ್ವ ವ್ಯಾಪಾರ ಕೇಂದ್ರದ ಅವಳಿ ಕಟ್ಟಡಗಳ ಮೇಲೆ ದಾಳಿ ನಡೆಸಿದ ವಿಮಾನ ಅಪಹರಣಕಾರರ ನಾಯಕತ್ವ ವಹಿಸಿದ್ದ ಮೊಹಮ್ಮದ್ ಅಟ್ಟಾ ನಗರ ಯೋಜನೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ
- ಅಲ್ ಕೈದಾ ಮುಖ್ಯಸ್ಥನಾಗಿದ್ದ ಒಸಾಮ ಬಿನ್ ಲಾಡೆನ್ ಸಿವಿಲ್ ಎಂಜಿನಿಯರಿಂಗ್ ಕಲಿತವನು. ಅವನ ಉತ್ತರಾಧಿಕಾರಿಯಾಗಿದ್ದ ಅಯ್ಮನ್ ಅಲ್–ಜವಾಹಿರಿ ವೈದ್ಯಕೀಯ ಪದವೀಧರ
- ಈಗ ಭಾರತದ ಜೈಲಿನಲ್ಲಿರುವ, 26/11 ಮುಂಬೈ ದಾಳಿಯ ಸಂಚುಕೋರ ಡೇವಿಡ್ ಕೋಲ್ಮನ್ ಹೆಡ್ಲಿ, ಪಾಕಿಸ್ತಾನದ ಸೈನಿಕ ಶಾಲೆಯಲ್ಲಿ ಕಲಿತವ. ಅಮೆರಿಕದಲ್ಲಿ ಉದ್ಯಮಿಯಾಗಿದ್ದುಕೊಂಡು ಆರ್ಥಿಕವಾಗಿ ಪ್ರಬಲನಾಗಿದ್ದ
- ನಿಷೇಧಿತ ಇಂಡಿಯನ್ ಮುಜಾಹಿದೀನ್ ಸಂಘಟನೆಯ ಅಬ್ದುಲ್ ಶುಭನ್ ಖುರೇಷಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದವ
- ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಸಂಘಟನೆಗಳು ಶಾಲೆಯಿಂದ ಹೊರಗುಳಿದ, ಬಡ ಕುಟುಂಬಗಳ ಮಕ್ಕಳು, ಯುವಕರನ್ನು ಸಂಘಟನೆಗೆ ಸೇರಿಸಿಕೊಂಡು ಅವರ ತಲೆಯಲ್ಲಿ ಮೂಲಭೂತವಾದ ತುಂಬಿ ಭಯೋತ್ಪಾದನಾ ತರಬೇತಿ ನೀಡಿದರೆ, ಮೂಲಭೂತವಾದದ ಅಮಲೇರಿಸಿಕೊಂಡ ವಿದ್ಯಾವಂತ ಯುವಜನರು ನಗರ, ಪಟ್ಟಣ ಪ್ರದೇಶಗಳಲ್ಲಿ ನೆಲಸಿ ಸಾಮಾಜಿಕ ಜಾಲತಾಣಗಳ ಮೂಲಕ ಭಯೋತ್ಪಾದನಾ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿರುವ ಬಗ್ಗೆ ಪೊಲೀಸರು, ಭದ್ರತಾ ಪಡೆಗಳು ವರ್ಷಗಳ ಹಿಂದೆಯೇ ಗಮನ ಸೆಳೆದಿದ್ದವು. ತನಿಖಾ ಸಂಸ್ಥೆಗಳು ಇವರನ್ನು 'ಸೈಬರ್ ಭಯೋತ್ಪಾದಕರು' ಎಂದು ಕರೆದಿದ್ದರು
- ಸಂಘಟನೆಯ ಆಯಕಟ್ಟಿನ ಹುದ್ದೆಯಲ್ಲಿರುವ ವೈಟ್ ಕಾಲರ್ ಭಯೋತ್ಪಾದಕರು ಹೊರ ದೇಶಗಳ ಸಂಘಟನೆಗಳು, ಭಯೋತ್ಪಾದಕರೊಂದಿಗೆ ಸಂಪರ್ಕ, ಸಂವಹನ ಸಾಧಿಸುವ ಕೆಲಸ ಮಾಡುತ್ತಾರೆ. ಇದರೊಂದಿಗೆ ನೇಮಕಾತಿ, ಸಾರಿಗೆ ಯೋಜನೆ, ಶಸ್ತ್ರ, ಸ್ಫೋಟಕಗಳ ಖರೀದಿ, ಸಂಗ್ರಹ, ದೇಣಿಗೆ ಸಂಗ್ರಹ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ



ರಾಷ್ಟ್ರೀಯ

ವಿವಾದಾತ್ಮಕ ಮಸೂದೆ ಜಂಟಿ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕನಿಷ್ಠ 30 ದಿನ ಜೈಲುವಾಸ ಅನುಭವಿಸಿದ ಪ್ರಧಾನಿ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿ, ಸಚಿವರನ್ನು ಹುದ್ದೆಯಿಂದ ಪದಚ್ಯುತಗೊಳಿಸಲು ಅವಕಾಶ ಕಲ್ಪಿಸುವ ವಿವಾದಾತ್ಮಕ ಮಸೂದೆಗಳನ್ನು ಪರಿಶೀಲಿಸಲು ಸಂಸತ್ತಿನ ಜಂಟಿ ಸಮಿತಿಯನ್ನು ರಚಿಸಲಾಗಿದೆ.

ಮಸೂದೆಯನ್ನು ಸಂಸದರ ಸಮಿತಿಯ ಪರಿಶೀಲನೆಗೆ ಕಳುಹಿಸುವ ನಿರ್ಣಯವನ್ನು ಸಂಸತ್ತು ಅಂಗೀಕರಿಸಿ 84 ದಿನಗಳು ಕಳೆದಿವೆ. ಆದರೆ, ಎನ್‌ಸಿಪಿ (ಎಸ್‌ಪಿ) ಹೊರತುಪಡಿಸಿ ಇಂಡಿಯಾ ಮೈತ್ರಿಕೂಟವು ಯಾವುದೇ ಸಂಸದರನ್ನು ಈ ಸಮಿತಿಗೆ ನಾಮನಿರ್ದೇಶನ ಮಾಡಲು ನಿರಾಕರಿಸಿದ್ದರಿಂದ ಸಮಿತಿ ರಚನೆ ಕಾರ್ಯ ಬಾಕಿ ಉಳಿದಿತ್ತು.


ಬಿಜೆಪಿಯ ಅಪರಾಜಿತಾ ಸಾರಂಗಿ ಅಧ್ಯಕ್ಷತೆಯಲ್ಲಿ 31 ಸದಸ್ಯರ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ ಬಿಜೆಪಿಯ 15 ಮಂದಿ ಸೇರಿ ಎನ್‌ಡಿಎನ 26 ಸಂಸದರು, ವಿರೋಧ ಪಕ್ಷಗಳ ನಾಲ್ವರು ಸದಸ್ಯರಿದ್ದಾರೆ. ಕರ್ನಾಟಕದ ಸುಧಾಮೂರ್ತಿ ಈ ಸಮಿತಿಗೆ ನಾಮನಿರ್ದೇಶಿತ ಸದಸ್ಯರಾಗಿದ್ದಾರೆ. ಜೆಡಿಎಸ್ ಸಂಸದ ಎಂ. ಮಲ್ಲೇಶಬಾಬು ಸಹ ಈ ಸಮಿತಿ ಸದಸ್ಯರು.

ಸುಪ್ರಿಯಾ ಸುಳೆ (ಎನ್‌ಸಿಪಿ–ಎಸ್‌ಪಿ), ಅಕಾಲಿ ದಳದ ಹರ್‌ಸಿಮ್ರತ್ ಕೌರ್, ವೈಎಸ್‌ಆರ್ ಕಾಂಗ್ರೆಸ್‌ನ ಎಸ್. ನಿರಂಜನ ರೆಡ್ಡಿ ಮತ್ತು ಎಐಎಂಐಎಂನ ಅಸಾದುದ್ದೀನ್ ಓವೈಸಿ ಈ ಸಮಿತಿಯಲ್ಲಿರುವ ವಿರೋಧ ಪಕ್ಷಗಳ ಸಂಸದರು. ಬಿಜೆಡಿ ಮತ್ತು ಬಿಆರ್‌ಎಸ್‌ನ ಸಂಸದರು ಈ ಸಮಿತಿಯಲ್ಲಿ ಇಲ್ಲ.

ಸಮಿತಿಯಲ್ಲಿ ಲೋಕಸಭೆಯ 21, ರಾಜ್ಯಸಭೆಯ 10 ಸದಸ್ಯರು ಇದ್ದಾರೆ. ಮುಂದಿನ ಚಳಿಗಾಲದ ಅಧಿವೇಶನದ ಮೊದಲ ವಾರದ ಕೊನೆಯ ದಿನ ಸಮಿತಿ ವರದಿ ಸಲ್ಲಿಸಲಿದೆ. ಆದರೂ, ವರದಿ ಸಲ್ಲಿಸಲು ನಿಗದಿಪಡಿಸಿರುವ ಗಡುವು ವಿಸ್ತರಣೆಯಾಗುವ ಸಾಧ್ಯತೆಗಳಿವೆ.

ಇಂಡಿಯಾ ಮೈತ್ರಿಕೂಟ, ತೃಣಮೂಲ ಕಾಂಗ್ರೆಸ್, ಎಎಪಿ, ಸಮಾಜವಾದಿ ಪಾರ್ಟಿ ಮತ್ತು ಶಿವಸೇನಾ (ಯುಬಿಟಿ) ಈ ಸಮಿತಿಯನ್ನು ಬಹಿಷ್ಕರಿಸುವುದಾಗಿ ಹೇಳಿವೆ.

'ಶೂ ಎಸೆತ ಪ್ರಕರಣ: ಸೂಕ್ತ ಕ್ರಮದ ಅಗತ್ಯವಿದೆ'



ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆದ ಪ್ರಕರಣವನ್ನು ಉಲ್ಲೇಖಿಸಿದ ದೆಹಲಿ ಹೈಕೋರ್ಟ್, 'ಭವಿಷ್ಯದಲ್ಲಿ ಇಂಥ ಘಟನೆಗಳು ಮರುಕಳಿಸದಿರಲು ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರ ನೇತೃತ್ವದ ನ್ಯಾಯಪೀಠವು, 'ಘಟನೆಯಿಂದ ವಕೀಲರ ಸಂಘದ ಸದಸ್ಯರಿಗೆ ಮಾತ್ರವಲ್ಲ, ಪ್ರತಿಯೊಬ್ಬರಿಗೂ ನೋವಾಗಿದೆ' ಎಂದು ಹೇಳಿತು.

ಶೂ ಎಸೆದ ಪ್ರಕರಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಅವುಗಳನ್ನು ತೆಗೆದುಹಾಕಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಾಲಯವು ವಿಚಾರಣೆ ನಡೆಸಿತು.

ಅಕ್ಟೋಬರ್ 6ರಂದು ವಕೀಲ ರಾಕೇಶ್ ಕಿಶೋರ್, ಸಿಜೆಐ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದರು. ಘಟನೆ ಬೆನ್ನಲ್ಲೇ ಅವರ ಪರವಾನಗಿಯನ್ನು ಕೂಡಲೇ ಅಮಾನತು ಮಾಡಲಾಗಿದೆ.

ಜಾರ್ಖಂಡ್: ಇಬ್ಬರು ನಕ್ಸಲರು ಶರಣು

ಲಾತೇಹಾರ್ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನ ಲಾತೇಹಾರ್ ಜಿಲ್ಲೆಯಲ್ಲಿ ಬುಧವಾರ ಇಬ್ಬರು ನಕ್ಸರು ಶರಣಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಶರಣಾಗಿರುವ ಇಬ್ಬರಲ್ಲಿ ಒಬ್ಬರನ್ನು ಜಾರ್ಖಂಡ್ ಜನ ಮುಕ್ತಿ ಪರಿಷತ್‌ನ (ಜೆಜೆಎಂಪಿ) ಉಪ ವಲಯ ಕಮಾಂಡರ್ ಬ್ರಜೇಶ್ ಯಾದವ್ ಅಲಿಯಾಸ್ ರಾಕೇಶ್ ಜಿ ಎಂದು ಗುರುತಿಸಲಾಗಿದೆ. ಗುಮ್ಲಾ ಜಿಲ್ಲೆಯವರಾಗಿರುವ ಇವರ ಬಗ್ಗೆ ಮಾಹಿತಿ ನೀಡಿದವರಿಗೆ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಮತ್ತೊಬ್ಬರು ಜೆಜೆಎಂಪಿಯ ಪ್ರಾದೇಶಿಕ ಕಮಾಂಡರ್ ಆಗಿದ್ದು, ಲಾತೇಹಾರ್ ಜಿಲ್ಲೆಯ ಅವಧೇಶ್ ಲೋಹ್ರಾ ಅಲಿಯಾಸ್ ರೋಹಿತ್ ಲೋಹ್ರಾ ಎಂದು ಗುರುತಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜೋಹ್ರಾನ್ ಮಮ್ದಾನಿ ನ್ಯೂಯಾರ್ಕ್‌ನ ಮೇಯರ್ ಆಗಿ ಆಯ್ಕೆಯಾಗಿರುವುದರ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲಿಂ ವ್ಯಕ್ತಿಯೊಬ್ಬರು ಮಾತನಾಡುತ್ತಿರುವ ವಿಡಿಯೊ ಹರಿದಾಡುತ್ತಿದೆ. 'ನ್ಯೂಯಾರ್ಕ್, ಪಶ್ಚಿಮ ಏಷ್ಯಾದಿಂದ ಬಂದ ವಲಸಿಗರ ನಗರವಾಗಿದೆ. ನಾವು ಅರೇಬಿಕ್ ಅನ್ನು ನ್ಯೂಯಾರ್ಕ್ ನಗರದ ಅಧಿಕೃತ ಭಾಷೆಯನ್ನಾಗಿ ಮಾಡುತ್ತೇವೆ. ನಮಗೆ ಇಂಗ್ಲಿಷ್ ಬೇಡ' ಎಂದು ಮುಸ್ಲಿಮರು ಪ್ರತಿಭಟನೆ ನಡೆಸಿದ್ದಾರೆ ಎಂಬುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿನ ವ್ಯಕ್ತಿಗಳು ಅಸಹಜವಾಗಿ ಕಂಡರು. ಮಾತನಾಡುತ್ತಿರುವ ವ್ಯಕ್ತಿಯ ಹಿಂದೆ ನಿಂತಿರುವಾತನಿಗೆ ತಲೆಯೇ ಇಲ್ಲ. ವಿಡಿಯೊದಲ್ಲಿರುವ ಪ್ಯಾಲೆಸ್ಟೀನ್ ಬಾವುಟದಲ್ಲಿಯೂ ಹಲವು ರೀತಿಯ ವ್ಯತ್ಯಾಸಗಳು ಕಂಡವು. ಕೃತಕ ಬುದ್ಧಿಮತ್ತೆಯಿಂದ (ಎಐ) ರೂಪಿಸಿದ ವಿಡಿಯೊಗಳಲ್ಲಿ ಇಂಥ ವ್ಯತ್ಯಾಸಗಳಿರುವುದು ಸಹಜ. ಹೈವ್, ರಿಸೆಂಬಲ್ ಎಐ ಮತ್ತು ಹಿಯಾದಂಥ ಎಐ ಪತ್ತೆ ಸಾಧನಗಳ ಮೂಲಕ ವಿಡಿಯೊ ಅನ್ನು ಪರೀಕ್ಷಿಸಿದೆವು. ವಿಡಿಯೊ ಮತ್ತು ಅದರಲ್ಲಿರುವ ಧ್ವನಿಯ ಬಹುತೇಕ ಭಾಗಗಳು ಎಐ ನಿರ್ಮಿತ ಎನ್ನುವುದು ತಿಳಿಯಿತು. ನಿರ್ದಿಷ್ಟ ಪದದ ಮೂಲಕ ಹುಡುಕಾಡಿದಾಗ, ನ್ಯೂಯಾರ್ಕ್ ನಗರದಲ್ಲಿ ಮುಸ್ಲಿಮರು ಇತ್ತೀಚೆಗೆ ಪ್ರತಿಭಟನೆ ನಡೆಸಿದ ಬಗ್ಗೆ ಯಾವುದೇ ಸುದ್ದಿ/ವರದಿ ಕಾಣಲಿಲ್ಲ. ಎಐ ನಿರ್ಮಿತ ವಿಡಿಯೊ ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6222

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ತಕ್ಕಡಿಯನ್ನು ಹಿಡಿದಿರುವ ಮಂಕ! (5)
4.ಕೊನೆಗೆ ಬೆಲೆಯಿಟ್ಟರೆ ಸಲುಗೆಯೇ? (3)
5.ಜಿಪುಣ ಇಲ್ಲಿದ್ದಾನೆ (3)
7.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
10.ನಕಾಸೆಯಲ್ಲಿ ಸೊಂಟಕ್ಕೆ ಸುತ್ತಿದ ವಸ್ತ್ರ ಕಾಣುವುದೇ? (2)
11.ಕೊನೆಗೆ ಲವನಿದ್ದರೆ ಮಸುಕಾದುದು ಕಾಣುತ್ತದೆ (3)
12.ಕಂಬಿಯ ಕಡೆ ತಿರುಗಿ ತೋರಿದ ಡೌಲು (2)
13.ನಗರದಲ್ಲಿ ಖರೀದಿಸಿರುವ ಆಭರಣ (2)
15.ಸೊಂಟದಿಂದ ಪ್ರಾರಂಭವಾದ ಕಂಪನ (3)
18.ಪರಿಶುದ್ಧತೆಯಿಂದಾದ ನಿರಿಗೆ! (3)
19.ಶ್ರಾದ್ಧದ ಊಟ (5)

ಮೇಲಿಂದ ಕೆಳಕ್ಕೆ

1.ನ್ಯಾಯವಲ್ಲದ ಚರ್ಚೆ (3)
2.ಮಡಿವಂತೆಯ ಆಶ್ರಯವಿದು (3)
3.ಆಶ್ಚರ್ಯ ಅಥವಾ ವಿಸ್ಮಯ (3)
4.ಒಂದೇ ಕಾಲದಲ್ಲಿದ್ದವನು (5)
6.ಕಿವಿಯಿಂದ ಕಿವಿಗೆ ಹರಡುವ ಮಾತು (5)
8.ದುರಸ್ತಿಯನ್ನು ಹೀಗೆ ಹೇಳಿ (3)
9.ವನದ ಕೊನೆಗಿರುವ ಮನೆ (3)
14.ಮನಸ್ಸು ಕೊಡುವುದು (3)
16.ಕಪಿಯ ಹತ್ತಿರವಿರುವ ಬೇಲದ ಹಣ್ಣು (3)
17.ಭೋಗವಿರುವ ಆಡಂಬರ (3)



6221ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಜ್ರ 3.ಅಂತರ್ಧಾನ
5.ಅಪ್ರಸ್ತುತ 8.ಕಪೋಲಕಲ್ಪಿತ
11.ಅಧಿಕಪ್ರಸಂಗ 13.ಡಮರುಗ
15.ನವನಟ 16.ನಾವೆ

ಮೇಲಿಂದ ಕೆಳಕ್ಕೆ:
1.ವನ 2.ತಿಸ್ತು
4.ತವಕ 6.ಪ್ರಭಾತ
7.ತಪರಾಕಿ 9.ಕನಕ
10.ತಡಬಡ 11.ಅದಿರು
12.ಗಹನ 14.ಮಗ್ಗ
15.ನವೆ

ಸುಡೊಕು 6606

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


		7	1		2		6	
	1			3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

6605 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಯಕ್ಷಿಣಿ ಚೀಲ

ನುಡಿ ಬೆಳಗು



ಪಿ.ಚಂದ್ರಿಕಾ

ನಗರದ ಚೌಕಿಯೊಂದರಲ್ಲಿ ಯಕ್ಷಿಣಿ ಚೀಲಗಳನ್ನು ಮಾರುತ್ತಿದ್ದವನಲ್ಲಿ ಒಬ್ಬ ಬಡ ಕೂಲಿಯವ ಬಂದ. ಅವನ ದುಃಸ್ಥಿತಿಯನ್ನು ನೋಡಿದ ತಕ್ಷಣ ವ್ಯಾಪಾರಿಗೆ ಇವನ ಪರಿಸ್ಥಿತಿಯನ್ನು ತಾನು ಬಳಸಿಕೊಂಡು ಯಾಮಾರಿಸಿ ಮೋಸಮಾಡಬಹುದು ಎನ್ನಿಸಿ ಅವನಿಗೆ, 'ಈ ಚೀಲಗಳು ಅತ್ಯಂತ ಶಕ್ತಿಶಾಲಿಯಾದವು, ಇದನ್ನು ಕೊಂಡರೆ ನಿನ್ನ ಬಡತನ ನೀಗುತ್ತದೆ' ಎಂದು ಹೇಳಿದ. ಅದಕ್ಕಾತ ಒಂದು ನಾಣ್ಯವನ್ನು ಚೀಲದಲ್ಲಿ ಹಾಕಿ ಎರಡು ನಾಣ್ಯಗಳನ್ನು ತೆಗೆದ. ಆ ಕೂಲಿಯವನಿಗೆ ಇವನ ಕುತ್ಸಿತ ಬುದ್ಧಿ ಅರ್ಥವಾಯಿತು. ಆದರೂ ಆಶ್ಚರ್ಯದಿಂದ 'ಹೌದೇ? ಹೀಗೆ ಒಂದಕ್ಕೆ ಎರಡಾಗುತ್ತದೆಯೇ' ಎಂದು ಕೇಳಿದ. ವ್ಯಾಪಾರಿಗೆ ಸಂತೋಷವಾಗಿ 'ಖಂಡಿತಾ ಇವನು ಅಮಾಯಕ, ಇವನಿಗೆ ಅತ್ಯಂತ ದುಬಾರಿ ಬೆಲೆಯಲ್ಲಿ ಚೀಲವನ್ನು ಮಾರಬಹುದು' ಎಂದುಕೊಂಡ. ಕೂಲಿಯಾತ ಚೀಲವನ್ನು ತಿರುಗಿಸಿ ಮುರುಗಿಸಿ ನೋಡಿ, 'ನನಗೆ ಹಸಿವಾಗಿದೆ ಇದರಲ್ಲಿ ಊಟ ಸಿಗಬಹುದೇ' ಎಂದ. ವ್ಯಾಪಾರಿಗೆ ಇವನು ಚೀಲ ತೆಗೆದುಕೊಳ್ಳದೇ ಹೋದರೆ ಎಂದು ಯೋಚಿಸಿ, 'ನಿನ್ನ ಕೈಲಿರೋದು ಕಲ್ಪವೃಕ್ಷ. ಹಾಗಿದ್ದು ಅಲ್ಪವನ್ನು ಯಾಕೆ ಕೇಳುತ್ತೀಯಾ? ಹಣ ಕೊಟ್ಟರೆ ಎಂಥಾ ಊಟವಾದರೂ ಸಿಗುತ್ತದೆ. ನೀನು ಬಡವನಿದ್ದೀಯ. ಹಣವೊಂದೇ ನಿನ್ನನ್ನು ಈ ಸ್ಥಿತಿಯಿಂದ ಮೇಲಕ್ಕೆ ಎತ್ತಬಲ್ಲದು' ಎನ್ನುತ್ತಾನೆ.

'ಆಯ್ತು, ನನ್ನ ಬಡತನದಿಂದ ಮೇಲೆತ್ತಲು ನೀನು ಇಷ್ಟು ಶ್ರಮ ಹಾಕುತ್ತಿರುವೆ. ಇದನ್ನು ನಾನು ತೆಗೆದುಕೊಳ್ಳುತ್ತೇನೆ' ಎನ್ನುತ್ತಾನೆ ಕೂಲಿಯವ. ವ್ಯಾಪಾರಿಗೆ ಸಂತೋಷ. ಇಂಥದ್ದೇ ಇನ್ನಷ್ಟು ಬಕರಾಗಳು ಸಿಕ್ಕರೆ ಇನ್ನಷ್ಟು ಹಣ ಮಾಡಿಕೊಳ್ಳಬಹುದು ಎಂದುಕೊಂಡ. ಕೂಲಿಯವ ಚೀಲವನ್ನು ತೆಗೆದುಕೊಂಡು ಹೊರಟ. ವ್ಯಾಪಾರಿಗೆ ಅವನನ್ನು ತಡೆದು ಚೀಲಕ್ಕೆ ಹಣ ಕೊಡುವಂತೆ ಕೇಳಿದ. ಕೂಲಿಯವ ಅಚ್ಚರಿಯನ್ನು ತೋರುತ್ತಾ, ಹಣ ಯಾಕೆ ಕೊಡಬೇಕು? ನಿನ್ನ ಬಳಿ ಇನ್ನಷ್ಟು ಚೀಲಗಳಿವೆಯಲ್ಲ. ಅದರಲ್ಲಿ ಹಣ ಹಾಕಿ ತೆಗೆದುಕೋ ಎಂದ. ವ್ಯಾಪಾರಿಗೆ ರೇಗಿ ಹೋಯ್ತು. 'ಅಲ್ಲಪ್ಪಾ, ಇಂಥಾ ಚೀಲವನ್ನು ಸುಮ್ಮನೆ ಕೊಟ್ಟುಬಿಡುತ್ತಾರೆಯೇ? ನಿನ್ನ ಸಾಹುಕಾರ ಮಾಡಲಿಕ್ಕೆ ನಾನು ಬಿಟ್ಟಿಯಾಗಿ ಕೊಡಬೇಕೇ' ಎಂದು ಪ್ರಶ್ನಿಸಿದ.

ಕೂಲಿಯವ ನಗುತ್ತಾ ಅಲ್ಲಪ್ಪಾ, 'ಖಜಾನೆಯನ್ನೇ ನನಗೆ ಕೊಡುವ ನೀನು ಹಣಕ್ಕಾಗಿ ಪರದಾಡಬೇಕೇ? ಒಂದು ಯಕ್ಷಿಣಿ ಚೀಲ ಇದ್ದರೆ ನೀನು ರಾಜನ ಹಾಗೆ ಇರಬಹುದಿತ್ತು. ಅದನ್ನು ಬಿಟ್ಟು ಈ ಬಿಸಿಲಿನಲ್ಲಿ ಈ ದೂಳನ್ನು ಕುಡಿಯುತ್ತಾ ಚೌಕಿಯಲ್ಲಿ ನಿಲ್ಲುವ ಅಗತ್ಯವೇ ಇರುತ್ತಿರಲಿಲ್ಲ. ಅಲ್ಲವೇ? ಇಷ್ಟೆಲ್ಲಾ ಹಣ ಸಿಗುವ ಹಾಗಿದ್ದರೆ ನೀನು ಯಾಕೆ ಹೀಗೆ ಮಾರಾಟ ಮಾಡುತ್ತೀಯ? ಅಷ್ಟೂ ಸಾಮಾನ್ಯ ಜ್ಞಾನ ಇಲ್ಲ ಎಂದು ಎದುರಿರುವವರನ್ನು ಮೋಸ ಮಾಡಲು ಹೋಗಬೇಡ. ನಾನು ಕೂಲಿಯವನೇ ಇರಬಹುದು. ನನ್ನ ಶ್ರಮದ ಮೇಲೆ ನನಗೆ ನಂಬಿಕೆ ಇದೆ. ಒಂದು ತುತ್ತು ಅನ್ನ ಮತ್ತು ಗುಟುಕು ನೀರು ಸಿಕ್ಕರೆ ಸಾಕು ದುಡಿಯುತ್ತೇನೆ. ನಿನ್ನ ಹಾಗೆ ಮೋಸ ಮಾಡುವುದಿಲ್ಲ' ಎಂದನು. ಆ ಕ್ಷಣವೇ ವ್ಯಾಪಾರಿಯು ಅಲ್ಲಿಂದ ಹೊರಟು ಹೋಗುತ್ತಾನೆ. ಮತ್ತೆಂದೂ ಆ ಚೌಕಿಯಲ್ಲಿ ಕಾಣುವುದೇ ಇಲ್ಲ.

ಮುಖ ನೋಡಿ ಮೂರ್ಖರೆಂದು ಭಾವಿಸುವುದು ತುಂಬಾ ಸುಲಭ. ಆದರೆ ತಮ್ಮ ಮೂರ್ಖತನವನ್ನು ಇನ್ನೊಬ್ಬರೂ ತೋರಿಸುತ್ತಾರೆ ಎನ್ನುವ ಸಾಮಾನ್ಯಜ್ಞಾನವೂ ಇರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ನವೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣನವಮಿ ಗಂ. 23-35 **ನಕ್ಷತ್ರ:** ಮಘ ಗಂ 19-38 **ಯೋಗ:** ಬ್ರಹ್ಮ ಗಂ. 6-58 **ಕರಣ:** ತೈತಿಲ ಗಂ. 11-11 ತುಲಾ ಮಾಸದ 27 ನೇ ದಿನ. **ಮಳೆ ನಕ್ಷತ್ರ :** ವಿಶಾಖ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00, **ಸೂರ್ಯೋದಯ :** 06-33 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 21 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ :** 5, 2

ಮೇಷ: ಒಡಹುಟ್ಟಿದವರ ಸಹಕಾರದಿಂದ ಮಾನಸಿಕ ನೆಮ್ಮದಿ, ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಮಾತೃವರ್ಗದ ಸಂಬಂಧಿಗಳ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಲಿವೆ.

ವೃಷಭ: ಜೀವನದ ಸಂಕ್ರಮಣ ಕಾಲದ ಗೊಂದಲಗಳಲ್ಲಿ ಸಂಗಾತಿ ಬೆನ್ನೆಲುಬು ಆಗಲಿದ್ದಾರೆ. ಹಣಕಾಸಿನ ವಿಚಾರದಲ್ಲಿ ಇನ್ನೊಂದು ಮೆಟ್ಟಿಲು ಹತ್ತುವಂತೆ ಆಗಲಿದೆ. ವೈಷಮ್ಯಗಳು ಅನುಭವಕ್ಕೆ ಬರಲಿವೆ.

ಮಿಥುನ: ಹೊರದೇಶದ ಉದ್ಯೋಗ ಅನ್ವೇಷಣೆ ಹಾಗೂ ಉನ್ನತ ವಿದ್ಯಾಭ್ಯಾಸಕ್ಕೆ ಬಯಸುವವರಿಗೆ ಒಳ್ಳೆಯ ದಿನ. ಬೇರೆಯವರಿಗೆ ಕೆಲಸ ಹೊರೆಸುವಂಥ ಮೂರ್ಖತನ ಮಾಡದಿರಿ.

ಕರ್ಕಾಟಕ: ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ ಉಂಟಾಗಲಿದೆ. ಅನಿರೀಕ್ಷಿತ ಬಂಧುಗಳ ಆಗಮನ ದಿನಚರಿಯನ್ನು ಅದಲು ಬದಲು ಮಾಡುತ್ತದೆ.

ಸಿಂಹ: ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರಲಿದೆ. ನಿರ್ಮಾಣಕಾರ್ಯದಲ್ಲಿ ತೊಡಗಿರುವವರಿಗೆ ಸಕಾಲ. ದೇವರ ಅನುಗ್ರಹಕ್ಕೆ ಪ್ರಾರ್ಥನೆ ಇರಲಿ.

ಕನ್ಯಾ: ದೈಹಿಕವಾದ ಶ್ರಮ ಕಡಿಮೆ ಇದ್ದರೂ ಆದಾಯವಿರುವುದರಿಂದ ಮನಸ್ಸಿಗೆ ಅಧಿಕ ಸಂತೋಷ ಆಗಲಿದೆ. ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸಿ.

ತುಲಾ: ಮುಕ್ತ ಮಾತುಕತೆಯಿಂದ ಮಾತ್ರ ಮನೋಭಿಲಾಷೆಯ ಸ್ಥಾನಮಾನ ದೊರೆಯುತ್ತದೆ. ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ. ಮನೆಯಲ್ಲಿಯೂ ನೆಮ್ಮದಿಯ ವಾತಾವರಣ ಇರಲಿದೆ.

ವೃಶ್ಚಿಕ: ಮೌಖಿಕವಾಗಿ ಬೆಳೆದ ಮಾತಿನಲ್ಲಿ ತರ್ಕಬದ್ಧ ಉತ್ತರಗಳಿಗೆ ಎಲ್ಲರೂ ಮಾರುಹೋಗುವರು. ಗೌರವಾನ್ವಿತ ವ್ಯಕ್ತಿಯೆಂದು ಅನಿಸಿಕೊಂಡ ನಿಮಗೆ ಸಮಾಜದಲ್ಲಿ ಅಪಮಾನವಾಗಬಹುದು.

ಧನು: ಉತ್ತಮ ಗುರುವಿನ ಪ್ರಾಪ್ತಿಯಿಂದಾಗಿ ಮನಸ್ಸಿನ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ಬಂಧುಗಳ ಮೂಲಕ ಸಹಕಾರ ದೊರೆತು ವ್ಯಾಪಾರದಲ್ಲಿ ಅಧಿಕ ಧನಲಾಭ.

ಮಕರ: ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನದಂತೆ ಸಹಕಾರಿ. ಒಡಹುಟ್ಟಿದವರ ಸಮಸ್ಯೆಗೆ ನಿಮ್ಮಿಂದಾಗುವ ಉಪಕಾರವನ್ನು ಮಾಡುವ ಪ್ರಯತ್ನಮಾಡಿ.

ಕುಂಭ: ಧರ್ಮಕಾರ್ಯಗಳನ್ನು ಮಾಡುವಲ್ಲಿ ವಿಳಂಬ ಮಾಡದಿರಿ. ಕೋರ್ಟ್ ಕಚೇರಿ ಕೆಲಸಗಳಲ್ಲಿ ಜಯ ಉಂಟಾಗಿ ಸಮಸ್ಯೆಗಳು ಎಲ್ಲವೂ ಬಗೆಹರಿಯುತ್ತವೆ. ಮಾನಸಿಕ ನೆಮ್ಮದಿ ಹೆಚ್ಚುವುದು.

ಮೀನ: ವ್ಯವಸಾಯದಲ್ಲಿ ವಿಪತ್ತನ್ನು ನಿಭಾಯಿಸಲು ಬೇಕಾದ ಸೂಕ್ತ ತಯಾರಿ ಮಾಡಿಟ್ಟುಕೊಳ್ಳಿರಿ. ಮೇಲಧಿಕಾರಿಗಳ ಜೊತೆಯಲ್ಲಿ ಮಿತ್ರತ್ವ ಕಾಪಾಡಿಕೊಳ್ಳುವುದು ಒಳಿತು.

ಗುಂಡಣ್ಣ



ಚಿಟಿಕೆ ಸುದ್ದಿ

ಜಿ.ಪರಮೇಶ್ವರ ಅವಹೇಳನ: ಬಿಜೆಪಿ ಮುಖಂಡ ಬಂಧನ


ಸಂತೋಷ್ ಕೋಟ್ಯಾನ್

ಚಿಕ್ಕಮಗಳೂರು: ಗೃಹ ಸಚಿವ ಜಿ.ಪರಮೇಶ್ವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಆರೋಪದಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್ ವಿರುದ್ಧ ಎಸ್‌ಸಿ., ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ಸಿಗುತ್ತಿದೆ ಎಂದು ಆರೋಪಿಸಿ ನಗರದಲ್ಲಿ ಮಂಗಳವಾರ ಬಿಜೆಪಿ ನಡೆಸಿದ ಪ್ರತಿಭಟನೆಯಲ್ಲಿ ಸಂತೋಷ್ ಕೋಟ್ಯಾನ್, ಗೃಹ ಸಚಿವರಿಗೆ ಅವಹೇಳನವಾಗಿ ಮಾತನಾಡುವ ಮೂಲಕ ಜಾತಿ ನಿಂದನೆ ಮಾಡಿದ್ದಾರೆ ಎಂದು ವಕೀಲ ಅನಿಲ್‌ಕುಮಾರ್ ದೂರು ನೀಡಿದ್ದಾರೆ.

ಬಂಧನ ಖಂಡಿಸಿ ಠಾಣೆ ಬಳಿ ಬಿಜೆಪಿ ಕಾರ್ಯಕರ್ತರು, ಧರಣಿ ನಡೆಸಿ ಸರ್ಕಾರದ ವಿರುದ್ಧ ಪ್ರತಿಭಟಿಸಿದ್ದಾರೆ.

ರಾಜ್ಯಕ್ಕೆ ಅಗೌರವ ಸಚಿವರ ಆಕ್ಷೇಪ

ಮಂಗಳೂರು: ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ನ.13ರಂದು ಏರ್ಪಡಿಸಿರುವ ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ತಮಗೆ ಆಹ್ವಾನ ನೀಡದೇ ಶಿಷ್ಟಾಚಾರ ಉಲ್ಲಂಘಿಸಿದೆ. ರಾಜ್ಯ ಸರ್ಕಾರಕ್ಕೆ ಅಗೌರವ ತೋರಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಆಕ್ಷೇಪಿಸಿದ್ದಾರೆ.

ಕೇಂದ್ರ ಬಂದರು, ನೌಕಾ ಮತ್ತು ಜಲಯಾನ ಸಚಿವ ಸರ್ಬಾನಂದ ಸೋನೊವಾಲ್, ಸಚಿವಾಲಯದ ಕಾರ್ಯದರ್ಶಿ ವಿಜಯ್ ಕುಮಾರ್, ಎನ್‌ಎಂಪಿಎ ಅಧ್ಯಕ್ಷ ವೆಂಕಟರಮಣ ಅಕ್ಕರಾಜು ಅವರಿಗೆ ಈ ಕುರಿತು ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಸಚಿವರು, 'ರಾಜ್ಯ ಸರ್ಕಾರಕ್ಕೆ ಅಗೌರವ ತೋರಿರುವ ಮತ್ತು ಶಿಷ್ಟಾಚಾರ ಉಲ್ಲಂಘಿಸಿರುವ ಕೇಂದ್ರ ಬಂದರು, ನೌಕಾ ಮತ್ತು ಜಲ ಯಾನ ಸಚಿವಾಲಯದ ಕಾರ್ಯದರ್ಶಿ ವಿಜಯ್ ಕುಮಾರ್ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ.

ಪೊಲೀಸರ ಮೇಲೆ ಹಲ್ಲೆ: ಇಬ್ಬರ ಬಂಧನ

ಮುದಗಲ್ (ರಾಯಚೂರು ಜಿಲ್ಲೆ): ಸಮೀಪದ ಮಟ್ಟೂರ ತಾಂಡಾದಲ್ಲಿ ಪೊಲೀಸರ ಮೇಲೆ ಹಲ್ಲೆ ಮಾಡಿದ ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಲಾಗಿದೆ.

ರಾಮಪ್ಪ ಕೃಷ್ಣಪ್ಪ ಜಾದವ್(35), ಸಕ್ಕುಬಾಯಿ ರಾಮಪ್ಪ ಜಾದವ್(30) ಬಂಧಿತ ಆರೋಪಿಗಳು.

ಹೆಚ್ಚುವರಿ ಹುದ್ದೆಗೆ ಸಿಗದ ಅನುಮತಿ

ಆರ್ಥಿಕ ಇಲಾಖೆಯಲ್ಲಿಯೇ ಬಾಕಿ ಉಳಿದ ಪ್ರಸ್ತಾವಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಹುದ್ದೆ ಮಂಜೂರಾತಿ, ಭತ್ಯೆ ಹೆಚ್ಚಳ ಕೋರಿ ಲೋಕಾಯುಕ್ತ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದ ಹಲವು ಪ್ರಸ್ತಾವಗಳು ಆರ್ಥಿಕ ಇಲಾಖೆ ಬಳಿ ಬಾಕಿ ಉಳಿದಿವೆ. ಇದರಿಂದ ಲೋಕಾಯುಕ್ತ ಸಂಸ್ಥೆಯ ಕಾರ್ಯನಿರ್ವಹಣೆಗೆ ತೊಡಕಾಗಿದೆ.

ಈ ಪೈಕಿ ಕೆಲವು ಪ್ರಸ್ತಾವಗಳನ್ನು 2018–19ರಲ್ಲಿಯೇ ಸಲ್ಲಿಸಲಾಗಿತ್ತು. ಲೋಕಾಯುಕ್ತ ಸಂಸ್ಥೆ ಮತ್ತು ಆರ್ಥಿಕ ಇಲಾಖೆ ಮಧ್ಯೆ ಹಲವು ಬಾರಿ ಪತ್ರ ವ್ಯವಹಾರಗಳು ನಡೆದಿವೆ. ಆದರೆ ಪ್ರಸ್ತಾವಗಳಿಗೆ ಈವರೆಗೂ ಅನುಮೋದನೆ ಸಿಕ್ಕಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿ, ಲೋಕಾಯುಕ್ತವು ಆರ್ಥಿಕ ಇಲಾಖೆಗೆ ಪತ್ರ ಬರೆದಿದೆ.

ಲೋಕಾಯುಕ್ತ ಸಂಸ್ಥೆಯು 339 ಹೆಚ್ಚುವರಿ ಹುದ್ದೆಗಳನ್ನು ಕೋರಿ 2024ರಲ್ಲಿ ಪ್ರಸ್ತಾವ ಸಲ್ಲಿಸಿರುತ್ತದೆ. ಆರ್ಥಿಕ ಇಲಾಖೆಯು ಹೆಚ್ಚಿನ ಮಾಹಿತಿ ಅಗತ್ಯವಿದೆ ಎಂದು ತಿಳಿಸಿರುತ್ತದೆ. ಯಾವ ಮಾಹಿತಿ ಬೇಕು ಎಂಬ ವಿವರವನ್ನು ನೀಡಿ ಎಂದು ಆರ್ಥಿಕ ಇಲಾಖೆಗೆ ಲೋಕಾಯುಕ್ತವು ಅಕ್ಟೋಬರ್ 10ರಂದು ಪತ್ರ ಬರೆದಿದೆ. ಆ ಪತ್ರಕ್ಕೆ ಈವರೆಗೆ ಪ್ರತಿಕ್ರಿಯೆ ಬಂದಿರುವುದಿಲ್ಲ.

ಲೋಕಾಯುಕ್ತದಲ್ಲಿ ಗ್ರೂಪ್–ಸಿ ವೃಂದದಲ್ಲಿನ ಉಳಿಕೆ ಮೂಲ ವೃಂದದ 64 ಮತ್ತು ಕಲ್ಯಾಣ ಕರ್ನಾಟಕ ವೃಂದದ 4 ಹುದ್ದೆಗಳು ನೇಮಕಾತಿಗೆ ಬಾಕಿ ಇರುತ್ತವೆ. ಆರ್ಥಿಕ ಮಿತವ್ಯಯ ಸಡಿಲಿಸಿ, ಈ ಹುದ್ದೆಗಳ ನೇರ ನೇಮಕಾತಿಗೆ ಅನುಮತಿ ನೀಡಿ ಎಂದು ಪ್ರಸ್ತಾವ ಸಲ್ಲಿಸಿ ಹಲವು ತಿಂಗಳು ಕಳೆದಿವೆ. ಆರ್ಥಿಕ ಇಲಾಖೆಯು ಈವರೆಗೆ ಅನುಮತಿ ನೀಡಿಲ್ಲ.

'ಸಂಸ್ಥೆಯು ಸಾವಿರಾರು ಪ್ರಕರಣಗಳನ್ನು ನಿರ್ವಹಿಸುತ್ತಿದೆ. ಸಿಬ್ಬಂದಿ ಕೊರತೆಯಿಂದ ಕಾರ್ಯನಿರ್ವಹಣೆ ಕಷ್ಟವಾಗಿದೆ. ಸಿಬ್ಬಂದಿಯೇ ಇಲ್ಲದೆ ಸಂಸ್ಥೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಹೇಗೆ' ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

22 ಹೊಸ ವಾಹನಗಳ ಖರೀದಿಗೆ ಪ್ರಸ್ತಾವ

- 5 ತೀರ್ಪು ಬರಹಗಾರರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಮಂಜೂರಾತಿ ಕೋರಿ ಸಲ್ಲಿಸಿದ ಪ್ರಸ್ತಾವ
- ಲೋಕಾಯುಕ್ತ ಅಧಿಕಾರಿಗಳ ಉಪಯೋಗಕ್ಕಾಗಿ 22 ಹೊಸ ವಾಹನಗಳ ಖರೀದಿಗೆ ₹2.12 ಕೋಟಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಸಹಮತಿ/ಅಭಿಪ್ರಾಯ ಕೋರಿ ಸಲ್ಲಿಸಲಾದ ಕಡತ
- ಲೋಕಾಯುಕ್ತ ಸಂಸ್ಥೆಯ ಸಹಾಯಕ ಗ್ರಂಥಪಾಲಕರಿಗೆ ಕನಿಷ್ಠ ಮೂಲ ವೇತನವನ್ನು, 2024ರ ಪರಿಷ್ಕೃತ ವೇತನ ಶ್ರೇಣಿಯ ಆಧಾರದಲ್ಲಿ ₹49,050ಕ್ಕೆ ಹೆಚ್ಚಿಸುವ ಪ್ರಸ್ತಾವ
- ಹಿಂದಿನ ಲೋಕಾಯುಕ್ತರಾದ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ನ್ಯಾಯಮೂರ್ತಿ ಪಿ.ವಿಶ್ವನಾಥ ಶೆಟ್ಟಿ ಅವರಿಗೆ ಒದಗಿಸುತ್ತಿರುವ ಗೃಹ ಪರಿಚಾರಕ, ವಾಹನ ಚಾಲಕ ಮತ್ತು ತೀರ್ಪು ಬರಹಗಾರರ ವೇತನವನ್ನು ₹70,000ದಿಂದ ₹1.22 ಲಕ್ಷಕ್ಕೆ ಹೆಚ್ಚಿಸುವಂತೆ ಕೋರಿದ ಪ್ರಸ್ತಾವ

ಲೋಕಾಯುಕ್ತ

ಆಂತರಿಕ ನಿಗಾ ಘಟಕಕ್ಕೆ ಗ್ರಹಣ

ಲೋಕಾಯುಕ್ತ ಪೊಲೀಸರ ದಾಳಿ ಕಾರ್ಯಾಚರಣೆಗಳ ಮಾಹಿತಿ ಸೋರಿಕೆಯಾದ ಹಾಗೂ ಸಂಸ್ಥೆಯ ಸಿಬ್ಬಂದಿ ವಿರುದ್ಧವೇ ಭ್ರಷ್ಟಾಚಾರ ಆರೋಪ ಬಂದ ಕಾರಣ, ಆಂತರಿಕ ನಿಗಾ ಘಟಕ ಸ್ಥಾಪನೆಗೆ ಲೋಕಾಯುಕ್ತವು ನಿರ್ಧರಿಸಿತ್ತು. ಆದರೆ ಈವರೆಗೆ ಈ ಘಟಕವು ಅಸ್ತಿತ್ವಕ್ಕೆ ಬಂದಿಲ್ಲ.

ಇಂತಹ ಘಟಕ ಒಂದರ ಅಗತ್ಯವಿದೆ ಎಂದು 2025ರ ಮಾರ್ಚ್ 12ರಂದು ಲೋಕಾಯುಕ್ತವು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಈ ಹಿಂದಿನ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಸಿಬ್ಬಂದಿಯನ್ನೇ ಬಳಸಿಕೊಂಡು ಆಂತರಿಕ ನಿಗಾ ಘಟಕ ರಚಿಸಿ ಎಂದು ಇಲಾಖೆಯು ಜೂನ್ 6ರಂದು ತಿಳಿಸಿತ್ತು. ಎಸಿಬಿ ಸಿಬ್ಬಂದಿಯ ಹೊರತಾಗಿಯೂ ಎಂಟು ಹುದ್ದೆಗಳನ್ನು ಸೃಜಿಸಿ ಎಂದು ಲೋಕಾಯುಕ್ತವು ಜೂನ್ 27ರಂದು ಆರ್ಥಿಕ ಇಲಾಖೆಗೆ ಮತ್ತೆ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವವೂ ಇಲಾಖೆಯಲ್ಲಿ ಬಾಕಿಯಾಗಿದೆ.

ಈ ಮಧ್ಯೆ ಹಿಂದಿನ ವಾರ ಬೆಂಗಳೂರು ವ್ಯಾಪ್ತಿಯ ಆರು ಪ್ರಾದೇಶಿಕ ಸಾರಿಗೆ ಕಚೇರಿಗಳ (ಆರ್‌ಟಿಒ) ಮೇಲೆ ನಡೆದ ದಾಳಿಯ ಮಾಹಿತಿ ಸೋರಿಕೆಯಾಗಿರಬಹುದು ಎಂದು ಲೋಕಾ ಅಧಿಕಾರಿಗಳೇ ಶಂಕೆ ವ್ಯಕ್ತಪಡಿಸಿದ್ದರು.

ಸುದ್ದಿ 2 ನಿಮಿಷ

'ಮುಂದೆ ಯಾವ ಬಾವುಟ ಹಿಡಿಯುತ್ತೇನೊ ಗೊತ್ತಿಲ್ಲ'

ಮಧುಗಿರಿ (ತುಮಕೂರು): '2004ರಲ್ಲಿ ನಾನು ಜೆಡಿಎಸ್‌ನಿಂದ ಶಾಸಕನಾಗಿದ್ದಾಗ ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣ ನೆಲಕಚ್ಚಿತ್ತು. ಮತ್ತೆ ಅಂತಹ ಸಂದರ್ಭ ಬಂದರೂ ಬರಬಹುದು' ಎಂದು ಕಾಂಗ್ರೆಸ್ ಶಾಸಕ ಕೆ.ಎನ್.ರಾಜಣ್ಣ ಸೂಚ್ಯವಾಗಿ ಹೇಳಿದ್ದಾರೆ.

ತಾಲ್ಲೂಕಿನ ದೊಡ್ಡೇರಿಯಲ್ಲಿ ಬುಧವಾರ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, 'ಮುಂದೆ ನಾನು ಯಾವ ಬಾವುಟ ಹಿಡಿಯಬೇಕು ಎಂಬುದನ್ನು ಕಾಯ್ದು ನೋಡೋಣ' ಎಂದರು.

'ಕಾಂಗ್ರೆಸ್ ಕಾರ್ಯಕರ್ತರು ಮತ್ತು ನನ್ನ ಅಭಿಮಾನಿಗಳು ಇಂದು ಹಮ್ಮಿಕೊಂಡಿದ್ದ ಬೈಕ್ ರ‍್ಯಾಲಿಯಲ್ಲಿ ಯಾರೂ ಕಾಂಗ್ರೆಸ್ ಪಕ್ಷದ ಬಾವುಟ ಹಿಡಿದಿರಲಿಲ್ಲ. ಅದು ಏಕೆ ಎಂದು ನನಗೂ ಗೊತ್ತಿಲ್ಲ. ಮುಂದೆ ನಾನು ಕೂಡ ಯಾವ ಬಾವುಟ ಹಿಡಿಯುತ್ತೇನೊ ಗೊತ್ತಿಲ್ಲ' ಎಂದರು.

'ರಾಜಕಾರಣದಲ್ಲಿ ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ. ಜನರ ಬೆಂಬಲವೇ ನನಗೆ ಆನೆ ಬಲ. ಜನರನ್ನು ನಂಬಿ ನಾನು ರಾಜಕಾರಣ ಮಾಡುತ್ತಿದ್ದೇನೆ' ಎಂದು ರಾಜಣ್ಣ ಹೇಳಿದರು.



'ನನಗೂ ಮಧುಗಿರಿಗೂ ಯಾವ ಋಣಾನುಬಂಧವೂ ಗೊತ್ತಿಲ್ಲ. ತುಮಕೂರಿನಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಬೇಕು ಎಂದುಕೊಂಡಿದ್ದ ನನಗೆ ಮಧುಗಿರಿ ಕ್ಷೇತ್ರದ ಜನ ರಾಜಕೀಯ ಜನ್ಮನೀಡಿದರು' ಎಂದು ಅವರು ಹೇಳಿದರು.

ಚಿತ್ತಾಪುರ: ಇಂದು ನಿರ್ಧಾರ?

ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ಯಾವ ದಿನ–ಸಮಯಕ್ಕೆ ನಡೆಯಲಿದೆ ಎಂಬ ಕುತೂಹಲಕ್ಕೆ ಗುರುವಾರ ತೆರೆ ಬೀಳುವ ನಿರೀಕ್ಷೆಗಳಿದ್ದು, ಎಲ್ಲರ ಚಿತ್ತ ಹೈಕೋರ್ಟ್‌ನತ್ತ ನೆಟ್ಟಿದೆ.

ಅ.19ರಂದು ಪಥಸಂಚಲನ ನಡೆಸಲು ಆರ್‌ಎಸ್‌ಎಸ್‌ಗೆ ಅನುಮತಿ ನಿರಾಕರಿಸಿದ್ದ ಚಿತ್ತಾಪುರ ತಹಶೀಲ್ದಾರರ ಕ್ರಮ ಪ್ರಶ್ನಿಸಿ ಆರ್‌ಎಸ್‌ಎಸ್ ಜಿಲ್ಲಾ ಸಂಘಚಾಲಕ ಅಶೋಕ ಪಾಟೀಲ ಹೈಕೋರ್ಟ್ ಮೊರೆಹೋಗಿದ್ದರು. ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರ ಏಕಸದಸ್ಯ ನ್ಯಾಯಪೀಠ ಈ ಅರ್ಜಿ ವಿಚಾರಣೆ ನಡೆಸುತ್ತಿದೆ.

'ಆರ್‌ಎಸ್‌ಎಸ್ ಸೇರಿ ಮನವಿ ಸಲ್ಲಿಸಿರುವ ಎಲ್ಲ ಸಂಘಟನೆಗಳಿಗೂ ಒಂದು ವಾರದೊಳಗೆ ಪಥಸಂಚಲನ/ಮೆರವಣಿಗೆಗೆ ಅನುಮತಿ ನೀಡಲಾಗುವುದು. ಈ ಬಗ್ಗೆ ಸಂಘಟನೆಗಳಿಗೆ ಲಿಖಿತವಾಗಿ ತಿಳಿಸಲಾಗುವುದು' ಎಂದು ನ.7ರಂದು ವಿಚಾರಣೆ ವೇಳೆ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ನ್ಯಾಯಾಲಯಕ್ಕೆ ತಿಳಿಸಿದ್ದರು.

ಅದರಂತೆ ಗುರುವಾರದ ಸರ್ಕಾರ ತನ್ನ ನಿರ್ಧಾರವನ್ನು ಕೋರ್ಟ್‌ಗೆ ತಿಳಿಸುವ ಸಾಧ್ಯತೆ ಇದೆ. ಆರ್‌ಎಸ್‌ಎಸ್ ಸೇರಿ ಎಲ್ಲ 11 ಸಂಘಟನೆಗಳಿಗೆ ಯಾವ ದಿನ ಅವಕಾಶ ಕೊಡಲಿದೆ ಎಂಬ ಬಗ್ಗೆ ಕುತೂಹಲ ಮೂಡಿದೆ.

ಕುರುಬರ ಸಂಘದ ಕಾರ್ಯಕ್ರಮ: ಶಾಸಕ ವಿಶ್ವನಾಥ್‌ಗೆ ಸಿ.ಎಂ ತಿರುಗೇಟು

'ಸ್ವಾಮೀಜಿಗೆ ಬೆದರಿಕೆ ಹಾಕುವುದು ನಡೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಗಿನೆಲೆ ಪೀಠದ ಇತಿಹಾಸವನ್ನು ತಿರುಚುವುದು, ಸ್ವಾಮೀಜಿಗೆ ಬೆದರಿಕೆ ಹಾಕುವುದೆಲ್ಲ ನಡೆಯುವುದಿಲ್ಲ. ಎಲ್ಲ ಶೋಷಿತ ಸಮುದಾಯಗಳ ಧ್ವನಿಯಾಗಿ ಕಾಗಿನೆಲೆ ಪೀಠವನ್ನು ಸ್ಥಾಪಿಸಿದ್ದು ನಾನು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಗಾಂಧಿನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ, ಕರ್ನಾಟಕ ಪ್ರದೇಶ ಕುರುಬರ ಸಂಘ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ನನ್ನ ಹಳೆಯ ಕಾರಿನಲ್ಲಿ ಇಡೀ ರಾಜ್ಯ ಸುತ್ತಿ ಸಮಾಜವನ್ನು ಸಂಘಟಿಸಿದ್ದೆ. ತಾರಾಕಾನಂದರನ್ನು ಪೀಠಾಧ್ಯಕ್ಷರನ್ನಾಗಿ ಮಾಡಲು ತೀರ್ಮಾನಿಸಿದ್ದೆ. ಈಗ ವಿಶ್ವನಾಥ್ (ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ) ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅವರೇ ಪೀಠವನ್ನು ಸ್ಥಾಪಿಸಿದ್ದಾಗಿ ಹೇಳಿ ಸ್ವಾಮೀಜಿಯನ್ನು ಬೆದರಿಸುತ್ತಿದ್ದಾರೆ' ಎಂದರು.

'ರೌಡಿ ಕೊತ್ವಾಲ್ ರಾಮಚಂದ್ರನ ಜೊತೆ ಇದ್ದ ಪುಟ್ಟಸ್ವಾಮಿ ಹಿಂದೆ ಕುರುಬರ ಸಂಘದ ವಿಚಾರದಲ್ಲಿ ಭಾಗಿ ಆಗದಂತೆ ನನಗೆ ಬೆದರಿಕೆ ಹಾಕಿದ್ದರು. ಇದಕ್ಕೆಲ್ಲ ಬಗ್ಗದೇ ಸಂಘದ ಅಧ್ಯಕ್ಷ ಸ್ಥಾನಕ್ಕೆ ರೌಡಿ ಪುಟ್ಟಸ್ವಾಮಿ ವಿರುದ್ಧ ದಾವಣಗೆರೆಯ ಮಲ್ಲಪ್ಪ ಅವರನ್ನು ನಿಲ್ಲಿಸಿ ಸಂಘವನ್ನು ಉಳಿಸಿದ್ದೆ' ಎಂದರು.

'ಆಗಿನ ಮುಖ್ಯಮಂತ್ರಿ ಬಂಗಾರಪ್ಪ ಮತ್ತು ಕೇಂದ್ರ ಸಚಿವ ಶರದ್ ಪವಾರ್ ಅವರನ್ನು ಕರೆಸಿ ಪೀಠಕ್ಕೆ ಚಾಲನೆ ನೀಡಲಾಯಿತು. ಕುರುಬ ಸಮಾಜಕ್ಕೆ ಆಸ್ತಿ ಉಳಿಸಿ, ಬೆಳೆಸುವ, ಸಂಘಟನೆ ಮಾಡುವ ಕಾರ್ಯದಲ್ಲಿ ಮುಕುಡಪ್ಪ, ಶಿವಣ್ಣ, ಮಾಸ್ತಿ, ಸಿದ್ದಲಿಂಗಯ್ಯ, ನಾಗಣ್ಣ ಸಹಿತ ಅನೇಕರು ಜೊತೆಗೆ ನಿಂತು ಸಹಕಾರ ನೀಡಿದ್ದರು. ಆಮೇಲೆ ವಿಶ್ವನಾಥ್ ಅವರನ್ನು ಪೀಠದ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೆ' ಎಂದರು.

'ನಾನು ರಾಜಕಾರಣಕ್ಕೆ ಬಾರದೇ ಹೋಗಿದ್ದರೆ ಕುರುಬ ಸಂಘದ ಕಟ್ಟಡವೂ ಉಳಿಯುತ್ತಿರಲಿಲ್ಲ, ಕಾಗಿನೆಲೆ ಪೀಠವೂ ಆಗುತ್ತಿರಲಿಲ್ಲ. ರಿಯಲ್ ಎಸ್ಟೇಟ್ ರೌಡಿಗಳಿಂದ ಬೀರಪ್ಪನ ಗುಡಿ, ಸಮಾಜದ ಭೂಮಿ, ಕಟ್ಟಡಗಳನ್ನು ಉಳಿಸಲು ಸಾಧ್ಯವಾಗುತ್ತಿರಲಿಲ್ಲ' ಎಂದರು.


ಕುರುಬ ಸಮಾಜದ ವಿದ್ಯಾರ್ಥಿನಿಲಯ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಹಾಗೂ ಈಶ್ವರಾನಂದಪುರಿ ಸ್ವಾಮೀಜಿ, ತಿಂಥಿಣಿ ಸಿದ್ದರಾಮೇಶ್ವರ ನಂದಾಪುರಿ ಸ್ವಾಮೀಜಿ, ಬೈರತಿ ಸುರೇಶ್, ಎಚ್.ಎಂ.ರೇವಣ್ಣ ಸಮಾಜದ ಮುಖಂಡರು ಭಾಗವಹಿಸಿದ್ದರು

'ಆರ್‌ಎಸ್‌ಎಸ್ ವಿರೋಧದ ಕಾರಣಕ್ಕೆ ಕಾಗಿನೆಲೆ ಪೀಠ ಸ್ಥಾಪನೆ'

'ಸಮಾಜವನ್ನು ಒಡೆದು ಜಾತಿ ವ್ಯವಸ್ಥೆ ರೂಪಿಸಿದ ಸಿದ್ಧಾಂತ ಆರ್‌ಎಸ್‌ಎಸ್‌ನದ್ದು. ಆ ಸಿದ್ಧಾಂತ ಶ್ರಮಿಕ ಜಾತಿ, ವರ್ಗಗಳ ವಿರೋಧಿ. ಅದಕ್ಕೇ ನಾನು ಸನಾತನವಾದಿ ಸಂಘಟನೆ ಆರ್‌ಎಸ್‌ಎಸ್ ಅನ್ನು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದ್ದೇನೆ. ಅದೇ ಕಾರಣಕ್ಕೆ ಎಲ್ಲ ಶೋಷಿತ ಸಮುದಾಯಗಳ ಧ್ವನಿಯಾಗಿ ಕಾಗಿನೆಲೆ ಪೀಠವನ್ನು ನಾನು ಸ್ಥಾಪಿಸಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಸಂಘದ ಕಟ್ಟಡದಲ್ಲಿ ಕುರುಬ ಸಮಾಜದ ಮಕ್ಕಳಿಗೆ ಶಿಕ್ಷಣ, ಹಾಸ್ಟೆಲ್ ಬೇಕು ಎನ್ನುವುದು ನನ್ನ ಸ್ಪಷ್ಟ ಉದ್ದೇಶವಾಗಿತ್ತು. ನಾನು ಸಾರಿಗೆ ಮಂತ್ರಿ ಆಗಿದ್ದಾಗ 1988ರಲ್ಲೇ ಕನಕದಾಸರ 500ನೇ ಜಯಂತಿ ಆಚರಣೆ ಮಾಡಿಸಿದ್ದೆ. ಅದೇ ಸಂದರ್ಭದಲ್ಲಿ ಸಮಾಜಕ್ಕೊಂದು ಗುರುಪೀಠ ಬೇಕು ಎಂದು ತೀರ್ಮಾನಿಸಿದ್ದೆ. ಆಗ ಸಂಘದ ಕಟ್ಟಡದ ಮೇಲೆ ₹ 3 ಕೋಟಿ ಸಾಲ ಇತ್ತು. ಆ ಸಾಲದ ಸುಳಿಯಿಂದ ಸಂಘವನ್ನು ಬಿಡಿಸಲಾಯಿತು' ಎಂದು ಹೇಳಿದರು.

'ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ದಾವಣಗೆರೆ ಸೇರಿ ರಾಜ್ಯದ ಹತ್ತು ಹಲವು ಕಡೆಗಳಲ್ಲಿ ಸಂಘಕ್ಕೆ ಜಾಗ-ಕಟ್ಟಡ ಉಳಿಸಿಕೊಟ್ಟಿದ್ದೇನೆ. ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಸಂಗೊಳ್ಳಿ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದೆ. ಮುಕುಡಪ್ಪ ಸಹಿತ ಅನೇಕರು ಆಗ ಸಹಕರಿಸಿದ್ದರು. ಈಗ 600 ಕುರುಬ ಸಮುದಾಯ ಭವನಗಳನ್ನು ಮಾಡಲು ಸರ್ಕಾರ ಮುಂದಾಗಿದೆ' ಎಂದು ಹೇಳಿದರು.

ಪ್ರಚಾರಕ್ಕೆ ಪತ್ರ: ಟೀಕೆ

ಬೆಳಗಾವಿ: 'ಉತ್ತರ ಕರ್ನಾಟಕದ ಶಾಸಕರು ಅಭಿವೃದ್ಧಿಗೆ ಶ್ರಮಿಸಲಿ. ಆ ಮೇಲೆ ಪ್ರತ್ಯೇಕ ರಾಜ್ಯದ ವಿಷಯ ಮಾತನಾಡಲಿ. ಸುಮ್ಮನೆ ಪ್ರಚಾರ, ರಾಜಕೀಯ ಕಾರಣಕ್ಕೆ ರಾಜ್ಯ ವಿಭಜನೆ ಬಗ್ಗೆ ಸಿ.ಎಂಗೆ ಪತ್ರ ಬರೆಯಬೇಡಿ' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಕಿಡಿಕಾರಿದ್ದಾರೆ.

ಕಾಗವಾಡ ಶಾಸಕ ಭರಮಗೌಡ ಕಾಗೆ ಅವರು ಮುಖ್ಯಮಂತ್ರಿಗೆ ಬರೆದ ಪತ್ರವನ್ನು ಖಂಡಿಸಿದ್ದಾರೆ.

'ಉತ್ತರ ಕರ್ನಾಟಕ ಭಾಗದಲ್ಲಿ 96 ಶಾಸಕರು ಇದ್ದಾರೆ. ಯಾರೂ ಏಕೆ ಅಭಿವೃದ್ಧಿಯಲ್ಲಿ ಮುಂದೆ ಇಲ್ಲ? ತಮ್ಮ ಕೆಲಸ ಸರಿಯಾಗಿ ಮಾಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ' ಎಂದು ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಗಾದಿ • ಸುರ್ಜೇವಾಲಾ ಜತೆ ಭೇಟಿ, ಚರ್ಚೆ

ಜಾರಕಿಹೊಳಿ ಮತ್ತೆ ಲಾಬಿ

ಪ್ರಜಾವಾಣಿ ವಾರ್ತೆ

ಪ್ರಮುಖ ಅಂಶಗಳು
- ಸಂಪುಟ ಪುನರ್‌ರಚನೆ ಮುನ್ನವೇ ಅಧ್ಯಕ್ಷರ ಬದಲಾವಣೆಗೆ ಪ್ರಯತ್ನ
- ಸತೀಶ್, ಖಂಡ್ರೆ ಮೇಲೆ ಸಿಎಂ ಒಲವು

ನವದೆಹಲಿ: 2028ರಲ್ಲಿ ಮುಖ್ಯಮಂತ್ರಿಯಾಗಬೇಕು ಎಂದು ಕನಸು ಹೊತ್ತಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷ ಗಾದಿಗೆ ಮತ್ತೆ ಪ್ರಯತ್ನ ನಡೆಸಿದ್ದಾರೆ.

ನವದೆಹಲಿಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ರಾತ್ರಿ ಭೇಟಿ ಮಾಡಿ, ಸುಮಾರು ಅರ್ಧ ಗಂಟೆ ಚರ್ಚಿಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ಸಂದರ್ಭದಲ್ಲೇ ಡಿ.ಕೆ. ಶಿವಕುಮಾರ್ ಅವರು ಲೋಕಸಭಾ ಚುನಾವಣೆಯವರೆಗೆ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ ತಿಳಿಸಿತ್ತು. ಎರಡೂವರೆ ವರ್ಷ ಕಳೆದರೂ ಬದಲಾವಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ ಐದೂವರೆ ವರ್ಷಗಳಿಂದ ಶಿವಕುಮಾರ್ ಅವರೇ ಅಧ್ಯಕ್ಷರಾಗಿದ್ದಾರೆ. ಈ ಸ್ಥಾನಕ್ಕೆ ನನ್ನನ್ನು ಪರಿಗಣಿಸಬೇಕೆಂದು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಶಿವಕುಮಾರ್ ಅವರನ್ನು ಎತ್ತಂಗಡಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ವರ್ಷದಿಂದ ಪ್ರಯತ್ನ ನಡೆಸುತ್ತಿದೆ. ಈ ಬಗ್ಗೆ ಈ ಹಿಂದೆಯೂ ಹೈಕಮಾಂಡ್‌ಗೆ ಮನವಿ ಸಲ್ಲಿಸಿತ್ತು. ಸತೀಶ ಜಾರಕಿಹೊಳಿ ಅಥವಾ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಈ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಸಿದ್ದರಾಮಯ್ಯ ಅವರು ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದರು.

ಅಧ್ಯಕ್ಷ ಸ್ಥಾನದಿಂದ ಶಿವಕುಮಾರ್ ಅವರನ್ನು ಕೆಳಗಿಳಿಸಿ ದುರ್ಬಲಗೊಳಿಸಬೇಕು ಎನ್ನುವುದು ಎದುರು ಬಣದ ಯೋಚನೆ. ಸಚಿವ ಸಂಪುಟ ಪುನರ್‌ರಚನೆಗೆ ಮುನ್ನವೇ ಅಧ್ಯಕ್ಷರ ಬದಲಾಯಿಸಬೇಕು ಎಂದು ಗಂಭೀರ ಪ್ರಯತ್ನ ನಡೆಸಿದೆ. ಇದರ ಭಾಗವಾಗಿಯೇ ಜಾರಕಿಹೊಳಿ ದೆಹಲಿ ಯಾತ್ರೆ ಕೈಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಸತೀಶ ಜಾರಕಿಹೊಳಿ ಭೇಟಿ ಮಾಡಿದರು. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಉಪಾಧ್ಯಕ್ಷ ಸುನೀಲ್ ಹನುಮಣ್ಣವರ ಹೂಗುಚ್ಛ ನೀಡಿದರು

ನವೆಂಬರ್ ಕ್ರಾಂತಿ ಹಾಗೂ ಅಧಿಕಾರ ಹಸ್ತಾಂತರದ ಬಗ್ಗೆ ಪಕ್ಷದ ವಲಯದಲ್ಲಿ ನಿತ್ಯ ಚರ್ಚೆ ಆಗುತ್ತಿದೆ. ಈ ಗೊಂದಲ ನಿವಾರಿಸಬೇಕು. ನಾಯಕತ್ವ ಬದಲಾವಣೆ ಮಾಡಬಾರದು ಎಂದೂ ಆಗ್ರಹಿಸಿದರು.

'ಸಿದ್ದರಾಮಯ್ಯ ನಾನು ಒಟ್ಟಿಗೆ ಇರುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಮುಖ್ಯಮಂತ್ರಿ ಇದ್ದಾರೆ. ನಾವೂ ಅವರ ಜತೆಯಲ್ಲೇ ಕೆಲಸ ಮಾಡುತ್ತಿದ್ದೇವೆ. ಮುಂದೆಯೂ ಒಟ್ಟಿಗೆ ಇರುತ್ತೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಡಿ.ಕೆ.ಶಿವಕುಮಾರ್ 2028ಕ್ಕೆ ಮುಖ್ಯಮಂತ್ರಿ ಆಗಬೇಕು, ಅಲ್ಲಿಯವರೆಗೆ ಸಿದ್ದರಾಮಯ್ಯ ಅವರೇ ಇರುತ್ತಾರೆ. ಈ ಮಾತನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮನೆ ಮುಂದೆ ನಿಂತು ಹೇಳುತ್ತೇನೆ' ಎಂಬ ಸಚಿವ ಜಮೀರ್ ಅಹಮದ್ ಖಾನ್ ಅವರ ಹೇಳಿಕೆ ಕುರಿತು ಅವರು ಪ್ರತಿಕ್ರಿಯಿಸಿದರು.

'ಸಂಪುಟ ವಿಸ್ತರಣೆ ಮುಖ್ಯಮಂತ್ರಿ ಜವಾಬ್ದಾರಿ. ಈ ಕುರಿತು ನನ್ನ ಬಳಿ ಚರ್ಚೆ ಮಾಡಿಲ್ಲ. ನ.15ರಂದು ದೆಹಲಿಗೆ ತೆರಳುತ್ತಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ಕಪಿಲ್ ಸಿಬಲ್ ಕಾರ್ಯಕ್ರಮಕ್ಕಾಗಿ ನಾನೂ ಹೋಗುತ್ತಿದ್ದೇನೆ' ಎಂದರು.

ನಿಧನ ವಾರ್ತೆ

ಪ್ರಿಯವದನ ರಾವ್



ನವದೆಹಲಿ: ಇಲ್ಲಿ 'ಮದ್ರಾಸ್ ಹೋಟೆಲ್' ಮನೆಮಾತಾಗಲು ಕಾರಣರಾಗಿದ್ದ ಪ್ರಿಯವದನ ರಾವ್ (90) ಇತ್ತೀಚೆಗೆ ನಿಧನರಾದರು.

ಅವರು ದೆಹಲಿಯ ಮೊತ್ತಮೊದಲ ಉಡುಪಿ ಹಾಗೂ ದಕ್ಷಿಣ ಭಾರತದ ಹೋಟೆಲ್ 'ಮದ್ರಾಸ್ ಹೋಟೆಲ್'ನ ಸ್ಥಾಪಕ ಉಡುಪಿ ಸುಬ್ರಾಯ ಅವರ ಮಗ. ಕನ್ನಾಟ್ ಪ್ಲೇಸ್‌ನಲ್ಲಿ ಸುಬ್ರಾಯರು 1935ರಲ್ಲಿ ಈ ಹೋಟೆಲ್ ಆರಂಭಿಸಿದರು. 1955ರವರೆಗೆ ಮುನ್ನಡೆಸಿಕೊಂಡು ಹೋದರು. ಅವರ ಹಠಾತ್ ನಿಧನದ ಬಳಿಕ ಪ್ರಿಯವದನ ರಾವ್ ಹೋಟೆಲ್‌ನ ಹೊಣೆ ಹೊತ್ತುಕೊಂಡರು. ಉಡುಪಿಯ ತಿಂಡಿ ಹಾಗೂ ಊಟವನ್ನು ಉತ್ತರ ಭಾರತದಲ್ಲಿ ಪ್ರಖ್ಯಾತಗೊಳಿಸಿದರು.

'ತಿಥಿ' ಚಿತ್ರದ 'ಗಡ್ಡಪ್ಪ'



ಮಂಡ್ಯ: ರಾಷ್ಟ್ರಪ್ರಶಸ್ತಿ ಪುರಸ್ಕೃತ 'ತಿಥಿ' ಸಿನಿಮಾ ಖ್ಯಾತಿಯ, ಜಿಲ್ಲೆಯ ನೊದೆಕೊಪ್ಪಲು ಗ್ರಾಮದ ನಿವಾಸಿ ಗಡ್ಡಪ್ಪ ಅಲಿಯಾಸ್ ಚನ್ನೇಗೌಡ (89) ಬುಧವಾರ ಮುಂಜಾನೆ ನಿಧನರಾದರು.

ಆಸ್ತಮಾ ಮತ್ತು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ತಿಂಗಳ ಹಿಂದೆ ಬಿದ್ದು ಸೊಂಟಕ್ಕೆ ಪೆಟ್ಟಾಗಿ, ಶಸ್ತ್ರಚಿಕಿತ್ಸೆಗೊಳಗಾಗಿದ್ದರು.

ತಿಥಿ, ತರ್ಲೆ ವಿಲೇಜ್, ಜಾನಿ ಮೇರಾ ನಾಮ್, ಹಳ್ಳಿ ಪಂಚಾಯಿತಿ ಸೇರಿದಂತೆ 10ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದರು. ಗ್ರಾಮದ ಅವರ ಜಮೀನಿನಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

'ವನ್ಯಜೀವಿ ಬಂದರೆ 1926ಕ್ಕೆ ಕರೆ ಮಾಡಿ'

ಬೆಂಗಳೂರು: 'ನಾಡಿಗೆ ವನ್ಯಜೀವಿ ಬಂದರೆ ಸ್ಥಳೀಯರು 1926 ಸಂಖ್ಯೆಗೆ ಉಚಿತ ಕರೆ ಮಾಡಬಹುದು. ದೂರು ದಾಖಲಾದ ಕೂಡಲೇ ಸಂಬಂಧಿತ ವಲಯಕ್ಕೆ ಮಾಹಿತಿ ರವಾನಿಸಿ ಕ್ರಮ ವಹಿಸಲಾಗುವುದು' ಎಂದು ಅರಣ್ಯ, ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಹಿರಿಯ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ಹೀಗೆ ಮಾಡಿದ ಕರೆ ಕೇಂದ್ರ ಕಚೇರಿಯಲ್ಲಿ ದೂರು ದಾಖಲಾಗುತ್ತದೆ. ಈ ದೂರುಗಳಿಗೆ ಸ್ಪಂದಿಸಲಾಗಿದೆಯೇ ಇಲ್ಲವೇ ಎಂಬುದನ್ನು ಹಿರಿಯ ಅಧಿಕಾರಿಗಳು ಪರಿಶೀಲಿಸಲಿದ್ದು, ವಲಯ ಅಧಿಕಾರಿಗಳು ತುರ್ತಾಗಿ ಸ್ಪಂದಿಸಲಿದ್ದಾರೆ ಎಂದರು.

'ಸಂಘರ್ಷ ಹೆಚ್ಚಾಗಿರುವ ಜಿಲ್ಲೆಗಳಿಗೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನಿಯೋಜಿಸಿ ಉಸ್ತುವಾರಿ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.

'ಹೆಚ್ಚುತ್ತಿರುವ ವನ್ಯಜೀವಿಗಳಿಗೆ ಅನುಗುಣವಾಗಿ ಅರಣ್ಯ ಪ್ರದೇಶ ಇದೆಯೇ ಎನ್ನುವ ನಿಖರ ಅಧ್ಯಯನಕ್ಕೆ ತಜ್ಞರ ತಂಡ ರಚಿಸಬೇಕು. ವನ್ಯಜೀವಿಗಳು ಕಾಡಿನಿಂದ ನಾಡಿಗೆ ಬರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸಮಿತಿ ತಿಳಿಸಬೇಕು. ಆ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಸನ್ನಾ ಮತ್ತು ಲಂಟಾನಾ ಕಳೆ ಅರಣ್ಯದಲ್ಲಿ ಬೆಳೆದು ಸಸ್ಯಹಾರಿ ಪ್ರಾಣಿಗಳಿಗೆ ಹುಲ್ಲು ಸಿಗುತ್ತಿಲ್ಲ. ಇದರಿಂದ ಆನೆಗಳು ಹೊರಬರುತ್ತಿವೆ ಎನ್ನುವ ಅಭಿಪ್ರಾಯವಿದೆ. ಇವುಗಳ ತೆರವಿಗೆ ವೈಜ್ಞಾನಿಕವಾಗಿ ಕ್ರಮ ಕೈಗೊಳ್ಳಿ, ಬೇರೆ ರಾಜ್ಯಗಳು ಸನ್ನಾ, ಲಂಟಾನಾ ತೆರವಿಗೆ ಕೈಗೊಂಡಿರುವ ಕ್ರಮಗಳ ಅಧ್ಯಯನ ಮಾಡಿ, ಉತ್ತಮ ಕ್ರಮವನ್ನು ಅಳವಡಿಸಿಕೊಳ್ಳಿ' ಎಂದರು.

ಸಚಿವರ ಸೂಚನೆ ಏನೇನು ?

- ಕಾಡಿನಂಚಿನ ಪ್ರದೇಶದಲ್ಲಿ ಕ್ಯಾಮೆರಾ ಅಳವಡಿಸಿ, ಹುಲಿಗಳ ಸಂಚಾರದ ಮೇಲೆ ನಿಗಾ ಇರಿಸಿ, ಸ್ಥಳೀಯರಿಗೆ ಸಕಾಲಿಕ ಮಾಹಿತಿ ನೀಡಿ
- ಜನ ವಸತಿ, ರೈತರ ಜಮೀನಿನ ಬಳಿ ಕ್ಯಾಮೆರಾ ಅಳವಡಿಸಿ ನಿಗಾ ಇಟ್ಟು ಮುನ್ನೆಚ್ಚರಿಕೆ ನೀಡಿ ಜೀವಹಾನಿ, ಬೆಳೆ ಹಾನಿ ತಪ್ಪಿಸಿ
- ಥರ್ಮಲ್ ಕ್ಯಾಮೆರಾಗಳ ನೆರವಿನಿಂದ ನಿಗಾ ಇಡುವುದರ ಜೊತೆಗೆ ಗಸ್ತು ಹೆಚ್ಚಳ ಮಾಡಿ
- ಮಾನವ-ವನ್ಯಜೀವಿ ಸಮಸ್ಯೆಗೆ ಅಲ್ಪಾವಧಿ, ದೀರ್ಘಕಾಲೀನ ಪರಿಹಾರ ಕ್ರಮಗಳನ್ನು ರೂಪಿಸಿ
- 5ರಿಂದ 6 ಕಿ.ಮೀ. ವ್ಯಾಪ್ತಿಗೆ ಒಂದೊಂದು ಅರಣ್ಯ ಗಸ್ತು ಶಿಬಿರ ಸ್ಥಾಪಿಸಿ, ಸ್ಥಳೀಯ ಯುವಕರನ್ನೂ ನೇಮಿಸಿ

77 ಅಡಿ ರಾಮನ ಪ್ರತಿಮೆ

ಪರ್ತಗಾಳಿ ಮಠ: ನ.28ಕ್ಕೆ ಪ್ರಧಾನಿಯಿಂದ ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠವು ಕರ್ನಾಟಕ ಗೋವಾ ಗಡಿ ಭಾಗದ ಕಾನಕೋಣ ಸಮೀಪದ ಪರ್ತಗಾಳಿಯಲ್ಲಿ ನಿರ್ಮಿಸಿರುವ 77 ಅಡಿ ಎತ್ತರದ ರಾಮನ ಕಂಚಿನ ಪ್ರತಿಮೆ ಹಾಗೂ ರಾಮಾಯಣ ವನ ನ.28ಕ್ಕೆ ಜನಾರ್ಪಣೆಗೊಳ್ಳಲಿದೆ.

ಐದೂವರೆ ಶತಮಾನದ ಇತಿಹಾಸ ಹೊಂದಿರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮೂಲ ಮಠದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಂದು ಮಧ್ಯಾಹ್ನ 3.50ಕ್ಕೆ ಉದ್ಘಾಟಿಸುವರು ಎಂದು ಕಾರ್ಯಕ್ರಮ ಸಮಿತಿಯ ಸಂಚಾಲಕ ಪ್ರದೀಪ್ ಜಿ.ಪೈ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



13ನೇ ಶತಮಾನದಲ್ಲಿ ಮಧ್ವಾಚಾರ್ಯರು ಸ್ಥಾಪಿಸಿದ ಮಠವಿದು. ಸದ್ಯ ದಕ್ಷಿಣ ಗೋವಾದ ಪರ್ತಗಾಳಿ ಗ್ರಾಮದ ಕುಶಾವತಿ ನದಿಯ ದಡದಲ್ಲಿರುವ ಪ್ರಧಾನ ಮಠದ ಆವರಣದಲ್ಲಿ ಸುಮಾರು ₹16 ಕೋಟಿ ವೆಚ್ಚದಲ್ಲಿ ಭಾರತದಲ್ಲಿಯೇ ಅತಿ ಎತ್ತರದ ರಾಮನ ಕಂಚಿನ ಪ್ರತಿಮೆ ನಿರ್ಮಿಸಲಾಗಿದೆ. ಇದರೊಟ್ಟಿಗೆ ರಾಮಾಯಣ ಉದ್ಯಾನ, 3ಡಿ ಮ್ಯಾಪಿಂಗ್, ವಿಶಾಲ ಸಭಾಂಗಣ, ಬಹು ಬಳಕೆಯ ಕಟ್ಟಡ, ಮ್ಯೂಸಿಯಂ ಅನ್ನು ರೂಪಿಸಲಾಗಿದೆ ಎಂದರು.

ಮಠದ 24ನೇ ಪೀಠಾಧ್ಯಕ್ಷರಾದ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ್ ಸ್ವಾಮೀಜಿ ಮಾರ್ಗದರ್ಶನದಲ್ಲಿಯೇ 550ನೇ ವರ್ಷದ ಆಚರಣೆ, ಧಾರ್ಮಿಕ ಕಾರ್ಯಕ್ರಮಗಳು ನ.27ರಂದು ಆರಂಭಗೊಂಡು ಡಿ.7ರವರೆಗೂ ಪರ್ತಗಾಳಿಯಲ್ಲಿ ಇರಲಿವೆ. ಪ್ರತಿ ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು

ಮಠದ 550 ನೇ ವರ್ಷದ ಸಂದರ್ಭದಲ್ಲಿ ವೇದಿಕ್ ಪಾಠ ಶಾಲೆ ನಿರ್ಮಿಸಿ, ಗುರುಕುಲ ಮಾದರಿಯಲ್ಲಿ 12 ವರ್ಷ ಶಿಕ್ಷಣವನ್ನು ನೀಡಲು ಮಠ ಮುಂದಾಗಿದೆ. 1 ಲಕ್ಷ ಚದರಡಿ ಪ್ರದೇಶದಲ್ಲಿ ಗುರುಕುಲ ವಿದ್ಯಾಪೀಠ ಕೆಲಸವೂ ಶುರುವಾಗಿದೆ ಎಂದು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಮತ್ತೊಂದು ಪರಿಣಾಮಕಾರಿ ಹೆಜ್ಜೆ, ಇದೇ ವರ್ಷದಿಂದ ಜಾರಿ

ಆನ್‌ಲೈನ್ ಮೂಲಕವೇ ಪ್ರಶ್ನೆಪತ್ರಿಕೆ ಸಿದ್ಧ

• ಸಂತೋಷ ಈ.ಚಿನಗುಡಿ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಆನ್‌ಲೈನ್ ಮೂಲಕವೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಇದು ಜಾರಿಗೆ ಬಂದಿದೆ.

ಆನ್‌ಲೈನ್ ಪ್ರಶ್ನೆಪತ್ರಿಕೆಗಳ ರವಾನೆ, ಪರೀಕ್ಷೆ ನಡೆಸುವ, ಫಲಿತಾಂಶ ನೀಡುವ ಕ್ರಮ ದಶಕದಿಂದ ಇದೆ. ಈವರೆಗೆ ಪ್ರಶ್ನೆಪತ್ರಿಕೆಗಳನ್ನು ವಿಶ್ವವಿದ್ಯಾಲಯದಲ್ಲೇ ಭೌತಿಕವಾಗಿ ಸಿದ್ಧಪಡಿಸಲಾಗುತಿತ್ತು. ಈಗ ಅದನ್ನೂ ಆನ್‌ಲೈನ್ ಪ್ರಕ್ರಿಯೆಗೆ ಅಳವಡಿಸಿದ್ದು, ಪರೀಕ್ಷೆಯ ಎಲ್ಲ ಚಟುವಟಿಕೆಗಳನ್ನೂ ಕಾಗದರಹಿತ ಮಾಡಲಾಗುತ್ತಿದೆ.



ಪರೀಕ್ಷೆ ಬಳಿಕ ಒಂದೇ ತಾಸಿನಲ್ಲಿ ಫಲಿತಾಂಶ, ಎ.ಐ ಬಳಕೆ ಸೇರಿ ಸುಧಾರಣೆಗೆ ಒತ್ತು ನೀಡಲಾಗಿದೆ. ಇದು, 'ಕಾಗದರಹಿತ ವಿ.ವಿ' ಮಾಡುವತ್ತ ಮತ್ತೊಂದು ಹೆಜ್ಜೆ.
ಪ್ರೊ.ಎಸ್.ವಿದ್ಯಾಶಂಕರ, ಕುಲಪತಿ.

ಬಿ.ಇ., ಬಿ.ಟೆಕ್, ಬಿ.ಪ್ಲ್ಯಾನ್, ಬಿ.ಎಸ್ಸಿ (ಆನರ್ಸ್), ಬಿ.ಆರ್ಕ್, ಎಂಬಿಎ, ಎಂಸಿಎ, ಎಂ.ಟೆಕ್, ಎಂ.ಆರ್ಕ್, ಎಂ.ಪ್ಲ್ಯಾನ್, ಎಂ.ಎಸ್ಸಿ (ಎಂಜಿನಿಯರಿಂಗ್), ಪಿಎಚ್.ಡಿ, ಇಂಟಿಗ್ರೇಟೆಡ್ ಡ್ಯುಯಲ್ ಡಿಗ್ರಿ ಸೇರಿ ಎಲ್ಲ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೂ ಇದೇ ಪದ್ಧತಿ ಅಳವಡಿಕೆಯಾಗಲಿದೆ.

'ಶೀಘ್ರವೇ ಪರೀಕ್ಷಾ ಮಂಡಳಿ ಸಭೆ ಕರೆದು, ರೂಪುರೇಷೆ ಅಂತಿಮಗೊಳಿಸುತ್ತೇವೆ. ಪೂರ್ವಸಿದ್ಧತೆ ನಡೆದಿದೆ. 50 ಲ್ಯಾಪ್‌ಟಾಪ್‌ಗಳು ಸಿದ್ಧವಾಗಿವೆ. ಪ್ರಶ್ನೆಪತ್ರಿಕೆ ರಚನೆ, ಪಾಸ್‌ವರ್ಡ್ ರಕ್ಷಣೆ ಒದಗಿಸುವುದು ಸೇರಿ ಸಮಗ್ರ ತರಬೇತಿ ನೀಡಲಾಗುತ್ತದೆ' ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರತಿ ಬಾರಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಕಾಗದದ ಕವರ್‌ಗಳು, ಬಾಕ್ಸ್‌ಗಳು, ಸಾಗಣೆ ವಾಹನ, ಅದಕ್ಕೆ ಭದ್ರತೆ, ಅಧ್ಯಾಪಕರ ಖರ್ಚು ಒದಗಿಸಬೇಕಿತ್ತು. 130ಕ್ಕೂ ಹೆಚ್ಚು ಪ್ರೊಫೆಸರ್‌ಗಳು ವಿ.ವಿ ಆವರಣದಲ್ಲೇ ಉಳಿದು, ಧಾವಂತದಲ್ಲಿ ಪರಿಶೀಲಿಸುತ್ತಿದ್ದರು. ಈಗ ಅದಕ್ಕೆ ಅವಕಾಶವೇ ಇರುವುದಿಲ್ಲ. ಎಲ್ಲರ ಸಮಯದ ಜೊತೆಗೆ ಹಣದ ಉಳಿತಾಯ ಆಗುತ್ತದೆ. ಪ್ರಶ್ನೆಪತ್ರಿಕೆ ರಚನೆಯಲ್ಲಿ ಆಗಬಹುದಾದ ಅವಘಡಗಳೂ ತಪ್ಪುತ್ತವೆ' ಎಂದು ಅವರು ಹೇಳಿದರು.

ವಿಶ್ವದ ಉತ್ತಮ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ವಿಟಿಯು ನಿಲ್ಲಬೇಕು ಎಂಬುದು ನಮ್ಮ ಗುರಿ. ಇದನ್ನು ಸಾಕಾರಗೊಳಿಸಲು ಆಧುನಿಕ ಯುಗದಲ್ಲಿ ಸಾಧ್ಯವಿರುವ ಎಲ್ಲ ತಂತ್ರಜ್ಞಾನಗಳನ್ನು ಬಳಸಿಕೊಳ್ಳುತ್ತಿದ್ದೇವೆ ಎಂದು ಕುಲಪತಿ ಹೇಳಿದರು.

ಅಂಕಿ ಅಂಶಗಳು



- 3.2 ಲಕ್ಷ ವಿಟಿಯು ಪರಿಧಿಯ ವಿದ್ಯಾರ್ಥಿಗಳು
- 215 ಎಂಜಿನಿಯರಿಂಗ್, ಆರ್ಕಿಟೆಕ್ಚರ್ ಕಾಲೇಜುಗಳು
- 39 ಸ್ವಾಯತ್ತ ಕಾಲೇಜುಗಳು
- 16 ಸರ್ಕಾರಿ ಕಾಲೇಜುಗಳು
- 25 ಆರ್ಕಿಟೆಕ್ಚರ್ ಸ್ಕೂಲ್
- 2 ಘಟಕ ಮಹಾ ವಿದ್ಯಾಲಯಗಳು

‘ಪ್ಯಾನ್–ಇಂಡಿಯಾ’ ಭಯೋತ್ಪಾದನೆಗೆ ಪಿತೂರಿ

ಕಾಶ್ಮೀರದಿಂದ ಉತ್ತರ ಪ್ರದೇಶಕ್ಕೆ ಡಾ.ಆದಿಲ್ ಅಹ್ಮದ್ ರಾಥರ್ ಸ್ಥಳಾಂತರಗೊಂಡಿದ್ದೇ ಪ್ರಮುಖ ತಿರುವು

● ಜುಲ್ಫೀಕರ್ ಮಜೀದ್

ಶ್ರೀನಗರ: ಕಾಶ್ಮೀರದ ಯುವ ವೈದ್ಯ ಆದಿಲ್ ಅಹ್ಮದ್ ರಾಥರ್ 2024ರ ಅಕ್ಟೋಬರ್‌ನಲ್ಲಿ ಅನಂತನಾಗ್‌ನ ಸರ್ಕಾರಿ ವೈದ್ಯಕೀಯ ಕಾಲೇಜನ್ನು ತೊರೆದು ಉತ್ತರ ಪ್ರದೇಶದ ಖಾಸಗಿ ಆಸ್ಪತ್ರೆಯೊಂದರ ವೈದ್ಯನಾಗಿ ಸೇರ್ಪಡೆಯಾಗಿದ್ದ. ರಾಥರ್‌ನ ಸ್ಥಳಾಂತರವು ಭಾರತದ ಮೇಲೆ ಭಯೋತ್ಪಾದಕ ದಾಳಿ ನಡೆಸುವ ಪಿತೂರಿಯ ಆರಂಭಿಕ ಹೆಜ್ಜೆಯಾಗಿತ್ತು ಎಂಬ ಅಂಶ ಈಗ ಬಯಲಾಗಿದೆ.

‘ಪ್ಯಾನ್–ಇಂಡಿಯಾ ಭಯೋತ್ಪಾದನೆಗೆ ಒಂದು ವರ್ಷದ ಹಿಂದಿನಿಂದಲೇ ಕಾರ್ಯತಂತ್ರ ಹೆಣೆಯಲಾಗುತ್ತಿತ್ತು. ಕಾಶ್ಮೀರದಿಂದ ಉತ್ತರ ಪ್ರದೇಶಕ್ಕೆ ಆದಿಲ್ ಸ್ಥಳಾಂತರಗೊಂಡಿದ್ದು ಆಕಸ್ಮಿಕ ಘಟನೆ ಅಲ್ಲ; ಅದು ಕಾಶ್ಮೀರದ ಆಚೆಗೂ ಉಗ್ರ ಜಾಲವನ್ನು ವಿಸ್ತರಿಸುವ ಯೋಜನೆಯ ಭಾಗವಾಗಿತ್ತು’ ಎಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

‘ವೈದ್ಯರಿಂದ ಭಯೋತ್ಪಾದನೆ ಕಾರ್ಯತಂತ್ರ’ದ ಮೂಲಕ ಶಿಕ್ಷಿತ ವೃತ್ತಿಪರರ ವಿಶ್ವಾಸಾರ್ಹತೆಯನ್ನೇ ಬಂಡವಾಳ ಮಾಡಿಕೊಂಡು, ಯಾವುದೇ ಅನುಮಾನ ಬಾರದಂತೆ ಉತ್ತರ ಭಾರತದಾದ್ಯಂತ ಉಗ್ರರ ಜಾಲಗಳನ್ನು ಸೃಷ್ಟಿಸಲಾಗುತ್ತಿತ್ತು’ ಎಂದು ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶಕ್ಕೆ ಸ್ಥಳಾಂತರಗೊಂಡ ಬಳಿಕ, ಆದಿಲ್ ಮತ್ತು ಆತನ ಸಹಚರರು ದೆಹಲಿ ಮತ್ತು ಫರೀದಾಬಾದ್‌ನಂಥ ನಗರಗಳಲ್ಲಿರುವ ಕಾಶ್ಮೀರಿ ಮತ್ತು ಸ್ಥಳೀಯ ವೃತ್ತಿಪರರಲ್ಲಿ ತಮ್ಮ ಸಿದ್ಧಾಂತಕ್ಕೆ ಬೆಂಬಲ ನೀಡುವವರನ್ನು ಗುರುತಿಸಲು ಆರಂಭಿಸಿದರು. ಬಾಡಿಗೆ ಮನೆ ಮಾಡಿದರು. ಇಲ್ಲಿ ಅಪಾರ ಪ್ರಮಾಣದ ಸ್ಫೋಟಕಗಳನ್ನು ಸಂಗ್ರಹಿಸಿಡಲಾಗಿತ್ತು ಮತ್ತು ಅಲ್ಲಿ ಸಭೆಗಳನ್ನು ನಡೆಸಲಾಗುತ್ತಿತ್ತು ಎಂಬುದು ಪೊಲೀಸರ ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ.

ಆದಿಲ್ ನಿಕಟವರ್ತಿ ಡಾ.ಮುಜಮ್ಮಿಲ್ ಶಕೀಲ್ ನಿವಾಸದಲ್ಲಿ ಅಪಾರ ಪ್ರಮಾಣದ ಸ್ಫೋಟಕ ತಯಾರಿಕಾ ಸಾಮಗ್ರಿಗಳು ಪತ್ತೆಯಾಗಿವೆ. ಈ ಮೂಲಕ ಬಹುದೊಡ್ಡ ಉಗ್ರ ಜಾಲವನ್ನು ಭೇದಿಸಿರುವ ಪೊಲೀಸರು, ಉಗ್ರರು ಹೊಸ ಭಯೋತ್ಪಾದನೆ ಮಾದರಿಯನ್ನು ಬಳಸಿಕೊಂಡು ದೇಶದ ಹಲವು ನಗರಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಲು ಸಂಚು ರೂಪಿಸಿರುವ ಸಾಧ್ಯತೆ ಇದೆ ಎಂದು ಶಂಕಿಸಿದ್ದಾರೆ.

‘ಸರಣಿ ಸ್ಫೋಟ ನಡೆಸುವ ಮೂಲಕ ಭದ್ರತಾ ಪಡೆಗಳನ್ನು ಹಿಮ್ಮೆಟ್ಟಿಸುವ ಮತ್ತು ದೇಶದ ನಾಗರಿಕರಲ್ಲಿ ಭಯ ಹುಟ್ಟಿಸುವ ಯೋಜನೆಯನ್ನು ರೂಪಿಸಲಾಗಿತ್ತು’ ಎಂದು ತನಿಖೆಯಲ್ಲಿ ಭಾಗಿಯಾಗಿರುವ ಗುಪ್ತಚರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಹೊಸ ಮಾದರಿಯ ಸೈದ್ಧಾಂತಿಕ ಬೇರುಗಳು ದಕ್ಷಿಣ ಕಾಶ್ಮೀರದಲ್ಲಿ ಇದ್ದರೂ, ದೇಶದಾದ್ಯಂತ ದಾಳಿ ನಡೆಸಲು ನೀಲನಕ್ಷೆ ರೂಪಿಸಲಾಗಿತ್ತು. ಒಂದು ನಗರದಿಂದ ಇನ್ನೊಂದು ನಗರಕ್ಕೆ ಸಂಚರಿಸಲು ಸ್ಥಳಾಂತರಗೊಂಡ ವೃತ್ತಿಪರರು, ಇಂಟರ್ನಿಗಳು, ವೈದ್ಯ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ದೇಶದಾದ್ಯಂತ ಸುಗಮ ಕಾರ್ಯಾಚರಣೆಗೆ ವೃತ್ತಿಪರರ ಜಾಲವನ್ನೇ ಸೃಷ್ಟಿಸಲಾಗಿತ್ತು’ ಎಂದು ಅವರು ತಿಳಿಸಿದರು.

‘ಸೇನಾಪಡೆಗಳ ನಿರಂತರ ಕಾರ್ಯಾಚರಣೆಯಿಂದ ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆ ನಿಯಂತ್ರಣಕ್ಕೆ ಬಂದಿದೆ. ಹೀಗಾಗಿ ಉಗ್ರರು ತಮ್ಮ ನೆಲೆಗಳನ್ನು ಸ್ಥಳಾಂತರಿಸಬೇಕೆಂಬ ಉದ್ದೇಶದಿಂದ ಅನುಮಾನಕ್ಕೆ ಆಸ್ಪದವಿರದ ರೀತಿಯಲ್ಲಿ ಶಿಕ್ಷಿತ ವೃತ್ತಿಪರರನ್ನು ಬಳಸಿಕೊಂಡು ಸುರಕ್ಷಿತ ಮನೆ, ಬ್ಯಾಂಕ್ ಖಾತೆ, ಪೂರೈಕೆ ಸರಪಳಿ ಸೇರಿದಂತೆ ಮೂಲಸೌಕರ್ಯಗಳನ್ನು ಪಡೆದಿದ್ದಾರೆ’ ಎಂದು ಹೇಳಿದರು.



ದೆಹಲಿ ಸ್ಫೋಟದ ಬೆನ್ನಲ್ಲೇ ದೇಶದ ಪ್ರಮುಖ ನಗರಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಕೇಂದ್ರೀಯ ಮೀಸಲು ಪಡೆಯ ಸಿಬ್ಬಂದಿ ತರಬೇತಿ ಪಡೆದ ಶ್ವಾನದೊಂದಿಗೆ ಬುಧವಾರ ತಪಾಸಣೆ ನಡೆಸಿದರು —ಪಿಟಿಐ ಚಿತ್ರ

ಬಹುಸ್ತರದಲ್ಲಿ ಕಾರ್ಯನಿರ್ವಹಣೆ

ಹೊಸ ಮಾದರಿಯ ಭಯೋತ್ಪಾದನೆಯಲ್ಲಿ ಸುಶಿಕ್ಷಿತ ವ್ಯಕ್ತಿಗಳು ತಮ್ಮ ಕಾರ್ಯಸೂಚಿಗಳ ಅನುಷ್ಠಾನಕ್ಕಾಗಿ ವೃತ್ತಿ ಮಾಡುತ್ತಿರುವ ಸ್ಥಳಗಳನ್ನು ದುರ್ಬಳಕೆ ಮಾಡಿಕೊಳ್ಳಬಹುದೆಂಬ ಎಚ್ಚರಿಕೆಯನ್ನು ಈ ಪ್ರಕರಣವು ನೀಡಿದೆ.

ಈ ಮಾದರಿಯು ಬಹುಸ್ತರದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಒಬ್ಬರು ಅಗತ್ಯ ವಸ್ತುಗಳನ್ನು ಹೊಂದಿಸುವುದು ಮತ್ತು ಹಣ ಸಂಗ್ರಹ ಮಾಡುವುದರತ್ತ ಗಮನ ವಹಿಸಿದರೆ, ಇನ್ನೊಬ್ಬರು ನೇಮಕಾತಿ–ಸಿದ್ಧಾಂತ ಪ್ರಚಾರದತ್ತ ಗಮನ ನೀಡುತ್ತಾರೆ. ಕೆಲವು ಶಂಕಿತರು ವೈದ್ಯಕೀಯ ಮತ್ತು ಅಕಾಡೆಮಿಕ್ ಫೆಲೊಶಿಪ್ ಸೋಗಿನಲ್ಲಿ ವಿದೇಶಕ್ಕೆ ತೆರಳಿ ಅಲ್ಲಿ ತರಬೇತಿ ಪಡೆದಿದ್ದಾರೆ ಎಂಬ ಶಂಕೆಯೂ ವ್ಯಕ್ತವಾಗಿದೆ.

‘ಕನಿಷ್ಠ 10ರಿಂದ 12 ಮಂದಿ ವೈದ್ಯಕೀಯ ವೃತ್ತಿಪರರು ಉಗ್ರ ಕೃತ್ಯಕ್ಕೆ ಸಹಕಾರ ನೀಡಿರುವ ಶಂಕೆ ಇದ್ದು, ಅವರ ಮೇಲೆ ಕಣ್ಗಾವಲಿಡಲಾಗಿದೆ. ಅರಣ್ಯದಲ್ಲಿ ಬಂದೂಕು ಹಿಡಿಯುತ್ತಿದ್ದ ಭಯೋತ್ಪಾದಕರು ತಮ್ಮ ಕಾರ್ಯವಿಧಾನವನ್ನು ಬದಲಿಸಿ ಪ್ರಯೋಗಾಲಯಗಳಲ್ಲಿ ಬಾಂಬ್ ತಯಾರಿಸುವ ಹಂತಕ್ಕೆ ಬದಲಾಗಿರುವುದು ದಿಗಿಲು ಹುಟ್ಟಿಸುವಂತಿದೆ’ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದರು.

ತನಿಖೆಗೆ ಸಹಕಾರ: ಫಲಾಹ್ ವಿ.ವಿ



ಅಲ್– ಫಲಾಹ್ ವಿಶ್ವವಿದ್ಯಾಲಯ

ಫರೀದಾಬಾದ್ (ಪಿಟಿಐ): ‘ದೆಹಲಿ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ವೈದ್ಯರ ಕೃತ್ಯಗಳೊಂದಿಗೆ ವಿಶ್ವವಿದ್ಯಾಲಯ ಯಾವುದೇ ರೀತಿಯ ಸಂಬಂಧ ಹೊಂದಿಲ್ಲ’ ಎಂದು ಅಲ್–ಫಲಾಹ್ ವಿಶ್ವವಿದ್ಯಾಲಯ ಬುಧವಾರ ಹೇಳಿದೆ.

‘ಸ್ಫೋಟವನ್ನು ನಾವು ಖಂಡಿಸುತ್ತೇವೆ. ಈ ದುರದೃಷ್ಟಕರ ಬೆಳವಣಿಗೆಯಿಂದ ತೀವ್ರ ನೋವಾಗಿದೆ. ಈ ದುರ್ಘಟನೆಯಿಂದ ಬಾಧಿತರಾದ ಮುಗ್ಧ ಜನರ ಪರ ಪ್ರಾರ್ಥಿಸುತ್ತೇವೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ. ಭೂಪಿಂದರ್ ಕೌರ್ ಆನಂದ್ ತಿಳಿಸಿದ್ದಾರೆ.

‘ಬಂಧಿತ ವೈದ್ಯರು ನಮ್ಮಲ್ಲಿ ಕೆಲಸ ಮಾಡುತ್ತಿದ್ದರು. ಅವರ ಈ ಅಧಿಕೃತ ಕೆಲಸವನ್ನು ಹೊರತುಪಡಿಸಿ, ಇತರ ಕೃತ್ಯಗಳೊಂದಿಗೆ ವಿ.ವಿ ಸಂಬಂಧ ಹೊಂದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ತಾರ್ಕಿಕ, ನ್ಯಾಯಯುತ ಮತ್ತು ನಿರ್ಣಾಯಕ ನಿರ್ಧಾರಕ್ಕೆ ಬರಲು ತನಿಖಾ ಅಧಿಕಾರಿಗಳಿಗೆ ವಿಶ್ವವಿದ್ಯಾಲಯವು ಸಂಪೂರ್ಣ ಸಹಕಾರ ನೀಡುತ್ತದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಂಪುಕೋಟೆ ಬಳಿ 12 ಜನರ ಸಾವಿಗೆ ಕಾರಣವಾದ ಸ್ಫೋಟದಲ್ಲಿ ಕಾರು ಚಾಲನೆ ಮಾಡುತ್ತಿದ್ದ ಡಾ. ಉಮರ್ ನಬಿ ಮತ್ತು ಬಂಧಿತ ಡಾ. ಮುಜಮ್ಮಿಲ್ ಗನಿ ಈ ವಿಶ್ವವಿದ್ಯಾಲಯ ಬೋಧಕರು.

ಖಾಸಗಿ ವಿ.ವಿ: ಹರಿಯಾಣದ ಫರೀದಾಬಾದ್ ಜಿಲ್ಲೆಯಲ್ಲಿ ಮುಸ್ಲಿಂ ಪ್ರಾಬಲ್ಯವುಳ್ಳ ಧೌಜ್ ಗ್ರಾಮದಲ್ಲಿ 76 ಎಕರೆ ವಿಸ್ತಾರವಾದ ಕ್ಯಾಂಪಸ್ ಅನ್ನು ಅಲ್– ಫಲಾಹ್ ವಿಶ್ವವಿದ್ಯಾಲಯ ಹೊಂದಿದೆ. ಇದು ಹರಿಯಾಣದ ಖಾಸಗಿ ವಿಶ್ವವಿದ್ಯಾಲಯಗಳ ಕಾಯ್ದೆಯಡಿ ಸ್ಥಾಪಿತವಾದ ವಿ.ವಿ. ಅದರ ಕ್ಯಾಂಪಸ್‌ನಲ್ಲಿ 650 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಸಹ ಇದೆ.

ಇದು ಪಾಕ್ ಬೆಂಬಲಿತ ಭಯೋತ್ಪಾದಕರ ಸೂಚನೆಗಳ ಮೇರೆಗೆ ಕಾರ್ಯ ನಿರ್ವಹಿಸುವ ವಿದ್ಯಾವಂತ ವ್ಯಕ್ತಿಗಳಿಗೆ ಹೇಗೆ ಸುರಕ್ಷಿತ ತಾಣವಾಯಿತು ಎಂಬುದರ ನಿಟ್ಟಿನಲ್ಲಿ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

1997ರಲ್ಲಿ ಎಂಜಿನಿಯರಿಂಗ್ ಕಾಲೇಜು ಆಗಿ ಈ ವಿದ್ಯಾಸಂಸ್ಥೆ ಆರಂಭವಾಯಿತು. 2013ರಲ್ಲಿ ಅಲ್–ಫಲಾಹ್ ಎಂಜಿನಿಯರಿಂಗ್ ಕಾಲೇಜು ‘ನ್ಯಾಕ್’ನಿಂದ ‘ಎ’ ಗ್ರೇಡ್ ಮಾನ್ಯತೆ ಪಡೆಯಿತು. 2014ರಲ್ಲಿ ಹರಿಯಾಣ ಸರ್ಕಾರ ಇದಕ್ಕೆ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಿತು. ಅಲ್–ಫಲಾಹ್ ವೈದ್ಯಕೀಯ ಕಾಲೇಜು ಕೂಡ ವಿಶ್ವವಿದ್ಯಾಲಯದ ಜತೆಗೆ ಸಂಯೋಜಿತವಾಗಿದೆ.

ಗಾಯಾಳುಗಳನ್ನು ಭೇಟಿಯಾದ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕೆಂಪು ಕೋಟೆ ಸಮೀಪದ ಕಾರು ಸ್ಫೋಟದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಯಲ್ಲಿ ಬುಧವಾರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

‘ಭೂತಾನ್‌ನಿಂದ ಮರಳಿದ ಪ್ರಧಾನಿ ಅವರು ನೇರವಾಗಿ ಎಲ್‌ಎನ್‌ಜೆಪಿ ಆಸ್ಪತ್ರೆಗೆ ತೆರಳಿದರು’ ಎಂದು ಅಧಿಕಾರಿಗಳು ತಿಳಿಸಿದರು.

ಗಾಯಾಳುಗಳೊಂದಿಗೆ ಮಾತನಾಡಿ, ಶೀಘ್ರ ಗುಣಮುಖರಾಗಿ ಎಂದು ಹಾರೈಸಿದರು. ಆಸ್ಪತ್ರೆಯ ವೈದ್ಯರು, ಅಧಿಕಾರಿಗಳೊಂದಿಗೂ ಸಂವಾದ ನಡೆಸಿದರು ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಕಾರು ಸ್ಫೋಟದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಿದರು

ಉಮರ್‌ನ ಮತ್ತೊಂದು ಕಾರು ಪತ್ತೆ



ಸ್ಫೋಟಗೊಂಡ ಕಾರನ್ನು ಓಡಿಸುತ್ತಿದ್ದ ಡಾ. ಉಮರ್ ನಬಿ ಮಾಲೀಕತ್ವದ ಕೆಂಪು ಬಣ್ಣದ ‘ಫೋರ್ಡ್ ಎಕೋಸ್ಪೋರ್ಟ್’ ಕಾರನ್ನು ತೀವ್ರ ಶೋಧದ ಬಳಿಕ ಪತ್ತೆ ಮಾಡಿ ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಫರೀದಾಬಾದ್ ಬಳಿ ಕಾರು ಪತ್ತೆಯಾಗಿದ್ದು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಹುಂಡೈ ಐ20 ಕಾರಿನ ಜತೆಗೆ ‘ಫೋರ್ಡ್ ಎಕೋಸ್ಪೋರ್ಟ್’ ಕಾರನ್ನೂ ಸ್ಫೋಟಕ್ಕೆ ಬಳಸುವ ಸಂಚನ್ನು ಉಮರ್ ಮಾಡಿರಬಹುದು ಎಂಬ ಶಂಕೆಯಿದೆ. ಈ ದಿಸೆಯಲ್ಲಿಯೂ ತನಿಖೆ ನಡೆಸಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

ವಿಳಾಸದ ಬಳಿ ತಪಾಸಣೆ

ಉಮರ್ ಕಾರಿನ ನೋಂದಣಿಗೆ ನವ ಸೀಲಂಪುರ ಬಳಿಯ ನಿವಾಸದ ವಿಳಾಸವನ್ನು ನೀಡಿದ್ದ. ಇದು ಗೊತ್ತಾದ ಕೂಡಲೇ ಪೊಲೀಸರು ಈ ವಿಳಾಸದ ಬಳಿ ಹೋಗಿ ತಪಾಸಣೆ ನಡೆಸಿದರು. ಕಾರು ಖರೀದಿಗೆ ಉಮರ್ ನಕಲಿ ವಿಳಾಸ ನೀಡಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವಿಳಾಸದಲ್ಲಿ ಮದರಸ ನಡೆಸುತ್ತಿರುವ ಇಮಾಮ್ ಮೊಹಮ್ಮದ್ ತಸವ್ವೂರ್ ಅವರನ್ನು ಪೊಲೀಸರು ವಿಚಾರಣೆ ನಡೆಸಿದರು. ‘ಯಾವುದೇ ರೀತಿಯ ಅನುಮಾನಾಸ್ಪದ ಚಟುವಟಿಕೆಗಳನ್ನು ನಾನು ಇಲ್ಲಿ ಗಮನಿಸಿಲ್ಲ’ ಎಂದು ಇಮಾಮ್ ಈ ವೇಳೆ ಪೊಲೀಸರಿಗೆ ತಿಳಿಸಿದರು.

‘ಆಕಸ್ಮಿಕವೂ ಆಗಿರಬಹುದು’: ‘ಕೆಂಪುಕೋಟೆ ಬಳಿ ಸೋಮವಾರ ಸಂಭವಿಸಿದ ಭಾರಿ ಸ್ಫೋಟವು ಆಕಸ್ಮಿಕವೂ ಆಗಿರಬಹುದು’ ಎಂದೂ ಅಧಿಕಾರಿ ಹೇಳಿದ್ದಾರೆ.

ಜನವರಿಯಲ್ಲೇ ಸಂಚು ಶುರು

ಒಂದನೇ ಪುಟದಿಂದ...

‘ಗಣರಾಜ್ಯೋತ್ಸವದ ದಿನವಾದ ಜನವರಿ 26ರಂದು ಐತಿಹಾಸಿಕ ಸ್ಮಾರಕವನ್ನು ಗುರಿಯಾಗಿಸಿ ದಾಳಿ ನಡೆಸಲು ಅವರು ದೊಡ್ಡ ಪಿತೂರಿ ನಡೆಸಿರುವ ಶಂಕೆಯಿದೆ. ಆದರೆ ಆ ಸಂದರ್ಭದಲ್ಲಿ ಅಲ್ಲಿದ್ದ ಬಿಗಿ ಭದ್ರತೆ ಮತ್ತು ತೀವ್ರ ಗಸ್ತು ವ್ಯವಸ್ಥೆಯಿಂದಾಗಿ ಅವರ ಯೋಜನೆ ಜಾರಿಗೊಳಿಸುವುದು ಸಾಧ್ಯವಾಗಲಿಲ್ಲ’ ಎಂದು ಅವರು ತಿಳಿಸಿದ್ದಾರೆ.

ನಿಷೇಧಿತ ಜೈಷ್–ಎ–ಮೊಹಮ್ಮದ್ (ಜೆಇಎಂ) ಮತ್ತು ಅನ್ಸಾರ್ ಗಜ್ವತ್–ಉಲ್–ಹಿಂದ್ ಸಂಘಟನೆಗಳ ಜತೆಗೆ ನಂಟು ಹೊಂದಿದ್ದ ಉಗ್ರರ ಜಾಲವನ್ನು ಭೇದಿಸಿದ್ದ ಪೊಲೀಸರು, ಮೂವರು ವೈದ್ಯರು ಸೇರಿದಂತೆ ಎಂಟು ಮಂದಿ ಶಂಕಿತರನ್ನು ಸೋಮವಾರ ಬಂಧಿಸಿದ್ದರು.

ಈ ಕಾರ್ಯಾಚರಣೆ ವೇಳೆ 2,900 ಕೆ.ಜಿ ಅಮೋನಿಯಂ ನೈಟ್ರೇಟ್, ಪೊಟ್ಯಾಷಿಯಂ ಕ್ಲೋರೇಟ್, ಸಲ್ಫರ್ ಸೇರಿದಂತೆ ಅಪಾರ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಹಾಗೂ ಎಲೆಕ್ಟ್ರಾನಿಕ್ ಸಾಧನಗಳನ್ನು ವಶಕ್ಕೆ ಪಡೆದಿದ್ದರು.

ಅದರ ಬೆನ್ನಲ್ಲೇ ದೆಹಲಿಯ ಕೆಂಪುಕೋಟೆ ಬಳಿ ಕಾರು ಸ್ಫೋಟ ಸಂಭವಿಸಿ 12 ಜನರು ಮೃತಪಟ್ಟು, ಹಲವರು ಗಾಯಗೊಂಡಿದ್ದರು.

ಮೌಲ್ವಿ ವಶಕ್ಕೆ: ತನಿಖೆಯ ಭಾಗವಾಗಿ ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಬುಧವಾರ ಹರಿಯಾಣದ ಮೇವಾತ್‌ನಲ್ಲಿ ಮೌಲ್ವಿ ಇಶ್ತಿಯಾಕ್ ಅನ್ನು ವಶಕ್ಕೆ ಪಡೆದು, ಶ್ರೀನಗರಕ್ಕೆ ಕರೆತಂದಿದ್ದಾರೆ. ಫರೀದಾಬಾದ್‌ನ ಅಲ್–ಫಲಾಹ್ ವಿಶ್ವವಿದ್ಯಾಲಯ ಸಂಕೀರ್ಣದ ಬಾಡಿಗೆ ಮನೆಯಲ್ಲಿ ಆತ ವಾಸಿಸುತ್ತಿದ್ದ.

ಮೌಲ್ವಿ ಮನೆಯಿಂದ ಪೊಲೀಸರು ಸೋಮವಾರ 2,500 ಕೆ.ಜಿಗೂ ಹೆಚ್ಚು ಸ್ಫೋಟಕಗಳನ್ನು ವಶಕ್ಕೆ ಪಡೆದಿದ್ದರು. ಮೌಲ್ವಿಯನ್ನು ಬಂಧಿಸುವ ಸಾಧ್ಯತೆಯಿದೆ. ಹೀಗಾದರೆ ಈ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ ಒಂಬತ್ತಕ್ಕೇರಲಿದೆ.

ಡಾ. ಉಮರ್ ನಬಿ ಮತ್ತು ಮುಜಮ್ಮಿಲ್ ಗನಿ ಈ ಸ್ಫೋಟಕಗಳನ್ನು ಮೌಲ್ವಿ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದರು ಎಂದು ಪೊಲೀಸರು ಹೇಳಿದ್ದಾರೆ.

40 ಮಾದರಿಗಳ ಸಂಗ್ರಹ: ಕಾರು ಸ್ಫೋಟ ಸಂಭವಿಸಿದ ಸ್ಥಳದಿಂದ ಸುಮಾರು 40 ಮಾದರಿಗಳನ್ನು ಸಂಗ್ರಹಿಸಿರುವ ವಿಧಿವಿಜ್ಞಾನ ತಜ್ಞರು ಪರಿಶೀಲಿಸುತ್ತಿದ್ದಾರೆ. ಇದರಲ್ಲಿ ಎರಡು ಕಾರ್ಟ್ರಿಡ್ಜ್‌ಗಳು, ಸಜೀವ ಮದ್ದುಗುಂಡುಗಳು ಮತ್ತು ಎರಡು ವಿಭಿನ್ನ ರೀತಿಯ ಸ್ಫೋಟಕ ಮಾದರಿಗಳು ಸೇರಿವೆ.

ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಪ್ರಾಥಮಿಕ ವಿಶ್ಲೇಷಣೆ ಪ್ರಕಾರ, ಸ್ಫೋಟಕ ಮಾದರಿಗಳಲ್ಲಿ ಒಂದು ಅಮೋನಿಯಂ ನೈಟ್ರೇಟ್ ಆಗಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡನೇ ಸ್ಫೋಟಕ ಮಾದರಿಯು ಅಮೋನಿಯಂ ನೈಟ್ರೇಟ್‌ಗಿಂತ ಹೆಚ್ಚು ಶಕ್ತಿಶಾಲಿ ಆಗಿದ್ದಂತೆ ಕಾಣುತ್ತಿದೆ. ಎಫ್‌ಎಸ್‌ಎಲ್ ವರದಿಯ ಬಳಿಕ ಅದರ ನಿಖರವಾದ ಸಂಯೋಜನೆ ದೃಢಪಡುತ್ತದೆ ಎಂದು ಅವರು ವಿವರಿಸಿದ್ದಾರೆ.

ಫರೀದಾಬಾದ್‌ನಲ್ಲಿ ಅಲ್–ಫಲಾಹ್ ವಿಶ್ವವಿದ್ಯಾಲಯದ ಡಾ. ಮುಜಮ್ಮಿಲ್ ಗನಿ ಮತ್ತು ಡಾ. ಶಾಹೀನ್ ಸಹೀದ್ ಅನ್ನು ಪೊಲೀಸರು ಸೋಮವಾರ ಬಂಧಿಸಿದ್ದರು. ಅವರ ಬಳಿ 360 ಕೆ.ಜಿ ಅಮೋನಿಯಂ ನೈಟ್ರೇಟ್ ಪತ್ತೆಯಾಗಿತ್ತು. ಸ್ಫೋಟಕಗಳ ಸ್ವರೂಪ ಮತ್ತು ಅವುಗಳನ್ನು ಹೇಗೆ ಸ್ಫೋಟದಲ್ಲಿ ಬಳಸಲಾಗಿದೆ ಎಂಬುದು ಉನ್ನತ ಮಟ್ಟದ ತನಿಖೆಯಿಂದ ಗೊತ್ತಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕಾರ್ ಡೀಲರ್ ವಶಕ್ಕೆ: ದೆಹಲಿಯ ಕೆಂಪು ಕೋಟೆ ಬಳಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ಫರೀದಾಬಾದ್ ಮೂಲದ ಕಾರ್ ಡೀಲರ್ ಒಬ್ಬರನ್ನು ವಿಶೇಷ ದಳ ವಶಕ್ಕೆ ಪಡೆದಿದೆ. ಫರೀದಾಬಾದ್ ಪೊಲೀಸರ ನೆರವಿನೊಂದಿಗೆ ಅವರನ್ನು ಸೋಮವಾರ ರಾತ್ರಿ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ಬುಧವಾರ ತಿಳಿಸಿವೆ.

ಫರೀದಾಬಾದ್ ಸೆಕ್ಟರ್ 37ರ ರೋಯಲ್ ಕಾರ್ ಪ್ಲಾಜಾದ ಮಾಲೀಕ ಅಮಿತ್ ಬಂಧಿತ ವ್ಯಕ್ತಿ.

ಡಿ. 6ರಂದು ಪ್ರಬಲ ಸ್ಫೋಟದ ಯೋಜನೆ

ಒಂದನೇ ಪುಟದಿಂದ...

ಟರ್ಕಿ ಪ್ರವಾಸದ ಬಳಿಕ ಉಮರ್, ಗನಿ ಜತೆಗೆ ಅಮೋನಿಯಂ ನೈಟ್ರೇಟ್, ಪೊಟ್ಯಾಷಿಯಂ ನೈಟ್ರೇಟ್, ಸಲ್ಫರ್ ಸೇರಿದಂತೆ ವಿವಿಧ ಸ್ಫೋಟಕಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ್ದ. ಇವುಗಳನ್ನು ಅಲ್–ಫಲಾಹ್ ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಸುತ್ತಮುತ್ತ ಸಂಗ್ರಹಿಸಲು ಮುಂದಾಗಿದ್ದ ಎಂದು ಅವರು ವಿವರಿಸಿದ್ದಾರೆ.

‘ಡಿಸೆಂಬರ್ ಭಯೋತ್ಪಾದನಾ ಯೋಜನೆಯ ಬಗ್ಗೆ ಉಮರ್ ತನ್ನ ಸಹಚರರಿಗೆ ಮಾಹಿತಿ ನೀಡಿದ್ದ. ತಾನು ಖರೀದಿಸಿದ್ದ ಹುಂಡೈ ಐ20 ಕಾರಿನಲ್ಲಿ ಸ್ಫೋಟಕಗಳನ್ನು ಇರಿಸಲು ಸಿದ್ಧತೆ ನಡೆಸಿದ್ದ. ಇದಕ್ಕಾಗಿ ಇಂಟರ್‌ನೆಟ್‌ನಿಂದ ಮಾಹಿತಿ ಸಂಗ್ರಹಿಸಿ, ವಾಹನ ಆಧಾರಿತ ಸ್ಫೋಟಕ ಸಾಧನ (ವಿಬಿಐಇಡಿ) ಅಳವಡಿಸಲು ಯೋಜಿಸಿದ್ದ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಅಕ್ಟೋಬರ್ 26ರಂದು ಆತ ಕಾಶ್ಮೀರಕ್ಕೆ ಹೋಗಿ, ಸ್ನೇಹಿತರು ಮತ್ತು ಸಂಬಂಧಿಕರ ಜತೆ ಕೆಲ ದಿನಗಳು ಕಳೆದಿದ್ದ. ಅಲ್ಲಿಂದ ಫರೀದಾಬಾದ್‌ಗೆ ಹಿಂದಿರುಗುವ ಮುನ್ನ, ತಾನು ಮೂರು ತಿಂಗಳು ಲಭ್ಯವಿರುವುದಿಲ್ಲ ಎಂದು ಸ್ನೇಹಿತರು ಮತ್ತು ಸಂಬಂಧಿಕರಿಗೆ ತಿಳಿಸಿದ್ದನು’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯೋಜನೆಯ ಪ್ರಕಾರ ಕಾರಿಗೆ ವಿಬಿಐಇಡಿ ಅಳವಡಿಸಿ, ಕೆಲ ಕಾಲ ಕಣ್ಮರೆಯಾಗುವ ಉದ್ದೇಶವನ್ನು ಉಮರ್ ಹೊಂದಿದ್ದ. ಆದರೆ ಜಮ್ಮು ಮತ್ತು ಕಾಶ್ಮೀರ ಪೊಲೀಸರ ಕಾರ್ಯಾಚರಣೆಯಿಂದ ಆತಂಕಗೊಂಡಿದ್ದ ಎಂದು ಅವರು ತಿಳಿಸಿದ್ದಾರೆ.

ಹಲವೆಡೆ ಶೋಧ

ಕಾರು ಸ್ಫೋಟ ಪ್ರಕರಣದ ಬೆನ್ನುಬಿದ್ದಿರುವ ಪೊಲೀಸರು, ನಿಷೇಧಿತ ಜಮಾತ್–ಎ–ಇಸ್ಲಾಮಿ ಸಂಘಟನೆಯೊಂದಿಗೆ ನಂಟು ಹೊಂದಿರುವ ವ್ಯಕ್ತಿಗಳಿಗೆ ಸಂಬಂಧಿಸಿದ 300ಕ್ಕೂ ಹೆಚ್ಚು ಸ್ಥಳಗಳಲ್ಲಿ ಬುಧವಾರ ಶೋಧ ನಡೆಸಿದರು.

ಕುಲ್ಗಾಂ, ಪುಲ್ವಾಮಾ, ಶೋಪಿಯಾನ್, ಬಾರಾಮುಲ್ಲಾ, ಗಾಂಧೇರಬಲ್ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಇಂತಹ ನೀಚ ಕೆಲಸ ಮಾಡುವ ಯಾರಿಗಾದರೂ ಭಯ ಹುಟ್ಟುವ ಹಾಗೆ ಶಿಕ್ಷೆ ಜಾರಿ ಮಾಡಬೇಕು. ಕೇಂದ್ರ ಗೃಹ ಸಚಿವರ ಬಳಿಯೇ ಗುಪ್ತಚರ ವಿಭಾಗ, ಸಿಐಬಿ ಎಲ್ಲವೂ ಇವೆ. ಆದರೂ, ಇಂತಹ ಚಟುವಟಿಕೆ ಪತ್ತೆ ಹಚ್ಚುವಲ್ಲಿ ವಿಫಲರಾಗಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಟೆಕಿ ಬಂಧನ: ಎಟಿಎಸ್ ಶೋಧ

ಮುಂಬೈ (ಪಿಟಿಐ): ಅಲ್ ಖೈದಾ ಮತ್ತಿತರೆ ನಿಷೇಧಿತ ಉಗ್ರ ಸಂಘಟನೆಗಳ ಜೊತೆಗೆ ನಂಟು ಹೊಂದಿದ್ದ ಆರೋಪದ ಮೇಲೆ ಇತ್ತೀಚೆಗೆ ಬಂಧಿಸಲಾಗಿದ್ದ ಐಟಿ ಎಂಜಿನಿಯರ್ ಜೊತೆ ಸಂಪರ್ಕದಲ್ಲಿದ್ದ ಕಾರಣಕ್ಕಾಗಿ ಮಹಾರಾಷ್ಟ್ರ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಅಧಿಕಾರಿಗಳು ಠಾಣೆಯ ಶಿಕ್ಷಕ ಮತ್ತು ಪುಣೆಯ ವ್ಯಕ್ತಿಯೊಬ್ಬರ ಮನೆ ಸೇರಿದಂತೆ ಇತರೆಡೆ ಶೋಧ ನಡೆಸಿದ್ದಾರೆ.

ಎಟಿಎಸ್ ಅಧಿಕಾರಿಗಳು ಬುಧವಾರ ಈ ಬಗ್ಗೆ ಮಾಹಿತಿ ನೀಡಿದ್ದು, ಈ ಪರಿಶೀಲನೆಗೂ ಸೋಮವಾರ ದೆಹಲಿಯಲ್ಲಿ ನಡೆದ ಸ್ಫೋಟ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ದೆಹಲಿ ಸ್ಫೋಟಕ್ಕೆ ಮಹಾರಾಷ್ಟ್ರ ಸಂಪರ್ಕ ಸಾಧ್ಯತೆ ಬಗ್ಗೆ ಪರಿಶೀಲನೆ ನಡೆದಿದೆ. ಠಾಣೆಯ ಮುಂಬ್ರಾದಲ್ಲಿದ್ದ ಶಿಕ್ಷಕರ ಮನೆಯಲ್ಲಿ ಬಂಧಿತ ಐಟಿ ಎಂಜಿನಿಯರ್ ಜುಬೇರ್ ಹಂಗರ್‌ಗೇಕರ್ ಸಭೆ ಮಾಡಿದ್ದ ಮಾಹಿತಿ ಸಿಕ್ಕಿತ್ತು. ಆದರೆ, ಶಿಕ್ಷಕ ಈ ಪ್ರಕರಣದ ಆರೋಪಿ ಅಥವಾ ಸಾಕ್ಷಿಯಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಹೋದ್ಯೋಗಿ ಡಾ. ಮುಜಮ್ಮಿಲ್ ಕುರಿತೂ ಹೇಳಿರಲಿಲ್ಲ– ಶಾಹೀನ್ ತಂದೆ

ನಂಬಲಾಗುತ್ತಿಲ್ಲ: ಬಂಧಿತ ವೈದ್ಯೆ ಸೋದರ

ಲಖನೌ/ಕಾನ್ಪುರ (ಪಿಟಿಐ): ಭಯೋತ್ಪಾದಕ ಚಟುವಟಿಕೆಯಲ್ಲಿ ತನ್ನ ಸೋದರಿಯ ಪಾತ್ರದ ಕುರಿತ ಆರೋಪವನ್ನು ನನ್ನಿಂದ ನಂಬಲು ಆಗುತ್ತಿಲ್ಲ. ಆಕೆ ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾಳೆ ಎನ್ನುವುದನ್ನು ನಮ್ಮ ಕುಟುಂಬ ಒಪ್ಪಿಕೊಳ್ಳಲು ಇನ್ನೂ ಕಷ್ಟವಾಗುತ್ತಿದೆ ಎಂದು ದೆಹಲಿ ಸ್ಫೋಟ ಪ್ರಕರಣದ ಬಂಧಿತ ವೈದ್ಯೆ ಶಾಹೀನ್ ಸಯೀದ್ ಅಣ್ಣ ಮೊಹಮ್ಮದ್ ಶೋಯೆಬ್ ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಮತ್ತೊಂದೆಡೆ ಆಕೆಯ ಮಾಜಿ ಪತಿ ಜಾಫರ್ ಪ್ರತಿಕ್ರಿಯಿಸಿ, ‘ನಾವಿಬ್ಬರೂ ಜೊತೆಗಿದ್ದಾಗ ಆಕೆ ಯಾವತ್ತೂ ಬುರ್ಕಾ ಧರಿಸುತ್ತಿರಲಿಲ್ಲ. ಮಕ್ಕಳಿಗೆ ಪ್ರೀತಿಪಾತ್ರ ತಾಯಿಯಾಗಿದ್ದಳು. ಉತ್ತಮ ಜೀವನಕ್ಕಾಗಿ ವಿದೇಶದಲ್ಲಿ ನೆಲಸಲು ಬಯಸಿದ್ದಳು’ ಎಂದು ಹೇಳಿದ್ದಾರೆ.

ಲಖನೌನಲ್ಲಿ ಆಕೆಯ ಸೋದರ ಶೋಯೆಬ್ ಪ್ರತಿಕ್ರಿಯಿಸಿ, ‘ಭಯೋತ್ಪಾದಕ ನಿಗ್ರಹ ದಳದ ಅಧಿಕಾರಿಗಳು ನಮ್ಮ ಮನೆಗೆ ಭೇಟಿ ನೀಡಿ ಪರಿಶೀಲಿಸಿದರು, ಪ್ರಶ್ನೆಗಳನ್ನು ಕೇಳಿದರು. ಆಕೆ ಕೊನೆಯದಾಗಿ ನಿಮ್ಮ ಮನೆಗೆ ಯಾವಾಗ ಬಂದಿದ್ದಳು ಎಂದು ಕೇಳಿದರು. ನಮ್ಮೊಂದಿಗೆ ಗೌರವಯುತವಾಗಿ ನಡೆದುಕೊಂಡರು’ ಎಂದು ಹೇಳಿದ್ದಾರೆ.

‘ಕಳೆದ ನಾಲ್ಕು ವರ್ಷಗಳಿಂದ ಆಕೆಯ ಸಂಪರ್ಕವಿಲ್ಲ. ಮಾತನ್ನೂ ಆಡಿಲ್ಲ. ಏನೇ ಇದ್ದರೂ ಪೋಷಕರು ಆಗಾಗ ವಿಚಾರಿಸಿಕೊಳ್ಳುತ್ತಿದ್ದರು. ಐಐಎಂ ರಸ್ತೆಯ ಆಕೆಯ ಲಖನೌ ಮನೆಗೂ ಹೋಗಿಲ್ಲ. ಔಷಧ ವಿಜ್ಞಾನ ಓದುವಾಗಲೂ ಅನುಮಾನ ಬರುವ ಚಟುವಟಿಕೆಯ ಸುಳಿವು ಕಂಡಿರಲಿಲ್ಲ. ಈಗ ಬಂದಿರುವ ಆರೋಪಗಳನ್ನು ನಾನು ಒಪ್ಪುವುದಿಲ್ಲ’ ಎಂದಿದ್ದಾರೆ.

‘ಆಕೆ ಮನಸಿನಲ್ಲಿ ಏನಿತ್ತೋ ಗೊತ್ತಿಲ್ಲ’


ಕಾನ್ಪುರದಲ್ಲಿ ಮಾಜಿ ಪತಿ ಡಾ. ಜಾಫರ್ ಹಯಾತ್ ಪ್ರತಿಕ್ರಿಯಿಸಿದ್ದು, ‘ಮಂಗಳವಾರ ಸಂಜೆ ಆಕೆಯ ಪಾತ್ರದ ಬಗ್ಗೆ ತಿಳಿದೆ.ಇದೆಲ್ಲವನ್ನೂ ಮಾಡಲು ಆಕೆಯ ಮನಸ್ಸಿನಲ್ಲಿ ಏನಿತ್ತೋ ಗೊತ್ತಿಲ್ಲ. ಇಬ್ಬರೂ ಬೇರೆಬೇರೆಯಾಗಿ ವೈದ್ಯ ಶಿಕ್ಷಣ ಪಡೆದಿದ್ದೆವು. 2003ರಲ್ಲಿ ಮದುವೆಯಾಗಿತ್ತು. 2012ರಲ್ಲಿ ವಿಚ್ಛೇದನವಾಯಿತು. ನಮ್ಮ ನಡುವೆ ಜಗಳ ಇರಲಿಲ್ಲ. ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದಳು’ ಎಂದಿದ್ದಾರೆ.

‘ಆಸ್ಟ್ರೇಲಿಯಾ ಅಥವಾ ಯೂರೋಪ್‌ಗೆ ಹೋಗಿ ನೆಲಸೋಣ ಎಂದು ಈ ಹಿಂದೆ ನನಗೆ ಕೇಳುತ್ತಿದ್ದಳು. ಆಕೆ ಭಾರತದಲ್ಲೇ ಇದ್ದಾಳೆ ಎನ್ನುವುದು ಇತ್ತೀಚೆಗಷ್ಟೇ ತಿಳಿದಿತ್ತು’ ಎಂದು ಹಯಾತ್ ಹೇಳಿದ್ದಾರೆ.

ಮುಜಮ್ಮಿಲ್ ಜೊತೆ ಸಂಪರ್ಕ

ತನಿಖಾಧಿಕಾರಿಗಳ ಪ್ರಕಾರ ಫರೀದಾಬಾದ್‌ನ ಅಲ್ ಫಲಾಹ್ ವಿ.ವಿ.ಯ ಬಂಧಿತ ವೈದ್ಯೆ ಶಾಹೀನ್ ಸಯೀದ್ ಸಹೋದ್ಯೋಗಿ ಡಾ.ಮುಜಮ್ಮಿಲ್ ಗನಿ ಜೊತೆ ಸಂಪರ್ಕ ಹೊಂದಿದ್ದರು. ಮುಜಮ್ಮಿಲ್ ‘ವೈಟ್ ಕಾಲರ್ ಭಯೋತ್ಪಾದಕ’ ಕೃತ್ಯದ ಸೂತ್ರಧಾರಿ ಎಂದು ತನಿಖಾಧಿಕಾರಿಗಳು ಹೇಳುತ್ತಿದ್ದಾರೆ. ಶಾಹೀನ್ ಬಗ್ಗೆ ಮಂಗಳವಾರ ಪ್ರತಿಕ್ರಿಯಿಸಿದ್ದ ತಂದೆ ಸಯ್ಯದ್ ಅಹ್ಮದ್ ಅನ್ಸಾರಿ, ‘ನನ್ನ ಮಗಳ ಮೇಲಿನ ಆರೋಪ ಕೇಳಿ ಆಘಾತವಾಯಿತು. ತಿಂಗಳ ಹಿಂದೆ ಆಕೆ ಜೊತೆ ಮಾತನಾಡಿದ್ದೆ. ಡಾ.ಮುಜಮ್ಮಿಲ್ ಬಗ್ಗೆ ಪ್ರಸ್ತಾಪಿಸಿರಲಿಲ್ಲ’ ಎಂದಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,694
ಇಂದಿನ ಅಂತ್ಯ: 25,875
ದಿನದ ಗರಿಷ್ಠ: 25,934
180

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹635
12 ಕ್ಕೆ ₹80
ಮೈಸೂರು: 100 ಕ್ಕೆ ₹638

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹182
ಆರ್‌ಎಸ್‌ಎಸ್-5 ₹177
ಗುಡ್ ಲಾಟ್ ₹164

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹558-702
ದ್ವಿತಳಿ (ಬಿ.ವಿ) ₹550-866

ಮುದ್ರೆಮನೆ ಕಾಫಿ (50 ಕೆ.ಜಿಗೆ)
ಎಪಿ ₹29250
ಎಸಿ ₹15540
ಆರ್‌ಪಿ ₹18900
ಆರ್‌ಸಿ ₹10950

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹18000-19000
ಮಂಗಳೂರು ₹12000-20000

ರಫ್ತು ಉತ್ತೇಜನಾ ಯೋಜನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಆರು ವರ್ಷಗಳ ಅವಧಿಯಲ್ಲಿ ಜಾರಿಗೆ ಬರುವ, ₹25 ಸಾವಿರ ಕೋಟಿ ಮೊತ್ತದ ರಫ್ತು ಉತ್ತೇಜನಾ ಯೋಜನೆಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ. ಯೋಜನೆಯು ಈ ಹಣಕಾಸು ವರ್ಷದಿಂದಲೇ ಜಾರಿಗೆ ಬರಲಿದೆ.

ಈ ಯೋಜನೆಯು, ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಪರಿಣಾಮವನ್ನು ನಿಭಾಯಿಸಲು ರಫ್ತುದಾರರಿಗೆ ನೆರವಾಗಲಿದೆ. ಎರಡು ಉಪ ಯೋಜನೆಗಳ ಮೂಲಕ ('ನಿರ್ಯಾತ್ ಪ್ರೋತ್ಸಾಹನ್' ಮತ್ತು 'ನಿರ್ಯಾತ್ ದಿಶಾ') ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಈ ಯೋಜನೆಯು ರಫ್ತು ವ್ಯವಸ್ಥೆಗೆ ಬೆಂಬಲವಾಗಿ ನಿಲ್ಲಲಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ಸಭೆಯ ನಂತರ ತಿಳಿಸಿದರು.

ಅಮೆರಿಕ: ಆಡಳಿತ ಬಿಕ್ಕಟ್ಟು ಅಂತ್ಯ ಸನ್ನಿಹಿತ

ವಾಷಿಂಗ್ಟನ್(ಎಪಿ): ಅಲ್ಪಾವಧಿಗೆ ಅಗತ್ಯವಿದ್ದ ವೆಚ್ಚ ಮಸೂದೆಗೆ ಅನುಮೋದನೆ ದೊರೆಯುವ ಸಾಧ್ಯತೆ ಇದ್ದು, ಕಳೆದ 43 ದಿನಗಳಿಂದ ಕಂಡುಬಂದಿದ್ದ ಆಡಳಿತ ಬಿಕ್ಕಟ್ಟು ಅಂತ್ಯವಾಗಲಿದೆ.

ಇದರೊಂದಿಗೆ, ವಿವಿಧ ಇಲಾಖೆಗಳು ಅಲ್ಪಾವಧಿಗೆ ಕಾರ್ಯ ನಿರ್ವಹಿಸಲು ಅಗತ್ಯವಿರುವ ಅನುದಾನ ದೊರೆಯಲಿದೆ. ಆದರೆ, ಮಸೂದೆಗೆ ಅನುಮೋದನೆ ನೀಡುವ ವಿಚಾರದಲ್ಲಿ ಡೆಮಾಕ್ರಟಿಕ್ ಪಕ್ಷಕ್ಕಾಗಲಿ ಅಥವಾ ರಿಪಬ್ಲಿಕನ್ ಪಕ್ಷಕ್ಕಾಗಲಿ ಗೆದ್ದು ಬೀಗುವಂತಹ ಸ್ಥಿತಿ ಇಲ್ಲವಾಗಿದೆ.

ಸೆನೆಟ್‌ನ ಧನವಿನಿಯೋಗ ಸಮಿತಿ ಸಿದ್ಧಪಡಿಸಿರುವ ಮಸೂದೆಗೆ ಅನುಮೋದನೆ ನೀಡಿದ್ದರಿಂದಾಗಿ, ಆಹಾರಕ್ಕೆ ನೆರವು, ಹಿರಿಯ ನಾಗರಿಕರ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಶಾಸಕಾಂಗ ಕಾರ್ಯಗಳಿಗೆ ಜನವರಿಗೆ ವರೆಗೆ ಅನುದಾನ ನೀಡುವುದು ಸಾಧ್ಯವಾಗಲಿದೆ.

ಆರೋಗ್ಯ ವಿಮೆಗೆ ಸಂಬಂಧಿಸಿ ಅಲ್ಪಾವಧಿಗೆ ಅನುದಾನ ನೀಡಬೇಕು ಎಂಬ ಡೆಮಾಕ್ರಟಿಕ್ ಸಂಸದರ ಬೇಡಿಕೆಗಳಿಗೆ ಸ್ಪಂದನೆ ಸಿಕ್ಕಿಲ್ಲ.

'ಆರೋಗ್ಯ ಸೇವೆಗಳಿಗೆ ಅಮೆರಿಕ ಕುಟುಂಬಗಳು ದುಪ್ಪಟ್ಟು ವೆಚ್ಚ ಮಾಡಬೇಕಾಗುತ್ತದೆ. ಜನರು ಇಂತಹ ಪರಿಸ್ಥಿತಿಯನ್ನು ಎಂದಿಗೂ ಎದುರಿಸಿರಲಿಲ್ಲ' ಎಂದು ಸೆನೆಟ್‌ನಲ್ಲಿ ಡೆಮಾಕ್ರಟಿಕ್ ನಾಯಕ ಚಕ್ ಶುಮರ್ ಪ್ರತಿಕ್ರಿಯಿಸಿದ್ದಾರೆ.

ಆಡಳಿತದಲ್ಲಿ ತಲೆದೋರಿರುವ ಬಿಕ್ಕಟ್ಟು ಶಮನಕ್ಕಾಗಿ ಮಾತುಕತೆಗೆ ಬರುವಂತೆ ಡೆಮಾಕ್ರಟಿಕ್ ಪಕ್ಷದ ಸಂಸದರು ನೀಡಿದ ಆಹ್ವಾನವನ್ನು ತಿರಸ್ಕರಿಸಿದ ರಿಪಬ್ಲಿಕನ್ನರು, ವೆಚ್ಚ ಮಸೂದೆಗೆ ಮೊದಲು ಅನುಮೋದನೆ ಸಿಗಬೇಕು ಎಂದು ಪಟ್ಟು ಹಿಡಿದರು.

ಚಿಲ್ಲರೆ ಹಣದುಬ್ಬರ ಇಳಿಕೆ

ದಶಕದ ಕನಿಷ್ಠ ಮಟ್ಟಕ್ಕೆ ಹಣದುಬ್ಬರ • ಇಳಿಕೆಗೆ ಜಿಎಸ್‌ಟಿ ಪರಿಷ್ಕರಣೆಯೂ ಕಾರಣ

ಮುಖ್ಯಾಂಶಗಳು
- 2014ರ ಜನವರಿ ನಂತರ ದಾಖಲಾದ ಅತ್ಯಂತ ಕನಿಷ್ಠ ಮಟ್ಟ
- ತರಕಾರಿ, ಹಣ್ಣು, ಮೊಟ್ಟೆ ಬೆಲೆ ಇಳಿಕೆಯೂ ಕಾರಣ
- ಕರ್ನಾಟಕದಲ್ಲಿ ಶೇ 2.34ರಷ್ಟು ಹಣದುಬ್ಬರ ದಾಖಲು

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇಕಡ 0.25ಕ್ಕೆ ಇಳಿಕೆಯಾಗಿದೆ. ಜನರು ನಿತ್ಯದ ಬದುಕಿನಲ್ಲಿ ಹೆಚ್ಚಾಗಿ ಬಳಕೆ ಮಾಡುವ ಸರಿಸುಮಾರು 380 ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರವನ್ನು ಕಡಿಮೆ ಮಾಡಿದ್ದುದು ಕೂಡ ಹಣದುಬ್ಬರ ಇಳಿಕೆಗೆ ಒಂದು ಕಾರಣ ಎಂದು ತಜ್ಞರು ಹೇಳಿದ್ದಾರೆ.

ಅಲ್ಲದೆ, ತರಕಾರಿ, ಹಣ್ಣುಗಳು ಮತ್ತು ಮೊಟ್ಟೆ ಬೆಲೆಯು ಕಡಿಮೆ ಆಗಿರುವುದು ಕೂಡ ಹಣದುಬ್ಬರ ದರವನ್ನು ತಗ್ಗಿಸಿದೆ. ಅಕ್ಟೋಬರ್‌ನಲ್ಲಿ ದಾಖಲಾಗಿರುವ, ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು 2014ರ ಜನವರಿ ನಂತರದ ಅತ್ಯಂತ ಕನಿಷ್ಠ ಮಟ್ಟವಾಗಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 1.44ರಷ್ಟು ಇತ್ತು. ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಇದು ಶೇ 6.21ರಷ್ಟು ಆಗಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ಅಕ್ಟೋಬರ್‌ನಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ (–)5.02ರಷ್ಟು ಆಗಿತ್ತು.

ಹಣದುಬ್ಬರವು ಇಳಿಕೆ ಕಂಡಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಜಿಎಸ್‌ಟಿ ದರ ಪರಿಷ್ಕರಣೆಯೂ ಸೇರಿದೆ ಎಂದು ಎನ್‌ಎಸ್‌ಒ ಹೇಳಿದೆ. ಎಣ್ಣೆ ಮತ್ತು ಕೊಬ್ಬುಗಳು, ತರಕಾರಿಗಳು, ಹಣ್ಣುಗಳು, ಮೊಟ್ಟೆ, ಪಾದರಕ್ಷೆ, ಏಕದಳ ಧಾನ್ಯಗಳು



ಮತ್ತು ಅವುಗಳ ಉತ್ಪನ್ನಗಳು, ಸಾರಿಗೆ ಹಾಗೂ ಸಂವಹನ ವರ್ಗಗಳಲ್ಲಿ ಹಣದುಬ್ಬರ ಇಳಿಕೆ ಆಗಿದ್ದುದು ಕೂಡ ಒಂದು ಕಾರಣ ಎಂದು ಎನ್‌ಎಸ್‌ಒ ಹೇಳಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರ ಪ್ರಮಾಣವು (–)0.25 ಆಗಿದೆ. ನಗರ ಪ್ರದೇಶಗಳಲ್ಲಿ ಇದು ಶೇ 0.88ರ ಮಟ್ಟದಲ್ಲಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಚಿಲ್ಲರೆ ಹಣದುಬ್ಬರದ ಅಂದಾಜು ಪ್ರಮಾಣವನ್ನು ಪ್ರಸಕ್ತ ಆರ್ಥಿಕ ವರ್ಷಕ್ಕೆ ಶೇ 2.6ರ ಮಟ್ಟದಿಂದ ತುಸು ಕಡಿಮೆ ಮಾಡುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

'ಸಮಿತಿಯು ಅಕ್ಟೋಬರ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ರೆಪೊ ದರವನ್ನು ಶೇ 0.25ರಷ್ಟು ಕಡಿಮೆ ಮಾಡುವುದಕ್ಕೆ ಹಣದುಬ್ಬರದ ಇಳಿಕೆಯು ಒತ್ತಾಸೆ ನೀಡುತ್ತದೆ. ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರವು ಆಶ್ಚರ್ಯಕರ ಮಟ್ಟದಲ್ಲಿ ಏರಿಕೆ ಕಾಣದೆ ಇದ್ದರೆ, ರೆಪೊ ದರ ಇಳಿಕೆಯ ಸಾಧ್ಯತೆಗೆ ಬಲ ಬರುತ್ತದೆ' ಎಂದು ಅದಿತಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಜಿಎಸ್‌ಟಿ ದರ ಪರಿಷ್ಕರಣೆಯು ಸೆಪ್ಟೆಂಬರ್ ಕೊನೆಯಲ್ಲಿ ಜಾರಿಗೆ ಬಂತು. ಅದರ ಧನಾತ್ಮಕ ಪರಿಣಾಮವು ಅಕ್ಟೋಬರ್‌ನಲ್ಲಿ ಕಂಡುಬಂದಿದೆ ಎಂದು ಕೇರ್‌ಎಜ್ ರೇಟಿಂಗ್ಸ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ರಜನಿ ಸಿನ್ಹಾ ಹೇಳಿದ್ದಾರೆ.

'ಹಣಕಾಸು ನೀತಿಗಳ ದೃಷ್ಟಿಯಿಂದ ಹೇಳುವುದಾದರೆ, ಹಣದುಬ್ಬರ ಕಡಿಮೆ ಆಗಿರುವುದು, ಆರ್ಥಿಕ ಬೆಳವಣಿಗೆಯ ಮೇಲೆ ಗಮನ ನೀಡಲು ಆರ್‌ಬಿಐಗೆ ಹೆಚ್ಚಿನ ಅವಕಾಶ ಮಾಡಿಕೊಡುತ್ತದೆ... ಈ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆರ್ಥಿಕ ಬೆಳವಣಿಗೆ ದರವು ಕಡಿಮೆ ಆದರೆ, ರೆಪೊ ದರ ಕಡಿತಕ್ಕೆ ಸಂದರ್ಭ ಸೃಷ್ಟಿಯಾಗುತ್ತದೆ' ಎಂದು ಸಿನ್ಹಾ ಅವರು ಹೇಳಿದ್ದಾರೆ.

ಎಂಪಿಸಿ ಸಭೆಯು ಡಿಸೆಂಬರ್ 3ರಿಂದ 5ರವರೆಗೆ ನಡೆಯಲಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1445 (1440)
ಸೋಯಾ (ರಿಫೈನ್ಡ್)	₹1270 (1270)
ಸೂರ್ಯಕಾಂತಿ (ರಿಫೈನ್ಡ್)	₹1400 (1480)
ಪಾಮೋಲಿನ್	₹1255 (1250)

ಬೆಳ್ಳಿ ₹5,540 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಕಂಡಿವೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2 ಸಾವಿರ ಹೆಚ್ಚಳವಾಗಿ, ₹1,27,900ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,27,300ಕ್ಕೆ ತಲುಪಿದೆ.

ಬೆಳ್ಳಿ ದರವು ಕೆ.ಜಿಗೆ ₹5,540 ಜಿಗಿತವಾಗಿ, ₹1,61,300 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಕ್ವಾಂಟಮ್ ಎಕೋಸಿಸ್ಟಮ್ ಮ್ಯಾಪ್'ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ವಾಂಟಮ್ ತಂತ್ರಜ್ಞಾನದ ಬಗ್ಗೆ ಸಮಗ್ರ ಮಾಹಿತಿ ಪ್ರಚುರಪಡಿಸಲು 'ಕರ್ನಾಟಕ ಕ್ವಾಂಟಮ್ ಎಕೋಸಿಸ್ಟಮ್ ಮ್ಯಾಪ್' ತಯಾರಿಸಲು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸ್ವಿಟ್ಜರ್‌ಲೆಂಡ್‌ನಲ್ಲಿ ಕ್ವಾಂಟಮ್ ತಂತ್ರಜ್ಞಾನದ ಬಗ್ಗೆ ಸಮಗ್ರ ಮಾಹಿತಿ ಪ್ರಚುರಪಡಿಸಲು 'ಸ್ವಿಸ್‌ನೆಕ್ಸ್ ಕ್ವಾಂಟಮ್ ಮ್ಯಾಪ್' ಸಿದ್ಧಪಡಿಸಿದೆ. ಅದೇ ಮಾದರಿಯಲ್ಲಿ ಇಲ್ಲೂ ಕ್ವಾಂಟಮ್ ಎಕೋಸಿಸ್ಟಮ್ ಮ್ಯಾಪ್ ಸಿದ್ಧಪಡಿಸುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಸ್ವಿಸ್‌ನೆಕ್ಸ್ ಇಂಡಿಯಾದ ಸಿಇಒ ಮತ್ತು ಕೌನ್ಸಲ್ ಜನರಲ್ ಡಾ ಎಂಜೆಲಾ ಹೊನೆಗ್ಗರ್ ಮತ್ತು ರಾಜ್ಯದ ಅಧಿಕಾರಿಗಳ ಜತೆ ಬೋಸರಾಜು ಮಾತುಕತೆ ನಡೆಸಿದರು. ಸಭೆಯಲ್ಲಿ ಕರ್ನಾಟಕ ಮತ್ತು ಸ್ವಿಟ್ಜರ್‌ಲೆಂಡ್ ಮಧ್ಯೆ ಸಂಶೋಧನೆ ಮತ್ತು ಉದ್ಯಮಗಳ ತಂತ್ರಜ್ಞಾನ ವಿನಿಮಯಕ್ಕೆ ವೇದಿಕೆಯನ್ನು ರಚಿಸಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತೂ ವಿವರವಾಗಿ ಚರ್ಚಿಸಲಾಯಿತು.

ಬೆಂಗಳೂರು ನಗರವು ದೇಶದ ಕ್ವಾಂಟಮ್ ನವೋದ್ಯಮದ ರಾಜಧಾನಿ. ಕ್ವಾಂಟಮ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಾಕಷ್ಟು ನವೋದ್ಯಮಗಳು ಮತ್ತು ಉದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಹಲವಾರು ಸಂಸ್ಥೆಗಳೂ ಸಂಶೋಧನೆಯಲ್ಲಿ ತೊಡಗಿಕೊಂಡಿವೆ. ದೇಶದಲ್ಲಿಯೇ ಅತಿ ಹೆಚ್ಚು ಕ್ವಾಂಟಮ್ ಕ್ಷೇತ್ರದಲ್ಲಿ ಪ್ರಾವೀಣ್ಯತೆ ಹೊಂದಿರುವ ಮಾನವ ಸಂಪನ್ಮೂಲವೂ ಲಭ್ಯವಿದೆ ಎಂದು ಬೋಸರಾಜು ತಿಳಿಸಿದರು.

ದೇಶದಲ್ಲೇ ಮೊದಲ ಕ್ವಾಂಟಮ್ ಸಿಟಿಯನ್ನು ನಿರ್ಮಾಣ ಮಾಡಲು ಸರ್ಕಾರ ಭೂಮಿ ಮಂಜೂರು ಮಾಡಿದೆ. ಈ ಎಲ್ಲಾ ವಿಷಯಗಳನ್ನು ಉತ್ತಮ ರೀತಿಯಲ್ಲಿ ಪ್ರಚುರ ಪಡಿಸಲು ಮ್ಯಾಪ್ ರಚಿಸುವುದು ಅಗತ್ಯವಿದೆ ಎಂದರು.

ಈ ಪ್ರಸ್ತಾವಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸ್ವಿಸ್‌ನೆಕ್ಸ್ ಸಿಇಒ ಡಾ. ಎಂಜೆಲಾ ಹೊನೆಗ್ಗರ್ ಅವರು, ಸ್ವಿಟ್ಜರ್‌ಲೆಂಡ್ ಕ್ವಾಂಟಮ್ ಕ್ಷೇತ್ರದ ಆವಿಷ್ಕಾರ ಹಾಗೂ ಉದ್ಯಮಗಳ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದೆ. ಈ ಬಗ್ಗೆ ಅಮೆರಿಕಾ ಹಾಗೂ ಇನ್ನಿತರ ದೇಶಗಳಲ್ಲಿ ಪ್ರಚಾರ ಮಾಡುವ ಮತ್ತು ಮಾಹಿತಿಯನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಸ್ವಿಸ್‌ನೆಕ್ಸ್ ಕ್ವಾಂಟಮ್ ಮ್ಯಾಪ್ ರಚಿಸಲಾಯಿತು ಎಂದರು.

ಸ್ವಿಸ್‌ನೆಕ್ಸ್ ಕ್ವಾಂಟಮ್ ಮ್ಯಾಪ್‌ನಿಂದ ಕ್ವಾಂಟಮ್ ಕ್ಷೇತ್ರದ ಯಾವ ವಿಷಯದಲ್ಲಿ ಯಾವ ಯಾವ ಉದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಸಹಯೋಗದ ಅವಕಾಶ ಎಲ್ಲಿದೆ ಎನ್ನುವ ಮಾಹಿತಿಯನ್ನು ಕ್ರೋಡೀಕರಿಸಲಾಗಿತ್ತು. ಇದೇ ರೀತಿ ಮ್ಯಾಪ್ ಸಿದ್ಧಪಡಿಸಿದರೆ ಎರಡೂ ರಾಷ್ಟ್ರಗಳ ನಡುವೆ ವಿಚಾರ ವಿನಿಮಯದ ಮೊದಲ ಹೆಜ್ಜೆ ಯಾಗಲಿದೆ ಎಂದು ಹೇಳಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ–ದಾವಣಗೆರೆ ನೂತನ ಫ್ಲೈಬಸ್‌ಗೆ ಚಾಲನೆ

ಫ್ಲೈಬಸ್ ಪ್ರಯಾಣಿಕರಿಗೆ ಕೆಎಂಎಫ್ ತಿನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ಫ್ಲೈಬಸ್‌ಗಳಲ್ಲಿ ಪ್ರಯಾಣಿಕರಿಗೆ ನ.15ರಿಂದ ನಂದಿನಿ ಉತ್ಪನ್ನಗಳ ಕುರುಕಲು ತಿಂಡಿಗಳ 'ಕಿಟ್' ಉಚಿತವಾಗಿ ದೊರೆಯಲಿದೆ.

ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದಾವಣಗೆರೆಗೆ ನೇರ ಸಂಚಾರಕ್ಕಾಗಿ ಕೆಎಸ್ ಆರ್‌ಟಿಸಿ ನೂತನ ಫ್ಲೈಬಸ್‌ಗೆ (ವೋಲ್ವೋ ಮಲ್ಟಿ ಆಕ್ಸೆಲ್) ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬುಧವಾರ ಚಾಲನೆ ನೀಡಿದ ಬಳಿಕ ಈ ಬಗ್ಗೆ ಮಾಹಿತಿ ನೀಡಿದರು.

ಕಿಟ್‌ನಲ್ಲಿ ನೀರಿನ ಬಾಟಲ್, ಸುವಾಸನೆಯ ಹಾಲು (ಫ್ಲೇವರ್ಡ್ ಮಿಲ್ಕ್), ಸಿಹಿ ಮತ್ತು ಖಾರದ ಕುಕ್ಕೀಸ್, ಕೇಕ್, ಕೋಡುಬಳೆ ಇರಲಿದೆ. ಕಿಟ್ ಅನ್ನು ಬ್ರ್ಯಾಂಡ್ ಮಾಡಲಾಗಿದ್ದು, ಅದರ ಹಿಂಬದಿಯಲ್ಲಿ ನಿಗಮದ ಸುಖಾಸೀನ ಸಂಚಾರ ಬಸ್‌ಗಳ ದಕ್ಷಿಣ ಭಾರತದ ಸಂಚಾರ ಸ್ಥಳಗಳ ಮಾಹಿತಿ ಮತ್ತು ಟಿಕೆಟ್ ಬುಕ್ ಮಾಡಲು ಅನುಕೂಲವಾಗುವಂತೆ ಕ್ಯೂಆರ್ ಕೋಡ್ ಸ್ಕ್ಯಾನರ್ ಮುದ್ರಿಸಲಾಗಿದೆ ಎಂದು ತಿಳಿಸಿದರು.



ನಂದಿನಿ ಉತ್ಪನ್ನಗಳ ಸ್ನ್ಯಾಕ್ಸ್ ಬಾಕ್ಸ್ ಅನ್ನು ರಾಮಲಿಂಗಾರೆಡ್ಡಿ ಮತ್ತು ಅಧಿಕಾರಿಗಳು ಪ್ರದರ್ಶಿಸಿದರು

'ನಾನು 2013ರಲ್ಲಿ ಸಾರಿಗೆ ಸಚಿವನಾಗಿದ್ದ ಸಂದರ್ಭದಲ್ಲಿ ಮೊದಲ ಫ್ಲೈಬಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರಿಗೆ ಆರಂಭವಾಗಿತ್ತು. ಸದ್ಯ ಮೈಸೂರಿಗೆ 9, ದಾವಣಗೆರೆಗೆ 2, ಮಡಿಕೇರಿಗೆ 2, ಕುಂದಾಪುರಕ್ಕೆ 2 ಫ್ಲೈಬಸ್‌ಗಳು ಸಂಚರಿಸುತ್ತಿವೆ' ಎಂದು ವಿವರಿಸಿದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕರಾದ ಕೆ. ನಂದಿನಿ ದೇವಿ, ಇಬ್ರಾಹಿಂ ಮೈಗೂರ, ಕೆಐಎಎಲ್ ಮುಖ್ಯ ವಾಣಿಜ್ಯ ಅಧಿಕಾರಿ ಕೆನೆತ್, ಉಪಾಧ್ಯಕ್ಷ ಪ್ರವತ್, ವ್ಯವಸ್ಥಾಪಕ ಚಂದ್ರ, ಕೆಎಂಎಫ್ ಅಧಿಕಾರಿ ಸ್ವಾತಿ ರೆಡ್ಡಿ ಇದ್ದರು.


ನೂತನ ಫ್ಲೈಬಸ್ ಸಂಚಾರ ಮಾಹಿತಿ

ಕೆಂಪೇಗೌಡ ವಿಮಾನನಿಲ್ದಾಣದಿಂದ ರಾತ್ರಿ 12.45ಕ್ಕೆ ಮತ್ತು ಬೆಳಿಗ್ಗೆ 10ಕ್ಕೆ ಹೊರಡಲಿದೆ. ದಾವಣಗೆರೆಗೆ ಬೆಳಿಗ್ಗೆ 5.45 ಮತ್ತು ಮಧ್ಯಾಹ್ನ 3ಕ್ಕೆ ತಲುಪಲಿದೆ. ದಾವಣಗೆರೆಯಿಂದ ಬೆಳಿಗ್ಗೆ 8 ಮತ್ತು ಸಂಜೆ 5ಕ್ಕೆ ಬಸ್ ಹೊರಡಲಿದೆ. ವಿಮಾನ ನಿಲ್ದಾಣಕ್ಕೆ ಮಧ್ಯಾಹ್ನ 1 ಮತ್ತು ರಾತ್ರಿ 10ಕ್ಕೆ ತಲುಪಲಿದೆ. ಪ್ರಯಾಣದರವು ವಿಮಾನ ನಿಲ್ದಾಣದಿಂದ ತುಮಕೂರಿಗೆ ₹400, ಚಿತ್ರದುರ್ಗಕ್ಕೆ ₹980, ದಾವಣಗೆರೆಗೆ ₹1,250 ನಿಗದಿಪಡಿಸಲಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸ್ಯಾಟಲೈಟ್ ಟೌನ್ ರಿಂಗ್‌ರೋಡ್ ಮೂಲಕ ದೊಡ್ಡಬಳ್ಳಾಪುರ ಬೈಪಾಸ್–ದಾಬಸ್‌ಪೇಟೆ –ತುಮಕೂರು ಬೈಪಾಸ್–ಚಿತ್ರದುರ್ಗ ಬೈಪಾಸ್ ಮೂಲಕ ದಾವಣಗೆರೆಗೆ ತಲುಪಲಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ತುಮಕೂರು ಬೈಪಾಸ್ ಹಾಗೂ ಚಿತ್ರದುರ್ಗ ಬೈಪಾಸ್ ಸೇರಿ ಎರಡು ಮಾರ್ಗ ಮಧ್ಯದ ಪಿಕಪ್ ಮತ್ತು ಡ್ರಾಪ್ ಪಾಯಿಂಟ್ ನೀಡಲಾಗಿದೆ.

'ವಿಶ್ವದೆಲ್ಲೆಡೆಯಿಂದ ಪ್ರತಿಭಾವಂತರ ಕರೆತರಲು ಎಚ್–1ಬಿ ವೀಸಾ ಅಗತ್ಯ'

ನ್ಯೂಯಾರ್ಕ್(ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್–1ಬಿ ವೀಸಾ ಕಾರ್ಯಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.



ಡೊನಾಲ್ಡ್ ಟ್ರಂಪ್

'ಕೆಲ ಕ್ಷೇತ್ರಗಳಿಗೆ ಸಂಬಂಧಿಸಿ ಅಮೆರಿಕದಲ್ಲಿ ಪ್ರತಿಭಾವಂತರು ಇಲ್ಲ. ಈ ಕೊರತೆ ನೀಗಿಸಲು ವಿಶ್ವದ ವಿವಿಧ ಭಾಗಗಳಿಂದ ಪ್ರತಿಭಾವಂತರನ್ನು ಅಮೆರಿಕಕ್ಕೆ ಕರೆತರುವುದು ಅಗತ್ಯ. ಹೀಗಾಗಿ ಎಚ್–1ಬಿ ವೀಸಾ ಅಗತ್ಯ' ಎಂದು ಹೇಳಿದ್ದಾರೆ.

ಫಾಕ್ಸ್ ನ್ಯೂಸ್‌ನ ಲಾರಾ ಇನ್‌ಗ್ರಹಾಮ್ ಅವರಿಗೆ ನೀಡಿದ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ.

'ಎಚ್–1ಬಿ ವೀಸಾ ಯೋಜನೆ ಟ್ರಂಪ್ ಆಡಳಿತದ ಆದ್ಯತೆ ಆಗಿಲ್ಲವೇ? ಒಂದು ವೇಳೆ, ಅಮೆರಿಕನ್ನರಿಗೆ ನೀಡುವ ವೇತನವನ್ನು ಹೆಚ್ಚಳ ಮಾಡಿದಲ್ಲಿ ಇತರ ದೇಶಗಳಿಂದ ಉದ್ಯೋಗ ಅರಸಿ ಇಲ್ಲಿಗೆ ಬರುವವರ ಸಂಖ್ಯೆ ಕಡಿಮೆ ಯಾಗುವುದಿಲ್ಲವೇ' ಎಂಬ ಲಾರಾ ಅವರ ಪ್ರಶ್ನೆಗೆ ಟ್ರಂಪ್ ಈ ಪ್ರತಿಕ್ರಿಯೆ ನೀಡಿದ್ದಾರೆ.

'ನಮ್ಮಲ್ಲಿಯೇ ಸಾಕಷ್ಟು ಪ್ರತಿಭೆಗಳಿವೆಯಲ್ಲ?' ಎಂದೂ ಲಾರಾ ಪ್ರಶ್ನಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಟ್ರಂಪ್, 'ಇಲ್ಲ. ಅಮೆರಿಕವು ಕೆಲ ಕ್ಷೇತ್ರಗಳಿಗೆ ಸಂಬಂಧಿಸಿ ಪ್ರತಿಭೆಗಳನ್ನು ಹೊಂದಿಲ್ಲ. ಅಂತಹ ಪ್ರತಿಭಾವಂತರನ್ನು ಇತರ ದೇಶಗಳಿಂದ ಕರೆತರಬೇಕು. ಇಲ್ಲಿನ ಜನರು ಇನ್ನಷ್ಟು ಕಲಿಯಬೇಕಿದೆ' ಎಂದು ಅವರು ಹೇಳಿದ್ದಾರೆ.

ಎಚ್–1ಬಿ ವೀಸಾ ದುರ್ಬಳಕೆ ತಡೆಯುವ ಉದ್ದೇಶದಿಂದ ಕಳೆದ ವಾರ ಟ್ರಂಪ್ ಆಡಳಿತವು ತನಿಖೆ ಆರಂಭಿಸಿತ್ತು. 'ಅಮೆರಿಕದಲ್ಲಿನ ಉದ್ಯೋಗಗಳ ಸಂರಕ್ಷಣೆ ಮಾಡುವ ಅಗತ್ಯ ಇದ್ದು, ಇದಕ್ಕಾಗಿ ಎಚ್–1ಬಿ ವೀಸಾ ದುರ್ಬಳಕೆಗೆ ಕಡಿವಾಣ ಹಾಕಬೇಕಿದೆ. ಹೀಗಾಗಿ 175 ಪ್ರಕರಣಗಳ ಕುರಿತು ತನಿಖೆ ಕೈಗೊಂಡಿದ್ದೇವೆ' ಎಂದು ಕಾರ್ಮಿಕ ಇಲಾಖೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿತ್ತು.

ಎಚ್–1ಬಿ ವೀಸಾ ಅರ್ಜಿ ಶುಲ್ಕ ಹೆಚ್ಚಳ ಮಾಡುವ ಆದೇಶಕ್ಕೆ ಟ್ರಂಪ್ ಅವರು ಸೆಪ್ಟೆಂಬರ್‌ನಲ್ಲಿ ಸಹಿ ಹಾಕಿದ್ದರು. ಈ ನೂತನ ಆದೇಶದ ಪ್ರಕಾರ, ಈ ವೀಸಾಕ್ಕಾಗಿ ಹೊಸದಾಗಿ ಅರ್ಜಿ ಸಲ್ಲಿಸುವವರು 1 ಲಕ್ಷ ಡಾಲರ್ (ಅಂದಾಜು ₹88 ಲಕ್ಷ) ಶುಲ್ಕ ನೀಡಬೇಕಾಗುತ್ತದೆ.

ಟ್ರಂಪ್ ಅವರ ಈ ಕ್ರಮದಿಂದ, ಉದ್ಯೋಗ ಅರಸಿ ಅಮೆರಿಕಕ್ಕೆ ತೆರಳುವ ಭಾರತೀಯರಿಗೆ ಅದರಲ್ಲೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದವರಿಗೆ ಭಾರಿ ಸಮಸ್ಯೆಯಾಗಿದೆ. ವಿಶೇಷ ಕೌಶಲ ಅಗತ್ಯವಿರುವ ವಿದೇಶಿ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಅಮೆರಿಕದ ಕಂಪನಿಗಳಿಗೂ ಈ ಆದೇಶದಿಂದ ಹೊರೆಯಾಗುತ್ತಿದೆ.

ಟ್ರಂಪ್ ಭಾಷಣ ತಪ್ಪಾಗಿ ಬಿಂಬಿಸಿ ವಿವಾದಕ್ಕೆ ಸಿಲುಕಿದ ಸಂಸ್ಥೆ ಬೆಂಬಲಕ್ಕೆ ಸರ್ಕಾರ

'ಬಿಬಿಸಿ ವಿಶ್ವಾಸಾರ್ಹ ಸುದ್ದಿವಾಹಿನಿ'

ಲಂಡನ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾಷಣವನ್ನು ಎಡಿಟ್ ಮಾಡಿ, 2021ರ ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಿದಂತೆ ಬಿಂಬಿಸಿದ ಆರೋಪ ಎದುರಿಸುತ್ತಿರುವ ಬಿಬಿಸಿ ವಾಹಿನಿಯ ಕಾರ್ಯವೈಖರಿಯನ್ನು ಬ್ರಿಟನ್ ಸರ್ಕಾರ ಸಮರ್ಥಿಸಿಕೊಂಡಿದೆ.

ಬಿಬಿಸಿ ಕಾರ್ಯವೈಖರಿ ಕುರಿತು ವ್ಯಾಪಕ ಟೀಕೆ ವ್ಯಕ್ತವಾಗಿವೆಯಲ್ಲದೇ, ಸಂಸ್ಥೆ ವಿರುದ್ಧ ಮೊಕದ್ದಮೆ ಹೂಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿರುವ ನಡುವೆಯೇ, ಬ್ರಿಟನ್ ಸರ್ಕಾರ ಬಿಬಿಸಿ ಪರ ನಿಂತಿದೆ.

ಇನ್ನೊಂದೆಡೆ, ಬಿಬಿಸಿಗೆ ನೀಡುವ ನೆರವು ಕುರಿತು ಪರಿಶೀಲಿಸಬೇಕು ಹಾಗೂ ಸಂಸ್ಥೆಯನ್ನು ಮರುಸಂಘಟಿಸಬೇಕು ಎಂದು ಮಾಧ್ಯಮ ಕ್ಷೇತ್ರದ ಪ್ರಮುಖರು ಹಾಗೂ ರಾಜಕೀಯ ಮುಖಂಡರಿಂದ ಬಲವಾದ ಕೂಗು ಕೇಳಿಬರುತ್ತಿರುವ ಕಾರಣಕ್ಕೆ, ಸರ್ಕಾರದ ಈ ನಿಲುವಿಗೆ ಮಹತ್ವ ಬಂದಿದೆ.

'ದೇಶದ ಪ್ರಮುಖ ಸುದ್ದಿವಾಹಿನಿಯಾದ ಬಿಬಿಸಿ ಕೆಲ ಸವಾಲುಗಳನ್ನು ಎದುರಿಸುತ್ತಿದೆ. ಈ ಪೈಕಿ ಕೆಲ ಸವಾಲುಗಳನ್ನು ತಾನೇ ಸೃಷ್ಟಿಸಿಕೊಂಡಿದೆ. ಆದಾಗ್ಯೂ, ಬ್ರಿಟನ್‌ನಲ್ಲಿ ಅತ್ಯಂತ ವಿಶ್ವಾಸಾರ್ಹ ಮತ್ತು ವ್ಯಾಪಕವಾಗಿ ವೀಕ್ಷಿಸುವ ಸುದ್ದಿವಾಹಿನಿ ಇದು' ಎಂದು ಬ್ರಿಟನ್‌ನ ಸಾಂಸ್ಕೃತಿಕ ಕಾರ್ಯದರ್ಶಿ ಲೀಸಾ ನ್ಯಾಂಡಿ ಹೇಳಿದ್ದಾರೆ.



ವಾಸ್ತವ ಸಂಗತಿಗಳು ಮತ್ತು ಅಭಿಪ್ರಾಯಗಳು, ಸುದ್ದಿ ಮತ್ತು ವಿವಾದ ಪ್ರತ್ಯೇಕಿಸುವ ಗೆರೆ ಅಪಾಯಕಾರಿ ಎನಿಸುವಷ್ಟು ಅಳಿಸಿ ಹೋಗಿರುವ ಈ ವೇಳೆ ಬಿಬಿಸಿ ತನ್ನ ಛಾಪು ಉಳಿಸಿಕೊಂಡಿದೆ. ಒಂದು ಸಂಸ್ಥೆಯಾಗಿ ಬಿಬಿಸಿ ಬ್ರಿಟನ್‌ಗೆ ಅಗತ್ಯವಾಗಿ ಬೇಕು.
ಲೀಸಾ ನ್ಯಾಂಡಿ
ಬ್ರಿಟನ್‌ನ ಸಾಂಸ್ಕೃತಿಕ ಕಾರ್ಯದರ್ಶಿ

ಟ್ರಂಪ್ ಅವರ ಭಾಷಣವನ್ನು ತಿರುಚಿ, ಕಳೆದ ವರ್ಷ ಪ್ರಸಾರ ಮಾಡಲಾಗಿದ್ದು, ಈ ಕುರಿತಂತೆ ಬಿಬಿಸಿ ಕ್ಷಮೆ ಕೇಳಬೇಕು ಹಾಗೂ ಅವಹೇಳನಕಾರಿ ಸುದ್ದಿ ಪ್ರಸಾರಕ್ಕಾಗಿ ಪರಿಹಾರ ನೀಡಬೇಕು ಎಂಬುದು ಟ್ರಂಪ್ ಪರ ವಕೀಲರ ಬೇಡಿಕೆಯಾಗಿತ್ತು. ಇದು ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ, ಬಿಬಿಸಿಯ ಪ್ರಧಾನ ನಿರ್ದೇಶಕ ಟಿಮ್ ಡೇವಿ ಮತ್ತು ಸಿಇಒ ಡೆಬ್ರೊ ಟರ್ನೆಸ್ ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದರು ಮತ್ತು ಬಿಬಿಸಿ ಕೂಡ ಕ್ಷಮೆಯಾಚಿಸಿದೆ.

ಟ್ರಂಪ್ ನೋಟಿಸ್: ಬಿಬಿಸಿ ಭವಿಷ್ಯ ಮಸುಕು?

ಶತಕೋಟಿ ಡಾಲರ್ ಪರಿಹಾರ ಕೋರಿ ಬಿಬಿಸಿ ವಿರುದ್ಧ ಮೊಕದ್ದಮೆ ಹೂಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬೆದರಿಕೆ ಒಡ್ಡಿರುವುದು ಸುದ್ದಿವಾಹಿನಿಯ ಭವಿಷ್ಯವನ್ನು ಮಸುಕಾಗಿಸಲಿದೆಯೇ ಎಂಬ ಚರ್ಚೆ ನಡೆದಿದೆ.

ಆದರೆ, ಟ್ರಂಪ್ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವು ಕಾನೂನಿನ ಬೆಂಬಲ ಇರದ ಗೊಡ್ಡು ಬೆದರಿಕೆಯಷ್ಟೆ ಎಂಬ ಮಾತುಗಳು ಕೂಡ ಕೇಳಿಬರುತ್ತಿವೆ.

2021ರ ಜನವರಿ 6ರಂದು ಟ್ರಂಪ್ ಅವರ ಬೆಂಬಲಿಗರು ಕ್ಯಾಪಿಟಲ್ (ಅಮೆರಿಕದ ಸಂಸತ್) ಮೇಲೆ ದಾಳಿ ನಡೆಸಿದ್ದರು. ಇದಕ್ಕೂ ಮುನ್ನ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಟ್ರಂಪ್ ಭಾಷಣ ಮಾಡಿದ್ದರು. ಈ ಭಾಷಣವನ್ನು ತಿರುಚಿ ಪ್ರಸಾರ ಮಾಡಲಾಗಿತ್ತು ಎಂಬ ಆರೋಪಗಳು ಕೇಳಿಬಂದಿವೆ. ಈ ಆರೋಪಗಳಿಗೆ ಸಂಬಂಧಿಸಿ, ಟ್ರಂಪ್ ಅವರ ವಕೀಲರು ಬಿಬಿಸಿಗೆ ನೋಟಿಸ್ ಕಳುಹಿಸಿದ್ದಾರೆ.

ಟ್ರಂಪ್ ಅವರು ತಮ್ಮ ನಡೆಗಳನ್ನು ಟೀಕಿಸಿ ಸುದ್ದಿ ಪ್ರಸಾರ ಮಾಡುವ ಮಾಧ್ಯಮಗಳ ವಿರುದ್ಧ ಪ್ರಕರಣ ದಾಖಲಿಸುವುದು ಸಾಮಾನ್ಯ ಸಂಗತಿ. ಕೆಲ ಪ್ರಕರಣಗಳಲ್ಲಿ ಅವರಿಗೆ ಕೋಟ್ಯಂತರ ಡಾಲರ್ ಪರಿಹಾರವೂ ಸಿಕ್ಕಿದೆ ಎಂದು ಬ್ರಿಟನ್‌ನ ಕಾನೂನುತಜ್ಞರು ಹೇಳುತ್ತಾರೆ. ಆದರೆ, ಬಿಬಿಸಿ ವಿರುದ್ಧ ನಡೆಸಲು ಉದ್ದೇಶಿಸಿರುವ ಕಾನೂನು ಹೋರಾಟದಲ್ಲಿ ಅವರು ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದೂ ಹೇಳುತ್ತಾರೆ.

'ಬಿಬಿಸಿ ವಿರುದ್ಧ ಟ್ರಂಪ್ ದಾಖಲಿಸುವ ಮೊಕದ್ದಮೆ ಹಲವು ಸಮಸ್ಯೆಗೆ ದಾರಿ ಮಾಡಿಕೊಡಲಿದೆ' ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಧ್ಯಮಗಳ ಪರ ವಕಾಲತ್ತು ವಹಿಸುವ ಅಟಾರ್ನಿ ಮಾರ್ಕ್ ಸ್ಟೀಫನ್ಸ್ ಹೇಳುತ್ತಾರೆ.

ಸುದ್ದಿ 2 ನಿಮಿಷ

ಮತಗಟ್ಟೆ ಸಮೀಕ್ಷೆ: ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ ವಲಯದ ಷೇರುಗಳು ಹಾಗೂ ಗ್ರಾಹಕ ಬಳಕೆ ಉತ್ಪನ್ನ ತಯಾರಿಕಾ ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಿದ್ದರಿಂದಾಗಿ, ದೇಶದ ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 595 ಅಂಶ ಏರಿಕೆಯಾಗಿ, 84,466ಕ್ಕೆ ವಹಿವಾಟು ಕೊನೆಗೊಂಡಿದೆ. ವಹಿವಾಟಿನ ನಡುವಿನಲ್ಲಿ ಸೂಚ್ಯಂಕವು 780 ಅಂಶದವರೆಗೆ ಜಿಗಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 180 ಅಂಶ ಹೆಚ್ಚಳವಾಗಿ, 25,875ಕ್ಕೆ ಅಂತ್ಯಗೊಂಡಿದೆ.



'ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ಹೂಡಿಕೆದಾರರಲ್ಲಿ ಆಶಾವಾದ ಹೆಚ್ಚಳವಾಗಿದೆ. ಜೊತೆಗೆ ಬಿಹಾರದಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ಇದು ಹೂಡಿಕೆದಾರರಿಗೆ ಷೇರುಗಳ ಖರೀದಿಗೆ ಉತ್ತೇಜನ ನೀಡಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ನಂದೀಶ್ ಶಾ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.84ರಷ್ಟು ಇಳಿಕೆ ಆಗಿದೆ. ಪ್ರತೀ ಬ್ಯಾರಲ್ 64.61 ಡಾಲರ್ ಆಗಿದೆ.

ಎ.ಐ ಪರಿಕರದಿಂದ ಶೇ 50ರಷ್ಟು ಕೆಲಸ: ಸೇಲ್ಸ್‌ಫೋರ್ಸ್

ಬೆಂಗಳೂರು: 2027ರ ವೇಳೆಗೆ ದೇಶದ ಸೇವಾ ವಲಯದಲ್ಲಿ ಗ್ರಾಹಕರಿಂದ ಬರುವ ಕೋರಿಕೆಗಳ ಪೈಕಿ ಶೇ 50ರಷ್ಟಕ್ಕೆ ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಪರಿಕರಗಳೇ ಪರಿಹಾರ ನೀಡಲಿವೆ ಎಂದು ಸೇಲ್ಸ್‌ಫೋರ್ಸ್ ಸಮೀಕ್ಷೆ ಹೇಳಿದೆ.

ಅಮೆರಿಕ ಮೂಲದ ಸೇಲ್ಸ್‌ಫೋರ್ಸ್ ಕಂಪನಿಯು ಕ್ಲೌಡ್ ಆಧಾರಿತ ತಂತ್ರಾಂಶ ಸೇವೆಗಳನ್ನು ಒದಗಿಸುತ್ತದೆ.

ಸೇವಾ ವಲಯದ ತಜ್ಞರ ಪ್ರಕಾರ, ಗ್ರಾಹಕರಿಂದ ಈಗ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಬರುತ್ತಿರುವ ಕೋರಿಕೆಗಳ ಪೈಕಿ ಶೇ 30ರಷ್ಟನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಪರಿಹರಿಸುತ್ತಿದೆ. ಇದು 2027ರ ವೇಳೆಗೆ ಶೇ 50ಕ್ಕೆ ತಲುಪುವ ನಿರೀಕ್ಷೆ ಇದೆ ಎಂದು ಸೇಲ್ಸ್‌ಫೋರ್ಸ್ ತನ್ನ ಇತ್ತೀಚಿನ ವರದಿಯೊಂದರಲ್ಲಿ ತಿಳಿಸಿದೆ.

'ಎ.ಐ ತಂತ್ರಜ್ಞಾನದ ಬಳಕೆಯಿಂದ ಸೇವಾ ವೆಚ್ಚವು ಕಡಿತಗೊಂಡಿದ್ದು, ಗ್ರಾಹಕರಿಗೆ ನೀಡುವ ಸೇವೆಯಲ್ಲಿ ಸುಧಾರಣೆ ಆಗಿದೆ' ಎಂದು ಸೇಲ್ಸ್‌ಫೋರ್ಸ್ ಇಂಡಿಯಾದ ಸಲ್ಯೂಷನ್ ಎಂಜಿನಿಯರಿಂಗ್ ವಿಭಾಗದ ಉಪಾಧ್ಯಕ್ಷ ದೀಪು ಚಾಕೊ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸೇವಾ ವಲಯದ ಕಂಪನಿಗಳು, ಈ ತಂತ್ರಜ್ಞಾನ ಬಳಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಈ ತಂತ್ರಜ್ಞಾನದ ಬಳಕೆಯಿಂದ ವರಮಾನವು ಶೇ 16ರಷ್ಟು ಹೆಚ್ಚಳವಾಗಲಿದೆ ಎಂದು ದೇಶದ ಸೇವಾ ವಲಯದ ಕಂಪನಿಗಳು ಭಾವಿಸಿವೆ' ಎಂದು ಸೇಲ್ಸ್‌ಫೋರ್ಸ್ ಇಂಡಿಯಾದ ಮಾರಾಟ ಮತ್ತು ವಿತರಣೆಯ ವ್ಯವಸ್ಥಾಪಕ ನಿರ್ದೇಶಕಿ ಮನ್ಕಿರಣ್ ಚೌಹಾನ್ ತಿಳಿಸಿದರು.

ಈ ವರ್ಷದ ಏಪ್ರಿಲ್ 25ರಿಂದ ಜೂನ್ 6ರವರೆಗೆ ಜಗತ್ತಿನ 6,500 ಕಂಪನಿಗಳಿಂದ ಸಂಗ್ರಹಿಸಿದ ಮಾಹಿತಿ ಆಧರಿಸಿ ಈ ವರದಿ ತಯಾರಿಸಲಾಗಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ			
ಚಾಲಿ	41099-47699	ಬೆಟ್ಟೆ	74732-74732	ಕೆಂಪುಗೋಟು	25419-32099
ಚಿಪ್ಪು	28569-35099	ಗೊರಬಲು	19019-40019	ರಾಶಿ	46219-55689
ಕೋಕ	11099-31099	ಹೊಸತು	51009-58799	ತಟ್ಟಿಬೆಟ್ಟೆ	35699-47699
ಫ್ಯಾಕ್ಟರಿ	7149-22800	ರಾಶಿ	39696-60851	ಶಿರಸಿ	
ಹಳೆಚಾಲಿ	41569-46301	ಸರಕು	74240-97810	ಬೆಟ್ಟೆ	47299-55899
ಪುತ್ತೂರು		ಸಿದ್ದಾಪುರ		ಬಿಳಿಗೋಟು	30699-39099
ಕೋಕ	20000-31500	ಬಿಳಿಗೋಟು	26809-37809	ಚಾಲಿ	43299-49701
ಹೊಸತು	26000-37000	ಚಾಲಿ	41819-48000	ಕೆಂಪುಗೋಟು	18909-32689
		ಕೋಕ	20619-32869	ರಾಶಿ	52609-58999

ನೆವಿಲ್, ಭಟ್ ಟಾಟಾ ಟ್ರಸ್ಟ್‌ಗೆ ನೇಮಕ

ನವದೆಹಲಿ (ಪಿಟಿಐ): ಟಾಟಾ ಸನ್ಸ್‌ನಲ್ಲಿ ದೊಡ್ಡ ಷೇರುಪಾಲು ಹೊಂದಿರುವ 'ಸರ್ ದೊರಾಬ್ಜಿ ಟಾಟಾ ಟ್ರಸ್ಟ್' ನಿರ್ದೇಶಕರನ್ನಾಗಿ ನೆವಿಲ್ ಟಾಟಾ ಮತ್ತು ಭಾಸ್ಕರ ಭಟ್ ಅವರನ್ನು ನೇಮಕ ಮಾಡಲಾಗಿದೆ.

ನೆವಿಲ್ ಅವರು ಟಾಟಾ ಟ್ರಸ್ಟ್ಸ್‌ನ ಅಧ್ಯಕ್ಷ ನೋಯಲ್ ಟಾಟಾ ಅವರ ಮಗ. ಭಟ್ ಅವರು ಟಾಟಾ ಸಮೂಹದ ಟೈಟನ್ ಕಂಪನಿಯ ಎಂ.ಡಿ ಆಗಿದ್ದರು.

ಟಾಟಾ ಸಮೂಹದ ಸರಿಸುಮಾರು 400 ಕಂಪನಿಗಳನ್ನು ಟಾಟಾ ಸನ್ಸ್ ನಿಯಂತ್ರಿಸುತ್ತದೆ. ಟಾಟಾ ಸನ್ಸ್‌ನಲ್ಲಿ ಟಾಟಾ ಟ್ರಸ್ಟ್ಸ್ ಒಟ್ಟು ಶೇ 65.4ರಷ್ಟು ಪಾಲು ಹೊಂದಿವೆ. ಈ ಪೈಕಿ ಸರ್ ದೊರಾಬ್ಜಿ ಟಾಟಾ ಟ್ರಸ್ಟ್ (ಎಸ್‌ಡಿಟಿಟಿ) ಶೇ 28ರಷ್ಟು ಪಾಲು ಹೊಂದಿದೆ. ಟಾಟಾ ಸನ್ಸ್‌ನಲ್ಲಿ ಸರ್ ರತನ್ ಟಾಟಾ ಟ್ರಸ್ಟ್‌ನ (ಎಸ್‌ಆರ್‌ಟಿಟಿ) ಪಾಲು ಶೇ 23.6ರಷ್ಟಿದೆ.

ನೆವಿಲ್ ಮತ್ತು ಭಟ್ ಅವರನ್ನು 'ಎಸ್‌ಆರ್‌ಟಿಟಿ'ಗೆ ನೇಮಕ ಮಾಡುವ ನೋಯಲ್ ಟಾಟಾ ಪ್ರಯತ್ನಕ್ಕೆ ಫಲ ದೊರೆತಿಲ್ಲ ಎಂದು ಮೂಲಗಳು ಹೇಳಿವೆ. ಎಸ್‌ಆರ್‌ಟಿಟಿ ಟ್ರಸ್ಟಿ ಆಗಿರುವ ವೇಣು ಶ್ರೀನಿವಾಸನ್ ಅವರು ಆಕ್ಷೇಪ ಎತ್ತಿದ ಕಾರಣದಿಂದಾಗಿ ಹೀಗಾಯಿತು ಎಂದು ಗೊತ್ತಾಗಿದೆ.

ನೇಮಕ ಪ್ರಸ್ತಾವವನ್ನು ಮುಂದಕ್ಕೆ ತಂದ ಬಗೆಯ ಕುರಿತು ಶ್ರೀನಿವಾಸನ್ ಅವರು ಆಕ್ಷೇಪ ವ್ಯಕ್ತಪಡಿಸಿದರು. 'ಎಸ್‌ಡಿಟಿಟಿ'ಗೆ ಇವರನ್ನು ನೇಮಕ ಮಾಡುವ ಪ್ರಸ್ತಾವನೆಯು ಅಜೆಂಡಾದಲ್ಲಿ ಇತ್ತು. ಆದರೆ 'ಎಸ್‌ಆರ್‌ಟಿಟಿ'ಗೆ ಇವರನ್ನು ನೇಮಕ ಮಾಡುವ ಉಲ್ಲೇಖವು ಅಜೆಂಡಾದಲ್ಲಿ ಇರಲಿಲ್ಲ ಎಂದು ಮೂಲಗಳು ವಿವರಿಸಿವೆ. ಟಾಟಾ ಟ್ರಸ್ಟ್ಸ್ ಮತ್ತು ಶ್ರೀನಿವಾಸನ್ ಅವರಿಂದ ಈ ಕುರಿತು ಪ್ರತಿಕ್ರಿಯೆ ಸಿಕ್ಕಿಲ್ಲ.


ಪ್ರಿಯಾಂಕ ಉಪೇಂದ್ರ

‘ಸೆಪ್ಟೆಂಬರ್ 21’ ಬಿಡುಗಡೆಗೆ ಸಿದ್ಧ

ಪ್ರಿಯಾಂಕ ಉಪೇಂದ್ರ ನಾಯಕಿಯಾಗಿ ನಟಿಸಿರುವ ‘ಸೆಪ್ಟೆಂಬರ್ 21’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಕರೆನ್ ಕ್ರಿಷ್ಟಿ ಸುವರ್ಣ ನಿರ್ದೇಶನದ ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿದ್ದು, ನವೆಂಬರ್ 20 ರಿಂದ 24 ರ ವರೆಗೆ ನಡೆಯಲಿರುವ 56ನೇ ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಕೂಡ ಪ್ರದರ್ಶನಗೊಳ್ಳಲಿದೆ.

ಈ ಚಿತ್ರದಲ್ಲಿ ಪ್ರಿಯಾಂಕ ಉಪೇಂದ್ರ ಮೊದಲ ಬಾರಿಗೆ ಮಧ್ಯಮ ವರ್ಗದ ಮಹಿಳೆಯ ಪಾತ್ರ ಮಾಡಿದ್ದಾರೆ. ‘ಈ ಚಿತ್ರದಲ್ಲಿನ ಪಾತ್ರ ನನ್ನ ವೃತ್ತಿ ಜೀವನದ ಅತ್ಯಂತ ಸವಾಲಿನ ಪಾತ್ರವಾಗಿದ್ದು, ಅದನ್ನು ಅಷ್ಟೇ ಸೊಗಸಾಗಿ ಯುವ ನಿರ್ದೇಶಕಿ ಕಟ್ಟಿಕೊಟ್ಟಿದ್ದಾರೆ’ ಎಂದು ಪ್ರಿಯಾಂಕ ಉಪೇಂದ್ರ ಹೇಳಿದ್ದಾರೆ.

21ರ ಹರೆಯದ ಕರೆನ್ ಕ್ರಿಷ್ಟಿ ಅವರ ಚೊಚ್ಚಲ ನಿರ್ದೇಶನದ ಸಿನಿಮಾವಿದು. ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯಾ, ಝರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ, ಸಚಿನ್ ಪಾಟೇಕರ್ ನಟಿಸಿದ್ದಾರೆ. ಆಲ್ಝೈಮರ್ ಕಾಯಿಲೆ ಸುತ್ತ ನಡೆಯುವ ಕಥೆ ಇದಾಗಿದ್ದು, ‘ರೋಗಿಗಿಂತ ಅವನ ಪಾಲನೆ ಮಾಡುವವರು ತೆಗೆದುಕೊಳ್ಳುವ ನಿರ್ಧಾರ ತುಂಬಾ ಮುಖ್ಯ’ ಎಂಬುದು ಚಿತ್ರದ ಅಡಿಬರಹವಾಗಿದೆ.

ರಾಜಶೇಖರ್ ಕಥೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.


ಚಿತ್ರತಂಡ

‘ಸಾಲಗಾರರ ಸಹಕಾರ ಸಂಘ’ದ ಹಾಡು

‘ಕಾಮಿಡಿ ಕಿಲಾಡಿಗಳು’ ರಿಯಾಲಿಟಿ ಶೋನ ಹಲವು ಕಲಾವಿದರು ನಟಿಸಿರುವ ‘ಸಾಲಗಾರರ ಸಹಕಾರ ಸಂಘ’ ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಶೀರ್ಷಿಕೆ ಗೀತೆಗೆ ನಟ ಶರಣ್ ಧ್ವನಿಯಾಗಿದ್ದಾರೆ. ವಿಕ್ರಮ್ ಧನಂಜಯ್.ಆರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಕುಮಾರೇಶ್.ಎ ಮತ್ತು ಸುನಿಲ್ ಕುಮಾರ್ ಬಂಡವಾಳ ಹೂಡಿದ್ದಾರೆ.

‘ಶೀರ್ಷಿಕೆ ನೋಂದಣಿ ಮಾಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಾಗ ವಿವಿಧ ರೀತಿಯ ಪ್ರತಿಕ್ರಿಯೆಗಳು ಬಂದವು. ಅದರ ಬಳಿಕ ಕಥೆ ಸಿದ್ಧವಾಯಿತು. ನಾಲ್ಕು ನಿರುದ್ಯೋಗಿ ಯುವಕರು ಕಾರಣವಿಲ್ಲದೆ ಸಾಲ ಮಾಡುತ್ತಾರೆ. ನಂತರ ಬಡ್ಡಿ ಕಟ್ಟಲು ಮತ್ತೆ ಸಾಲದ ಹಿಂದೆ ಹೋಗುತ್ತಾರೆ. ಅಸಹಾಯಕ ಪರಿಸ್ಥಿತಿ ಬಂದಾಗ ಅವರಂತೆ ಸಾಲ ಮಾಡಿರುವವರನ್ನು ಒಗ್ಗೂಡಿಸಿ ಸಂಘ ಶುರು ಮಾಡಿ, ಸರ್ಕಾರಕ್ಕೆ ಒಂದಷ್ಟು ಬೇಡಿಕೆ ಇಡುತ್ತಾರೆ. ಅದು ಏನು? ಆ ಬೇಡಿಕೆಗೆ ಸರ್ಕಾರವು ಯಾವ ರೀತಿ ಸ್ಪಂದಿಸುತ್ತದೆ ಎಂಬುದೇ ಚಿತ್ರಕಥೆ. ಸಂಪೂರ್ಣ ಹಾಸ್ಯಮಯ ಚಿತ್ರ’ ಎಂದರು ನಿರ್ದೇಶಕ.

ಕೆಂಪೇಗೌಡ, ಜಾಲಿ ಜಾಲಿ ಜಾಕ್, ಕಾಮಿಡಿ ಕಿಲಾಡಿಗಳು ಖ್ಯಾತಿಯ ಲೋಕೇಶ್ ಮತ್ತು ಪ್ರವೀಣ್ ಕುಮಾರ್, ಪೂಜಾ ಪ್ರಮುಖ ಪಾತ್ರಗಳಲ್ಲಿದ್ದಾರೆ. ರಂಗಾಯಣ ರಘು, ಹೊನ್ನವಳ್ಳಿ ಕೃಷ್ಣ, ಲಕ್ಷೀ ಸಿದ್ಧಯ್ಯ ಮುಂತಾದವರು ನಟಿಸಿದ್ದಾರೆ.

ಎಂ.ಎಂ.ತ್ಯಾಗರಾಜ್ ಸಂಗೀತವಿದೆ. ಹಾಡುಗಳಿಗೆ ವಿ.ಹರಿಕೃಷ್ಣ, ಜೋಗಿ ಪ್ರೇಮ್, ನವೀನ್ ಸಜ್ಜು ಹಾಗೂ ಎಂ.ಎಂ.ತ್ಯಾಗರಾಜ್ ಧ್ವನಿಯಾಗಿದ್ದಾರೆ. ಅನಿರುದ್ಧ್ ಛಾಯಾಚಿತ್ರಗ್ರಹಣ, ಗಣೇಶ್ ನಿರ್ಚಾಲ್-ಶೇಷಾಚಲ ಕುಲಕರ್ಣಿ ಸಂಕಲನವಿದೆ. ಬೆಂಗಳೂರು, ತೀರ್ಥಹಳ್ಳಿ, ಚಿಕ್ಕಮಗಳೂರು ಮುಂತಾದೆಡೆ ಚಿತ್ರೀಕರಣಗೊಂಡಿದೆ.


ಸ್ವತಿಷ್ಠ ಕೃಷ್ಣನ್

ಜೀ5ನಲ್ಲಿ ಒಂದು ಸರಳ ಪ್ರೇಮ ಕಥೆ

ವಿನಯ್ ರಾಜ್‌ಕುಮಾರ್ ನಟನೆಯ ‘ಒಂದು ಸರಳ ಪ್ರೇಮ ಕಥೆ’ ಇದೀಗ ಜೀ5 ಒಟಿಟಿಯಲ್ಲೂ ಪ್ರಸಾರ ಕಾಣಲಿದೆ. ಸಿಂಪಲ್ ಸುನಿ ನಿರ್ದೇಶನದ ಸರಳ ಮತ್ತು ವಿರಳವಾದ ಪ್ರೇಮಕಥೆಯನ್ನು ಹೊಂದಿರುವ ಚಿತ್ರ ಕಳೆದ ವರ್ಷ ತೆರೆ ಕಂಡಿತ್ತು. ಬಳಿಕ ಅಮೆಜಾನ್ ಒಟಿಟಿಯಲ್ಲಿಯೂ ಲಭ್ಯವಿತ್ತು. ಇದೇ ತಿಂಗಳ 21ರಿಂದ ಜೀ5 ಒಟಿಟಿಯಲ್ಲೂ ಲಭ್ಯವಿದೆ ಎಂದು ಚಿತ್ರತಂಡ ಹೇಳಿದೆ.

ವಿನಯ್‌ಗೆ ಸ್ವತಿಷ್ಠ ಕೃಷ್ಣನ್, ಮಲ್ಲಿಕಾ ಸಿಂಗ್ ನಾಯಕಿಯಾಗಿದ್ದರು. ಸಂಗೀತ ನಿರ್ದೇಶಕನೊಬ್ಬನ ಕಥೆಯನ್ನು ಹೊಂದಿರುವ ಚಿತ್ರ ನವಿರಾದ ಹಾಡುಗಳಿಂದಲೇ ಪ್ರೇಕ್ಷಕರನ್ನು ಸೆಳೆದಿತ್ತು. ವಿನಯ್ ಹಾಗೂ ಸ್ವತಿಷ್ಠ ಕೃಷ್ಣನ್ ನಟನೆಯೊಂದಿಗೆ ವೀರ್ ಸಮರ್ಥ್ ಸಂಗೀತ ಚಿತ್ರವನ್ನು ಗೆಲುವಿನ ದಡ ತಲುಪಿಸಿತ್ತು.

ರಾಘವೇಂದ್ರ ರಾಜ್‌ಕುಮಾರ್ ಅವರು ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ರಾಜೇಶ್ ನಟರಂಗ, ಅರುಣಾ ಬಾಲರಾಜ್, ಸಾಧು ಕೋಕಿಲ ಮುಂತಾದವರು ಸಿನಿಮಾದಲ್ಲಿದ್ದಾರೆ. ಆದಿ ಅವರ ಸಂಕಲನವಿದ್ದು, ಕಾರ್ತಿಕ್ ಛಾಯಾಚಿತ್ರಗ್ರಹಣವಿದೆ. ರಾಮ್ ಮೂವೀಸ್ ಬ್ಯಾನರ್‌ನಡಿ ಮೈಸೂರು ರಮೇಶ್ ಬಂಡವಾಳ ಹೂಡಿದ್ದಾರೆ.

ಬಿಹಾರ: ಯಾರಿಗೆ ಗೆಲುವಿನ ‘ಹಾರ’?

ನಾಳೆ ಮತ ಎಣಿಕೆ ● ಗೆಲುವಿನ ವಿಶ್ವಾಸದಲ್ಲಿ ಎನ್‌ಡಿಎ, ‘ಇಂಡಿಯಾ’ ಮೈತ್ರಿ ಕೂಟ

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ನಡೆದ ಬಿಹಾರ ವಿಧಾನಸಭೆ ಚುನಾವಣೆಯು ದಾಖಲೆಯ ಮತದಾನಕ್ಕೆ ಸಾಕ್ಷಿಯಾಗಿತ್ತು. ಸರಳ ಬಹುಮತ ಪಡೆಯುವ ಮೂಲಕ ಯಾರು ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ ಎಂಬ ಕುತೂಹಲ ಮನೆ ಮಾಡಿದೆ.

ನವೆಂಬರ್ 14ರಂದು ಮತ ಎಣಿಕೆ ನಡೆಯಲಿದೆ. ನಿತೀಶ್ ಕುಮಾರ್ ಅವರು ದಾಖಲೆಯ ಐದನೇ ಬಾರಿಗೆ ಮುಖ್ಯಮಂತ್ರಿಯಾಗುವರೋ ಅಥವಾ ಬದಲಾವಣೆ ಬಯಸಿರುವ ಜನರು, ನಿತೀಶ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿ ‘ಇಂಡಿಯಾ’ ಒಕ್ಕೂಟದ ಕೈಗೆ ಅಧಿಕಾರದ ಚುಕ್ಕಾಣಿ ನೀಡುವರೋ ಎಂಬುದು ಶುಕ್ರವಾರ ನಿಚ್ಚಳವಾಗಲಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ವಿಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ ಗೆಲುವು ತಮ್ಮದೇ ಎಂಬ ವಿಶ್ವಾಸ ವ್ಯಕ್ತಪಡಿಸಿವೆ. ಭಾರಿ ಪ್ರಮಾಣದಲ್ಲಿ ಮತ ಚಲಾವಣೆ ಆಗಿರುವುದು ತನ್ನ ಉತ್ತಮ ಆಡಳಿತಕ್ಕೆ ಮತ್ತೊಮ್ಮೆ ಜನಾದೇಶ ಸಿಕ್ಕಿರುವುದರ ಸಂಕೇತ ಎಂದು ಆಡಳಿತಾರೂಢ ಎನ್‌ಡಿಎ ಹೇಳುತ್ತಿದೆ.

‘ಇಂಡಿಯಾ’ ಕೂಟ ಈ ಮಾತನ್ನು ತಳ್ಳಿಹಾಕುತ್ತಿದೆ. ರಾಜ್ಯದ ಜನರು ಬದಲಾವಣೆ ಬಯಸಿದ್ದಾರೆ. ಜನರ ಈ ಇರಾದೆಯು ದಾಖಲೆಯ ಮತ ಚಲಾವಣೆ ಮೂಲಕ ವ್ಯಕ್ತವಾಗಿದೆ ಎಂದು ‘ಇಂಡಿಯಾ’ ನಾಯಕರು ವಿಶ್ಲೇಷಿಸುತ್ತಿದ್ದಾರೆ.

ಎನ್‌ಡಿಎ ಸರಳ ಬಹುಮತ ಪಡೆದು, ಮತ್ತೆ ಅಧಿಕಾರಕ್ಕೇರಲಿದೆ ಎಂದು ಎಲ್ಲ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ಇದು ವಿಪಕ್ಷ ಪಾಳಯದಲ್ಲಿ ಕಿರಿಕಿರಿಯನ್ನುಂಟು ಮಾಡಿದೆ. ವಿರೋಧ ಪಕ್ಷಗಳು ಸಮೀಕ್ಷೆಗಳನ್ನು ತಳ್ಳಿಹಾಕಿವೆ.

ಚುನಾವಣಾ ತಂತ್ರಗಾರ ಪ್ರಶಾಂತ ಕಿಶೋರ್ ನೇತೃತ್ವದ ಜನ ಸುರಾಜ್ ಪಕ್ಷದ ಸಾಧನೆ ನಿರಾಶಾದಾಯಕವಾಗಿರಲಿದೆ ಎಂದೂ ಸಮೀಕ್ಷೆಗಳು ಹೇಳಿವೆ.

> ಮತಗಟ್ಟೆ ಸಮೀಕ್ಷೆಗಳು ಸುಳ್ಳಾಗಲಿವೆ. ಜನರು ಮತ ಚಲಾಯಿಸಲು ಸರದಿಯಲ್ಲಿ ನಿಂತಿದ್ದಾಗಲೇ ಸಮೀಕ್ಷೆಗಳು ಹೊರಬಿದ್ದಿವೆ.
> **ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

> ಜನ ಬದಲಾವಣೆ ಬಯಸಿದ್ದಾರೆ. ಭಾರಿ ಪ್ರಮಾಣದ ಮತ ಚಲಾವಣೆ ಹಾಗೂ ನಮ್ಮ ವರದಿಗಳು ಈ ಸಂಗತಿಯನ್ನೇ ಹೇಳುತ್ತಿದ್ದು, ‘ಇಂಡಿಯಾ’ ಕೂಟ ಅಧಿಕಾರಕ್ಕೇರಲಿದೆ
> **ದೀಪಂಕರ್ ಭಟ್ಟಾಚಾರ್ಯ,** ಪ್ರಧಾನ ಕಾರ್ಯದರ್ಶಿ, ಸಿಪಿಐ(ಎಂಎಲ್) ಲಿಬರೇಷನ್

> ಮತಗಟ್ಟೆ ಸಮೀಕ್ಷೆಗಳಲ್ಲಿ ‘ಇಂಡಿಯಾ’ಕ್ಕೆ ನಂಬಿಕೆ ಇಲ್ಲ. ಕ್ಷೇತ್ರಗಳಲ್ಲಿ ಸಂಚರಿಸಿ ಪಕ್ಷದ ಕಾರ್ಯಕರ್ತರು ಸಿದ್ಧಪಡಿಸಿರುವ ವರದಿಗಳು ‘ಮಹಾಘಟಬಂಧನ’ ಪರ ಅಲೆ ಇದೆ ಎಂದು ಹೇಳಿವೆ
> **ಕೆ.ಸಿ.ವೇಣುಗೋಪಾಲ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

> ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಮತ ಚಲಾಯಿಸಿದ್ದಾರೆ. ಅಭಿವೃದ್ಧಿ ಮತ್ತು ಉತ್ತಮ ಆಡಳಿತಕ್ಕಾಗಿ ಅವರು ಎನ್‌ಡಿಎ ಪರ ನಿರ್ಣಾಯಕ ಮತ ಚಲಾಯಿಸಿದ್ದಾರೆ
> **ಬಿಜೆಪಿ**

‘ಆರ್‌ಜೆಡಿ, ಜೆಡಿಯುಗೆ ಹೆಚ್ಚು ಸ್ಥಾನಗಳಲ್ಲಿ ಗೆಲುವು’

‘ಆರ್‌ಜೆಡಿ ಮತ್ತು ಜೆಡಿಯು ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲಿವೆ. ಈ ಮಾತು ವಿರೋಧಾಭಾಸದಂತೆ ಕಂಡುಬಂದರೂ ಇದೇ ವಾಸ್ತವ’ ಎಂದು ರಾಜಕೀಯ ವಿಶ್ಲೇಷಕ ವಿದ್ಯಾರ್ಥಿ ವಿಕಾಸ್ ಹೇಳುತ್ತಾರೆ.

ವಿದ್ಯಾರ್ಥಿ ವಿಕಾಸ್ ಅವರು ಪಟ್ನಾದ ಎ.ಎನ್. ಸಿನ್ಹಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

‘ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿ ಮಾಡುವುದಾಗಿ ಆರ್‌ಜೆಡಿ ಭರವಸೆ ನೀಡಿದೆ. ಬಿಹಾರದಲ್ಲಿ ಪಿಂಚಣಿದಾರರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಮಾಸಿಕ ಪಿಂಚಣಿಯೇ ಇವರಿಗೆ ಆಧಾರ. ಈ ಅಂಶವು ಆರ್‌ಜೆಡಿಗೆ ಅನುಕೂಲವಾಗಲಿದ್ದು, ಪಕ್ಷಕ್ಕೆ ಹೆಚ್ಚು ಸ್ಥಾನ ತಂದು ಕೊಡಲಿದೆ’ ಎಂದು ಹೇಳುತ್ತಾರೆ.

‘ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಿದ್ದ ಮೊದಲ ಐದು ವರ್ಷ ಕಾಲ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿತ್ತು. ಇದೇ ಕಾರಣಕ್ಕೆ ಜೆಡಿಯುಗೆ ಹಿನ್ನಡೆಯಾಗಬಹುದು’ ಎನ್ನುತ್ತಾರೆ.

‘ಮತ್ತೊಂದೆಡೆ, ಜೆಡಿಯು ವರಿಷ್ಠ ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸುವಲ್ಲಿ ಬಿಜೆಪಿಯಲ್ಲಿ ಸ್ಪಷ್ಟತೆ ಇರಲಿಲ್ಲ. ಇಂಥ ನಡೆಯಿಂದ ಬಿಜೆಪಿಯು ತನ್ನ ಕಾಲಮೇಲೆ ತಾನೇ ಕಲ್ಲು ಹಾಕಿಕೊಂಡಂತಾಗಿದೆ’ ಎಂದು ಅವರು ವಿಶ್ಲೇಷಿಸುತ್ತಾರೆ.

‘ಮಿತ್ರ ಪಕ್ಷಗಳಿಗೂ ಅಚ್ಚರಿ ಕಾದಿದೆ’: ‘ವಿಧಾನಸಭೆ ಚುನಾವಣೆಯ ಫಲಿತಾಂಶವು ವಿರೋಧ ಪಕ್ಷಗಳಿಗೆ ಮಾತ್ರವಲ್ಲ, ನಮ್ಮ ಮಿತ್ರ ಪಕ್ಷಗಳಿಗೂ ಆಘಾತ ನೀಡಲಿದೆ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಜೆಡಿಯು ಮುಖಂಡರೊಬ್ಬರು ಹೇಳಿದ್ದಾರೆ.

‘ಜೆಡಿಯು 25ಕ್ಕಿಂತ ಕಡಿಮೆ ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ಜನ ಸುರಾಜ್ ಪಕ್ಷದ ನಾಯಕ ಪ್ರಶಾಂತ್ ಕಿಶೋರ್ ಹೇಳಿದ್ದರು. ಪಕ್ಷದ ವಿರುದ್ಧ ನಡೆದಿರುವ ಸಂಚಿನ ಬಗ್ಗೆ ನಮ್ಮ ಕಾರ್ಯಕರ್ತರು ಗ್ರಹಿಸಿ, ಕೂಡಲೇ ಕಾರ್ಯಪ್ರವೃತ್ತರಾದರು. ಅವರ ಪರಿಶ್ರಮದಿಂದ ಪಕ್ಷವು ಹೆಚ್ಚು ಸ್ಥಾನದಲ್ಲಿ ಗೆದ್ದು, ಎಲ್ಲರಿಗೂ ಆಘಾತ ನೀಡಲಿದೆ’ ಎಂದು ಹೇಳಿದ್ದಾರೆ.

ಬಿಹಾರದಲ್ಲಿ ಗೆದ್ದರೆ ಮತಕಳ್ಳತನ ಆರೋಪ ಮಾಡುತ್ತಾರೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆಲ್ಲಲಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಆದ್ದರಿಂದ ಫಲಿತಾಂಶ ಬಂದ ಬಳಿಕ ರಾಹುಲ್‌ಗಾಂಧಿ ಮತಗಳ್ಳತನದ ಆರೋಪ ಮಾಡುವುದು ಖಂಡಿತ’ ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಸಚಿವ ಅಮಿತ್ ಶಾ ಅವರ ಕುರಿತು ಮಾತನಾಡುವ ನೈತಿಕತೆ ಇಲ್ಲ. ಮಲ್ಲಿಕಾರ್ಜುನ ಖರ್ಗೆ ರಾಜ್ಯದಲ್ಲಿ ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ದಲಿತರನ್ನು ಸುಟ್ಟು ಹಾಕಿದ ಘಟನೆ ನಡೆದಿತ್ತು. ಆ ಪ್ರಕರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ವೈಫಲ್ಯಗಳ ಬಗ್ಗೆ ಪ್ರಿಯಾಂಕ್ ಮಾತನಾಡಲಿ ಎಂದು ಅಶೋಕ ಹೇಳಿದರು.

501 ಕೆ.ಜಿ. ಲಾಡು ಬಿಜೆಪಿ ಆರ್ಡರ್

ಪಟ್ನಾ (ಪಿಟಿಐ): ಬಿಹಾರ ವಿಧಾಸಭಾ ಚುನಾವಣೆಯಲ್ಲಿ ಗೆಲುವಿನ ನಿರೀಕ್ಷೆಯಲ್ಲಿರುವ ಬಿಜೆಪಿ, ಶುಕ್ರವಾರದ ಮತ ಎಣಿಕೆಗೂ ಮುನ್ನ 501 ಕೆ.ಜಿ. ಲಾಡುಗಳನ್ನು ಪೂರೈಸುವಂತೆ ಬೇಡಿಕೆ ಸಲ್ಲಿಸಿದೆ.

ನವೆಂಬರ್ 14ರ ಬೆಳಿಗ್ಗೆ ಪೂರೈಕೆ ಮಾಡುವಂತೆ 501 ಕೆ.ಜಿ. ಲಾಡುಗಳಿಗೆ ಬಿಜೆಪಿ ಕಾರ್ಯಕರ್ತರು ಬೇಡಿಕೆ ಸಲ್ಲಿಸಿದ್ದಾರೆ ಎಂದು ಪಟ್ನಾದ ಸಿಹಿತಿನಿಸು ತಯಾರಕರು ಹೇಳಿದ್ದಾರೆ.

‘ಎಣಿಕೆಯ ದಿನ ಎನ್‌ಡಿಎ ಹೋಳಿ, ದಸರಾ, ದೀಪಾವಳಿ ಮತ್ತು ಈದ್ ಆಚರಿಸಲಿದೆ. ಯಾಕೆಂದರೆ ಜನರು ಎನ್‌ಡಿಎಯ ಅಭಿವೃದ್ಧಿ ಕೆಲಸಗಳಿಗಾಗಿ ಮತ ನೀಡಿದ್ದಾರೆ’ ಎಂದು ಬಿಜೆಪಿ ಕಾರ್ಯಕರ್ತ ಕೃಷ್ಣ ಕುಮಾರ್ ಕಲ್ಲೂ ಹೇಳಿದ್ದಾರೆ.

ಸಮೀಕ್ಷೆ ಉಲ್ಟಾ ಆಗಲಿದೆ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹರಿಯಾಣ ಚುನಾವಣೋತ್ತರ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಎಂದು ತೋರಿಸಲಾಗಿತ್ತು. ನಂತರ ಏನಾಯಿತು? ಅದೇ ರೀತಿ ಬಿಹಾರದಲ್ಲೂ ಫಲಿತಾಂಶ ಉಲ್ಟಾ ಆಗಲಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಸಮೀಕ್ಷೆಗಳಿಗಿಂತ ಭಿನ್ನವಾಗಿ ಹರಿಯಾಣದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿತು. ಬಿಹಾರದಲ್ಲಿ ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎಗೆ ಮುನ್ನಡೆ ಎನ್ನುತ್ತಿವೆ. ಫಲಿತಾಂಶ ಬರುವ ತನಕ ಕಾದು ನೋಡೋಣ’ ಎಂದರು.

ರಾಜ್ಯದ ಮೇಲೆ ಪರಿಣಾಮ ಇಲ್ಲ: ‘ಬಿಹಾರ ಚುನಾವಣೋತ್ತರ ಸಮೀಕ್ಷೆಗಳ ಮೇಲೆ ನಂಬಿಕೆ ಇಲ್ಲ. ಅಲ್ಲಿನ ಫಲಿತಾಂಶ ಕರ್ನಾಟಕದ ರಾಜಕಾರಣದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ನಮ್ಮದು ಸಾಮಾಜಿಕ ಬದಲಾವಣೆಯ ಕಾಯಕ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಕರ್ನಾಟಕ ವಿಧಾನಸಭಾ ಚುನಾವಣೆ ಸಮಯದಲ್ಲೂ ಸಮೀಕ್ಷೆಗಳನ್ನು ನಂಬಿರಲಿಲ್ಲ. ಯಾವ ಸಮೀಕ್ಷೆಗಳೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಿರಲಿಲ್ಲ. ತಟ್ಟೆಮರೆ ಏಟು ಯಾವ ರೀತಿ ಬೀಳುತ್ತದೆ ಎಂದು ಹೇಳಲು ಆಗದು. ಬಿಹಾರದ ಜನರು ಬದಲಾವಣೆ ಬಯಸುತ್ತಿದ್ದು, ಮಹಾಘಟಬಂಧನ ಗೆಲ್ಲುವ ಭರವಸೆ ಇದೆ. ಚುನಾವಣೆಯಲ್ಲಿ ಗೆಲುವು–ಸೋಲು ಸಹಜ’ ಎಂದರು.

ಬಿಹಾರ
ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

‘ಎನ್‌ಡಿಎಗೆ ಭಾರಿ ಬಹುಮತ’

ನವದೆಹಲಿ (ಪಿಟಿಐ): ಬಿಹಾರ ವಿಧಾನಸಭೆ ಚುನಾವಣೆಯ ಮತಗಟ್ಟೆ ಸಮೀಕ್ಷಾ ವರದಿಗಳು ಬುಧವಾರವೂ ಹೊರಬರುತ್ತಿವೆ. ಆ್ಯಕ್ಸಿಸ್ ಮೈ ಇಂಡಿಯಾ, ಟುಡೇಸ್ ಚಾಣಕ್ಯ ಮತ್ತು ಕಾಮಾಕ್ಯ ಅನಲಿಟಿಕ್ಸ್ ಸಂಸ್ಥೆಗಳು ತಮ್ಮ ವರದಿಗಳನ್ನು ಬಿಡುಗಡೆ ಮಾಡಿವೆ. ಈ ಸಮೀಕ್ಷೆಗಳ ಪ್ರಕಾರ ಎನ್‌ಡಿಎ ಮೈತ್ರಿಕೂಟವು ಭಾರಿ ಬಹುಮತ ಪಡೆದುಕೊಳ್ಳಲಿದೆ.

ಆದರೆ, ‘ಆರ್‌ಜೆಡಿ ಪಕ್ಷವು ರಾಜ್ಯದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ (67-76). ಎನ್‌ಡಿಎ ಪಾಳಯವು ಬಹುಮತ ಪಡೆದುಕೊಳ್ಳಲಿದೆಯಾದರೂ ಬಿಜೆಪಿಯು ಕಳೆದ ಬಾರಿಗಿಂತ 18-23 ಸ್ಥಾನ ಕಳೆದುಕೊಳ್ಳಲಿದೆ. ಈ ಮೈತ್ರಿಕೂಟದಲ್ಲಿ ಜೆಡಿಯು ಪಕ್ಷವೇ ಅತಿ ದೊಡ್ಡ ಪಕ್ಷವಾಗಲಿದೆ’ ಎಂದು ಆ್ಯಕ್ಸಿಸ್ ಮೈ ಇಂಡಿಯಾ ಹೇಳಿದೆ.

ಜೊತೆಗೆ, ಆರ್‌ಜೆಡಿ ಪಕ್ಷದ ತೇಜಸ್ವಿ ಯಾದವ್ ಅವರೇ ಮುಖ್ಯಮಂತ್ರಿ ಆಗಬೇಕು ಎಂದು ಶೇ 34ರಷ್ಟು ಜನರು ಒಲವು ಹೊಂದಿದ್ದಾರೆ. ನಿತೀಶ್ ಕುಮಾರ್ ಅವರ ಮತ್ತೊಮ್ಮೆ ಮುಖ್ಯಮಂತ್ರಿಯಾಗಲು ಶೇ 22ರಷ್ಟು ಜನರು ಸಹಮತ ವ್ಯಕ್ತಪಡಿಸಿದ್ದಾರೆ ಎಂದೂ ಈ ಸಂಸ್ಥೆ ಹೇಳಿದೆ.

ಸಂಸ್ಥೆ	ಎನ್‌ಡಿಎ	‘ಇಂಡಿಯಾ’	ಜನ ಸುರಾಜ್	ಇತರರು
ಆ್ಯಕ್ಸಿಸ್ ಮೈ ಇಂಡಿಯಾ	121-141	98-118	0-2	0
ಟುಡೇಸ್ ಚಾಣಕ್ಯ	148-172	65-89	0	3-9
ಕಾಮಾಕ್ಯ ಅನಾಲಿಟಿಕ್ಸ್	167-187	54-74	0-2	2-7

ಅಂಕ ಇಳಿಕೆ ಬದಲಾವಣೆ ಇಲ್ಲ: ಮಧು ಬಂಗಾರಪ್ಪ

ಒಂದನೇ ಪುಟದಿಂದ...

ಕೆಲ ಹುದ್ದೆಗಳಲ್ಲಿ ಕರ್ನಾಟಕದ ಹೊರಗಿನವರು ಅಧಿಕ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂತಹ ಹುದ್ದೆಗಳಿಗೆ ಗಳಿಸಿದ ಅಂಕಗಳಿಗಿಂತ ಎಸ್‌ಎಸ್‌ಎಲ್‌ಸಿ ಪ್ರಮಾಣಪತ್ರವಷ್ಟೇ ಅಗತ್ಯವಿದೆ. ಆಳ ಚಿಂತನೆಗಳನ್ನು ನಡೆಸಿ, ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ನಂತರವೇ ನಿರ್ಧಾರ ಕೈಗೊಳ್ಳಲಾಗಿದೆ. ಭಾರತದ ಬಹುತೇಕ ರಾಜ್ಯಗಳಲ್ಲಿ ಉತ್ತೀರ್ಣ ಅಂಕ ಶೇ 30ರಿಂದ ಶೇ 33 ಇದೆ. ಆಡಳಿತ ಸುಧಾರಣಾ ಆಯೋಗವೂ ಶಿಫಾರಸು ಮಾಡಿದೆ ಎಂದು ‘ಪ್ರಜಾವಾಣಿ’ ಜತೆ ವಿವರ ಹಂಚಿಕೊಂಡರು.

ಮೂರು ಪರೀಕ್ಷೆಗಳನ್ನು ಪರಿಚಯಿಸಿದ್ದರಿಂದ ವಿದ್ಯಾರ್ಥಿಗಳ ಭವಿಷ್ಯ ಹಸನಾಗುತ್ತಿದೆ. ಎಸ್‌ಎಸ್‌ಎಲ್‌ಸಿ ನಂತರ ಶಿಕ್ಷಣ ತೊರೆಯುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಶಿಕ್ಷಕರನ್ನು ನೇಮಿಸಲು, ಮೂಲ ಸೌಕರ್ಯ ಒದಗಿಸಲು ಸರ್ಕಾರ ಶ್ರಮಿಸುತ್ತಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳತ್ತ ಪೋಷಕರು ಒಲವು ತೋರುತ್ತಿದ್ದಾರೆ. ಆಂಗ್ಲ ಮಾಧ್ಯಮ ಶಾಲೆ, ಪೂರ್ವ ಪ್ರಾಥಮಿಕ ಶಾಲೆಗಳ ಆರಂಭದಿಂದ ಸರ್ಕಾರಿ ಶಾಲೆಗಳತ್ತ ಮಕ್ಕಳು ಆಕರ್ಷಿತರಾಗುತ್ತಿದ್ದಾರೆ ಎಂದರು.

ವರ್ಷಕ್ಕೆ 12 ಮುಟ್ಟಿನ ರಜೆ: ಆದೇಶ

ಒಂದನೇ ಪುಟದಿಂದ...

18ರಿಂದ 52ರ ವಯೋಮಾನದ ಎಲ್ಲ ಕಾಯಂ, ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿಗೆ ಈ ಸೌಲಭ್ಯ ನೀಡಬೇಕು ಎಂದು ಎಲ್ಲ ಉದ್ಯೋಗದಾತರಿಗೂ ಆದೇಶದಲ್ಲಿ ಸೂಚಿಸಿದೆ.

ಷರತ್ತುಗಳು:
- ಆಯಾ ತಿಂಗಳ ರಜೆಯನ್ನು ಆಯಾ ತಿಂಗಳಲ್ಲೇ ಬಳಸಿಕೊಳ್ಳಬೇಕು
- ಒಂದು ತಿಂಗಳ ರಜೆಯನ್ನು ಮುಂದಿನ ತಿಂಗಳಿಗೆ ವಿಸ್ತರಿಸುವಂತಿಲ್ಲ
- ಮುಟ್ಟಿನ ರಜೆ ಪಡೆಯಲು ವೈದ್ಯಕೀಯ ಪ್ರಮಾಣಪತ್ರ ನೀಡಬೇಕಿಲ್ಲ
- 52 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಈ ರಜೆಯ ಸೌಲಭ್ಯ ಇಲ್ಲ
- ಸರ್ಕಾರಿ, ಬಹುರಾಷ್ಟ್ರೀಯ, ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೂ ಅನ್ವಯ

ಅಶ್ಲೀಲ ಪೋಸ್ಟ್ ಹಂಚಿಕೊಂಡ ಅಸ್ಸಾಂ ಪ್ರಾಧ್ಯಾಪಕನಿಗೆ ಜಾಮೀನು ನಿರಾಕರಣೆ

‘ನೀವು ವಿಕೃತಕಾಮಿ’: ‘ಸುಪ್ರೀಂ’ ಚಾಟಿ

ನವದೆಹಲಿ (ಪಿಟಿಐ): ಜಾಲತಾಣಗಳಲ್ಲಿ ದೇಶ ವಿರೋಧಿ ಮತ್ತು ಅಶ್ಲೀಲ ಪೋಸ್ಟ್ ಹಂಚಿಕೊಂಡ ಕಾರಣ ಅಸ್ಸಾಂನ ಕಾಲೇಜು ಪ್ರಾಧ್ಯಾಪಕನನ್ನು ಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ‘ಆತ ಯುವತಿಯರಿಗೆ ಬೆದರಿಕೆ’, ‘ವಿಕೃತಕಾಮಿ’. ಅಂಥವರು ಶೈಕ್ಷಣಿಕ ಸಂಸ್ಥೆಗಳನ್ನು ಪ್ರವೇಶಿಸಲು ಅವಕಾಶ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಬುಧವಾರ ಚಾಟಿ ಬೀಸಿತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ನೇತೃತ್ವದ ನ್ಯಾಯಪೀಠವು, ಪ್ರೊ.ಎಂ.ಡಿ.ಆಬೆದೀನ್ ಅವರಿಗೆ ಜಾಮೀನು ನಿರಾಕರಿಸಿತು.

ಮುಖ್ಯಾಂಶಗಳು
- ದೇಶ ವಿರೋಧಿ ಪೋಸ್ಟ್ ಹಂಚಿಕೆ ಆರೋಪ
- ಪ್ರಾಧ್ಯಾಪಕ ಎನ್ನುವ ಪದಕ್ಕೇ ನಿಮ್ಮಿಂದ ಅವಮಾನ: ತರಾಟೆ
- ಆರೋಪಿ ಬಳಸಿದ ಭಾಷೆ ಆಘಾತಕಾರಿ



‘ಸಾಮಾಜಿಕ ಮಾಧ್ಯಮದಲ್ಲಿ ಮಹಿಳೆಯರಿಗೆ ಕಿರುಕುಳ ನೀಡುವ ಮತ್ತು ಅಶ್ಲೀಲವಾಗಿ ಮಾತನಾಡುವ ಅಭ್ಯಾಸ ನಿಮಗಿದೆ. ನೀವೊಬ್ಬ ವಿಕೃತ ಕಾಮಿ. ಅಷ್ಟು ಸುಲಭವಾಗಿ ಜೈಲಿನಿಂದ ಹೊರಕಳಿಸಲಾಗುವುದಿಲ್ಲ’ ಎಂದು ಹೇಳಿತು.

‘ಅದ್ಯಾವ ರೀತಿಯ ಪ್ರಾಧ್ಯಾಪಕ ನೀವು? ಪ್ರಾಧ್ಯಾಪಕ ಎನ್ನುವ ಪದಕ್ಕೇ ನಿಮ್ಮಿಂದ ಅವಮಾನ’ ಎಂದು ತರಾಟೆಗೆ ತೆಗೆದುಕೊಂಡಿತು.

‘ತಮ್ಮ ತಪ್ಪಿನ ಅರಿವಾಗುತ್ತಿದ್ದಂತೆಯೇ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಪೋಸ್ಟ್ ಅನ್ನು ಅಳಿಸಿಹಾಕಿದ್ದಾರೆ’ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು. ಆಗ ನ್ಯಾಯಪೀಠವು, ‘ಜಾಲತಾಣದಲ್ಲಿ ಬಳಸಿದ ಭಾಷೆಯನ್ನು ಕಂಡು ಆಘಾತವಾಗಿದೆ. ಆರೋಪಿಯು ಕೊಳಕು ಮನಃಸ್ಥಿತಿಯ ವ್ಯಕ್ತಿ’ ಎಂದು ಪ್ರತಿಕ್ರಿಯಿಸಿತು.

ಮನೆಗೆ ತೆರಳಿದ ನಟ ಧರ್ಮೇಂದ್ರ

ಮುಂಬೈ: ಹಿರಿಯ ನಟ ಧರ್ಮೇಂದ್ರ ಅವರನ್ನು ಆಸ್ಪತ್ರೆಯಿಂದ ಮನೆಗೆ ಕರೆದೊಯ್ಯಲಾಗಿದೆ. ಇನ್ನು ಮುಂದೆ ಅವರ ಚಿಕಿತ್ಸೆಯು ಮನೆಯಲ್ಲಿಯೇ ಮುಂದುವರಿಯಲಿದೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ. ಧರ್ಮೇಂದ್ರ ಅವರು ಕಳೆದ 12 ದಿನಗಳಿಂದ ಆಸ್ಪತ್ರೆಯಲ್ಲಿದ್ದರು.

‘ಕುಟುಂಬದ ಖಾಸಗೀತನವನ್ನು ಗೌರವಿಸಿ’ ಎಂದು ಧರ್ಮೇಂದ್ರ ಅವರ ಕುಟುಂಬವು ಮಾಧ್ಯಮ ಮತ್ತು ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಪಂತ್ ನೆರಳಿನಿಂದ ಹೊರಬಂದ ಜುರೇಲ್

ಸಿಕ್ಕ ಅವಕಾಶಗಳಲ್ಲಿ ಸ್ಥಿರ ಪ್ರದರ್ಶನ ನೀಡಿರುವ ಉತ್ತರ ಪ್ರದೇಶದ ಕೀಪರ್

• ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಕಣಕ್ಕಿಳಿಯುವ ಸಾಧ್ಯತೆ

• ಮಧು ಜವಳಿ

ಕೋಲ್ಕತ್ತ: ಭಾರತದ ಇಬ್ಬರು ಪರಿಣತ ವಿಕೆಟ್ ಕೀಪರ್‌ಗಳು ಒಂದೇ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿರುವ ನಿದರ್ಶನಗಳು ಎಷ್ಟಿವೆ? ಅಲ್ಲೊಂದು ಇಲ್ಲೊಂದು ಎಂದು ಹೇಳಬಹುದು.

ಎಂ.ಎಸ್.ಧೋನಿ ತಮ್ಮ ಟೆಸ್ಟ್ ಉತ್ತುಂಗದ ದಿನಗಳನ್ನು ಕಾಣುತ್ತಿದ್ದ ಅವಧಿಯಲ್ಲಿ ದಿನೇಶ್ ಕಾರ್ತಿಕ್ ಅವರು ಆರಂಭ ಆಟಗಾರನಾಗಿದ್ದರು. 2018ರ ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ ದಿನೇಶ್ ಕಾರ್ತಿಕ್ ಮತ್ತು ಪಾರ್ಥಿವ್ ಪಟೇಲ್ ಅವರು ಜೊತೆಗೆ ಆಡಿದ್ದೂ ಇದೆ. 2010ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಾಗ್ಪುರದಲ್ಲಿ ಪದಾರ್ಪಣೆಗೆ ಕಾಯುತ್ತಿದ್ದ ರೋಹಿತ್ ಶರ್ಮಾ ಗಾಯಾಳುವಾದಾಗ ನಾಯಕ ಧೋನಿ ಸಾರಥ್ಯದ ತಂಡದಲ್ಲಿ ದಿನೇಶ್ ಕಾರ್ತಿಕ್ ಆಡಿದ್ದರು.

ಆದರೆ ಈ ಎಲ್ಲ ಸಂದರ್ಭಗಳಲ್ಲಿ ಇದು ತಂತ್ರದ ಭಾಗವಾಗಿರಲಿಲ್ಲ. ಆದರೆ ಸಂದರ್ಭಕ್ಕೆ ಅನಿವಾರ್ಯವಾಗಿ ಎರಡನೇ ವಿಕೆಟ್ ಕೀಪರ್ ಸ್ಥಾನ ಪಡೆದಿದ್ದರು. ಧ್ರುವ್ ಜುರೇಲ್ ಅವರು ಈ 'ಸಂಪ್ರದಾಯ'ಕ್ಕೆ ಕೊನೆಹಾಡಲು ಸಜ್ಜಾಗಿದ್ದಾರೆ. ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೋಶೆ ಅವರ ಮಾತುಗಳನ್ನು ಪರಿಗಣಿಸುವುದಾದರೆ, ಜುರೇಲ್ ಅವರು ಮೊದಲ ಆಯ್ಕೆಯ ವಿಕೆಟ್ ಕೀಪರ್ ರಿಷಭ್ ಪಂತ್ ಜೊತೆ ತಂಡದಲ್ಲಿರಲಿದ್ದಾರೆ. 'ಮೊದಲ ಪಂದ್ಯದಲ್ಲಿ ಉತ್ತರ ಪ್ರದೇಶದ ಬ್ಯಾಟರ್-ಕೀಪರ್ ಆಡದೇ ಹೋದರೆ ಅದು 'ಅಚ್ಚರಿಯಾಗುತ್ತದೆ' ಎಂದು ನೆದರ್ಲೆಂಡ್ಸ್ ಮೂಲದ ಆಟಗಾರ ಹೇಳಿದ್ದಾರೆ.

ಪಂತ್ ಅನುಪಸ್ಥಿತಿಯಲ್ಲಿ ಜುರೇಲ್ ಅವರು ಈ ಹಿಂದೆ ವಿಕೆಟ್ ಕೀಪಿಂಗ್ ಮಾಡಿದ್ದಾರೆ. ಆದರೆ ದಕ್ಷಿಣ ಆಫ್ರಿಕಾ ಎ ವಿರುದ್ಧ ಬೆಂಗಳೂರಿನಲ್ಲಿ ನಡೆದ 'ಟೆಸ್ಟ್'ನಲ್ಲಿ ಅವರು ಎರಡು ಶತಕಗಳನ್ನು ಹೊಡೆದಿದ್ದು, ತಂಡದ ಚಿಂತಕರ ಚಾವಡಿಯು ಅವರನ್ನು ಪರಿಣತ ಬ್ಯಾಟರ್ ಆಗಿ ಆಡಿಸಲು ಪ್ರೇರೇಪಿಸಿದೆ. ಮೊದಲ ಟೆಸ್ಟ್ ಈಡನ್ ಗಾರ್ಡನ್ಸ್‌ನಲ್ಲಿ ಶುಕ್ರವಾರ ಆರಂಭವಾಗಲಿದೆ.

ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಈ ಸಂಬಂಧ ಎದುರಾದ ಪ್ರಶ್ನೆಗೆ ಉತ್ತರಿಸಿದ ಡೋಶೆ ಅವರು, 'ಅವರನ್ನು ಈ ಟೆಸ್ಟ್‌ನಿಂದ ಬಿಡಬಹುದೆಂದು ನನಗೇನೂ ಅನಿಸುತ್ತಿಲ್ಲ' ಎಂದಿದ್ದಾರೆ.

24 ವರ್ಷ ವಯಸ್ಸಿನ ಜುರೇಲ್, ದೀರ್ಘಾವಧಿ ಮಾದರಿಯಲ್ಲಿ ಅಲ್ಪ ಕಾಲದಲ್ಲೇ ಸಾಧಿಸಿದ ಪ್ರಗತಿ ಅಮೋಘವಾದುದು. ವೆಸ್ಟ್ ಇಂಡೀಸ್ ವಿರುದ್ಧ ಅಹಮದಾಬಾದಿನಲ್ಲಿ ನಡೆದ ಟೆಸ್ಟ್‌ನಲ್ಲಿ ಚೊಚ್ಚಲ ಶತಕ ಗಳಿಸಿದ್ದ ಜುರೇಲ್, ಕೊನೆಯ ಒಂಬತ್ತು ಮೊದಲ ದರ್ಜೆ ಪಂದ್ಯಗಳಲ್ಲಿ ನಾಲ್ಕು ಶತಕಗಳನ್ನು ಬಾರಿಸಿದ್ದಾರೆ. ಇಂಗ್ಲೆಂಡ್ ಲಯನ್ಸ್ ಮತ್ತು ಆಸ್ಟ್ರೇಲಿಯಾ ಎ ವಿರುದ್ಧ ಪಂದ್ಯಗಳನ್ನೂ ಸೇರಿ ಇದೇ ಅವಧಿಯಲ್ಲಿ ನಾಲ್ಕು ಅರ್ಧ ಶತಕಗಳನ್ನು ಬಾರಿಸಿದ್ದಾರೆ.

ನಾಲ್ಕು ಸರಣಿಗಳಲ್ಲಿ ಹರಡಿಕೊಂಡ ಐದು ಟೆಸ್ಟ್‌ಗಳಲ್ಲಿ ಅವರು 47.77ರ ಸರಾಸರಿಯಲ್ಲಿ 470 ರನ್ ಕಲೆಹಾಕಿದ್ದಾರೆ. ಇದು ಅವರ ಆಟದ ಆರಂಭವಷ್ಟೇ. ವರ್ಷ ಕಳೆದಂತೆ ಅವರ ನೈಜ ಆಟದ ಗುಣಮಟ್ಟ ಅಳೆಯಬಹುದಾಗಿದೆ. ವಿಶ್ವದ ಅಗ್ರ ವಿಕೆಟ್ ಕೀಪರ್‌ಗಳೆನಿಸಿದ ಕುಮಾರ ಸಂಗಕ್ಕರ (57.40), ಆ್ಯಂಡಿ ಫ್ಲವರ್ (51.54) ಮತ್ತು ಎ.ಬಿ ಡಿವಿಲಿಯರ್ಸ್ (50.66) ಮಾತ್ರ ಟೆಸ್ಟ್‌ನಲ್ಲಿ ಅವರಿಂತ ಉತ್ತಮ ಸರಾಸರಿ ಹೊಂದಿದ್ದಾರೆ. ಆದರೆ ಜುರೇಲ್ ಅವರನ್ನು ಈಗಲೇ ಅಂಥ ಆಟಗಾರರ ಮಟ್ಟಕ್ಕೆ ಸೇರಿಸಲಾಗಿದ್ದರೂ, ಅವರ ಪ್ರತಿಭೆಯನ್ನು ಅಲ್ಲಗಳೆಯುವಂತಿಲ್ಲ.

30 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಜುರೇಲ್ 59ರ ಸರಾಸರಿಯಲ್ಲಿ ರನ್ ಗಳಿಸಿರುವು ದನ್ನು ಗಮನಿಸಿದರೆ, ಅವರ ದೀರ್ಘ ಮಾದರಿಯಲ್ಲಿ ಬೇರೂರಿ ಆಡಬಲ್ಲ ಆಟಗಾರನೆಂಬುದನ್ನು ನಿರೂಪಿಸಿದೆ. ಟೆಸ್ಟ್‌ನಲ್ಲಿ ಇರಬೇಕಾದ ಸಂಯಮ, ಏಕದಿನ ಪಂದ್ಯಗಳಲ್ಲಿ ಇರುವ ವೇಗದ ರನ್ ಗಳಿಕೆ ಅವರ ಆಟದಲ್ಲಿ ಮಿಳಿತವಾಗಿದೆ. ಆರನೇ ಕ್ರಮಾಂಕದಲ್ಲಿ ಅವರು ಉತ್ತಮ ಆಯ್ಕೆಯಾಗಬಲ್ಲರು.

ಒತ್ತಡದ ಸಂದರ್ಭದಲ್ಲಿ ಆಡಬಲ್ಲೆ ಎಂಬುದನ್ನೂ ಅವರು ಸಾಬೀತುಪಡಿಸಿದ್ದಾರೆ. ಇಂಗ್ಲೆಂಡ್ ವಿರುದ್ಧ ರಾಂಚಿಯಲ್ಲಿ ನಡೆದ ಟೆಸ್ಟ್‌ನಲ್ಲಿ ತಂಡ 6 ವಿಕೆಟ್‌ಗೆ 171 ರನ್ ಗಳಿಸಿ ಸಂಕಷ್ಟದಲ್ಲಿದ್ದಾಗ ಅವರು ಅಮೂಲ್ಯ 90 ರನ್ ಗಳಿಸಿದ್ದರು.



ಧ್ರುವ್ ಜುರೇಲ್ —ಪಿಟಿಐ ಚಿತ್ರ

ಮೊದಲ ಟೆಸ್ಟ್: ನಿತೀಶ್ ರೆಡ್ಡಿ ಬದಲು ಜುರೇಲ್‌ಗೆ ಅವಕಾಶ

ಕೋಲ್ಕತ್ತ (ಪಿಟಿಐ): ವಿಕೆಟ್‌ಕೀಪರ್–ಬ್ಯಾಟರ್ ಧ್ರುವ ಜುರೇಲ್ ಅವರನ್ನು ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್ ಪಂದ್ಯಕ್ಕೆ ಆಯ್ಕೆ ಮಾಡಲಾಗಿದೆ. ನಿತೀಶ್ ಕುಮಾರ್ ರೆಡ್ಡಿ ಅವರ ಬದಲಿಗೆ ಧ್ರುವ ಸ್ಥಾನ ಪಡೆಯಲಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೋಶೆ, 'ಜುರೇಲ್ ಮತ್ತು ರಿಷಭ್ ಪಂತ್ ಅವರನ್ನು ಮೊದಲ ಟೆಸ್ಟ್‌ನಲ್ಲಿ ಆಡುವ ತಂಡದಿಂದ ಹೊರಗಿಡುವುದು ಸಾಧ್ಯವಿಲ್ಲದ ಮಾತು. ಅವರಿಬ್ಬರದ್ದೂ ಉತ್ತಮ ಸಂಯೋಜನೆ' ಎಂದರು.

'ನಿತೀಶ್ ಕುಮಾರ್ ರೆಡ್ಡಿ ಅವರಿಗೆ ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಆಡಲು ಹೆಚ್ಚು ಅವಕಾಶಗಳು ಲಭಿಸಿರಲಿಲ್ಲ. ಸದ್ಯ ಇಲ್ಲಿಯ ಸ್ಥಿತಿ–ಗತಿಗೆ ಅನುಗುಣವಾಗಿ ನಿತೀಶ್ ಅವರಿಗೆ ಅಂತಿಮ ಹನ್ನೊಂದರ ಪಟ್ಟಿಯಲ್ಲಿ ಸ್ಥಾನ ಸಿಗುವುದು ಕಷ್ಟವಾಗಲಿದೆ. ಆದ್ದರಿಂದ ಮುಂಬರುವ ಟೆಸ್ಟ್‌ನಲ್ಲಿ ಅವರಿಗೆ ಅವಕಾಶ ಸಿಗಲಿಕ್ಕಿಲ್ಲ' ಎಂದೂ ಡೋಶೆ ಹೇಳಿದರು.

ಚೆಸ್ ವಿಶ್ವಕಪ್: ಅರ್ಜುನ್, ಹರಿಕೃಷ್ಣ ಸವಾಲು ಜೀವಂತ

ಟೈಬ್ರೇಕರ್ ಸುತ್ತಿಗೆ ಪ್ರಜ್ಞಾನಂದ

ಪಣಜಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಅರ್ಜುನ್ ಇರಿಗೇಶಿ ಮತ್ತು ಆರ್.ಪ್ರಜ್ಞಾನಂದ ಅವರು ವಿಶ್ವಕಪ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಬುಧವಾರ ತಮ್ಮ ಎರಡನೇ ಕ್ಲಾಸಿಕಲ್ ಆಟಗಳಲ್ಲಿ ಡ್ರಾ ಸಾಧಿಸಿದರು. ಹಿರಿಯ ಆಟಗಾರ ಪೆಂಟಾಲ ಹರಿಕೃಷ್ಣ ಸಹ ಡ್ರಾ ಮಾಡಿಕೊಂಡರೂ, ಹೆಚ್ಚಿನ ಅವಧಿಯಲ್ಲಿ ಒತ್ತಡಕ್ಕೆ ಸಿಲುಕಿದ್ದರು.

ಈ ಮೂವರೂ ಗುರುವಾರ ನಡೆಯುವ ಕಾಲಮಿತಿಯ ಟೈಬ್ರೇಕರ್ ಪಂದ್ಯಗಳಲ್ಲಿ ಗೆದ್ದರೆ 16ರ ಸುತ್ತನ್ನು ತಲುಪಬಹುದು. ಆದರೆ ಕಣದಲ್ಲಿದ್ದ ಭಾರತದ ಇನ್ನಿಬ್ಬರು ಆಟಗಾರರಾದ ವಿಶ್ವ ಜೂನಿಯರ್ ಚಾಂಪಿಯನ್ ಪ್ರಣವ್ ವೆಂಕಟೇಶ್ ಮತ್ತು ಕಾರ್ತಿಕ್ ವೆಂಕಟರಾಮನ್ ಅವರು ಎರಡನೇ ಕ್ಲಾಸಿಕಲ್ ಆಟದಲ್ಲಿ ಸೋತು ಸವಾಲು ಮುಗಿಸಿದರು.

ಅರ್ಜುನ್ ಅವರು 36 ನಡೆಗಳ ನಂತರ ಹಂಗೆರಿಯ ಅನುಭವಿ ಪೀಟರ್ ಲೆಕೊ ಜೊತೆ ಡ್ರಾಕ್ಕೆ ಒಪ್ಪಿದರು. ಅರ್ಜುನ್ ದಾಳಿಗೆ ಯತ್ನಿಸಿದರೂ, ಲೆಕೊ ಅವರು ರಕ್ಷಣೆಯ ಆಟದಲ್ಲಿ ಕರಾರುವಾಕ್ ಆಗಿದ್ದರು.

ಪ್ರಜ್ಞಾನಂದ ಮತ್ತು ರಷ್ಯಾದ ಜಿಎಂ ಡೇನಿಯಲ್ ದುಬೋವ್ ಅವರು 30 ನಡೆಗಳ ಬಳಿಕ ಡ್ರಾ ಕರಾರಿಗೆ ಸಹಿಹಾಕಿದರು. ಹರಿಕೃಷ್ಣ ಮತ್ತು ಸ್ವೀಡನ್‌ನ ನಿಲ್ಸ್ ಗ್ರಾಂಡೆಲಿಯಸ್ ಅವರು 38 ನಡೆಗಳ ನಂತರ ಪಾಯಿಂಟ್ ಹಂಚಿಕೊಂಡರು. ಮೊದಲ ಕ್ಲಾಸಿಕಲ್ ಆಟವನ್ನೂ ಈ ಆಟಗಾರರು ಡ್ರಾ ಮಾಡಿಕೊಂಡಿದ್ದು ಸ್ಕೋರ್ 1–1 ಸಮಬಲಗೊಂಡಿದೆ.



ಪೆಂಟಾಲ ಹರಿಕೃಷ್ಣ ಫಿಡೆ ವೆಬ್‌ಸೈಟ್ ಚಿತ್ರ

ಮೆಕ್ಸಿಕೊದ ಗ್ರ್ಯಾಂಡ್‌ಮಾಸ್ಟರ್ ಜೋಸ್ ಎಡ್ವರ್ಡೊ ಮಾರ್ಟಿನೆಝ್ ಅವರು ಪ್ರಿಕ್ವಾರ್ಟರ್‌ಫೈನಲ್ ತಲುಪಿದ ಮೊದಲ ಆಟಗಾರ ಎನಿಸಿದರು. ಸರ್ಬಿಯಾದ ಜಿಎಂ ಅಲೆಕ್ಸಿ ಸರನ ವಿರುದ್ಧ ಮಂಗಳವಾರ ಕಪ್ಪು ಕಾಯಿಗಳಲ್ಲಿ ಆಡಿ ಜಯಿಸಿದ್ದ ಅವರು ಬುಧವಾರ ಎರಡನೇ ಆಟ ಡ್ರಾ ಮಾಡಿಕೊಂಡು ಪಂದ್ಯವನ್ನು 1.5–0.5ರಲ್ಲಿ ಗೆದ್ದರು. ಅವರು 16ರ ಸುತ್ತಿನಲ್ಲಿ ಹರಿಕೃಷ್ಣ– ಗ್ರಾಂಡೆಲಿಯಸ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಎರಡು ಬಾರಿಯ ಚಾಂಪಿಯನ್ ಲೆವೊನ್ ಅರೋನಿಯನ್ ಅವರು ಪೋಲೆಂಡ್‌ನ ರಡೊಸ್ಲಾವ್ ವೊಜ್ತಾಝೆಕ್ ಜೊತೆ ಡ್ರಾ ಸಾಧಿಸಿ 1.5–0.5ರಲ್ಲಿ ಪಂದ್ಯ ಗೆದ್ದರು.

ಪ್ರಣವ್ ಅವರು ಉಜ್ಬೇಕಿಸ್ತಾನದ ಜಿಎಂ ನದಿರ್ಬೆಕ್ ಯಾಕುಬೊಯೆವ್ ಅವರಿಗೆ ಎರಡನೇ ಆಟದಲ್ಲಿ ಸೋತರು. ಇವರಿಬ್ಬರ ನಡುವಣ ಮೊದಲ ಆಟ ಡ್ರಾ ಆಗಿತ್ತು. ವಿಯೆಟ್ನಾಮಿನ ಜಿಎಂ ಲಿ ಕ್ವಾಂಗ್ ಲೀಮ್ ಅವರು 1.5–0.5 ರಿಂದ ಭಾರತದ ಇನ್ನೊಬ್ಬ ಆಟಗಾರ ಕಾರ್ತಿಕ್ ವೆಂಕಟರಾಮನ್ ಅವರನ್ನು ಮಣಿಸಿದರು.

ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ಅವರು 1.5–0.5ರಿಂದ ಸ್ವದೇಶದ ಮಥಾಯಸ್ ಬ್ಲುಬಾಮ್ ಅವರನ್ನು ಸೋಲಿಸಿದರು.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಜರ್ಮನಿಯ ವಿನ್ಸೆಂಟ್ ಕೀಮರ್, ಹಂಗೆರಿಯ ರಿಚರ್ಡ್ ರ್‍ಯಾಪೋರ್ಟ್, ಅಮೆರಿಕದ ಸ್ಯಾಮ್ ಶಂಕ್ಲಾಂಡ್, ಚೀನಾದ ವೀ ಯಿ, ಇರಾನ್‌ನ ಪರ್ಹಾಮ್ ಮಘಸೂಡ್ಲು ಒಳಗೊಂಡಂತೆ 22 ಮಂದಿ ಗುರುವಾರ ಟೈಬ್ರೇಕರ್ ಆಡಲಿದ್ದಾರೆ. ಐದು ಮಂದಿಯಷ್ಟೇ ಕ್ಲಾಸಿಕಲ್ ಆಟದ ಬಳಿಕ ಮುಂದಿನ ಸುತ್ತಿಗೆ ಮುನ್ನಡೆದಿದ್ದಾರೆ.

‘ಭಾರತದಲ್ಲಿ ಟೆಸ್ಟ್ ಗೆಲ್ಲುವ ಹಸಿವು ನಮಗಿದೆ’

ಕೋಲ್ಕತ್ತ (ಪಿಟಿಐ): ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವು 15 ವರ್ಷಗಳಿಂದ ಭಾರತದಲ್ಲಿ ಒಂದೂ ಟೆಸ್ಟ್ ಪಂದ್ಯ ಜಯಿಸಿಲ್ಲ. ಶುಕ್ರವಾರದಿಂದ ಇಲ್ಲಿ ಆರಂಭವಾಗಲಿರುವ ಎರಡು ಟೆಸ್ಟ್‌ಗಳ ಸರಣಿಯಲ್ಲಿ ಜಯಿಸುವತ್ತ ತಂಡವು ಚಿತ್ತ ನೆಟ್ಟಿದೆ.



ಕೇಶವ್ ಮಹಾರಾಜ್

ಮೊದಲ ಪಂದ್ಯ ಈಡನ್ ಗಾರ್ಡನ್‌ನಲ್ಲಿ ಮತ್ತು ಎರಡನೇಯದ್ದು ಗುವಾಹಟಿಯಲ್ಲಿ ನಡೆಯಲಿದೆ.

‘ನಮ್ಮ ತಂಡದಲ್ಲಿ ಗೆಲ್ಲಲೇಬೇಕು ಎಂಬ ಹಸಿವು ಅಪಾರವಾಗಿದೆ. ಭಾರತ ತಂಡವನ್ನು ಅದರ ತವರಿನಲ್ಲಿಯೇ ಸೋಲಿಸುವುದು ದೊಡ್ಡ ಸಾಧನೆ. ಅದನ್ನು ಸಾಧಿಸುವ ಛಲ ನಮ್ಮಲ್ಲಿದೆ. ಭಾರತ ದಲ್ಲಿ ಟೆಸ್ಟ್ ಸರಣಿ ಆಡುವುದು ಬಹಳ ಕಠಿಣ ಸವಾಲು. ಕಳೆದ ಹಲವು ವರ್ಷಗಳಲ್ಲಿ ಇಲ್ಲಿ ಆಡಿರುವ ದಕ್ಷಿಣ ಆಫ್ರಿಕಾ ಆಟಗಾರರ ಅನುಭವವೂ ಇದೇ ಆಗಿದೆ’ ಎಂದು ಸ್ಪಿನ್ನರ್ ಕೇಶವ್ ಮಹಾರಾಜ್ ಹೇಳಿದರು.

‘ಇದು ನಮಗೆ ಬಹಳ ದೊಡ್ಡ ಟೆಸ್ಟ್ ಪಂದ್ಯವಾಗಿದೆ. ನಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಇದು ಉತ್ತಮ ಅವಕಾಶವಾಗಿದೆ. ಈ ಸವಾಲನ್ನು ಎದುರಿಸುವುದು ನಮಗೆ ಬಹಳ ಇಷ್ಟವಾದ ವಿಷಯವಾಗಿದೆ’ ಎಂದರು.

ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ

ರಾಜ್ಯ ಯುವ ವನಿತೆಯರಿಗೆ ಪ್ರಶಸ್ತಿ

ಬೆಂಗಳೂರು: ಜೆ. ದೀಕ್ಷಾ ಅವರ ಐದು ವಿಕೆಟ್ ಗೊಂಚಲು ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಆಂಧ್ರಪ್ರದೇಶ ತಂಡವನ್ನು ಫೈನಲ್‌ನಲ್ಲಿ 7 ವಿಕೆಟ್‌ಗಳಿಂದ ಮಣಿಸಿ, ಪ್ರಶಸ್ತಿ ಎತ್ತಿಹಿಡಿಯಿತು.

ಕೋಲ್ಕತ್ತದ ಸಾಲ್ಟ್‌ಲೇಕ್‌ನ ಜೆ.ಯು. ಕ್ಯಾಂಪಸ್‌ನಲ್ಲಿ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ದೀಕ್ಷಾ (21ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ಎದುರು ಆಂಧ್ರಪ್ರದೇಶ ತಂಡವು ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಯಕಿ ವಂದಿತಾ ಕೆ. ರಾವ್ (18ಕ್ಕೆ2) ಹಾಗೂ ವೇದವರ್ಷಿಣಿ ವಿ. (21ಕ್ಕೆ2) ಅವರು ತಲಾ ಎರಡು ವಿಕೆಟ್ ಪಡೆದು ದೀಕ್ಷಾ ಅವರಿಗೆ ಉತ್ತಮ ಬೆಂಬಲ ನೀಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ರಾಜ್ಯ ತಂಡವು 17.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 120 ರನ್ ಗಳಿಸಿ, ಗೆಲುವಿನ ನಗೆ ಬೀರಿತು.

5.5 ಓವರ್‌ಗಳಲ್ಲಿ 30 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದ ಕರ್ನಾಟಕ ತಂಡಕ್ಕೆ ಲಿಯಾಂಕಾ ಶೆಟ್ಟಿ (28, 28ಎ, 4x4) ಆಸರೆಯಾದರು. ಬಳಿಕ, ಸಿ.ಡಿ. ದೀಕ್ಷಾ (ಔಟಾಗದೇ 47, 39ಎ, 4x4, 6x1) ಹಾಗೂ ಕಾಶ್ವಿ ಕಂಡಿಕುಪ್ಪ (ಔಟಾಗದೇ 27, 20ಎ, 4x4) ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಜೆ. ದೀಕ್ಷಾ ಅವರು ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರರಾದರೆ, ತಂಡದ ರಚಿತಾ ಹತ್ವಾರ್ ಸರಣಿಯ ಆಟಗಾರ್ತಿ ಗೌರವ ಗಳಿಸಿದರು.



ಪಶ್ಚಿಮ ಬಂಗಾಳ ಕ್ರಿಕೆಟ್ ಸಂಸ್ಥೆಯ (ಸಿಎಬಿ) ಖಜಾಂಚಿ ಸಂಜಯ್ ದಾಸ್ ಅವರು ಕರ್ನಾಟಕ 19 ವರ್ಷದೊಳಗಿನ ಮಹಿಳೆಯರ ತಂಡದ ನಾಯಕಿ ವಂದಿತಾ ಕೆ. ರಾವ್ ಅವರಿಗೆ ಟ್ರೋಫಿ ಪ್ರದಾನ ಮಾಡಿದರು –ಸಿಎಬಿ ಚಿತ್ರ

ಸಂಕ್ಷಿಪ್ತ ಸ್ಕೋರು: ಆಂಧ್ರಪ್ರದೇಶ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 119 (ದೀಕ್ಷಾ ಕತ್ರಗದ್ದ 36, ಸೇತು ಸಾಯಿ 45, ದೀಕ್ಷಾ ಜೆ. 21ಕ್ಕೆ5, ವಂದಿತಾ ಕೆ. ರಾವ್ 18ಕ್ಕೆ2, ವೇದವರ್ಷಿಣಿ ವಿ. 21ಕ್ಕೆ2). ಕರ್ನಾಟಕ: 17.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 120 (ದೀಕ್ಷಾ ಸಿ.ಡಿ. ಔಟಾಗದೇ 47, ಲಿಯಾಂಕಾ ಶೆಟ್ಟಿ 28, ಕಾಶ್ವಿ ಕೆ. ಔಟಾಗದೇ 27, ಬಿ.ಎಸ್.ದೀಪ್ತಿ 19ಕ್ಕೆ1, ಅಂಜುಂ 24ಕ್ಕೆ1, ಸಿ.ಎಚ್.ತಮನ್ನಾ 28ಕ್ಕೆ1).
ಫಲಿತಾಂಶ: ಕರ್ನಾಟಕ ತಂಡಕ್ಕೆ 7 ವಿಕೆಟ್‌ಗಳ ಜಯ, ಟ್ರೋಫಿ.

ತವರಿಗೆ ಮರಳಲು ಲಂಕಾ ತಂಡದ 8 ಆಟಗಾರರ ನಿರ್ಧಾರ

ಕೊಲಂಬೊ (ಪಿಟಿಐ): ಮೂರು ಪಂದ್ಯಗಳ ಏಕದಿನ ಸರಣಿಯನ್ನಾಡಲು ಪ್ರಸ್ತುತ ಪಾಕಿಸ್ತಾನ ಪ್ರವಾಸದಲ್ಲಿರುವ ಶ್ರೀಲಂಕಾ ಕ್ರಿಕೆಟ್ ತಂಡದ ಎಂಟು ಮಂದಿ ಆಟಗಾರರು ಗುರುವಾರ ತವರಿಗೆ ಮರಳಲು ಸಜ್ಜಾಗಿದ್ದಾರೆ. ಇಸ್ಲಾಮಾಬಾದಿನಲ್ಲಿ ಭೀಕರ ಬಾಂಬ್ ಸ್ಫೋಟದ ನಂತರ ಆಟಗಾರರು ಸುರಕ್ಷತೆಯ ಬಗ್ಗೆ ಕಳವಳಗೊಂಡಿದ್ದಾರೆ.

ಆಟಗಾರರ ಮರಳುವ ವಿಷಯವನ್ನು ಶ್ರೀಲಂಕಾ ಕ್ರಿಕೆಟ್ ಮೂಲವೊಂದು ಖಚಿತಪಡಿಸಿದೆ. ಹೀಗಾಗಿ ಗುರುವಾರ ರಾವಲ್ಪಿಂಡಿಯಲ್ಲಿ ನಿಗದಿಯಾಗಿರುವ ಪಂದ್ಯ ರದ್ದಾಗುವುದು ಖಚಿತವಾಗಿದೆ. ಇದೇ ಕ್ರೀಡಾಂಗಣ ದಲ್ಲಿ ಮಂಗಳವಾರ ನಡೆದ ಮೊದಲ ಪಂದ್ಯವನ್ನು ಪಾಕ್ ಗೆದ್ದುಕೊಂಡಿತ್ತು.

ತವರಿಗೆ ಮರಳುತ್ತಿರುವ ಎಂಟು ಆಟಗಾರರ ಬದಲಿಗೆ ಬೇರೆಯವರನ್ನು ಕಳುಹಿಸಲಾಗುವುದು ಎಂದೂ ಅದು ತಿಳಿಸಿದೆ.

2009ರಲ್ಲಿ ಲಾಹೋರ್‌ನ ಗಡಾಫಿ ಕ್ರೀಡಾಂಗಣದತ್ತ ಪ್ರಯಾಣಿಸುತ್ತಿದ್ದ ಶ್ರೀಲಂಕಾ ತಂಡದ ಆಟಗಾರರಿದ್ದ ಬಸ್ ಮೇಲೆ ಬಂದೂಕುದಾರಿ ಉಗ್ರರು ದಾಳಿ ನಡೆಸಿದ್ದರು.



(ಎಡದಿಂದ) ಟ್ರೋಫಿಯೊಂದಿಗೆ ಕ್ಯೂಪಿಎಲ್ ಸಂಸ್ಥಾಪಕ ಮಹೇಶ್ ಕುಮಾರ್, ನಟಿಯರಾದ ಸುಧಾರಾಣಿ, ಪ್ರೇಮಾ ಹಾಗೂ ಕ್ಯೂಪಿಎಲ್ ಸಹ ಸಂಸ್ಥಾಪಕ– ನಟ ಪ್ರಮೋದ್ ಶೆಟ್ಟಿ

ಪ್ರಶಸ್ತಿ ಸುತ್ತಿಗೆ ಚಿತ್ರದುರ್ಗ, ಹಾಸನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಕ್ವೀನ್ಸ್ ಹಾಗೂ ಹಾಸನ ಕ್ವೀನ್ಸ್ ತಂಡಗಳು ಎರಡನೇ ಆವೃತ್ತಿಯ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯೂಪಿಎಲ್) ಕ್ರೀಡೋತ್ಸವದ ಲುಡೊ ಸ್ಪರ್ಧೆಯಲ್ಲಿ ಬುಧವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದವು.

ನಗರದ ಕೋರಮಂಗಲದಲ್ಲಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕೇರಂ ಸ್ಪರ್ಧೆಯಲ್ಲಿ ಮೈಸೂರು ಕ್ವೀನ್ಸ್ ಮತ್ತು ಹಾಸನ ಕ್ವೀನ್ಸ್ ತಂಡಗಳು ಫೈನಲ್ ಪ್ರವೇಶಿಸಿದವು. ಈ ಹಾದಿಯಲ್ಲಿ ಉಭಯ ತಂಡಗಳು ಲೀಗ್ ಮತ್ತು ನಾಕೌಟ್ ಹಂತಗಳಲ್ಲಿ ತುರುಸಿನ ಪೈಪೋಟಿ ಎದುರಿಸಿದವು.

ನಟಿಯರಾದ ಪ್ರೇಮಾ ಹಾಗೂ ಸುಧಾರಾಣಿ ಅವರು ಬುಧವಾರದ ಪಂದ್ಯಗಳಿಗೆ ಚಾಲನೆ ನೀಡಿ, ಸ್ಪರ್ಧಿಗಳನ್ನು ಹುರಿದುಂಬಿಸಿದರು. ಫಿಬಾ ಏಷ್ಯಾ ಹಾಗೂ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಆಟಗಾರ್ತಿಯರೊಂದಿಗೆ ಸಂವಾದ ನಡೆಸಿದರು. ಸಿನಿ ತಾರೆಯರಲ್ಲಿ ಒಟ್ಟುಗೆಲಸ (ಟೀಂ ವರ್ಕ್) ಹಾಗೂ ದೈಹಿಕ ಚಟುವಟಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಟೂರ್ನಿಯು ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಚೆಸ್ ಹಾಗೂ ಲಗೋರಿ ಸ್ಪರ್ಧೆಗಳು ಗುರುವಾರ ನಡೆಯಲಿವೆ.

ನಗರದ ಮಾರತ್ತಹಳ್ಳಿಯ ಇ-ಝೋನ್‌ನಲ್ಲಿ ಮಂಗಳವಾರ ನಡೆದ ಲೇಸರ್ ಟ್ಯಾಗ್ ಹಾಗೂ ಬೌಲಿಂಗ್ ಸ್ಪರ್ಧೆಗಳಲ್ಲಿ ಧನ್ಯಾ ರಾಮ್‌ಕುಮಾರ್ ನಾಯಕತ್ವದ ಬಳ್ಳಾರಿ ಕ್ವೀನ್ಸ್ ತಂಡವು ಚಾಂಪಿಯನ್ ಆಗಿತ್ತು.

ಜಪಾನ್ ಮಾಸ್ಟರ್ಸ್: ಲಕ್ಷ್ಯ ಸೇನ್ ಮುನ್ನಡೆ

ಕುಮಾಮೊಟೊ (ಜಪಾನ್), (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಜಪಾನ್‌ನ ಕೋಕಿ ವತಾನಬೆ ಅವರನ್ನು ಬುಧವಾರ ನೇರ ಆಟಗಳಲ್ಲಿ ಸೋಲಿಸಿದರು.

ಏಳನೇ ಶ್ರೇಯಾಂಕದ ಲಕ್ಷ್ಯ 21–12, 21–16 ರಿಂದ ಜಪಾನ್‌ನ ಆಟಗಾರನನ್ನು ಕೇವಲ 39 ನಿಮಿಷಗಳಲ್ಲಿ ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನ ದಲ್ಲಿರುವ ಲಕ್ಷ್ಯ ಮುಂದಿನ ಸುತ್ತಿನಲ್ಲಿ ಸಿಂಗಪುರದ ಜಿಯಾ ಹೆಂಗ್ ಜೇಸನ್ ಅವರನ್ನು ಎದುರಿಸಲಿದ್ದಾರೆ. ಜಿಯಾ ಅವರು ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ 21–18, 15–21, 21–17 ರಿಂದ ಕೆನಡಾದ ವಿಕ್ಟರ್ ಲೈ ಅವರನ್ನು ಸೋಲಿಸಿದರು.

ಆದರೆ ಕಿರಣ್ ಜಾರ್ಜ್ ಮತ್ತು ಆಯುಷ್ ಶೆಟ್ಟಿ ಅವರ ಸವಾಲು ಬಲುಬೇಗ ಅಂತ್ಯಗೊಂಡಿತು. ಕಿರಣ್ ಅವರು ಮಲೇಷ್ಯಾದ ಜಿಂಗ್ ಹಾಂಗ್ ಕೊಕ್ ಅವರಿಗೆ 20–22, 10–21ರಲ್ಲಿ ಸೋತರು. ನಾಲ್ಕನೇ ಶ್ರೇಯಾಂಕದ ಕೊಡೈ ನರವೋಕಾ 21–16, 21–11 ರಿಂದ ಆಯುಷ್ ಶೆಟ್ಟಿ ಅವರನ್ನು ಮಣಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ರೋಹನ್ ಕಪೂರ್– ರುತ್ವಿಕಾ ಶಿವಾನಿ ಗದ್ದೆ ಜೋಡಿ ಮೊದಲ ಸುತ್ತಿನಲ್ಲೇ ಹೊರಬಿದ್ದಿತು. ಅಮೆರಿಕದ ಪ್ರೆಸ್ಲಿ ಸ್ಮಿತ್– ಜೆನ್ನಿ ಗೈ ಜೋಡಿ 21–12, 19–21, 22–20 ರಿಂದ ಭಾರತದ ಜೋಡಿಯ ಮೇಲೆ ಜಯಗಳಿಸಿತು.

ಬ್ಯಾಸ್ಕೆಟ್‌ಬಾಲ್ ಎಚ್‌ಪಿಸಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದಯೋನ್ಮುಖರನ್ನು ಗುರುತಿಸಿ ಉತ್ತಮ ಆಟಗಾರರನ್ನಾಗಿ ಸಜ್ಜುಗೊಳಿಸುವ ಗುರಿಯನ್ನಿಟ್ಟುಕೊಂಡು ವಸತಿ ಸಹಿತ ಉನ್ನತ ಸಾಧನಾ ಕೇಂದ್ರಕ್ಕೆ (ಹೈ ಪರ್ಫಾಮೆನ್ಸ್ ಸೆಂಟರ್) ಬುಧವಾರ ಇಲ್ಲಿನ ಸರ್ಜಾಪುರ ರಸ್ತೆಯ ಲಕ್ಷ್ಯನ್ ಅಕಾಡೆಮಿಯಲ್ಲಿ ಚಾಲನೆ ನೀಡಲಾಯಿತು.

ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಮತ್ತು ಎಸಿಜಿ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಈ ಕೇಂದ್ರವನ್ನು ಜಂಟಿಯಾಗಿ ಆರಂಭಿಸಿವೆ. ಮೊದಲ ಇಂಡಿಯಾ ಬ್ಯಾಸ್ಕೆಟ್‌ಬಾಲ್ ಲೀಗ್‌ಗೆ ಪೂರ್ವಭಾವಿಯಾಗಿ ಈ ಕೇಂದ್ರ ಆರಂಭವಾಗಿದೆ.

ಇಲ್ಲಿ ಫಿಭಾ ಗುಣಮಟ್ಟದ ಮೂರು ಅಂಕಣಗಳನ್ನು ನಿರ್ಮಿಸಲಾಗಿದೆ. ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಜಿಮ್ ಸಹ ಇದೆ. ವಿಶ್ವ ದರ್ಜೆಯ 25 ಮೀಟರ್ ಈಜುಕೊಳವೂ ಇದೆ.

‘ವರ್ಷಗಳ ದೂರದೃಷ್ಟಿಯ ಫಲವಾಗಿ ಇಂಡಿಯಾ ಬ್ಯಾಸ್ಕೆಟ್‌ಬಾಲ್ ಲೀಗ್ ಈಗ ಸಾಕಾರಗೊಳ್ಳುವ ಹಂತಕ್ಕೆ ಬಂದಿದೆ. ರಾಷ್ಟ್ರೀಯ ಮಟ್ಟದಲ್ಲಿ ತಾರಾ ವರ್ಚಸ್ಸಿನ ಆಟಗಾರರನ್ನು ಕಂಡುಕೊಳ್ಳಲು ಮತ್ತು ಬ್ಯಾಸ್ಕೆಟ್‌ಬಾಲ್ ಸಂಸ್ಕೃತಿಯನ್ನು ಪಸರಿಸಲು ಇದು ನೆರವಾಗಲಿದೆ’ ಎಂದು ಬಿಎಫ್‌ಐ ಅಧ್ಯಕ್ಷ ಆಧವ್ ಅರ್ಜುನ ಈ ಸಂದರ್ಭದಲ್ಲಿ ತಿಳಿಸಿದರು.

‘ಬ್ಯಾಸ್ಕೆಟ್‌ಬಾಲ್, ಒಲಿಂಪಿಕ್ ಕ್ರೀಡೆಯಾಗಿದೆ. ನಮ್ಮ ಪ್ರಯತ್ನವು ಈ ನಿಟ್ಟಿನಲ್ಲಿ ಹೆಚ್ಚಿನ ಅರ್ಥ ನೀಡಲಿದೆ. ಆರು ತಿಂಗಳಲ್ಲಿ ಉನ್ನತ ಸಾಧನಾ ಕೇಂದ್ರವು (ಎಚ್‌ಪಿಸಿ) ಪೂರ್ಣಪ್ರಮಾಣದಲ್ಲಿ ಕಾರ್ಯೋನ್ಮುಖವಾಗಲಿದೆ. ಮುಂದಿನ ವರ್ಷ ಲೀಗ್ ಆರಂಭವಾಗಲಿದೆ’ ಎಂದರು.

ಫುಟ್‌ಬಾಲ್ ಕ್ಲಬ್‌ಗಳಿಂದ ಕ್ರೀಡಾ ಸಚಿವರ ಭೇಟಿ ಇಂದು

ನವದೆಹಲಿ (ಪಿಟಿಐ): ಐಎಸ್‌ಎಲ್ ಬಿಕ್ಕಟ್ಟಿಗೆ ಸಂಬಂಧಿಸಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಜೊತೆ ಕ್ಲಬ್ ಸಿಇಒಗಳ ಮಾತುಕತೆ ಬುಧವಾರ ವಿಫಲವಾಯಿತು. ಹೀಗಾಗಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕ್ಲಬ್‌ಗಳ ಪ್ರತಿನಿಧಿಗಳು ಗುರುವಾರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರನ್ನು ಭೇಟಿಯಾಗಲಿದ್ದಾರೆ. ಈ ಮೂಲಕ ಭಾರತದ ಫುಟ್‌ಬಾಲ್ ಬಿಕ್ಕಟ್ಟು ಸಚಿವರವರೆಗೆ ತಲುಪಿದಂತಾಗಿದೆ.

ಐಎಫ್‌ಎಫ್‌ಗೆ ಬಿಡ್‌ನಲ್ಲಿ ವಾಣಿಜ್ಯ ಪಾಲುದಾರ ಸಿಗದ ಕಾರಣ ಈ ವರ್ಷ ಇಂಡಿಯನ್ ಸೂಪರ್ ಲೀಗ್ ನಡೆಯುವುದು ಇನ್ನೂ ಸ್ಪಷ್ಟವಾಗಿಲ್ಲ.

ಐಎಸ್‌ಎಲ್ ಕ್ಲಬ್‌ಗಳ ಜೊತೆ ಐ ಲೀಗ್ ಕ್ಲಬ್‌ಗಳನ್ನೂ ಮಾತುಕತೆಗೆ ಕರೆಯಲಾಗಿತ್ತು. ಇದನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲು ಉದ್ದೇಶಿಲಾಗಿತ್ತು. ಆದರೆ ದಿಢೀರನೇ ಕರೆದ ಸಭೆಗೆ ಹಾಜರಾಗಲು ಅವಧಿ ಕಡಿಮೆಯಿದೆ ಎಂದು ಕ್ಲಬ್‌ಗಳು ಹೇಳಿದವು. ಹೀಗಾಗಿ ಗುರುವಾರ ಬೆಳಿಗ್ಗೆ ಕ್ಲಬ್ ಪ್ರತಿನಿಧಿಗಳು ಸಚಿವರನ್ನು ಭೇಟಿಯಾಗಲಿದ್ದಾರೆ.

ಆದರೆ, ಬಂಗಾಳದ ಬಿಜೆಪಿ ನಾಯಕರೂ ಆಗಿರುವ ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ ಸಭೆಯಲ್ಲಿ ಹಾಜರಿರುತ್ತಾರೆಯೇ ಎಂಬುದು ಸ್ಪಷ್ಟವಾಗಿಲ್ಲ.

ಚಿಟಿಕೆ ಸುದ್ದಿ

ರಾಜ್ಯ ರ್‍ಯಾಂಕಿಂಗ್ ಟಿ.ಟಿ. ಟೂರ್ನಿ 20ರಿಂದ

ಹುಬ್ಬಳ್ಳಿ: ಧಾರವಾಡದ ಕಾಸ್ಮೋಸ್ ಕ್ಲಬ್ ವತಿಯಿಂದ ನವೆಂಬರ್ 20ರಿಂದ 23ರವರೆಗೆ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ ಏರ್ಪಡಿಸಲಾಗಿದೆ. 15, 17 ಮತ್ತು 19 ವರ್ಷದೊಳಗಿನ ಬಾಲಕ, ಬಾಲಕಿಯರು ಮತ್ತು ಪುರುಷ, ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ.



ಆಸಕ್ತರು ನವೆಂಬರ್ 15ರ ಒಳಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು. ಅಲ್ಲದೆ, https://karnatakatabletennis.web.app ಮೂಲಕವೂ ನೋಂದಣಿಗೆ ಅವಕಾಶ ಇದೆ. ಹೆಚ್ಚಿನ ಮಾಹಿತಿಗೆ ರೆಫರಿ ವೀರೇಶ ಕಲ್ಮಠ (98864 66576) ಅವರನ್ನು ಸಂಪರ್ಕಿಸಬಹುದು ಎಂದು ಕ್ಲಬ್‌ನ ಗೌರವ ಕಾರ್ಯದರ್ಶಿ ಕೆ.ಆರ್.ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಫಾಲಿಗೆ ಹರಿಯಾಣ ಸರ್ಕಾರದ ಗೌರವ

ಚಂಡೀಗಢ (ಪಿಟಿಐ): ಏಕದಿನ ವಿಶ್ವಕಪ್ ಗೆದ್ದ ಭಾರತ ಮಹಿಳಾ ತಂಡದ ಬ್ಯಾಟರ್ ಶಫಾಲಿ ವರ್ಮಾ ಅವರನ್ನು ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ಬುಧವಾರ ತಮ್ಮ ಅಧಿಕೃತ ನಿವಾಸದಲ್ಲಿ ಸನ್ಮಾನಿಸಿದರು.

ಶಾಲು ಹೊದಿಸಿ, ₹1.5 ಕೋಟಿ ಮೊತ್ತದ ಚೆಕ್ ನೀಡಿ ಗೌರವಿಸಿದರು. ಅವರನ್ನು ಹರಿಯಾಣ ಮಹಿಳಾ ಆಯೋಗದ ಪ್ರಚಾರ ರಾಯಭಾರಿಯನ್ನಾಗಿಯೂ ನೇಮಿಸಲಾಗಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

‘ವಿಶ್ವಕಪ್ ಚಾಂಪಿಯನ್ ಭಾರತ ತಂಡದ ಆಟಗಾರ್ತಿ, ಹರಿಯಾಣದ ಹೆಮ್ಮೆಯ ಪುತ್ರಿ ಶಫಾಲಿ ವರ್ಮಾ ಅವರನ್ನು ಬುಧವಾರ ಭೇಟಿಯಾಗಿ ಅಮೋಘ ಸಾಧನೆಗಾಗಿ ಅಭಿನಂದಿಸಿದೆ’ ಎಂದು ಸೈನಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.

ಬಿಲ್ಲೀ ಜೀನ್ ಕಿಂಗ್ ಕಪ್: ಪ್ಲೇ ಆಫ್ ಪಂದ್ಯಗಳಿಗೆ ಬೆಂಗಳೂರು ಆತಿಥ್ಯ

ಟೆನಿಸ್ ಕಣದಲ್ಲಿ ಸ್ತ್ರೀಶಕ್ತಿಯ ವಿಜೃಂಭಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಝಗಮಗ ಬೆಳಗುವ ವಿದ್ಯುದ್ದೀಪಗಳ ಬೆಳಕಿನಲ್ಲಿ ಟೆನಿಸ್ ಕ್ರೀಡೆಯ ‘ನಾರಿಶಕ್ತಿ’ ವಿಜೃಂಭಿಸಿತು. 60ರ ದಶಕದಲ್ಲಿ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರಿದ ಟೆನಿಸ್ ಅಂಗಳಕ್ಕಿಳಿದು ಇತಿಹಾಸ ರಚಿಸಿದ ವನಿತೆಯರು ಅಲ್ಲಿದ್ದರು. ಅವರ ಹಿಂದೆಯೇ ಈಗಿನ ಆಟಗಾರ್ತಿಯರ ದಂಡು ನಿಂತಿತ್ತು.

ಬಿಲ್ಲೀ ಜೀನ್ ಕಿಂಗ್ ಕಪ್ ಟೆನಿಸ್ ಟೂರ್ನಿಯ ಆತಿಥ್ಯ ವಹಿಸುತ್ತಿರುವ ಕರ್ನಾಟಕ ಲಾನ್ ಟೆನಿಸ್ ಸಂಸ್ಥೆಯು (ಕೆಎಸ್‌ಎಲ್‌ಟಿಎ) ಬುಧವಾರ ಆಯೋಜಿಸಿದ್ದ ‘ತಂಡಗಳ ಸ್ವಾಗತ ಔತಣಕೂಟ’ದಲ್ಲಿ ಕಂಡ ದೃಶ್ಯ ಇದು.

60 ದಶಕದಲ್ಲಿಯೇ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ವನಿತೆಯರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ವ್ಹೀಲ್‌ಚೇರ್ ಟೆನಿಸ್ ಆಟಗಾರ್ತಿ ಶಿಲ್ಪಾ ಪುಟ್ಟರಾಜು ಅವರನ್ನೂ ಗೌರವಿಸಲಾಯಿತು.



ಬಿಲ್ಲೀ ಜೀನ್ ಕಿಂಗ್ ಕಪ್ ಅಂತರರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ‘ಜಿ’ ಗುಂಪಿನ ಪ್ಲೇಆಫ್ ಪಂದ್ಯಗಳು ಬೆಂಗಳೂರಿನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಇದೇ 14ರಿಂದ ಆರಂಭವಾಗಲಿದೆ. ಬುಧವಾರ ನಡೆದ ಕಾರ್ಯಕ್ರಮದಲ್ಲಿ ಆತಿಥೇಯ ಭಾರತ ತಂಡದ ಆಟಗಾರ್ತಿಯರು ತಮ್ಮ ಹಸ್ತಾಕ್ಷರವಿರುವ ಜರ್ಸಿಯನ್ನು ಕೆಎಸ್‌ಎಲ್‌ಟಿಎಗೆ ಉಡುಗೊರೆಯಾಗಿ ನೀಡಿದರು ಪ್ರಜಾವಾಣಿ ಚಿತ್ರ

ಇದೇ ಸಂದರ್ಭದಲ್ಲಿ ಬಿಲ್ಲೀ ಜೀನ್ ಕಿಂಗ್ ಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರ್ತಿಯರು ತಮ್ಮ ಹಸ್ತಾಕ್ಷರ ಇರುವ ಜೆರ್ಸಿಯನ್ನು ಕೆಎಸ್‌ಎಲ್‌ಟಿಎಗೆ ಕಾಣಿಕೆ ನೀಡಿದರು. ಸ್ಲೋವೇನಿಯಾ ಮತ್ತು ನೆದರ್ಲೆಂಡ್ಸ್ ಆಟಗಾರ್ತಿಯರು ಸೀರೆಯುಟ್ಟು ಬಂದಿದ್ದರು. ಭಾರತೀಯ ಖಾದ್ಯಗಳನ್ನು ಸವಿಯುತ್ತ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಅಧ್ಯಕ್ಷ ಕೆ. ಗೋವಿಂದರಾಜ್, ಕೆಎಸ್‌ಎಲ್‌ಟಿಎ ಪದಾಧಿಕಾರಿಗಳಾದ ಎಂ. ಲಕ್ಷ್ಮೀನಾರಾಯಣ, ಎಂ.ಬಿ. ದ್ಯಾಬೇರಿ, ಮಹೇಶ್ವರ್ ರಾವ್, ಸುನೀಲ್ ಯಜಮಾನ್ ಅವರು ಹಾಜರಿದ್ದರು.

ಟೂರ್ನಿಯು ಇದೇ 14 ರಿಂದ 16ರವರೆಗೆ ನಡೆಯಲಿದೆ.